ಕನ್ನಡ ಅಮೃತ ಬಳ್ಳಿ ಮಾಲೆ

ಒಳ ತಿರುಳು

ಡಾ. ಆರ್. ಲಕ್ಷ್ಮೀನಾರಾಯಣ



ಒಳ ತಿರುಳು

ಡಾ. ಆರ್. ಲಕ್ಷ್ಮೀನಾರಾಯಣ

ಡಾ. ಆರ್. ಲಕ್ಷ್ಮೀನಾರಾಯಣ ಅವರು (ಜನನ: 2–12–1949) ತುಮಕೂರಿನವರು. 1971ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ. ಎ ಮುಗಿಸಿದ ಮೇಲೆ 1971 ರಿಂದ 2006ರವರೆಗೆ ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕ, ಪ್ರಾಧ್ಯಾಪಕ ಮತ್ತು ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ, 2006 ಮೇ ಯಿಂದ 2007ರಡಿಸೆಂಬರ್ ವರೆಗೆ ಧಾರವಾಡದಲ್ಲಿ ಇಲಾಖೆಯ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸಿ 2007ರ ಲ್ಲಿ ನಿವೃತ್ತರು. ಡಾ. ಪಿ. ವಿ ನಾರಾಯಣ ಅವರ ಮಾರ್ಗದರ್ಶನದಲ್ಲಿ 2004ರಲ್ಲಿ ' ವಕ್ರೋಕ್ತಿ ಜೀವಿತ– ಒಂದು ಅಧ್ಯಯನ' ಎಂಬ ಮಹಾ ಪ್ರಬಂಧಕ್ಕೆ ಬೆಂಗಳೂರು ವಿಶ್ವ ವಿದ್ಯಾಲಯದ ಪಿಎಚ್. ಡಿ ಪದವಿ. ಇಂಗ್ಲಿಷ್ ಮತ್ತು ಹಿಂದಿಯಿಂದ ಅನುವಾದ ಮಾಡುವುದರಲ್ಲಿ ನಿರತರು.

ಪ್ರಕಟಿತ ಕೃತಿಗಳು – ವಿಮರ್ಶೆ: 'ಮಾಸ್ತಿ',(ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ) ಆಹ್ಲಾದ, 'ಎಸ್. ವಿ. ಪರಮೇಶ್ವರ ಭಟ್ಟ' (ಕೇಂದ್ರ ಸಾಹಿತ್ಯ ಅಕಡೆಮಿ ಪ್ರಕಟಣೆ), ಚೆಲುವಿನ ನೆಲೆಗಳ ಹಾದಿಯಲ್ಲಿ(ಸಿ. ವಿ. ಜಿ ಪ್ರಕಾಶನ)

ವಕ್ರೋಕ್ತಿ ಜೀವಿತ–ಒಂದು ಅಧ್ಯಯನ, ಉರಿಲಿಂಗ ಪೆದ್ದಿ(ಮೈ. ವಿ. ವಿ)

ಅನುವಾದಿತ ಪುಸ್ತಕಗಳು : 'ಚಿನ್ನದ ಕಳಶ,(ಚೀಣಾದ ಜನಪದ ಕಥೆಗಳ ಸಂಕಲನ) 'ಬರ್ಟೋಲ್ಟ್ ಬ್ರೆಕ್ಟ್' (ಇಂಗ್ಲಿಷ್ ನಿಂದ), ವಾಙ್ಮಯ ವಿವೇಕ(ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಯ ಅನುವಾದಿತ ಲೇಖನಗಳು), 'ಇನ್ನೊಬ್ಬ ದ್ರೋಣಾಚಾರ್ಯ' (ಹೆಸರಾಂತ ಹಿಂದೀ ನಾಟಕದ ಕನ್ನಡ ಅನುವಾದ), ಅಮೃತಾ ಪ್ರೀತಂ ಅವರ ಆಯ್ದ ಕಥೆಗಳು, ಕನ್ನಡ ವಕ್ರೋಕ್ತಿ ಜೀವಿತ, (ಸಂಸ್ಕೃತ ವಕ್ರೋಕ್ತಿ ಜೀವಿತದ ಕನ್ನಡ ರೂಪ) ಬೇಗುದಿ (ಕಿರಣ್ ನಗರ್ ಕರ್ ಅವರ ಪ್ರಶಸ್ತಿ ಪುರಸ್ಕೃತ 'ಕಕೋಲ್ಡ್ ' ಕಾದಂಬರಿಯ ಕನ್ನಡ ರೂಪ), ಅನುರೂಪ (ಪ್ರಸಿದ್ಧ ಅನುವಾದಿತ ಕವಿತೆಗಳ ಸಂಕಲನ), ವಕ್ರೋಕ್ತಿ

ಮತ್ತು ಶೈಲಿಶಾಸ್ತ್ರದ ಪರಿಕಲ್ಪನೆಗಳು (ಇಂಗ್ಲಿಷ್‌ನಿಂದ),

ಸಂಪಾದಿತ ಕೃತಿಗಳು : 'ರುದ್ರಭಟ್ಟ' (ಜಗನ್ನಾಥ ವಿಜಯ ಸಂಗ್ರಹ), ಎಂ. ವಿ.ಸೀ ಸಮಗ್ರ ಸಾಹಿತ್ಯ ಸಂಪುಟ–4(ಭಾಗ–1 ಮತ್ತು 2), ಹೊಸಗನ್ನಡ ಕಾವ್ಯ ಸಂಗ್ರಹ.

ಪ್ರಶಸ್ತಿಗಳು : 'ಕನ್ನಡ ವಕ್ರೋಕ್ತಿ ಜೀವಿತ' ಕೃತಿಗೆ 2007ರ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ, ಅದೇ ಕೃತಿಗೆ 2004ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಬೇಗುದಿ' ಕೃತಿಗೆ 2013ರ ಕರ್ನಾಟಕ ಸಾಹಿತ್ಯ ಅಕಡೆಮಿ ಪ್ರಶಸ್ತಿ.

'ಆಹ್ಲಾದ' ಕೃತಿಗೆ ಗೊರೂರು ಸಾಹಿತ್ಯ ಪ್ರಶಸ್ತಿ 2000ದಲ್ಲಿ ರಾಜ್ಯ ಸರ್ಕಾರದಿಂದ ಉತ್ತಮ ಕಾಲೇಜು ಶಿಕ್ಷಕ ಪ್ರಶಸ್ತಿ.

ಸಿವಿಜಿ ಇಂಡಿಯಾ 213ನೆಯ ಪ್ರಕಟಣೆ

ಕನ್ನಡ ಅಮೃತಬಳ್ಳಿ ಮಾಲೆ - 82

ಒಳ ತಿರುಳು

ಡಾ. ಆರ್. ಲಕ್ಷ್ಮೀನಾರಾಯಣ

ಸಿವಿಜಿ ಇಂಡಿಯಾ
ಕಸ್ತೂರಬಾ ಭವನ, ಗಾಂಧಿ ಭವನ ಆವರಣ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು - 560 001

Kannada Amruthaballi Series - 82
Ola Tirulu- A Collection of Critical Articles

Written by
Dr. R. Lakshminarayana
No. 12, 'Shrinikethana'
2nd Cross, Shivananda Nagar
Moodalapalya
Bangalore-72
Mobile : 9449028996

Published by
CVG INDIA
Kusturabha Bhavana
Gandhi Bhavana Campus
Kumara Park East
Bangalore - 560 001
Phone : 080-22256999

First Impression : 2017
Price : ₹ **180/-**
Pages : iv + xviii + 206 = 228
Paper Used : 80 GSM Maplitho
Book Size : 1/8th Demmy
Cover Page Design : Arunkumar G.

Printed by
Shakthi Printers & Publishers
Bangalore- 560 058

ಕುವೆಂಪು ನುಡಿ

ಭರತ ಭೂಮಿ ನನ್ನ ತಾಯಿ
ನನ್ನ ಪೊರೆವ ತೊಟ್ಟಿಲು
ಸ್ವಾತಂತ್ರ್ಯದ ಸ್ವರ್ಗಕೇರೆ
ಪುಣ್ಯದೇಣಿ ಮೆಟ್ಟಿಲು **(ಭರತ ಭೂಮಿ ನನ್ನ ತಾಯಿ)**

ಕರ್ನಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ?
ಮಂತ್ರ ಕಣಾ! ಶಕ್ತಿ ಕಣಾ! **(ಅಖಂಡ ಕರ್ನಾಟಕ)**

ಎಲ್ಲವೊಂದುಗೂಡಲೆಂದು
ವಿಧಿಯ ಮನಸು ಕಡೆದ ಕನಸು
ಕಾಣ್ಬ ಕಣಸೆ, ಕಾಣ್: ಕುವೆಂಪು **(ಕುವೆಂಪು)**

ಸಂಪಾದಕರು
ಡಾ. ಮೀರಾಸಾಬಿಹಳ್ಳಿ ಶಿವಣ್ಣ
ಸಹ ಸಂಪಾದಕರು
ಚನ್ನವೀರೇಗೌಡ
ಸಂಚಾಲಕರು
ಗಿರಿಜಾ ಗೌಡ

ಯಾವ ದೇವಶಿಲ್ಪಿಯಿಂತು
ನಿನ್ನ ಕೊರೆದನು?
ಯಾವ ಬಣ್ಣಗಾರನಿಂತು
ರಂಗನೆರೆದನು?
ಒಲವಿನೊಡೆಯ ಸೊಬಗಿನೊಡೆಯ-
ನೊಡನೆ ಕೂಡಿ ಸಂಚುಮಾಡಿ
ನಿನ್ನ ಪಡೆದನೆ?
ಮಳೆಯಬಿಲ್ಲ ಕರಗಿಸಿಂತು
ನಿನ್ನ ಕಡೆದನೆ?

– **ಕುವೆಂಪು**

ಪರಂಪರೆ ಮತ್ತು ಸೃಜನಶೀಲತೆ

ಕನ್ನಡ ಸಾರಸ್ವತಲೋಕ ಬಹು ದೊಡ್ಡ ಪರಂಪರೆಯನ್ನು ಹೊಂದಿದೆ. ಈ ಹದಿನೈದು ಶತಮಾನಗಳವರೆಗೆ ನಡೆದು ಬಂದ ದಾರಿ ವೈವಿಧ್ಯಮಯವಾದುದು. ಅನೇಕ ವಿಚಾರ ಧಾರೆಗಳು ಕನ್ನಡ ಸಾಹಿತ್ಯವನ್ನು ನಿರ್ದೇಶಿಸಿವೆ. ಪಂಪ ರನ್ನರ ರಾಜಪ್ರಭುತ್ವಗಳ ಉಚ್ಚಕಾಲದಲ್ಲಿ ಆಸ್ಥಾನದಲ್ಲಿ ಬೆಳೆದು ಬಂದ ಸಾಹಿತ್ಯ ರಾಮಾಯಣ–ಮಹಾಭಾರತಗಳ ಸಾರ್ವಕಾಲಿಕ ಶ್ರೇಷ್ಠ ಕಾವ್ಯಗಳ ಪುನರ್‌ಸೃಷ್ಟಿಯಾದರೂ ತಮ್ಮ ಕಾಲದ ರಾಜಕೀಯ–ಸಾಮಾಜಿಕ ಛಾಪನ್ನು ಪುರಾಣ ಕಥನಗಳ ಪರಿವೇಷದ ಮೂಲಕ ನಿತ್ಯಸಮಕಾಲೀನವಾಗಿ ಒಡಮೂಡಿಸಿದ ಪರಿ ಅನನ್ಯವಾದುದು. ಸಂಸ್ಕೃತಭೂಯಿಷ್ಠ ಚಂಪೂ ಕಾವ್ಯ ಹೋಗಿ ಶಿವಶರಣರ ಕಾಲಕ್ಕೆ ಜನಸಾಮಾನ್ಯರ ಸಾಹಿತ್ಯಯುಗ ಪ್ರಾರಂಭವಾಯಿತು. ಛಂದಸ್ಸಿನ ಹಂಗಿಲ್ಲದ ಗಪದ್ಯವು ಸರಳ ಆಡುನುಡಿಯ ಕನ್ನಡದಿಂದ ಗಮನ ಸೆಳೆಯಿತು. ಆದರೆ ತಮ್ಮ ಕಾಲದ ಬದುಕಿನ ಕ್ರೂರ ಸತ್ಯಗಳ ಮೇಲೆ ಅನುಭಾವದ ಮುಸುಕು ಕವಿಯಿತು. ಅಲ್ಲಮ–ಬಸವರಂಥವರು ತಮ್ಮ ಸುತ್ತಿನ ಬದುಕಿನ ಸೂಕ್ಷ್ಮತೆಯನ್ನು ಚಿತ್ರಿಸಿದರೂ ಆಧ್ಯಾತ್ಮ ಲೇಪನದಿಂದ ಬೇರೆಯದೇ ತಿರುವನ್ನು ಪಡೆಯಿತು. ಈ ಶಿವಶರಣರ ಕತೆಗಳನ್ನೇ ಆಧರಿಸಿ ಹರಿಹರ–ರಾಘವಾಂಕರು ಕಾವ್ಯ ರಚಿಸುವ ಮೂಲಕ ಹೊಸ ಹಾದಿ ತುಳಿದರು. ಹಿಂದಿನ ಚಂಪೂ ಕಾವ್ಯ ಶೈಲಿಯನ್ನು ಧಿಕ್ಕರಿಸಿ ದೇಸಿ ಛಂದಸ್ಸಿನ ರಗಳೆ–ಷಟ್ಪದಿಯಲ್ಲಿ ಕಾವ್ಯ ರಚಿಸಿದರು. ಕುಮಾರವ್ಯಾಸನಂಥ ಭಾಗವತ ಕವಿ ಭಕ್ತಿಯ ಸಂಭ್ರಮದಲ್ಲೂ ಸುತ್ತಿನ ವಾಸ್ತವಗಳಿಗೆ ಕಣ್ಣು ತೆರೆಯುವುದನ್ನು ಮರೆಯಲಿಲ್ಲ. ಇಡೀ

ವ್ಯವಸ್ಥೆ ಹೇಗೆ ಗಬ್ಬೆದ್ದು ಹೋಗಿದೆ ಎಂಬುದನ್ನು 'ಅರಸು ರಾಕ್ಷಸ, ಮಂತ್ರಿ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ. ಬಡವರ ಮೊರೆಯ ಕೇಳುವವರಾರಿನ್ನು' ಎಂದು ಅಪರೋಕ್ಷವಾಗಿ ತನ್ನ ಕಾಲದ ಅರಾಜಕಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ. ಪುರಂದರ-ಕನಕರ ಕೀರ್ತನೆಗಳು, ಷರೀಫರ ತತ್ವಪದಗಳು ಇತ್ಯಾದಿ ಬಹುದೊಡ್ಡ ಅಧ್ಯಾತ್ಮಿಕ ಸಂತ ಪರಂಪರೆ ಮೊದಲ ಬಾರಿಗೆ ಕಾವ್ಯವನ್ನು ಸಂಗೀತದ ಸಾತತ್ಯದಿಂದ ಬೆಸೆಯುವ ಮೂಲಕ ಜನಸಾಮಾನ್ಯರ ಬಳಿ ತೆಗೆದುಕೊಂಡು ಬಂತು. ಸಾಹಿತ್ಯ ಕಾವ್ಯದ ಶೃಂಖಲೆಯಿಂದ ಬಿಡಿಸಿಕೊಂಡು ಮುದ್ದಣನ ಮೂಲಕ 'ಪದ್ಯಂ ವದ್ಯಂ ಗದ್ಯಂ ಹೃದ್ಯಂ' ಎಂದು ಗದ್ಯದ ಮೂಲಕ ಜನಗಳ ಹೃದಯಕ್ಕೆ ಇನ್ನೂ ಹತ್ತಿರವಾಯಿತು. ಇನ್ನು ಇಪ್ಪತ್ತನೇ ಶತಮಾನವಂತೂ ಶ್ರೀಸಾಮಾನ್ಯನ ಯುಗವಾಯಿತು. ನವೋದಯ-ಪ್ರಗತಿಪರ-ನವ್ಯ-ಬಂಡಾಯ-ದಲಿತ ಎಂದು ಆಧುನಿಕ ಕನ್ನಡ ಕಾವ್ಯ ಅನೇಕ ಧಾರೆಗಳಲ್ಲಿ ಕಾಣಿಸಿಕೊಂಡಿದ್ದು ಶ್ರೀಸಾಮಾನ್ಯರ ಚಿಂತನೆಗೆ ಹೊಸ ಆಯಾಮವನ್ನು ನೀಡಿವೆ.

ಜನಪದ ಸಾಹಿತ್ಯ ಶತಶತಮಾನಗಳುದ್ದಕ್ಕೂ ಗುಪ್ತಗಾಮಿನಿಯಾಗಿ ಹರಿಯುತ್ತಲೇ ಬಂದಿದ್ದು ಶಿಷ್ಟ ಕವಿಗಳ ಅವಜ್ಞೆಗೆ ಒಳಗಾಗಿತ್ತು. ಜನಪದ ಮಹಾಕಾವ್ಯಗಳು ನಮ್ಮ ಸಾಂಪ್ರದಾಯಿಕ ಚಿಂತನೆಯ ದಿಕ್ಕನ್ನೇ ಬದಲಿಸಿದವು. ಆ ಕಾವ್ಯಗಳ ನಾಯಕರು ಆಯಾ ಸಮುದಾಯಗಳ ಸಾಂಸ್ಕೃತಿಕ ನಾಯಕರು ತಮ್ಮದೇ ಆದ ಭಿನ್ನ ವಿಚಾರಧಾರೆಯ ಮೂಲಕ ಆಯಾ ಜನಾಂಗದ ಅಸ್ಮಿತೆಗೆ ಕಾರಣರಾದರು. ಶತಮಾನದ ಮೇರು ಪ್ರತಿಭೆ ಕುವೆಂಪು ತಮ್ಮ ವೈಚಾರಿಕ ಕ್ರಾಂತಿಯಿಂದ ಕನ್ನಡ ಭಾಷೆ ಎದುರಿಸುತ್ತಿರುವ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಕುರಿತು ಚಿಂತಿಸಿದರು. ವಿಶ್ವಮಾನವತ್ವ, ಅನಿಕೇತತ್ವ, ಮಂತ್ರ-ಮಾಂಗಲ್ಯಗಳ ಹೊಸ ಕಲ್ಪನೆಯನ್ನು ನೀಡಿದರು. ಕನ್ನಡವನ್ನು ಇವರೆಲ್ಲಾ ಆಯಾ ಕಾಲಕ್ಕೆ ತಕ್ಕಂತೆ ಮುರಿದು ಹೊಸದಾಗಿ ಕಟ್ಟಿದರು. T.S.Eliat ಹೇಳುವ "Language is Made, Re-made and Unmade" ಕೆಲಸವನ್ನು ಮಾಡುತ್ತಾ ಬಂದಿದ್ದಾರೆ. ಕನ್ನಡ ಅಂದಂದಿಗೆ ಹೊಸದಾಗುತ್ತಲೇ ಬಂದಿದೆ, ಪರಂಪರೆಯನ್ನು ಸೃಜನಶೀಲತೆ ಮೀರುತ್ತಲೇ ಬಂದಿದೆ.

ಕರ್ನಾಟಕಕ್ಕೆ ತನ್ನ ಭೌತಿಕ ಸ್ವರೂಪಕ್ಕಿಂತ ಭಿನ್ನ ಆಯಾಮಗಳಿವೆ ಎಂದು 'ಕರ್ನಾಟಕವೇನು ಹೆಸರೆ ಬರಿಯ ಮಣ್ಣಿಗೆ' ಎಂದು ಕವಿಯೊಬ್ಬರು ಪ್ರಶ್ನಿಸಿದ್ದಾರೆ. 'ದೇಶಮಂಟೆ ಮಟ್ಟಿ ಕಾದೋಯ್, ದೇಶಮಂಟೆ ಮನುಷುಲೋಯ್' (ದೇಶವೆಂದರೆ ಬರಿ ಮಣ್ಣಲ್ಲ, ದೇಶವೆಂದರೆ ಮನುಜರು) ಎಂಬ ತೆಲುಗು ಕವಿಯ ಮಾತು ಇದನ್ನೇ ಹೇಳುತ್ತದೆ. ಬಿ.ಎಂ.ಶ್ರೀಯಂಥವರು 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂದು 50-60 ವರ್ಷಗಳ ಕೆಳಗೆ ಚಿಂತಿಸಿದುದು ಇಂದಿಗೂ ಆ ಸ್ಥಿತಿಯೇ ಮುಂದು

ವರಿದಿರುವುದು ವಿಷಾದನೀಯ. ಹರಿದು ಹಂಚಿಹೋಗಿದ್ದ ಕನ್ನಡ ನಾಡು ಅಖಂಡ ಕರ್ನಾಟಕವಾಗಿ ಹೊಮ್ಮಿದರೂ ಕನ್ನಡ ಆಡಳಿತ ಭಾಷೆಯಾಗಲು ದೊಡ್ಡ ಹೋರಾಟವನ್ನೇ ನಡೆಸಬೇಕಾಯಿತು. ಮಾತೃಭಾಷಾ ಅಧ್ಯಯನದ ಬಗ್ಗೆ ಗೋಕಾಕ್‌ನಂತಹ ಬಹುದೊಡ್ಡ ಚಳುವಳಿಗಳು ನಡೆದರೂ ಮತ್ತೆ ಕನ್ನಡ ಭಾಷೆ ಮಾತೃಭಾಷಾ ಶಿಕ್ಷಣ ಇತ್ಯಾದಿ ವಿಷಯಗಳಲ್ಲಿ ಗಂಡಾಂತರದಲ್ಲಿದೆ. ಈ ಸಂದರ್ಭದಲ್ಲಿ 'ಕನ್ನಡವೇ ಸತ್ಯ, ಕನ್ನಡವೇ ನಿತ್ಯ' ಎಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ. ಆಧುನಿಕ ತಂತ್ರಜ್ಞಾನಕ್ಕೆ ಕನ್ನಡವನ್ನು ಸಜ್ಜುಗೊಳಿಸಬೇಕಿದೆ.

ಈ ಹಿನ್ನೆಲೆಯಲ್ಲಿ ಸಿವಿಜಿ ಪಬ್ಲಿಕೇಷನ್ಸ್ ಮತ್ತು ಅದರ ಸೋದರ ಸಂಸ್ಥೆಗಳು ಕಳೆದ 20 ವರ್ಷಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ವೈವಿಧ್ಯಮಯ ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಕನ್ನಡವನ್ನು ಸಾಂಸ್ಕೃತಿಕವಾಗಿ ಕಟ್ಟುವ ಕೆಲಸದಲ್ಲಿ ತನ್ನದೇ ಆದ ಸೇವೆ ಸಲ್ಲಿಸುತ್ತಾ ಬಂದಿದೆ. ಕುವೆಂಪು ಶತಮಾನೋತ್ಸವ ಸಂದರ್ಭದಲ್ಲಿ ಏಕಕಾಲಕ್ಕೆ ತಮ್ಮ ಸಂಸ್ಥೆಯ ದಶಮಾನೋತ್ಸವವೂ ಸೇರಿದಂತೆ ಒಟ್ಟಾರೆ 110 ಪುಸ್ತಕಗಳನ್ನು; ಕುವೆಂಪು ಅವರ 108 ಜನ್ಮದಿನೋತ್ಸವಕ್ಕೆ 'ಕುವೆಂಪು ನೂರೆಂಟು' ಎಂದು 108 ಪುಸ್ತಕಗಳನ್ನು; ಮಹಿಳಾಭಾರತಿ ಎಂದು 50, ಮಕ್ಕಳ ಭಾರತಿ ಎಂದು 50 ಪುಸ್ತಕಗಳನ್ನು ಪ್ರಕಟಿಸುವ ಮೂಲಕ ತಮ್ಮ ದಾಖಲೆಗಳನ್ನು ತಾವೇ ಮುರಿಯುತ್ತಾ 'ಸುಜ್ಞಾನದ ಅಡಿಗೆಯ ಮಾಡಬೇಕಣ್ಣಾ' ಎಂಬ ತತ್ವಪದಕಾರನ ಆಶಯದಂತೆ ಕೆಲಸ ಮಾಡುತ್ತಿದ್ದಾರೆ. ಈಗ ಮತ್ತೆ ತಮ್ಮ ಸಂಸ್ಥೆಯ ದ್ವಿದಶಮಾನೋತ್ಸದೊಂದಿಗೆ ಕನ್ನಡ ರಾಜ್ಯೋತ್ಸವ–ಕುವೆಂಪು ಜನ್ಮದಿನದ ಆಸುಪಾಸಿನಲ್ಲಿ 'ಕನ್ನಡದ ಅಮೃತ ಬಳ್ಳಿ' ಮಾಲೆಯ ಮೂಲಕ 'ಹಲವು ತೋಟದ ಹೂಗಳ'ನ್ನು ಇಲ್ಲಿ ಕಲೆಹಾಕುವ ಕೆಲಸ ಮಾಡಿದ್ದಾರೆ. ಈ ಮಾಲೆಗೆ 'ಕನ್ನಡ ಅಮೃತಬಳ್ಳಿ' ಎಂದು ಹೆಸರಿಟ್ಟಿರುವುದು ಅರ್ಥಪೂರ್ಣವಾಗೇ ಇದೆ. ಅಮೃತಬಳ್ಳಿ ಎಂಬುದು ಔಷಧೀಯ ಗುಣವುಳ್ಳ ಬಳ್ಳಿಯಾಗಿದ್ದು ಆರೋಗ್ಯ ವರ್ಧನೆಗೆ ಸಹಕಾರಿಯಾಗಿದ್ದು, ಕನ್ನಡ ಸಾಹಿತ್ಯಕ್ಕೆ ಈ ಮಾಲೆ ಅದೇ ಚಿಕಿತ್ಸಕ ಗುಣವನ್ನು ತುಂಬುತ್ತದೆ ಎಂದು ಭಾವಿಸಿದ್ದೇನೆ. ಕನ್ನಡ ರಾಜ್ಯೋತ್ಸವದ ನೆಪದಲ್ಲಿ 58 ಮತ್ತು ಸಂಸ್ಥೆಯ ದ್ವಿದಶಮಾನೋತ್ಸವಕ್ಕಾಗಿ 20, ಒಟ್ಟು 78 ಪುಸ್ತಕಗಳ ಪ್ರಕಟಣೆಗೆ ಈಗ ಕೈಹಾಕಿದ್ದಾರೆ. ಆ ಮಾಲೆಯಲ್ಲಿ ಅರಳಿದ ಹೂಗಳು ಇವು.

ಡಾ. ಆರ್. ಲಕ್ಷ್ಮೀನಾರಾಯಣ ಅವರು ಇಲ್ಲಿ 40 ಪುಸ್ತಕಗಳ ಒಳತಿರುಳನ್ನು ಬಿಚ್ಚಿಟ್ಟಿದ್ದಾರೆ. ಒಂದು ಕೃತಿಯ ಅಂತರಂಗದಲ್ಲಿ ಇರುವ ಸ್ವಾರಸ್ಯವನ್ನು, ಸೊಗಸನ್ನು ಸಹೃದಯರಿಗೆ ಉಣಬಡಿಸುವ ಈ ಕ್ರಿಯೆಗೆ 'ಭಾವಯಿತ್ರೀ ಪ್ರತಿಭೆ' ಬೇಕು, ಅದು ಕೃತಿಯ ಅಂತರಂಗದರ್ಶನ ಮಾಡಿಸುತ್ತದೆ. ವಿಮರ್ಶಕ ಆ ಕೃತಿಯ ರಸ ನಿಲ್ದಾಣಗಳನ್ನು

ಗುರುತಿಸಿ, ಕೃತಿಯ ಮಹತ್ವವನ್ನು ಮನದಟ್ಟು ಮಾಡುವ ಲಕ್ಷ್ಮೀನಾರಾಯಣರ ಈ ಕ್ರಮ ನಮ್ಮ ನವೋದಯ ಕಾಲದ 'ರಸವಿಮರ್ಶೆ'ಯನ್ನು ನೆನಪಿಸುತ್ತದೆ. ಒಂದು ಕೃತಿಯನ್ನು ಅರ್ಥೈಸಿಕೊಳ್ಳಲು ಬೇಕಾದ 'ಭಾವ ನಿಮಜ್ಜನ ಚಾತುರ್ಯ' ಮತ್ತು ಅದರಿಂದ ಹೊರ ಬರುವ 'ಲಘಿಮಾ ಕೌಶಲ' ಲಕ್ಷ್ಮೀನಾರಾಯಣರಿಗೆ ಸಿದ್ಧಿಸಿದೆ. ಹಾಗೂ ಹೆಚ್ಚಿನ ಒಳನೋಟಗಳನ್ನು ಡಾ. ಜಿ. ವಿ. ಆನಂದಮೂರ್ತಿ ಬರೆದ ಬೆನ್ನುಡಿ ನೀಡುತ್ತದೆ.

ನನ್ನ 25 ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸುವ ಮೂಲಕ ನನ್ನನ್ನು ಸಾಹಿತ್ಯಿಕವಾಗಿ ಬೆಳೆಸಿದುದಲ್ಲದೆ, ಇಂಥದೊಂದು ಮಾಲೆಗೆ ನನ್ನನ್ನು ಸಂಪಾದಕನನ್ನಾಗಿಸುವ ಮೂಲಕ ತಮ್ಮ ಹೃದಯದ ಪ್ರೀತಿಯನ್ನು ಮೆರೆದಿರುವ ಸಿವಿಜಿ ಚಂದ್ರು–ಗಿರಿಜಾ ದಂಪತಿಗೆ ಆಭಾರಿಯಾಗಿದ್ದೇನೆ. ಈ ಮಾಲೆಗೆ ತಮ್ಮ ಕೃತಿಯನ್ನು ನೀಡಿದ ಹಿರಿಯ ಗೆಳೆಯರಾದ ಡಾ.ಆರ್. ಲಕ್ಷ್ಮೀನಾರಾಯಣ ಅವರಿಗೆ, ಸೂಕ್ತ ಮುಖಪುಟವನ್ನು ರಚಿಸಿಕೊಟ್ಟ ಅರುಣ್ ಕುಮಾರ್ ಅವರಿಗೆ ಕೃತಜ್ಞನಾಗಿದ್ದೇನೆ. ಈ ಪುಸ್ತಕಗಳ ಬೆರಳಚ್ಚು ಮಾಡಿದುದಲ್ಲದೆ, ಸರ್ವಾಂಗ ಸುಂದರವಾಗಿ ರೂಪಿಸಲು ನೆರವಾದ ಕಂಪ್ಯೂಟರ್ ಸಿಬ್ಬಂದಿಯಾದ ಶ್ರೀಮತಿ ಮಂಜುಳಾದ್ವಯರು, ಶ್ರೀಮತಿ ಲತಾ ಆರ್.ಎಸ್. ಶ್ರೀಮತಿ ಅಶ್ವಿನಿ ಅವರ ಸಹಕಾರವನ್ನು ಮರೆಯಲಾರೆ, ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿದ ಶಕ್ತಿ ಪ್ರಿಂಟರ್ಸ್ & ಪಬ್ಲಿಷರ್ಸ್ ಸಿಬ್ಬಂದಿ ವರ್ಗದವರಿಗೂ ನನ್ನ ನೆನೆಕೆಗಳು ಸಲ್ಲುತ್ತವೆ.

ಬೆಂಗಳೂರು — **– ಡಾ. ಮೀರಾಸಾಬಿಹಳ್ಳಿ ಶಿವಣ್ಣ**

1–11–2014 — ಸಂಪಾದಕರು

ಅರ್ಪಣೆ

ಪ್ರೀತಿಯ ವಿದ್ಯಾಗುರುಗಳಾದ ಕೀರ್ತಿಶೇಷ

ಡಾ. ಗುಂಡ್ಮಿ, ಚಂದ್ರಶೇಖರ ಐತಾಳರ

ಸವಿನೆನಪಿಗೆ

ಲೇಖಕನ ಅರಿಕೆ

ಇಲ್ಲಿ ಸೇರ್ಪಡೆಯಾಗಿರುವ 40 ಲೇಖನಗಳು ಕಳೆದ ಐದಾರು ವರ್ಷಗಳಿಂದ ನಾನು "ಈ ಭಾನುವಾರ" ಪತ್ರಿಕೆಯಲ್ಲಿ (ಮೊದಲಿಗೆ ವಾರ ಪತ್ರಿಕೆಯಾಗಿದ್ದು ಈಗ್ಗೆ ಎರಡು ವರ್ಷಗಳಿಂದ ಮಾಸ ಪತ್ರಿಕೆಯಾಗಿ ಮೂಡಿ ಬರುತ್ತಿರುವ) ನಿಯತವಾಗಿ ಮಾಡುತ್ತಿದ್ದ ಪುಸ್ತಕ ವಿಮರ್ಶೆಯ ಬರಹಗಳು. ಒಂದೊಂದೇ ಪುಸ್ತಕವನ್ನು ಕುರಿತು ಸಾಕಷ್ಟು ವಿಸ್ತಾರವಾಗಿಯೇ ಇರುತ್ತಿದ್ದ ಈ ಬರಹಗಳಲ್ಲಿ ಆಯ್ದ ಕೆಲವನ್ನು ಪುಸ್ತಕವಾಗಿ ಏಕೆ ಪ್ರಕಟಿಸಬಾರದೆಂಬ ಯೋಚನೆಯ ಫಲವೇ ಪ್ರಸ್ತುತ "ಒಳ ತಿರುಳು". ಇದರ ಪ್ರಕಟಣೆಗೆ ಕಾರಣವಾದವರಿಗೆ ಕೃತಜ್ಞತೆಯ ಮಾತುಗಳನ್ನು ಹೇಳುವುದು ನನ್ನ ಆದ್ಯಕರ್ತವ್ಯ.

ಎಲ್ಲರಿಗಿಂತ ಮೊದಲು ನನ್ನ ಧನ್ಯವಾದಗಳು ಸಲ್ಲಬೇಕಾದ್ದು ನನ್ನ ಮೇಲೆ ವಿಶ್ವಾಸವಿಟ್ಟು ತಮ್ಮ ಪತ್ರಿಕೆಯಲ್ಲಿ ಪುಸ್ತಕ ವಿಮರ್ಶೆ ಮಾಡಲು ಅವಕಾಶ ಕೊಟ್ಟು ಈ ಲೇಖನಗಳು ರೂಪುಗೊಳ್ಳಲು ಕಾರಣರಾದ ಖ್ಯಾತ ಪತ್ರಕರ್ತ ಶ್ರೀ ಮಹದೇವ ಪ್ರಕಾಶ್ ಅವರಿಗೆ.

ಆತ್ಮೀಯ ಮಿತ್ರರೂ ಖ್ಯಾತ ಜಾನಪದ ವಿದ್ವಾಂಸರೂ ಆದ ಡಾ. ಮೀರಾಸಾಬಿಹಳ್ಳಿ ಶಿವಣ್ಣನವರಲ್ಲಿ ಇವನ್ನು ಪುಸ್ತಕರೂಪದಲ್ಲಿ ಪ್ರಕಟಿಸುವ ಬಗ್ಗೆ ಪ್ರಸ್ತಾಪಿಸಿದ ಕೂಡಲೇ ಖ್ಯಾತ ಪ್ರಕಾಶಕರಾದ ಸಿವಿಜಿ ಚಂದ್ರು ಅವರನ್ನು ಒಪ್ಪಿಸಿ ಪ್ರಕಟಣೆಯ ಎಲ್ಲ ಹಂತಗಳಲ್ಲಿ ತಮ್ಮದೇ ಪುಸ್ತಕ ಎನ್ನುವಷ್ಟು ಮುತುವರ್ಜಿ ತೋರಿಸಿದಲ್ಲದೆ ಅಮೃತಬಳ್ಳಿ ಮಾಲೆಯ ಸಂಪಾದಕರಾಗಿ ತಮ್ಮ ಅಭಿಪ್ರಾಯವನ್ನೂ ದಾಖಲಿಸಿದ ಶ್ರೀ ಶಿವಣ್ಣನವರಿಗೆ ಮತ್ತು ಪ್ರಕಟಿಸುತ್ತಿರುವ ಶ್ರೀ ಚಂದ್ರು ಅವರಿಗೆ ನಾನು ತೀರಾ ಕೃತಜ್ಞ.

ಇನ್ನು ಇದಕ್ಕೊಂದು ಬೆನ್ನುಡಿಯನ್ನು ಬರೆದು ಕೊಡಬೇಕೆಂದು ಕೇಳಿದ ಕೂಡಲೇ ತುಂಬು ಪ್ರೀತಿಯಿಂದ ಬೆನ್ನುಡಿಯ ಮಾತುಗಳನ್ನು ಬರೆದುಕೊಟ್ಟಿರುವ ನನ್ನ ಆತ್ಮೀಯರಾದ ಡಾ. ಜಿ. ವಿ ಆನಂದಮೂರ್ತಿ ಅವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ.

ಇಲ್ಲಿಯ ಲೇಖನಗಳಲ್ಲಿ ಕೆಲವನ್ನು ಅವು ಪ್ರಕಟವಾದ ಹೊಸದರಲ್ಲೇ ಓದಿ ಸದಭಿಪ್ರಾಯ ಸೂಚಿಸುತ್ತಿದ್ದ ಮಿತ್ರರಾದ ಡಾ. ಸಿ. ಪಿ. ನಾಗರಾಜ, ದಕ್ಷಿಣಾಮೂರ್ತಿ ಹಾಗೂ ತಮ್ಮ "ಕುಮಾರವ್ಯಾಸ ಕಥಾಂತರ (ಭಾಗ-1)" ಕುರಿತ ವಿಮರ್ಶೆಯ ಲೇಖನವನ್ನು ಮೆಚ್ಚಿಕೊಂಡು ಅದರ ಎರಡನೆಯ ಭಾಗದಲ್ಲಿ ಅನುಬಂಧವಾಗಿ ಇದನ್ನು ಸೇರಿಸಿಕೊಳ್ಳುವ ಮೂಲಕ ತಮ್ಮ ಸಹೃದಯತೆ ತೋರಿದ ಖ್ಯಾತ ಕವಿ ಡಾ. ಎಚ್. ಎಸ್. ವೆಂಕಟೇಶಮೂರ್ತಿ ಹಾಗೆಯೇ ತಮ್ಮ 'ಪಾಟೀಲನ ಲಂಡನ್ ಸವಾರಿ' ಎಂಬ ಅನುವಾದಿತ ಪುಸ್ತಕ ಕುರಿತ ವಿಮರ್ಶಾ ಲೇಖನವನ್ನು ತಮ್ಮ ಅಭಿನಂದನ ಗ್ರಂಥದಲ್ಲಿ ಸೇರಿಸಿಕೊಂಡ ಪ್ರೊ. ಪ್ರಭಾಕರ ಸಾತ್ ಖೇಡ್, ಗಾಂಧಿ ಕುರಿತ ತಮ್ಮ ಪುಸ್ತಕದ ವಿಮರ್ಶಾ ಲೇಖನವನ್ನು ಪುಸ್ತಕದ ಅನುಬಂಧವಾಗಿ ಸೇರಿಸಿಕೊಂಡ ಪ್ರೊ. ರಾಗಂ ಮಠಪತಿ ಅವರುಗಳನ್ನು ಪ್ರೀತಿಯಿಂದ ನೆನೆಯುತ್ತೇನೆ.

– ಆರ್. ಲಕ್ಷ್ಮೀನಾರಾಯಣ

ಪರಿವಿಡಿ

1 ಕುಮಾರವ್ಯಾಸ ಕಥಾಂತರ / 1

2 ಅಡಕವಾಗಿ ಅರಳಿರುವ 'ಕನ್ನಡ ಸಾಹಿತ್ಯ ಚರಿತ್ರೆ' / 8

3 ಕುವೆಂಪು ಸಾಹಿತ್ಯದ ಅರ್ಥಪೂರ್ಣ ಅನುಸಂಧಾನ / 13

4 'ಮಹಾಮಾರ್ಗವಿದ' ರ ಹೆಜ್ಜೆಗುರುತುಗಳು / 20

5 'ವೀರಶೈವ ಸಾಹಿತ್ಯ ಚರಿತ್ರೆ' ಸಂಪುಟಗಳು / 24

6 ಅಂತರಾಳವನ್ನು ಕಲಕುವ ಕಥೆಗಳ ಗುಚ್ಛ / 32

7 ಕಾವ್ಯಸ್ಪರ್ಶದ ಜೀವನ ಕಥನ / 35

8 ವಿಸ್ತೃತ ಅಧ್ಯಯದ 'ಸಂಶೋಧನ ತೆನೆಗಳು' / 40

9 ಜ್ಞಾನಯೋಗಿಯ ಬದುಕಿನ ಸತ್ಯ ಕಥನ / 46

10 ಗಾಂಧಿ ಕುರಿತ ಆಪ್ತ ಬರಹ / 52

11 ಈಶ್ವರ ಅಲ್ಲಾ ತೇರೋ ನಾಮ್ / 55

12 ಜನಪದ ರಮ್ಯ ಕಥಾನಕಗಳು / 61

13 ಲೇಖಕಿಯ ವ್ಯಕ್ತಿತ್ವ ಸಾಹಿತ್ಯ ಕುರಿತ ಆಕರಗ್ರಂಥ / 68

14 ವಿಶ್ವ ಕವಿಯ ಜೀವನ ಚಿತ್ರಗಳು / 73

15 ಜೀವಂತಿಕೆ ಜೊತೆ ತಳುಕು ಹಾಕಿಕೊಂಡ ಟಿಪ್ಪಣಿಗಳು / 78

16 ವರ್ಣ ವ್ಯವಸ್ಥೆಯ ವಾಸ್ತವವನ್ನು ಬಗೆವ ಪ್ರಯತ್ನ / 83
17 ವಿಚಾರ–ವಿವೇಕಗಳ ಅಪೂರ್ವ ಭಂಡಾರ / 88
18 ಗಾಂಧೀ ಬದುಕಿಗೊಡ್ಡಿದ ಅಗ್ನಿದಿವ್ಯ / 93
19 ಅಧ್ಯಯನ ಶೀಲ ಬರಹಗಳು / 98
20 ಮೌಲ್ಯಗಳ ಕುರಿತ ತೀವ್ರ ಕಾಳಜಿ / 103
21 ಉಪಯುಕ್ತ ಆಕರ ಗ್ರಂಥ / 107
22 ಅನುಭಾವಿಕ ವಚನಗಳ ವ್ಯಾಖ್ಯಾನ / 111
23 ವೇದಾಂತವನ್ನು ಪ್ರಸ್ತುತಕ್ಕೆ ಅನ್ವಯಿಸುವ ಪ್ರಯತ್ನ / 115
24 ಆರೋಗ್ಯಪೂರ್ಣ ಬದುಕಿಗೊಂದು ಕೈಪಿಡಿ / 121
25 ಯುವಕರ ಅತ್ಯಮೂಲ್ಯ ಮಾರ್ಗದರ್ಶಿ / 126
26 ರೋಚಕ ಸಾಹಿತ್ಯಕ ಜೈತ್ರಯಾತ್ರೆ / 129
27 ತಂತ್ರಶಾಸ್ತ್ರ ಕುರಿತ ಮಾರ್ಗದರ್ಶಕ ಕೃತಿಗಳು / 135
28 ವಿಡಂಬನ ಬರಹಗಳು – ಕಥೆಗಳು / 140
29 ಸರಳತೆಯಲ್ಲಿ ಅರಳಿದ ಆಧ್ಯಾತ್ಮ ಗೀತೆಗಳು / 146
30 ವರ್ತಮಾನಕ್ಕೂ ಪ್ರಸ್ತುತವಾದ ಪೌರಾಣಿಕ ನಾಟಕ / 150
31 ದಲಿತ ಸಾಹಿತಿ ದ್ವಯರ ಜೀವನ–ಸಾಧನೆ / 154
32 ಅಚ್ಚುಕಟ್ಟಾದ ಸಂಪಾದನೆ / 159
33 ದಲಿತರ ನೆಲದ ಹೋರಾಟದ ಸಂಕಥನ / 162
34 ರಂಗಭೂಮಿಯ ವಿವರಪೂರ್ಣ ಕಥನ / 168
35 ವಚನಗಾಯನ ಪರಂಪರೆಯ ಅಧ್ಯಯನ / 172
36 ಹಾಡಾಗಿ ಹರಿದ ದಲಿತ ಚಿಂತನ / 178
37 ವಿಚಾರದ ಹಾದಿಗೆ ಹಚ್ಚುವ ಸಾರ್ಥಕ ಕೃತಿ / 183
38 ಅನುವಾದಗಳ ಸಮರ್ಥ ಅನಾಟೆಮಿ / 188
39 ಕಾವ್ಯದ ಕುಸುರಿಯಲ್ಲಿ ಅರಳಿದ ಬುದ್ಧಚರಿತೆ / 194
40 ಸಾಮಾಜಿಕ ನ್ಯಾಯ – ಅರಸರ ಸ್ಮರಣೆ / 200

1
ಕುಮಾರವ್ಯಾಸ ಕಥಾಂತರ

ಎಲ್ಲ ಕಾಲದ ಮಹಾಕವಿಗೊಂದು ಪ್ರಾತಿಭ ವ್ಯಾಖ್ಯಾನ

``Life seems tobe too short to read such great poem" ಎಂದು ಮ್ಯಾಕ್ಸ್ ಮುಲ್ಲರ್ ಪಂಡಿತನ ಉದ್ಗಾರಕ್ಕೆ ಪಾತ್ರವಾದ ಮಹಾಭಾರತ ಸಹಸ್ರಾರು ವರ್ಷಗಳಿಂದ ಭಾರತೀಯರ ಬದುಕನ್ನೆಲ್ಲ ಆವರಿಸಿಕೊಂಡು ಹೃದಯಕ್ಕೆ ಕಣ್ಣಾಗಿ ಬುದ್ಧಿಗೆ ಬೆಳಕಾಗಿರುವುದು ಎಲ್ಲರಿಗೂ ತಿಳಿದೇ ಇದೆ. ಮನುಷ್ಯ ಸ್ವಭಾವದ ಅಸಂಖ್ಯ ಮುಖಗಳ ಅನಾವರಣ ಮಹಾಭಾರತದಲ್ಲಾದಂತೆ ಇನ್ನೆಲ್ಲೂ ಆಗುವುದಿಲ್ಲ. ಮಾನವ ಬದುಕಿನ ಶಾಶ್ವತ ಸಂದಿಗ್ಧಗಳು, ಸಮಸ್ಯೆಗಳಿಗೆ ಮಹಾಭಾರತದಲ್ಲಿ ಉತ್ತರ ಸಿಕ್ಕೇ ಸಿಗುತ್ತದೆಂಬ ನಂಬಿಕೆ ಭಾರತೀಯರ ಬದುಕನ್ನು ಅನಾದಿಕಾಲದಿಂದ ಮುನ್ನಡೆಸುತ್ತ ಬಂದಿದೆ.

ಕುಮಾರವ್ಯಾಸ ಕಥಾಂತರ, ಲೇಖಕರು: ಡಾ. ಎಚ್.ಎಸ್. ವೆಂಕಟೇಶಮೂರ್ತಿ
ಪುಟಗಳು: 320 ಬೆಲೆ: 250/-
ಅಭಿನವ, 17/18-2, ಮೊದಲನೆ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು-40.

ಮಹಾಭಾರತದಲ್ಲಿ ಏನುತಾನೆ ಇಲ್ಲ? ಎಂದೇ 'ವ್ಯಾಸೋಚ್ಛಿಷ್ಟಂ ಜಗತ್ಸರ್ವಂ' ಎಂಬ ಮಾತು ಲೋಕಪ್ರಸಿದ್ಧವಾಗಿರುವುದು. ಆ ಕಾರಣದಿಂದಾಗಿಯೇ ಏನೋ ಭಾರತದ ಬಹುತೇಕ ಎಲ್ಲ ಪ್ರಮುಖ ದೇಶಭಾಷೆಗಳಲ್ಲಿ ಆಯಾ ಕಾಲದ ಕವಿಗಳು ವ್ಯಾಸಭಾರತವನ್ನು, ಅದರ ಬೇರೆ ಬೇರೆ ಕಥಾ ಭಾಗಗಳನ್ನು, ಸಂದರ್ಭಗಳನ್ನು ಕಾವ್ಯವಾಗಿ, ಕಥೆಯಾಗಿ, ಕಾದಂಬರಿಯಾಗಿ ನಾಟಕವಾಗಿ ರೂಪಾಂತರಿಸಿದ್ದಾರೆ; ರೂಪಾಂತರಿಸುತ್ತಲೇ ಇದ್ದಾರೆ.

ಕನ್ನಡದಲ್ಲಂತೂ ಆದಿಕವಿಯೂ ಅಗ್ರಕವಿಯೂ ಆದ ಪಂಪನೇ ಸಾವಿರ ವರ್ಷದಷ್ಟು ಹಿಂದೆಯೇ 'ವಿಕ್ರಮಾರ್ಜುನವಿಜಯದ' ರೂಪದಲ್ಲಿ ವ್ಯಾಸಭಾರತವನ್ನು ಮರುಸೃಷ್ಟಿಸುವ ಮೂಲಕ ಸೀಮಾಪುರುಷನೆನಿಸಿದ. ಪಂಪನಂಥ ಮಹಾಪ್ರತಿಭಾವಂತ ಕಂಡರಿಸಿದ್ದ ಆ ಕಾವ್ಯವನ್ನು ಮತ್ತೆ ಅದೇ ಪ್ರಮಾಣದಲ್ಲಿ ಮತ್ತು ಎತ್ತರದಲ್ಲಿ ಪುನರ್‍ರೂಪಿಸುವ ಮಹಾಸಾಹಸಕ್ಕೆ ಮುಂದಿನ ಸುಮಾರು ಐನೂರು ವರ್ಷಗಳವರೆಗೆ ಯಾರೂ ಕೈಹಾಕಲಿಲ್ಲ. ಕನ್ನಡಿಗರ ಪುಣ್ಯವಿಶೇಷದಿಂದ ಕುಮಾರವ್ಯಾಸ ಅಂಥದೊಂದು ಸಾಹಸಕ್ಕೆ ಕೈಹಾಕಿದ್ದಷ್ಟೇ ಅಲ್ಲದೆ ಅದೊಂದು ಸಾಹಸವೇ ಅಲ್ಲವೇನೊ ಎನ್ನುವಂತೆ ಪಂಪನಿಗೆ ಹೊಯ್‍ಕಯ್ಯಾಗಿ ಅಷ್ಟೇ ಅಲ್ಲ, ಅನೇಕ ವಿಷಯಗಳಲ್ಲಿ ಅವನನ್ನೂ ಮೀರಿಸುವಂತೆ ವ್ಯಾಸಭಾರತವನ್ನು ಪುನರ್‍ರೂಪಿಸಿ ಕೊಟ್ಟಿರುವುದು ಕನ್ನಡಿಗರ ಭಾಗ್ಯವಷ್ಟೇ ಅಲ್ಲ; ಭುವನದ ಭಾಗ್ಯಕೂಡ. ಕುಮಾರವ್ಯಾಸ ಭಾರತ ಹುಟ್ಟಿದಾಗಿನಿಂದ ಇಲ್ಲಿನವರೆಗೆ ಅದು ಕನ್ನಡಿಗರ ಅತ್ಯಂತ ಪ್ರೀತಿಯ ಕಾವ್ಯವಾಗಿ ಎಲ್ಲರ ಮನೆಮನಗಳಲ್ಲಿ ಉಳಿದುಕೊಂಡು ಬಂದಿದೆ. ಕಾಲದಿಂದ ಕಾಲಕ್ಕೆ ಕನ್ನಡನಾಡಿನ ಅಸಂಖ್ಯಾತ ಗಮಕಿಗಳು ವಿದ್ವಾಂಸರು ಇದರ ವಾಚನ ವ್ಯಾಖ್ಯಾನಗಳಿಗೆ ತಮ್ಮನ್ನು ತೆತ್ತುಕೊಂಡು ಕಾವ್ಯವನ್ನು ಜೀವಂತವಾಗಿಟ್ಟಿರುವುದೇ ಅಲ್ಲದೆ ಆ ಕಾರಣದಿಂದಾಗಿಯೇ ತಾವೂ ಜನಮನದಲ್ಲಿ ನೆಲೆನಿಂತಿದ್ದಾರೆ. ಭಾರತದ ಬಿಂದೂರಾಯರು, ಕೃಷ್ಣಗಿರಿಯ ಕೃಷ್ಣರಾಯರು, ಲಕ್ಷ್ಮೀಕೇಶವ ಶಾಸ್ತ್ರಿಗಳು, ಈಚಿನ ಮತ್ತೂರು ಕೃಷ್ಣಮೂರ್ತಿ, ಹೊಸಳ್ಳಿ ಕೇಶವಮೂರ್ತಿ ಇವು ಎಲ್ಲೋ ಕೆಲವು ಹೆಸರು ಅಷ್ಟೆ. ಇನ್ನು ಕುರ್ತುಕೋಟಿ ಸುಜನಾ ಅ. ರಾ.ಮಿತ್ರ, ಅ.ರಾ.ಸೇ ಇವರೆಲ್ಲರೂ ಕುಮಾರವ್ಯಾಸನ ವ್ಯಾಖ್ಯಾನಕಾರರಾಗಿ ವಿಮರ್ಶಕರಾಗಿ ಗದ್ಯಾನುವಾದಕರಾಗಿ ನಮ್ಮ ಕಾಲದಲ್ಲಿ ಪ್ರಸಿದ್ಧರಾದವರು. ಆದರೆ ಪದ್ಯಗಳ ತಾತ್ಪರ್ಯ, ಗದ್ಯಾನುವಾದಗಳಿಗಿಂತ ಭಿನ್ನವಾಗಿ ಹಲವು ಮಗ್ಗುಲುಗಳಿಂದ ಪ್ರಸ್ತುತಕ್ಕೆ ಅನ್ವಯವಾಗುವಂತೆ ಈ ಎಲ್ಲ ಕಾಲದ ಮಹಾಕಾವ್ಯವನ್ನು ಸಹೃದಯತೆಯಿಂದ ವ್ಯಾಖ್ಯಾನಿಸುವ ಅಗತ್ಯವಂತೂ ಇದ್ದೇ ಇತ್ತು.

ಇದೀಗ ಖ್ಯಾತಕವಿ ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರು 'ಕುಮಾರವ್ಯಾಸ ಕಥಾಂತರ' ಎಂಬ ಶೀರ್ಷಿಕೆಯಲ್ಲಿ ಕುಮಾರವ್ಯಾಸನ ಸಮಗ್ರಕಾವ್ಯವನ್ನು ತಮ್ಮ ಪ್ರತಿಭೆಯ ಬೆಳಕಿನಲ್ಲಿ ವ್ಯಾಖ್ಯಾನಿಸುವ ಉಪಕ್ರಮದ ಮೂಲಕ ಆ ಅಗತ್ಯವನ್ನು ಪೂರೈಸುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಗಳನ್ನಿಟ್ಟಿದ್ದಾರೆ.

ಪ್ರಸ್ತುತ 'ಕುಮಾರವ್ಯಾಸ ಕಥಾಂತರ' ಆದಿಪರ್ವ ಮತ್ತು ಸಭಾ ಪರ್ವಗಳ ಭಾಗಗಳನ್ನು ಒಳಗೊಂಡಿದೆ. ಕಥಾಂತರ ಎಂಬ ಮಾತು ಕುಮಾರವ್ಯಾಸನದೇ. ಎಚ್ಚೆಸ್ವಿ ಅವರ ಈ ಕಥಾಂತರದ ರೀತಿ ಸ್ಥೂಲವಾಗಿ ಹೀಗಿದೆ. ಕುಮಾರವ್ಯಾಸ ಭಾರತದ ಕಥೆಯನ್ನು ತಮ್ಮ ಮಾತಿನಲ್ಲಿ ಕಥಿಸುತ್ತಲೇ ಮುಖ್ಯವೆನಿಸುವ ಕಥಾ ಸಂದರ್ಭಗಳನ್ನು ಅವುಗಳ ಹಿನ್ನೆಲೆ ಮುನ್ನೆಲೆಗಳ ಸಮೇತ ಪ್ರಸ್ತುತಕ್ಕೆ ಅನ್ವಯಿಸುವ ಹಾಗೆ ಒಳನೋಟಗಳಿಂದ ಕೂಡಿದ ಹಾಳತವಾದ ವ್ಯಾಖ್ಯಾನಕ್ಕೆ ಒಳಪಡಿಸುವುದು, ತಮಗೆ ಮುಖ್ಯವೆನಿಸಿದ ಹಾಗೂ ಕುಮಾರವ್ಯಾಸನ ಕಾವ್ಯಪ್ರತಿಭೆ, ರೂಪಕ ವೈಭವಗಳ ದ್ಯೋತಕಗಳೆನ್ನಬಹುದಾದ ಪದ್ಯಗಳನ್ನು ತೀವ್ರವಾದ ಚಿಕಿತ್ಸಕ ಬುದ್ಧಿಯ, ಒಳನೋಟದಿಂದ ಕೂಡಿದ ವಿಮರ್ಶೆಗೆ ಒಳಪಡಿಸುವುದು. ಅದು ಶ್ರೇಷ್ಠಕವಿಯೊಬ್ಬ ಮಹಾಕವಿಯ ಮಾತುಗಳ ಆಳಕ್ಕೆ ಇಳಿದು ಕವಿಯ ಅಂತರಂಗವನ್ನು ಉಳಿದ ಕಾವ್ಯಪ್ರೇಮಿಗಳಿಗೆ ತೆರೆದು ತೋರುವ ಸಹೃದಯ ವಿಮರ್ಶೆಯಾಗಿದೆಯೇ ಹೊರತು ತಮ್ಮ ಪ್ರತಿಷ್ಠೆಯನ್ನು ಮೆರೆಸುವ ಮಾತಿನ ಮಂಟಪವಾಗಿಲ್ಲ. ಯಾವುದೇ ಶ್ರೇಷ್ಠ ಕವಿಯೊಬ್ಬನ ಕಾವ್ಯ ಅದು ಏಕಕಾಲಕ್ಕೆ ಸಮಕಾಲಿಕವಷ್ಟೇ ಆಗಿರದೆ ಸಾರ್ವಕಾಲಿಕವೂ ಆಗಿರುತ್ತದೆ ಎಂಬುದರ ಸತ್ಯತೆ ಎಚ್ಚೆಸ್ವಿಯವರ ಪ್ರಸ್ತುತ 'ಕುಮಾರವ್ಯಾಸ ಕಥಾಂತರ'ದ ಮೂಲಕ ಮತ್ತೊಮ್ಮೆ ಸ್ಥಾಪಿತವಾಗುತ್ತದೆ. ಹಿಂದೆ ಮಾಸ್ತಿಯವರು ತಮ್ಮ 'ಆದಿಕವಿ ವಾಲ್ಮೀಕಿ' ಮತ್ತು 'ಭಾರತ ತೀರ್ಥ' ಗ್ರಂಥಗಳಲ್ಲಿ ವಾಲ್ಮೀಕಿ ಮತ್ತು ವ್ಯಾಸರ ಕೃತಿಗಳನ್ನು ಸಹೃದಯರಿಗೆ ಉಣಬಡಿಸಲು ಅನುಸರಿಸಿದ ಮಾರ್ಗವನ್ನೇ ವೆಂಕಟೇಶಮೂರ್ತಿಯವರು ಅನುಸರಿಸಿದ್ದಾರೆ. ಆದರೆ ಅಲ್ಲಿಯಂತೆ ಇಲ್ಲಿ ಬುದ್ಧಿಪೂರ್ವಕವಾಗಿ ವಾಸ್ತವಮಾರ್ಗಕ್ಕೆ ಕುಮಾರವ್ಯಾಸನನ್ನು ಒಗ್ಗಿಸುವ ಆಗ್ರಹವಿಲ್ಲ. ವೆಂಕಟೇಶಮೂರ್ತಿಯವರ ಈ ಕೃತಿ ಬೇರೆಯದೇ ರೀತಿಯಲ್ಲಿ ಹೆಚ್ಚು ಪ್ರಬುದ್ಧವಾಗಿ ಸಾಗುತ್ತದೆ.

ಎಚ್ಚೆಸ್ವಿ ಅವರ ಅರ್ಥಪೂರ್ಣವಾದ ಒಳನೋಟಗಳು ಗ್ರಂಥದ ಉದ್ದಕ್ಕೂ ಕಾಣಬರುತ್ತವೆ. 'ದೇಸಿದಿಗ್ವಿಜಯ' ಎಂದೇ ಹೆಸರಾದ ಕನ್ನಡ ಭಾರತದ ಆರಂಭಿಕ ಪದ್ಯದಲ್ಲೇ 'ಶ್ರೀವನಿತೆಯರಸನು ಗದುಗಿನ ವೀರ ನಾರಾಯಣ' ಆಗುವುದೇ ಸಂಸ್ಕೃತ

ಭಾರತವನ್ನು ಕನ್ನಡದೇಸಿಗೆ ಆಹ್ವಾನಿಸುವ ಕ್ರಮವಾಗಿದೆ ಮತ್ತು ತನ್ನ ಕಾವ್ಯದ ಪ್ರಾಂತೀಕರಣದ ಉದ್ಯಮಕ್ಕೂ ಅದು ಸಂಕೇತ ಎಂಬುದು ಅಂಥದೊಂದು ಒಳನೋಟ. ಅಲ್ಲದೆ ಎಚ್ಚೆಸ್ವಿ ಭಾಷಾ ವಿಜ್ಞಾನದ ಪರಿಭಾಷೆಯಲ್ಲೆಂಬಂತೆ ಮಹಾಭಾರತದ್ದು ಸಾರ್ವತ್ರಿಕ 'ಭಾಷೆ' (ಟ್ಚಿಜ್ಞಥಿ)ಯಾದರೆ ಕುಮಾರವ್ಯಾಸನದು 'ಮಾತು' (ಟಿಚ್ಬಟ್ಲ್ಥಿ) ಎನ್ನುತ್ತಾರೆ. ಕುಮಾರವ್ಯಾಸ ಒಬ್ಬ ಅಪ್ಪಟ ಕವಿ. ಎಂದೇ ಅವನ ಪ್ರಕಾರ ಕಾವ್ಯವೆಂಬುದು ಪ್ರಜ್ಞಾಪೂರ್ವಕ 'ವಚನರಚನೆ'. ಈ ಮಾತನ್ನು ಎಚ್ಚೆಸ್ವಿ ಒತ್ತುಕೊಟ್ಟು ಹೇಳುತ್ತಾರೆ. ಆ ಕಾರಣದಿಂದಲೇ ತನಗೆ ಅಗತ್ಯವೆನಿಸಿದರೆ ಕಥಾಪ್ರಸಂಗಗಳನ್ನು ಸಂಕ್ಷೇಪಿಸುವ, ಬಿಡುವ, ವಿಸ್ತರಿಸುವ ಎಲ್ಲ ಸ್ವಾತಂತ್ರ್ಯ ವಹಿಸುವ ಬಗ್ಗೆ ಮನದಟ್ಟು ಮಾಡುತ್ತಾರೆ. ತನಗಿಂತ ಹಿಂದಿನ ವಚನಕಾರರಿಂದ ಪ್ರಭಾವಿತನಾಗಿರುವುದಕ್ಕೆ ನಿದರ್ಶನವಾಗಿ ಪರಿವ್ರಾಜಕಕ್ಕೆ ಬದಲಾಗಿ ಜಂಗಮ, ಶರಣಸಂಗ ವ್ಯಸನ, 'ಲಿಂಗಮೆಚ್ಚಿ ಅಹುದಹುದೆನಬೇಕು'ಗೆ ಸಮನಾಂತರವಾಗಿ 'ಕೃಷ್ಣ ಮೆಚ್ಚಲಿಕೆ' ಎಂದು ಬಳಸಿರುವುದು ಇವನ್ನೆಲ್ಲ ಹೇಳಿರುವ ಎಚ್ಚೆಸ್ವಿ ಅದೇಕೋ ದ್ರೌಪದಿಯನ್ನು ತೊತ್ತಾಗಿ ಆಸ್ಥಾನಕ್ಕೆ ಕರೆತರಲು ವಿದುರನಿಗೆ ಆಜ್ಞಾಪಿಸಿದ ದುರ್ಯೋಧನನ ಆ ಕೃತ್ಯವನ್ನು – 'ಹೆಡತಲೆಯ ತುರಿಸುವರೆ ಹಾವಿನಹೆಡೆಯೊಳಕಟಾ' ಮತ್ತು 'ಕಾಲಾಂತಕನ ದಂಷ್ಟ್ರಾಳಿಯಲಿ ನವಿಲುಯ್ಯಲೆಯ ನೀವಾಡಲಾಪಿರಲ' ಎಂಬ ರೂಪಕಗಳಲ್ಲಿ ಬಣ್ಣಿಸಿರುವುದು (ವಿದುರನ ಬಾಯಲ್ಲಿ) ಕೂಡಲಸಂಗನ ಶರಣರೊಂದಿಗೆ ಸರಸವಾಡುವುದೆಂದರೆ ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ ... ಎಂದು ಪ್ರಾರಂಭವಾಗುವ (ಸಮಗ್ರ ವಚನ ಸಂಪುಟ: ಪು.166) ವಚನದಿಂದ ನೇರವಾಗಿ ಸ್ವೀಕರಿಸಿದಂತಿರುವುದರತ್ತ ಗಮನಹರಿಸಿದಂತಿಲ್ಲ. 'ಹುಲಿಯ ಮೀಸೆಯ ಹಿಡಿದುಕೊಂಡು ಒಲಿದುಯ್ಯಲನಾಡುವಂತೆ' ಎಂಬುದೂ ಅಲ್ಲಿಯದೇ.

ತ್ರಿಕಾಲಚಕ್ರಗಳು ಸಂಧಿಸುವಲ್ಲಿ ಕಾವ್ಯದ ಅರ್ಥಸ್ಫೋಟ ಸಂಭವಿಸುತ್ತ ಇರುತ್ತದೆಂಬ ತಮ್ಮ ಅಪೂರ್ವ ಮಾತಿಗೆ ನಿದರ್ಶನವಾಗಿ ಕವಿ ಕಾವ್ಯದ ಫಲದಲ್ಲಿ ಹೇಳಿರುವ ಮೇದಿನಿಯನೊಲಿದಿತ್ತಫಲ (=ಭೂ ರಹಿತರಿಗೆ ಭೂಮಿ ನೀಡುವ) ಮತ್ತು ವಸ್ತ್ರಾದಿ ದಾನ ಫಲಗಳು (=ಬಟ್ಟೆಯಿಲ್ಲದವರಿಗೆ ಬಟ್ಟೆ ಕೊಡುವ) ಭಾರತದ ಘೋರ ದುರಂತಗಳಾದ ಮೇದಿನಿಯ ಹರಣ ಮತ್ತು ಮಾನಿನಿಯ ವಸ್ತ್ರಾಪಹರಣಗಳೆಂಬ ನೇತ್ಯಾತ್ಮಕ ಮೌಲ್ಯಗಳಿಗೆ ಇದಿರು ಒಡ್ಡಿದ ಧನಾತ್ಮಕ ಮೌಲ್ಯಗಳೆಂದು ವ್ಯಾಖ್ಯಾನಿಸಿದ್ದಾರೆ. ದ್ರೌಪದಿ ಸ್ವಯಂವರದ ಸಂದರ್ಭಲ್ಲಿ ಕ್ಷತ್ರಿಯರು ಬಿಲ್ಲನ್ನು ಎತ್ತಲು ಅಸಮರ್ಥರಾದಾಗ ಬ್ರಾಹ್ಮಣರು ಮತ್ಸ್ಯಯಂತ್ರವನ್ನು ಭೇದಿಸಿ ದ್ರೌಪದಿಯ ಕೈ ಹಿಡಿಯಬಹುದೆಂದು

ಸಾರಿದ ಸಂದರ್ಭದಲ್ಲಿ ಕುಮಾರವ್ಯಾಸ ಬ್ರಾಹ್ಮಣರ ಭೋಜನಪ್ರಿಯತೆಯನ್ನು ಲೇವಡಿ ಮಾಡುವ ಸಂದರ್ಭವನ್ನು ಬಳಸಿಕೊಂಡು ಎಚ್ಚೆಸ್ವಿ ಆಡಿರುವ ಮಾತುಗಳು ನಮ್ಮ ಸಂದರ್ಭಕ್ಕೆ ಅತ್ಯಂತ ಪ್ರಸ್ತುತವಷ್ಟೇ ಅಲ್ಲ; ಅತ್ಯಂತ ಆರೋಗ್ಯಕಾರಿ ಧೋರಣೆಯಿಂದ ಕೂಡಿರುವಂಥವು. "ಯಾರು ತನ್ನ ಜಾತಿಯನ್ನು ತಾನೇ ಬೈದುಕೊಳ್ಳಬಲ್ಲನೋ ಲೇವಡಿ ಮಾಡಬಲ್ಲನೋ ಅವನು ಇಡೀ ಜಾತಿ ವ್ಯವಸ್ಥೆಯನ್ನೂ ಬೈಯುವ, ಲೇವಡಿ ಮಾಡುವ ನೈತಿಕ ಅಧಿಕಾರವನ್ನು ಪಡೆಯುತ್ತಾನೆ! ಜಾತಿಯ ಇಕ್ಕಟ್ಟನ್ನು ದಾಟಿಕೊಳ್ಳಲಾರದ ಕವಿ ಅವನೆಂಥ ಕವಿ? ಇನ್ನೊಬ್ಬರನ್ನು ಬಯ್ಯುವುದು ಸುಲಭ! ತನ್ನನ್ನು ತಾನು ಮೊದಲು ನಗುವ ಧಾರ್ಷ್ಟ್ಯವನ್ನು ಪಡೆಯಬೇಕಾಗಿದೆ". ಗೆದ್ದರೆ ಹಾರುವನ ಹೆಂಡತಿಯಾಗಲಿರುವ ದ್ರೌಪದಿಯ ಸಖಿಯರು ಅವಳು ರಾಜಕುಮಾರಿ ಎಂಬುದನ್ನೂ ಮರೆತಂತೆ ತುಟಿಮೀರಿ ಲೇವಡಿ ಮಾಡುವುದರ ಬಗ್ಗೆ ಹೇಳುತ್ತ 'ಕುಮಾರವ್ಯಾಸನಿಗಾದರೋ ಮಹಾಭಾರತದ ಪಾತ್ರಗಳೆಲ್ಲಾ ಕೋಳಿವಾಡದ ಸತ್ಪ್ರಜೆಗಳೇ!' ಎಂದಿರುವುದು ಸರಿಯಾದ ವ್ಯಾಖ್ಯಾನ. ಒಂದು ಸಣ್ಣ ಆದರೆ ಆಪ್ತ ಸನ್ನಿವೇಶವನ್ನು ಎಚ್ಚೆಸ್ವಿ ಕಡೆಗಣಿಸದೆ ವ್ಯಾಖ್ಯಾನಿಸುವ ಪರಿ ಅದ್ಭುತ! ಕುಂಬಾರನ ಮನೆಯಲ್ಲಿ ಕತ್ತಲೆ ರಾತ್ರಿಯ ಏಕಾಂತದಲ್ಲಿ ತನ್ನ ತೊಡೆಯ ಮೇಲೆ ಸೊಸೆಯನ್ನು ಕುಳ್ಳಿರಿಸಿಕೊಂಡು ಕುಂತಿ ತಮ್ಮ ಮನೆಯ ಊಟದ ವ್ಯವಸ್ಥೆಯ ಗುಟ್ಟನ್ನು (ತಂದ ಭಿಕ್ಷಾನ್ನದಲ್ಲಿ ಭೀಮನಿಗೆ ಅರ್ಧಭಾಗ ಉಳಿದ ಅರ್ಧಭಾಗವನ್ನು ಐವರು ಹಂಚಿ ತಿನ್ನಬೇಕಂಬ) ಹೇಳುವುದನ್ನು– ಸಂಸಾರದ ಕಟ್ಟೇಕಾಂತ ಪ್ರಕಟವಾಗಲು ಹೊರಜಗತ್ತಿನ ಗಾಢಮೌನ ಬೇಕು. ನಸುಗತ್ತಲಲ್ಲೇ ಎಂಥ ಹೃದ್ಯನಾಟಕ ನಡೆಯುತ್ತಿದೆಯಲ್ಲಾ ಆ ಸಣ್ಣ ಜೋಪಡಿಯಲ್ಲಿ! (ಕೆ.ಎಸ್.ನ.ರ... 'ಅದಕೆ ಕತ್ತಲೆಬೇಕು' ನೆನಪಾಗುತ್ತದೆ). 'ಯಾರು ಒಟ್ಟಿಗೆ ಉಣ್ಣುತ್ತಾರೋ ಅವರು ಒಟ್ಟಿಗೆ ಬಾಳುತ್ತಾರೆ' ಎಂಬ ಗಾದೆಯ ಉಲ್ಲೇಖ ಕೂಡ ಉಚಿತವಾಗಿದೆ.

ಮಾತೆತ್ತಿದರೆ ರೂಪಕಗಳನ್ನು ಬಿತ್ತರಿಸುವ ಕುಮಾರವ್ಯಾಸನಲ್ಲಿ ಕಾವ್ಯದ ಪ್ರಾರಂಭದಿಂದಲೇ ವೃಕ್ಷದ ಪ್ರತಿಮೆಯು ಹೇಗೆ ಇಡೀ ಕಾವ್ಯವನ್ನೆಲ್ಲ ಆವರಿಸಿದೆ ಎಂಬುದಕ್ಕೆ 'ಸೋಮಪಾನಾದಿಗಳ ಪುಣ್ಯಸ್ತೋಮ ತರುಗಳಿಗೆ ಮಹಾಭಾರತ ಕಥಾಮೃತ ರಾಮಣೀಯಕ ಫಲ' ಎಂಬಲ್ಲಿಂದ ಪ್ರಾರಂಭಿಸಿ 'ಬೇರು ನೀರುಂಡಾಗ ಭೂರುಹದ ಶಾಖೋಪಶಾಖೆಗಳು ತಣಿಯವೆ' ಅಂತೆಯೇ 'ಬಂಧುಗಳ ದರುಶನ ಫಲವಲಾ ಸಂಸಾರ ತರುವಿಂಗೆ' ಎನ್ನುವವರೆಗೆ ಸುಮಾರು ಹತ್ತು ಸಂದರ್ಭಗಳನ್ನು ಉಲ್ಲೇಖಿಸಿಕೊಟ್ಟಿದ್ದಾರೆ

ಬಹಳ ಮುಖ್ಯವಾಗಿ ಶಂತನು ಮತ್ತು ಯೋಜನಗಂಧಿಯರ ಭೇಟಿಯ ಪ್ರಸಂಗವನ್ನು ಪಂಪ ಮತ್ತು ಕುಮಾರವ್ಯಾಸರು ಚಿತ್ರಿಸಿರುವ ಬಗೆಯನ್ನು ಹೋಲಿಸಿ ನೋಡುವ ಸಂದರ್ಭದಲ್ಲಿ– 'ಯೋಜನ ಗಂಧಿಯ ಪರಿಮಳದ ಬಳಿವಿಡಿದುಬಂದು' 'ನೀನು ಯಾರು' ಎಂದು ಕೇಳಿದ ಮರುಕ್ಷಣವೇ ಮೋಹಗೊಂಡು 'ಅರಮನೆಗೆ ನಡೆ' ಎಂದ ಶಂತನುಗೆ 'ತಂದೆಯ ಪರಮ ವಚನವಲಂಘ್ಯ' ಎಂದಾಗ ಅವನು ಭಗ್ನ ಮನೋರಥನಾದ ಚಿತ್ರವನ್ನು ಕುಮಾರವ್ಯಾಸ ನೀಡಿದರೆ, ಪಂಪ ಈ ಪ್ರಸಂಗವನ್ನು ಇನ್ನೂ ಚಿತ್ರವತ್ತಾಗಿ ನೀಡುತ್ತಾನೆನ್ನುವ ಎಚ್ಚೆಸ್ವಿ, 'ಮೃಗಶಾಬಾಕ್ಷಿ' ಎನ್ನುವ ಮಾತಿನ ಮೂಲಕ ಅವನು ಮೊದಲು ಆಕರ್ಷಿತನಾದ್ದು ಆಕೆಯ ವಾಸನೆಯಿಂದ ಎಂದು ಪಂಪ ಧ್ವನಿಪೂರ್ಣವಾಗಿ ಸೂಚಿಸಿದರೂ ಕುಮಾರವ್ಯಾಸ ಹೇಳಿರುವ 'ಪರಿಮಳದ ಬಳಿ ವಿಡಿದು ಬಂದ' ಎಂಬ ಮಾತು 'ಪಂಪನಲ್ಲಿ ಪ್ರಕಟವಾಗಿ ಕಾಣದೆ ಜಾರಿ ಹೋಗುವ ಒಂದು ಸಂಗತಿ' ಎಂದು ಹೇಳಿರುವುದು ನಿಜಕ್ಕೂ ಆಶ್ಚರ್ಯವೆನಿಸುತ್ತದೆ. 'ತನ್ಮಗಶಾಬಾಕ್ಷಿಯ ಕಂಪು ತಟ್ಟಿ' ಎಂದು ಪಂಪ ಸ್ಪಷ್ಟವಾಗಿ ಹೇಳುತ್ತಾನೆ (ಬೆಳ್ಳಾವೆ ಸಂಪಾದನೆ) 'ತನ್ ಮೃಗಶಾಬಾಕ್ಷಿಯಂ ಕಂಡು' ಎಂದು ಎಲ್ಲೂ ಇಲ್ಲದಿರುವ ಪಾಠವನ್ನು ಉಲ್ಲೇಖಿಸಿರುವುದು ಬಹುಶಃ ಮರೆವಿನಿಂದಿರಬೇಕು. ಬಸವರಾಜು 'ಪಳಂಚಲ್ಕೆ' ಎಂದು ಮೊದಲಿಗೇ ಇರುವ ಪಾಠವೇ ಸಾಕು ಎಂದೇನೋ 'ತಟ್ಟಿ' ಬದಲು ತಾವೇ ಕಷ್ಟದಿಂದ ಸಾಧಿಸಿದ 'ಕೃಷ್ಣ' ಎಂಬ ಪಾಠ ಇಟ್ಟುಕೊಂಡಿದ್ದಾರೆ.

ಕುಮಾರವ್ಯಾಸಭಾರತದ ರಾಜಕೀಯದ ಒಳಸುಳಿಗಳನ್ನು ಅತ್ಯಂತ ಆಳವಾದ ಒಳನೋಟದ ವಿಶ್ಲೇಷಣೆಗೆ ಒಳಗುಮಾಡುವ ರೀತಿ ದಂಗುಬಡಿಸುವಂತಿದೆ. ಮಾತುಗಳಲ್ಲಿ ಅಂಥ ವ್ಯತ್ಯಾಸವಿರದೆ ಹೋದರೂ ಮಾತಾಡುತ್ತಿರುವ ವ್ಯಕ್ತಿತ್ವಗಳಲ್ಲಿ ವ್ಯತ್ಯಾಸವಿರುತ್ತದೆ. ಮಾತಿನ ಘನತೆ ಮಾತನ್ನಷ್ಟೇ ಅವಲಂಬಿಸಿರುವುದಿಲ್ಲ, ಮಾತಾಡಿದವರ ಘನತೆಯನ್ನೂ ಅವಲಂಬಿಸಿರುತ್ತದೆ ಎಂದು ಹೇಳಿ ಅದಕ್ಕೆ ನಿದರ್ಶನವಾಗಿ 'ರಿಪುಜನಪರಭ್ಯುದಯದ ನಾಶವೆಸಗಬೇಕು' ಎಂಬ ಶಕುನಿಯ ನೀತಿ ಮತ್ತು ಸಲಹೆ ದುರ್ಯೋಧನನಿಗೆ ಆಪ್ಯಾಯಮಾನವಾಗಿ ಬಿಡುತ್ತದೆ. ಇದಕ್ಕಿಂತ ಹೆಚ್ಚು ಆಳವಾದ ಒಳನೋಟದ ವಿಶ್ಲೇಷಣೆ ಧೃತರಾಷ್ಟ್ರನ ಮಾತುಗಳನ್ನು ಕುರಿತದ್ದು. ಪಾಂಡವರನ್ನು ಅರಗಿನ ಮನೆಯಲ್ಲಿ ನಾಶಪಡಿಸಬೇಕೆಂಬ ಬಗ್ಗೆ ಕರ್ಣ, ದುಶ್ಶಾಸನರ ಜೊತೆ ಬಂದು ದುರ್ಯೋಧನ ಅಪ್ಪನ ಬಳಿ ಮಧ್ಯರಾತ್ರಿ ಪ್ರಸ್ತಾಪಿಸಿದಾಗ ಪಾಂಡವರ ಪರವಾಗಿ ಮಾತಾಡಿ 'ಬಿಡು ವಿಕಳಮತಿಗಳ ಮಾತನು' ಎಂದ ಧೃತರಾಷ್ಟ್ರನೇ ಕೆಲವೇ ನಿಮಿಷಗಳ ನಂತರದಲ್ಲಿ ಏಕಾಂತದಲ್ಲಿ ಈ ಮಾತನ್ನು ಪ್ರಸ್ತಾಪಿಸಿದಾಗ 'ಅಹುದು ಮಗನೇ ಮಂತ್ರವಿದು... ಭೀಷ್ಮ

ವಿದುರರು ಕುಹಕಿಗಳು ರಿಪುದಹನಸಿದ್ಧಿಯ ನೆನೆವುದು' ಎಂದು ಹೇಳುತ್ತಾನೆ. ತಪ್ಪು ಸಾರ್ವಜನಿಕವಾಗಿ ಆಗಬಾರದು; ಇನ್ನೊಬ್ಬರ ಅರಿವಿಗೆ ಬರದಿದ್ದರೆ ಸರಿ ಎನ್ನುವ ಲೋಕರೂಢಿಯನ್ನು ಹೇಳಿ ದ್ರೌಪದಿ ವಸ್ತ್ರಾಪಹರಣದ ಕ್ರಿಯೆ, ಈ ಪಿತೂರಿ ಸಭೆಯ ವರ್ಣನೆ, ಇವು ಹಗಲು ಇರುಳುಗಳೆಂಬ, ಸಾರ್ವಜನಿಕ-ಖಾಸಗಿ ಎಂಬ ಅಂತರ ಮರೆಸಿ ಎದೆಗೆ ಒದೆಯುವಷ್ಟು ಘಾತವುಳ್ಳದ್ದು ಎಂಬ ವ್ಯಾಖ್ಯಾನ ಹಾಗೂ 'ಅಂಧತ್ವದ ಕತ್ತಲ ಅನುಭವ ಮಾತ್ರ ಬಲ್ಲ ಧೃತರಾಷ್ಟ್ರ ಕತ್ತಲಲ್ಲಿ ತನ್ನ ಒಳಮನಸ್ಸಿನ ಕತ್ತಲನ್ನು ಒಮ್ಮೆಗೇ ಪ್ರಕಟಪಡಿಸಿದ್ದಾನೆ' ಎಂಬುದು ಅತ್ಯಂತ ಒಳನೋಟದ ಗ್ರಹಿಕೆ. ಹಾಗೆಯೇ ದುರ್ಯೋಧನನ ಎಲ್ಲ ಮಾತಿಗೆ ಧೃತರಾಷ್ಟ್ರ ತಾಳಹಾಕುತ್ತ ಹೋಗುವ ಪುತ್ರವ್ಯಾಮೋಹಿ ಎಂಬುದನ್ನು ಸೂಕ್ಷ್ಮವಾಗಿ ಬಗೆದು ತೋರಿದ್ದಾರೆ. ಧೃತರಾಷ್ಟ್ರ ಒಳ್ಳೆಯವನಂತೆ ಕಾಣುತ್ತಾನೆ ಅಷ್ಟೆ. ಒಳ್ಳೆಯತನ ಸಾಧಿಸುವ ಅಪೇಕ್ಷೆ ಇದ್ದೂ ಪುತ್ರವ್ಯಾಮೋಹದಿಂದ ಅದನ್ನು ಸಾಧಿಸಲಾಗದ ದುರ್ಬಲ ಮನಸ್ಸಿನ ವಜ್ರಶರೀರಿ ಎಂಬುದು ಎಂಥ ವಿಪರ್ಯಾಸ! ಖಾಂಡವನ ದಹನಪ್ರಸಂಗದ ಜೀವಸಂಕುಲ ಸಸ್ಯಸಂಕುಲ ನಾಶಗಳನ್ನು ನಮ್ಮ ಸಂದರ್ಭದ ಅರಣ್ಯನಾಶಕ್ಕೆ ಅನ್ವಯಿಸಿ ಮಹತ್ವದ ಒಳನೋಟ ನೀಡಿದ್ದಾರೆ. ರಾಜಸೂಯದ ಸಂದರ್ಭದಲ್ಲಿ ಶಿಶುಪಾಲನ ನಡೆವಳಿಯನ್ನು ಉಗ್ರವಾಗಿ ಟೀಕಿಸುವ ಧೀಮಂತ (ಭೀಷ್ಮ) ಸಭಾಪರ್ವದ ಕುದಿಬಿಂದುವಾದ ದ್ರೌಪದಿ ವಸ್ತ್ರಾಪಹರಣ ಸಂದರ್ಭ ದಲ್ಲಿ 'ಸ್ತ್ರೀಮತವನು ತ್ತರಿಸಲಾಗದೆ' ಎಂದು ಅವಳು ಅಂಗಲಾಚಿದರೂ ತುಟಿಬಿಚ್ಚದ ನಡೆವಳಿಯನ್ನು ಎಳೆಎಳೆಯಾಗಿ ವ್ಯಾಖ್ಯಾನಿಸುವ ರೀತಿ, ಆ ಸಂದರ್ಭದ ಕವಿಪ್ರತಿಭೆಯ ಉತ್ಕರ್ಷ ಗಳೆಂಬತ್ತಿರುವ ಪದ್ಯಗಳ ವ್ಯಾಖ್ಯಾನ, ಭೀಮ-ಜರಾಸಂಧರ ದ್ವಂದ್ವ ಯುದ್ಧದ ನೆಪ ಮಾಡಿಕೊಂಡು ಯುದ್ಧದ ಭೀಕರ ಪರಿಣಾಮಗಳನ್ನು ಕುರಿತ ಚಿಂತನೆ ಇಂಥ ಇನ್ನೂ ಅನೇಕ ಸಂದರ್ಭಗಳ ಆಂತರ್ಯ ತೆರೆದು ತೋರಿರುವ ರೀತಿ ನಮ್ಮನ್ನು ವಿಸ್ಮಿತಗೊಳಿಸುತ್ತವೆ. ಒಟ್ಟಾರೆ ಹೇಳಬೇಕೆಂದರೆ ತಮ್ಮ ಕಾವ್ಯಪ್ರತಿಭೆಯ ಕಾಣ್ಕೆ ಮತ್ತು ಪ್ರಾಚೀನ ಕವಿಗಳಿಂದ ಹಿಡಿದು ಅಡಿಗರಂಥ ಅರ್ವಾಚೀನ ಕವಿಗಳವರೆಗಿನ ಓದಿನ ವ್ಯುತ್ಪತ್ತಿಯ ಬೆಳಕಿನಲ್ಲಿ ಎಚ್ಚೆಸ್ವಿ ನಡೆಸಿರುವ ಈ ಕಾವ್ಯಾನುಸಂಧಾನ ಕಾವ್ಯಾಸಕ್ತರಿಗೆಲ್ಲ ಆಪ್ಯಾಯಮಾನವಾಗುವುದರಲ್ಲಿ ಸಂದೇಹವಿಲ್ಲ. ಉಳಿದ ಪರ್ವಗಳ ವ್ಯಾಖ್ಯಾನವೂ ಬೇಗನೆ ಓದುಗರ ಕೈಸೇರುವಂತಾಗಲಿ.

❖

2

ಅಡಕವಾಗಿ ಅರಳಿರುವ 'ಕನ್ನಡ ಸಾಹಿತ್ಯ ಚರಿತ್ರೆ'

ಕನ್ನಡದಲ್ಲಿ ಈಗಾಗಲೇ ಇರುವ ದಂಡಿಯಾದ ಸಾಹಿತ್ಯ ಚರಿತ್ರೆಗಳ ಸಂಖ್ಯೆಗೆ ಖ್ಯಾತ ಕವಿ ಮತ್ತು ವಿಮರ್ಶಕರಾದ ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಕನ್ನಡ ಸಾಹಿತ್ಯ ಚರಿತ್ರೆ ಈಚಿನ ಇನ್ನೊಂದು ಸೇರ್ಪಡೆ.

ಕನ್ನಡ ಸಾಹಿತ್ಯದ ಅತ್ಯಂತ ಆರಂಭ ಕಾಲದಿಂದ ತೊಡಗಿ ಇತ್ತೀಚಿನವರೆಗಿನ ಸಾಹಿತ್ಯದ ಮತ್ತು ಸಾಹಿತ್ಯ ಕೃತಿಗಳನ್ನು ಕುರಿತಾದ ಮಾಹಿತಿ ಮತ್ತು ಚರ್ಚೆಗಳನ್ನು ಒಂದೆಡೆ ಒಳಗೊಂಡಿರುವುದೇ ಇದರ ಒಂದು ವಿಶೇಷತೆ.

ಅಮೆರಿಕದಲ್ಲಿರುವ ಕನ್ನಡಿಗರ ಸಲುವಾಗಿ ಕನ್ನಡ ಸಾಹಿತ್ಯ ಪರಂಪರೆ ಕುರಿತಂತೆ ಏರ್ಪಡಿಸಲಾಗಿದ್ದ ಶಿಬಿರಗಳಲ್ಲಿ ಮಾಡಿದ ಬಿ. ಎಂ.ಶ್ರೀ.ವರೆಗಿನ ಸಾಹಿತ್ಯ

ಕನ್ನಡ ಸಾಹಿತ್ಯ ಚರಿತ್ರೆ, ಡಾ. ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ
ಪುಟಗಳು: 455 ಬೆಲೆ: 295/–
ಅಂಕಿತ ಪುಸ್ತಕ, 53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿ ಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು – 560 004.

ಕುರಿತ ಉಪನ್ಯಾಸಗಳ ಜೊತೆಗೆ ಇಪ್ಪತ್ತನೇ ಶತಮಾನದ ಸಾಹಿತ್ಯದ ಬಗೆಗೂ ವಿಸ್ತರಿಸಿ ಬರೆದ ಬರಹವಾಗಿದೆ ಇದು.

ಇಂಥದೊಂದು ಸಾಹಿತ್ಯ ಚರಿತ್ರೆಯನ್ನು ಬರೆಯುವಾಗ ಭಟ್ಟರ ನೇರ ದೃಷ್ಟಿ ಇರುವುದು ಸಂಗ್ರಹದ ಕಡೆಗೆ. ಅದರಲ್ಲೂ ಮುಖ್ಯವಾಗಿ ಅಮೆರಿಕದಂಥ ವಿದೇಶದಲ್ಲಿ ನೆಲೆಸಿರುವ ಸಾಮಾನ್ಯ ಕನ್ನಡಿಗರಿಗೆ ಕಾಲಾನುಕ್ರಮಣಿಯಲ್ಲಿ ಕನ್ನಡ ಸಾಹಿತ್ಯದ ಪ್ರಮುಖವಾದ ಸಾಹಿತ್ಯ ಕೃತಿಗಳು, ಪ್ರಕಾರಗಳು ಮತು ಕೃತಿಕಾರರ ಪರಿಚಯ ಮಾಡಿಕೊಡಬೇಕೆಂಬುದು. ಹೀಗಾಗಿ ಇಲ್ಲಿ ತುಂಬ ಮೌಲಿಕವಾದ ಸಾಹಿತ್ಯಕ ಚರ್ಚೆಗಳಾಗಲಿ, ಭಾರೀ ವಿಮರ್ಶೆಯ ಮಾತುಗಳಾಗಲಿ ಇಲ್ಲ. ಆದರೆ, ಕನ್ನಡ ಸಾಹಿತ್ಯದ ಪ್ರೌಢ ವಿದ್ಯಾರ್ಥಿಗಳು ಈಗಾಗಲೇ ಓದಿ ತಿಳಿದಿರುವ ಸಂಗತಿಗಳನ್ನೇ– ಯಾವುದನ್ನು ಎಷ್ಟು ಹೇಳಬೇಕು, ಹೇಗೆ ಹೇಳಬೇಕು ಎಂಬುದನ್ನು ಚೆನ್ನಾಗಿ ತಿಳಿದಿರುವ ನುರಿತ ಪ್ರಾಧ್ಯಾಪಕರಾದ ಭಟ್ಟರು ಹೇಳಬೇಕಾದ ವಿಷಯಗಳನ್ನು ಗೊಂದಲಕ್ಕವಕಾಶವಾಗದಂತೆ ನೇರವಾಗಿ, ಸ್ಪಷ್ಟವಾಗಿ ಮತ್ತು ಮನೋಹರವಾಗಿ, ಅಡಿಟಿಪ್ಪಣಿಗಳ ಭಾರವಿಲ್ಲದೆ– ನಿರೂಪಿಸುವ ಕಾರಣದಿಂದ ಇದರ ಓದು ಎಲ್ಲಿಯೂ ಬೇಸರಕ್ಕೆಡೆಗೊಡುವುದಿಲ್ಲ. ಅದರಲ್ಲೂ ಮುಖ್ಯವಾಗಿ ಹಳೆಗನ್ನಡ (ಪಂಪನಿಂದ ಮುದ್ದಣನವರೆಗೆ) ಮತ್ತು ನವೋದಯದವರೆಗಿನ ಪ್ರಮುಖ ಕವಿಗಳು, ಸಾಹಿತ್ಯ ಕೃತಿಗಳ ಬಗೆಗೆ ಅಡಕವಾಗಿ ಹಾಳತವಾದ ವಿಮರ್ಶೆಯೊಂದಿಗೆ ವಿಷಯಗಳನ್ನು ಮುಂದಿಟ್ಟಿದ್ದಾರೆ. ಇಲ್ಲಿ ಸಾಮಾನ್ಯವಾಗಿ ವಿವಾದಕ್ಕೆಡೆಯಿಲ್ಲ ಎಂದೇ ಹೇಳಬೇಕು. ಆದರೆ ಅದೇ ನವ್ಯ, ದಲಿತ–ಬಂಡಾಯ, ಸಾಹಿತ್ಯಗಳನ್ನು ಕುರಿತು ಬರೆಯುವಾಗ, ಇಲ್ಲವೆ ಕಾದಂಬರಿ, ಸಾಹಿತ್ಯ ವಿಮರ್ಶೆ, ಸಂಶೋಧನೆ, ಪ್ರಬಂಧ ಸಾಹಿತ್ಯ, ಜೀವನ ಚರಿತ್ರೆ, ಪ್ರವಾಸ, ಅನುವಾದ ಸಾಹಿತ್ಯ ಮುಂತಾದುವುಗಳ ಬಗ್ಗೆ ಬರೆಯುವಾಗ ಅನೇಕ ಲೇಖಕರು, ಪುಸ್ತಕಗಳ ಉಲ್ಲೇಖವನ್ನೇ ಮಾಡಿಲ್ಲ. ಆದರೆ ಈವರೆಗೆ ಬರೆದಿರುವ ಎಲ್ಲ ಲೇಖಕರ ಬಗ್ಗೆ ಅಥವಾ ಎಲ್ಲ ಕೃತಿಗಳ ಬಗ್ಗೆ ಪ್ರಸ್ತಾಪಿಸುವುದು ಸಾಧ್ಯವೇ ಇಲ್ಲ, ಆದರೆ ಮುಖ್ಯವಾದುವು ಸಾಧ್ಯವಾದಷ್ಟೂ ಬಿಟ್ಟುಹೋಗದಂತೆ ಇರಲು ಯತ್ನಿಸಿದ್ದೇನೆ. ಇಷ್ಟಾಗಿಯೂ ಹಲವು ಲೋಪದೋಷಗಳಿರುವುದು ಸಾಧ್ಯ. ಓದುಗರು ಈ ಬಗೆಯ ಬರಹದ ಮಿತಿಯನ್ನರಿತು ನನ್ನನ್ನು ಕ್ಷಮಿಸುವರಾಗಿ ಭಾವಿಸುತ್ತೇನೆ ಎಂದು ಮೊದಲಿಗೇ ಎನ್ನೆಸ್ಸೆಲ್ ಅವರು ಕೇವಿಯಟ್ ಹಾಕಿಬಿಟ್ಟಿರುವುದರಿಂದ ಆ ಬಗ್ಗೆ ಏನೂ ಹೇಳುವಂತಿಲ್ಲ!

ರಸಪೂರ್ಣ ಪದ್ಯ

ಪಂಪ ಪೂರ್ವಯುಗದ ಪ್ರಮುಖ ಕೃತಿಗಳಾದ ಕವಿರಾಜಮಾರ್ಗ, ವಡ್ಡಾರಾಧನೆಗಳ ಬಗೆಗೆ ತಮಗೆ ಪ್ರಿಯರಾದ ಮತ್ತು ಕನ್ನಡದ ಅತ್ಯಂತ ಪ್ರಮುಖ ಕವಿಗಳೂ ಆದ ಪಂಪ, ರನ್ನ, ನಾಗವರ್ಮ, ನಾಗಚಂದ್ರ, ಕರ್ಣಪಾರ್ಯ, ಶಾಂತಿನಾಥ, ಲಕ್ಷ್ಮೀಶ, ಜನ್ನ, ಹರಿಹರ, ರಾಘವಾಂಕ, ರುದ್ರಭಟ್ಟ, ಕುಮಾರವ್ಯಾಸ, ಇವರುಗಳ ಬಗ್ಗೆ, ಹಾಗೆಯೇ ಪ್ರಮುಖ ವಚನಕಾರರಾದ ಬಸವಣ್ಣ, ಅಕ್ಕ, ಅಲ್ಲಮರ ಬಗ್ಗೆ ಹಾಗೂ ಕನಕ, ಪುರಂದರದಾಸರುಗಳ ಬಗ್ಗೆ ಸಾಕಷ್ಟು ವಿವರವಾಗಿಯೇ ಬರೆದಿದ್ದಾರೆ, ಅಗತ್ಯವೆನಿಸಿದಲ್ಲಿ ಹಳಗನ್ನಡದ ಪ್ರಮುಖ ಕವಿಗಳ ಕೃತಿಗಳ ರಸಪೂರ್ಣವಾದ ಪದ್ಯಗಳನ್ನು ಉದಾಹರಿಸಿ ಅವುಗಳ ಸರಳ ಗದ್ಯಾನುವಾದವನ್ನು ನೀಡಿರುವುದು ಓದುಗರಿಗೆ ಅವುಗಳಲ್ಲಿ ಆಸಕ್ತಿ ಹುಟ್ಟಿಸಲು ಕಾರಣವಾಗಿದೆ. ಆದರೆ ಅದೇ ಮುದ್ರಾಮಂಜೂಷ ಮತ್ತು ಮುದ್ದಣನ ಕೃತಿಗಳನ್ನು ಕುರಿತ ಬರಹ ತೀರಾ ಸಂಕುಚಿತಗೊಂಡಿದೆ. ಬಸವಪ್ಪಶಾಸ್ತ್ರೀ ಎಂದು ಇರಬೇಕಾದ್ದು ಬಸಪ್ಪಶಾಸ್ತ್ರಿ ಎಂದಾಗಿರುವುದರ ಕಾರಣ ಮುದ್ರಣದೋಷವೆ? ಯಕ್ಷಗಾನ ಸಾಹಿತ್ಯ ಹಾಗೂ ಮಕ್ಕಳ ಸಾಹಿತ್ಯ ಕುರಿತಂತೆ ಇದುವರೆಗಿನ ಯಾವುದೇ ಸಾಹಿತ್ಯ ಚರಿತ್ರೆಯಲ್ಲೂ ಇಲ್ಲಿರುವಂತೆ ವಿವರಗಳು ಇರಲಿಲ್ಲ ಎಂಬುದೊಂದು ವಿಶೇಷ.

ನವೋದಯ ಮತ್ತು ನವ್ಯ ಸಾಹಿತ್ಯದ ಕವಿಗಳಲ್ಲಿ ಬಿ.ಎಂ.ಶ್ರೀ, ಡಿ.ವಿ.ಜಿ, ಪೈ, ಕುವೆಂಪು, ಪು.ತಿ.ನ , ಬೇಂದ್ರೆ, ರಾಜರತ್ನಂ, ಗೋಕಾಕ್, ಕೆ.ಎಸ್.ನ., ಅಡಿಗ ಮುಂತಾದ ಕವಿಗಳನ್ನು ಹೊರತುಪಡಿಸಿದರೆ ಉಳಿದ ನವೋದಯ, ನವ್ಯ ಕವಿಗಳ ಬಗೆಗಿನ ಬರಹ ತೀರಾ ಸಂಕ್ಷಿಪ್ತಗೊಂಡು, ಅವಸರದಲ್ಲಿ ವಿದ್ಯಾರ್ಥಿ ಪರೀಕ್ಷೆಗೆ ಮಾಡಿಕೊಂಡ ನೋಟ್ಸ್‌ನಂತಿದೆ ಎಂದು ಹೇಳಿದರೆ ಅದು ಈ ಪುಸ್ತಕದ ವ್ಯಾಪ್ತಿಯಲ್ಲಿ ಅನಿವಾರ್ಯ ಎಂದು ಭಟ್ಟರು ಹೇಳಿಯಾರು!

ಇನ್ನು ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖಗೊಳ್ಳುವುದೇ ಒಂದು ಹೆಚ್ಚುಗಾರಿಕೆಯೆನ್ನುವುದಾದರೆ ಇಂದಿನ ಅನೇಕ ಹೆಸರಾಂತ ಕವಿಗಳು ಕವಯಿತ್ರಿಯರು ಒಂದು ಇಲ್ಲವೆ ಅರ್ಧಸಾಲಿನ ಉಲ್ಲೇಖಕ್ಕೆ ಪಾತ್ರರಾದ ಭಾಗ್ಯವಂತರಾಗಿದ್ದಾರೆ!

ಇನ್ನು ಉಲ್ಲೇಖವಾಗಲೇಬೇಕಾಗಿದ್ದ ಆದರೆ ಉಲ್ಲೇಖಗೊಳ್ಳದೆ ಹೋಗಿರುವವರ ಭಾಗ್ಯದ ಬಗ್ಗೆ ಹೇಳುವುದೇ ಬೇಡ!

ಇನ್ನುಳಿದ ಪ್ರಕಾರಗಳಾದ ಕಾದಂಬರಿ ಪ್ರಕಾರದಲ್ಲಿ ಕಾರಂತ, ಕುವೆಂಪು, ಮಾಸ್ತಿ, ಅನಕೃ, ಭೈರಪ್ಪ , ದೇವುಡು, ಅನಂತಮೂರ್ತಿ, ತೇಜಸ್ವಿ, ಚಿತ್ತಾಲರನ್ನು ಹೊರತುಪಡಿಸಿದರೆ ಉಳಿದ ಕಾದಂಬರಿಕಾರರ ಬಗೆಗಿನ ವಿವರಗಳು, ಚರ್ಚೆಗಳು ತೀರಾ ಸಂಕೋಚಗೊಂಡಿವೆ.

ಕಾದಂಬರಿಕಾರ ಡಿಸೋಜ ಅವರಿಗಂತೂ ನಾಮಮಾತ್ರ ಒಂದು ಸಾಲಿನ ಒಕ್ಕಣೆ. ಮಹಿಳಾ ಕಾದಂಬರಿಕಾರ್ತಿಯರೆಲ್ಲ ಕೇವಲ ಎರಡೂವರೆ ಪುಟಗಳಲ್ಲಿ ಅಡಕಗೊಂಡಿದ್ದಾರೆ. ಹಾಗೆ ನೋಡಿದರೆ ನಾಟಕ ಪ್ರಕಾರದಲ್ಲಿ ಪ್ರಸಿದ್ಧರಾದ ಸಂಸ, ಕೈಲಾಸಂ, ಶ್ರೀರಂಗ, ಕುವೆಂಪು, ಮಾಸ್ತಿ, ಅ.ನ.ಕೃ, ಜಿ.ಬಿ. ಜೋಷಿ ಮುಂತಾದವರನ್ನು ಕುರಿತಂತೆ ಮುಖ್ಯ ಮಾಹಿತಿಗಳೆಲ್ಲ ಅಡಕಗೊಂಡಿವೆ. ಗೀತನಾಟಕ ಪ್ರಕಾರ ವಿಸ್ತೃತವಾದ ವಿವೇಚನೆಗೆ ಒಳಗಾಗಿದೆ. ಅದರಲ್ಲಿ ಕೃಷಿ ಮಾಡಿರುವವರ ಸಂಖ್ಯೆ ಕಡಿಮೆ ಎಂಬುದೂ ಇದಕ್ಕೆ ಕಾರಣವಿರಬೇಕು. ಹಾಗೆಯೇ ಸಣ್ಣ ಕಥಾ ಪ್ರಕಾರದ ಬಗೆಗೂ ಸಾಕಷ್ಟು ವಿವರವಾಗಿಯೇ ಬರೆಯಲಾಗಿದೆ. ಪ್ರಮುಖ ಕಥೆಗಾರರಾದ ಮಾಸ್ತಿ, ಆನಂದ ಅಶ್ವತ್ಥ, ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಲಂಕೇಶ್, ಚಿತ್ತಾಲ, ವೀಣಾ ಶಾಂತೇಶ್ವರ, ವೈದೇಹಿ, ದೇವನೂರು, ಡಿಸೋಜಾ ಇವರೆಲ್ಲರ ಬಗ್ಗೆ ಸಾಕಷ್ಟು ವಿಸ್ತಾರವಾಗಿಯೇ ಬರೆದಿದ್ದಾರೆ. ಇವುಗಳ ಜೊತೆಗೆ ಕಥೆ, ಕಾದಂಬರಿ, ವಿಮರ್ಶೆ ಮುಂತಾದ ಪ್ರಕಾರಗಳ ಕುರಿತು ಬರೆಯುವಾಗ ಒಟ್ಟಾರೆಯಾಗಿ ಕನ್ನಡದ ಈಚಿನ ಕಥೆ , ಕಾದಂಬರಿ ವಿಮರ್ಶೆಗಳ ಪ್ರವೃತ್ತಿಯ ಬಗೆಗೂ ಕೆಲವು ಸೂಚನೆಗಳು, ಮಾತುಗಳು ಇರಬೇಕಿತ್ತೆಂದು ಇಂಥ ಪುಸ್ತಕಗಳಲ್ಲಿ ನಿರೀಕ್ಷಿಸುವುದು ಸಹಜ. ಆದರೆ ಅವು ಗೈರು ಹಾಜರಾಗಿವೆ. ಸಾಹಿತ್ಯ ವಿಮರ್ಶೆಯ ಪ್ರಕಾರ ಇನ್ನಷ್ಟು ವಿವರವಾಗಿ ಮೂಡಿಬರಬಹುದಿತ್ತು. ತೀರಾ ಸಾಮಾನ್ಯವಾಗಿ (General ಆಗಿ) ಬರೆಯಲಾಗಿದೆ. ವಿಮರ್ಶಾ ಸಿದ್ಧಾಂತ ಮತ್ತು ಸಾಹಿತ್ಯ ಕೃತಿಗಳನ್ನು ಕುರಿತಂತೆ ವಿಪುಲವಾಗಿ ಬರೆದಿರುವ ಶಿವರುದ್ರಪ್ಪನವರ ಬಗೆಗಂತೂ (ಕಾವ್ಯಾರ್ಥ ಚಿಂತನದ ಹೊರತಾಗಿ) ಹೆಚ್ಚು ಕಡಿಮೆ ಮೌನವನ್ನೇ ತಾಳಿರುವುದು ಆಶ್ಚರ್ಯಕರ. ಹಾಗೆಯೇ ಲಲಿತ ಪ್ರಬಂಧಗಳ ಬಗೆಗಿನ ಬರಹದಲ್ಲಿ ಉತ್ಕೃಷ್ಟವಾದ ಎರಡು ಪ್ರಬಂಧ ಸಂಕಲನಗಳನ್ನು ಪ್ರಕಟಿಸಿರುವ ಭಟ್ಟರ ಆತ್ಮೀಯ ಗೆಳೆಯರೇ ಆದ ಎಚ್.ಜಿ. ಸಣ್ಣಗುಡ್ಡಯ್ಯನವರು ಕೇವಲ ನಾಮಮಾತ್ರ ಉಲ್ಲೇಖಿತರಾಗಿದ್ದಾರೆ. ಗಿರಿಜನ ಪ್ರಪಂಚ

ಇನ್ನು ಜನಪದ ಸಾಹಿತ್ಯದಲ್ಲಿ ಸ್ವತಃ ಉತ್ತಮ ಕೆಲಸ ಮಾಡಿರುವುದೇ ಅಲ್ಲದೆ ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚದಂಥ ಪುಸ್ತಕ ಅನುವಾದಿಸಿರುವ, ಕಾದಂಬರಿಕಾರರೂ ಆದ ನಾಗೇಗೌಡರ ಹೆಸರು ಆ ಪ್ರಕಾರಗಳಲ್ಲಿ ಉಲ್ಲೇಖವಾಗಿಯೇ ಇಲ್ಲ. ಎಚ್.ಎಲ್. ನಾಗೇಗೌಡರ ಹೆಸರು ಉಲ್ಲೇಖವಾಗಿರುವುದು ಪ್ರವಾಸ ಸಾಹಿತ್ಯದ ಅಡಿಯಲ್ಲಿ 'ಪ್ರವಾಸಿ ಕಂಡ ಇಂಡಿಯಾ' ಸಂಪುಟಗಳ ಅನುವಾದಕರೆಂದು. ಆದರೆ ನಾಗೇಗೌಡರ ಪುಸ್ತಕದ ಹೆಸರು ಪ್ರವಾಸಿ ಕಂಡ ಇಂಡಿಯಾ ಎಂದಿದ್ದರೂ ಅದನ್ನು

ಪ್ರವಾಸ ಸಾಹಿತ್ಯ ಕೃತಿ ಎನ್ನುವುದಕ್ಕಿಂತ ಹೆಚ್ಚಾಗಿ ಇತಿಹಾಸ ಕೃತಿ ಎಂದು ಪರಿಗಣಿಸುವುದು ಉಚಿತವೆನಿಸುತ್ತದೆ.

ಇನ್ನು ಆತ್ಮಕಥೆ, ಜೀವನ ಚರಿತ್ರೆ, ಗ್ರಂಥ ಸಂಪಾದನೆ ಕ್ಷೇತ್ರಗಳಲ್ಲಿ ಸಾಕಷ್ಟು ಕೆಲಸ ಮಾಡಿರುವ, ಎಲ್ಲಕ್ಕಿಂತ ಹೆಚ್ಚಾಗಿ ಅನುವಾದಕ್ಕಾಗಿಯೇ ತಮ್ಮನ್ನು ತೆತ್ತುಕೊಂಡು ಕೃಷ್ಣಾ ಹಥೀಸಿಂಗ್‌ರ 'ನೆನಪು ಕಹಿಯಲ್ಲ' ಜೇನ್ ಆಸ್ಟೆನ್ನಳ 'ಪ್ರೈಡ್ ಅಂಡ್ ಪ್ರಿಜುಡೀಸ್' ಟಾಲ್‌ಸ್ಟಾಯ್ ಅವರ 'ವಾರ್ ಅಂಡ್ ಪೀಸ್', ಅನ್ನಾ ಕರೇನಿನಾ ಮೊದಲಾದ ಕೃತಿಗಳನ್ನು ಬಹಳ ಹಿಂದೆಯೇ ಅನುವಾದಿಸಿದ ದೇಜಗೌ ಅವರ ಹೆಸರು ಈ ಗ್ರಂಥದಲ್ಲಿ ಎಲ್ಲಿಯಾದರೂ ಇದೆಯೇ ಎಂದು ಕಷ್ಟಪಟ್ಟು ಹುಡುಕಿ ನೋಡಬೇಕಾಗಿದೆ.

ಹೀಗೆ ಈ ಗ್ರಂಥದ ಇಲ್ಲಗಳ ಬಗ್ಗೆಯೇ ಹೇಳುತ್ತ ಹೋದರೆ ಅದರ ಗುಣಾತ್ಮಕತೆ ಮರೆಯಾಗಿಬಿಡಬಹುದೆಂಬ ಕಾರಣದಿಂದ, ಜೊತೆಗೆ ಭಟ್ಟರೂ ಆ ಬಗ್ಗೆ ಮೊದಲೇ ಕೇವಿಯಟ್ ಹಾಕಿ ಬಿಟ್ಟಿರುವುದರಿಂದ ಅದನ್ನು ಹೊರತುಪಡಿಸಿ ಹೇಳುವುದಾದರೆ ತನ್ನ ಮಿತಿಗಳ ಹೊರತಾಗಿಯೂ ಅಮೆರಿಕದ ಕನ್ನಡಿಗರ ಸಾಹಿತ್ಯರಚನೆಯ ಬಗೆಗಿನ ಮಾಹಿತಿಯನ್ನೂ ಒಳಗೊಂಡಂತೆ ಕನ್ನಡ ಸಾಹಿತ್ಯ ಕುರಿತಂತೆ ಒಬ್ಬ ಸಾಮಾನ್ಯ ಕನ್ನಡಿಗನಿಗೆ ಅಗತ್ಯವಿರುವ ಎಲ್ಲ ಪ್ರಮುಖ ಮಾಹಿತಿಗಳನ್ನು ಒಂದೆಡೆ ಸಂಗ್ರಹಿಸಿಕೊಡುತ್ತಲೇ ಕನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ ಮತ್ತು ಪ್ರೀತಿ ಹುಟ್ಟಿಸುವ ರೀತಿಯಲ್ಲಿ ಆಕರ್ಷಕವಾಗಿಯೂ, ಸೊಗಸಾಗಿಯೂ ಕಟ್ಟಿಕೊಟ್ಟಿರುವ ಈ ಸಾಹಿತ್ಯಚರಿತ್ರೆಯ ಬರಹ ಸಾರ್ಥಕವಾಗಿದೆ

ಎಂದೇ ಹೇಳಬೇಕು. ಪ್ರೊ. ಎನ್ನೆಸ್ಸೆಲ್ ಅವರ ಶ್ರಮ ಅಭಿನಂದನಾರ್ಹವಾದುದು.

❖

೩

ಕುವೆಂಪು ಸಾಹಿತ್ಯದ ಅರ್ಥಪೂರ್ಣ ಅನುಸಂಧಾನ

ಕುವೆಂಪು ನಮ್ಮ ಕಾಲದ ಶಿಖರ ಸಾಹಿತಿ. ಸಾಹಿತ್ಯದ ಒಟ್ಟು ಸಾಧನೆಯ ದೃಷ್ಟಿಯಿಂದ ನೋಡಿದಾಗಲಂತೂ ಅವರನ್ನು ಸರಿಗಟ್ಟುವ ಸಾಹಿತಿಗಳು ಕನ್ನಡದಲ್ಲಿ ಬಹುಶಃ ಇಲ್ಲವೇ ಇಲ್ಲವೆನ್ನಬಹುದು. ಕಾವ್ಯ, ನಾಟಕ ಕಾದಂಬರಿ, ವಿಮರ್ಶೆ, ಮುಂತಾದ ಸಾಹಿತ್ಯದ ಪ್ರಮುಖ ಪ್ರಕಾರಗಳಷ್ಟೇ ಅಲ್ಲದೆ ,ಸಣ್ಣ ಕಥೆ, ಪ್ರಬಂಧ, ಜೀವನ ಚರಿತ್ರೆ, ವಿಚಾರ ಸಾಹಿತ್ಯ, ಆತ್ಮಕಥೆಯಂಥ ಮೈನರ್ ಪ್ರಕಾರಗಳಲ್ಲೂ ವಿಪುಲವಾದ ಮತ್ತು ಸತ್ವಪೂರ್ಣವಾದ ಕೃತಿಗಳನ್ನು ಕೊಟ್ಟ ಮಹಾ ಸಾಹಿತಿ. ಕಾವ್ಯ ಮತ್ತು ಕಾದಂಬರಿಕ್ಷೇತ್ರಗಳಲ್ಲಂತೂ ಅವರದು ಮೇರು ಸಾಧನೆ. ಅನಾದಿ ಕಾಲದಿಂದ ನಮ್ಮ ಸಮಾಜವನ್ನು ಶೋಷಿಸುತ್ತ ಬಂದಿರುವ ಸಂಗತಿಗಳು ಹಾಗೂ ಆಧುನಿಕ ಸಮಾಜದ ಬಹುತೇಕ ಎಲ್ಲ ಆಶಯಗಳು, ಆಕಾಂಕ್ಷೆಗಳು,

---

ಕುವೆಂಪು ಕವನಗಳು – ಒಂದು ಸಾಂಸ್ಕೃತಿಕ ಚರ್ಚೆ

ಲೇಖಕರು : ಎನ್. ಎಸ್. ರಘುನಾಥ್

ಅಭೀಪ್ಸೆಗಳಿಗೆ, ವಿಚಾರಗಳಿಗೆ ತಮ್ಮ ಬರಹದಲ್ಲಿ ಶಕ್ತ ಅಭಿವ್ಯಕ್ತಿಯನ್ನು ಕೊಟ್ಟ ಲೇಖಕರಾಗಿ ಅವರು ಯಾವತ್ತೂ ಜನಮನದಲ್ಲಿ ಶಾಶ್ವತವಾಗಿ ನೆಲೆನಿಂತಿರುವ ಚೇತನ.

ಕುವೆಂಪು ಅವರದು ಅತ್ಯಂತ ಸಮೃದ್ಧವಾದ ಸೃಜನಶೀಲ ಪ್ರತಿಭೆ. ಸೃಜನ ಸಾಮರ್ಥ್ಯದ ದೃಷ್ಟಿಯಿಂದ ಮಾತ್ರ ನೋಡಿದಾಗಲೂ ಅವರಂಥ ಪ್ರತಿಭೆ ಯಾವ ಸಮಾಜ, ಭಾಷೆ, ಕಾಲದಲ್ಲಾದರೂ ವಿರಳವೇ ಆದರೂ ಅಲಭ್ಯವೇನಲ್ಲವೆನಬಹುದು. ಆದರೆ ಸೃಜನ ಸಾಮರ್ಥ್ಯದಷ್ಟೇ ಪ್ರಧಾನವಾಗಿ ಮತ್ತು ಸಮರ್ಥವಾಗಿ ಸಾಮಾಜಿಕವಾಗಿ ಅತ್ಯಂತ ಕ್ರಾಂತಿಕಾರಕವೆನ್ನಬಹುದಾದ ವೈಚಾರಿಕಪ್ರತಿಭೆ ಮತ್ತು ದೃಷ್ಟಿಕೋನವೂ ಒಂದೇ ವ್ಯಕ್ತಿತ್ವದಲ್ಲಿ ಸಮಸಮವಾಗಿ ಏಕತ್ರ ಜೊತೆಗೂಡಿದ್ದು ಕುವೆಂಪು ಅವರಲ್ಲಿ ಮಾತ್ರ . ಹಾಗೂ ಅದು ನಿಜಕ್ಕೂ ಕನ್ನಡದ ಪುಣ್ಯವೆಂದೇ ಹೇಳಬೇಕು.

ಇಂಥ ಶಿಖರ ಸಾಹಿತಿಯ ಸಾಹಿತ್ಯವನ್ನು ಕುರಿತ ವಿಮರ್ಶೆ ಕನ್ನಡದಲ್ಲಿ ವಿಪುಲವಾಗಿ ಬಂದಿದೆ. ದಿನನಿತ್ಯ ಬರುತ್ತಲೇ ಇದೆ. ಬೇರೆ ಬೇರೆ ದೃಷ್ಟಿಕೋನದಿಂದ ಅವರ ಸಾಹಿತ್ಯವನ್ನು ಅರ್ಥೈಸುವ, ವ್ಯಾಖ್ಯಾನಿಸುವ, ಬೆಲೆಗಟ್ಟುವ ಕಾರ್ಯಕ್ಕೆ ಕೊನೆಯೂ ಇರುವುದಿಲ್ಲ. ಪ್ರತಿಯೊಂದು ತಲೆಮಾರೂ ಇಂಥದೊಂದು ಅನುಸಂಧಾನವನ್ನು, ಅದೊಂದು ಸಾಂಸ್ಕೃತಿಕ ಜವಾಬ್ದಾರಿಯೆಂದು ತಿಳಿದು ನಡೆಸುತ್ತಲೇ ಇರುವುದೇ ಆಯಾ ತಲೆಮಾರು ತನ್ನ ಮೇರು ಸಾಹಿತಿಗೆ ಗೌರವ ಸಲ್ಲಿಸುವ ರೀತಿ. ಪ್ರಸ್ತುತ ಪ್ರೊ. ಎನ್. ಎಸ್. ರಘುನಾಥ್ ಅವರ– "ಕುವೆಂಪು ಕವನಗಳು: ಒಂದು ಸಾಂಸ್ಕೃತಿಕ ಚರ್ಚೆ" ನಿಸ್ಸಂದೇಹವಾಗಿ ಇಂಥದೊಂದು ಪ್ರಾಮಾಣಿಕ ಪ್ರಯತ್ನ. ಇದಕ್ಕೆ ಅವರು ಹಿಡಿದಿರುವ ವಿಮರ್ಶೆಯ ದಾರಿ ತುಂಬ ವಿಶಿಷ್ಟವಾದ್ದು. ಕುವೆಂಪು ಅವರ ಕವನಗಳ ಭಾಷಿಕ ರಚನೆಯ ವಿಶ್ಲೇಷಣೆಯ ಮೂಲಕವೇ ಅವರು ಕೆಲವೊಂದು ಪ್ರಮುಖ ತೀರ್ಮಾನಗಳಿಗೆ ತಲುಪುತ್ತಾರೆ. ಕವಿ ಬಳಸುವ ಭಾಷೆ ಅವನ ಸುಪ್ತ ಚೇತನದಿಂದ ಬಂದುದಾಗಿದ್ದು ಕವಿಯ ಸಮಾಜದ, ಬದುಕಿನ ಸಾಂಸ್ಕೃತಿಕ ಘಟನೆಗಳನ್ನು ಅರ್ಥಮಾಡಿಕೊಳ್ಳಲು ಭಾಷೆಯ ವಿಶ್ಲೇಷಣೆ ಅಗತ್ಯ ಎಂಬ ರೋಲಾ ಬಾರ್ತ್, ರೋಮನ್ ಯಾಕಬ್ ಸನ್ , ಕ್ಲಾಡ್ ಲೆವಿ ಸ್ಟ್ರಾಸ್ ಮೊದಲಾದ ಫ್ರೆಂಚ್ ವಿಮರ್ಶಕರ ಭಾಷಾ ವಿಜ್ಞಾನದ ಉಪಕರಣಗಳನ್ನು (ಟೂಲ್‌ಗಳು) ಬಳಸಿಕೊಂಡು ಕುವೆಂಪು ಅವರ ಕೆಲವು ಕವನ ಹಾಗೂ ನಾಟಕಗಳನ್ನು ವಿಶ್ಲೇಷಿಸುವ ವಿನೂತನ ಪ್ರಯತ್ನ ಮಾಡಿದ್ದಾರೆ. ಕುವೆಂಪು ಅವರ 'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು' ಎಂಬ ಪ್ರಸಿದ್ಧ ಕವನವನ್ನು ತೆಗೆದುಕೊಂಡು ಅದರಲ್ಲಿ ಬರುವ 'ಪಂಚಮ', 'ಬ್ರಹ್ಮತ್ವ', ಮತ್ತು 'ಶಾಸ್ತ್ರ ಸಮ್ಮತ' ಎಂಬ ಕೀಲಿ ಪದಗಳು ಭಾಷಾವಿಜ್ಞಾನಿಗಳು ಹೇಳುವ sign ಗಳಾದರೆ 'ಆಯ್ಕೆಯಾದ ಪರಂಪರೆ' ಅಂದರೆ ವೈದಿಕ ಪರಂಪರೆ powers of

reference ಎಂದು ಸಮೀಕರಿಸಿ ಕವನ, ಅದನ್ನು ಅನುಸರಿಸುವ ಬರಹಗಾರರಿಗೆ (ಅಷ್ಟೇ ಅಲ್ಲ ಅದನ್ನು ಅನುಸರಿಸುವ ಆ ಪಂಥದವರಿಗೆಲ್ಲ) ಮುಜುಗರ ಎನಿಸುವ ಪ್ರಶ್ನೆಗಳನ್ನು ಕೇಳುತ್ತ ಪರಂಪರೆಯ ಪ್ರವಾಹದ ವಿರುದ್ಧ ಈಜುತ್ತದೆ. ಕುವೆಂಪು ಎತ್ತುವ ಪ್ರಶ್ನೆಗಳು ನಮ್ಮಲ್ಲಿದ್ದ ಅಮಾನುಷ ಸಾಮಾಜಿಕ ವ್ಯವಸ್ಥೆಯನ್ನು ನೇರವಾಗಿ ಒಳಗಿಂದಲೇ ಸ್ಫೋಟಿಸುತ್ತವೆ. ಸ್ಥಾಪಿತ ಸ್ಥಗಿತ ಸಂಪ್ರದಾಯದ ವಿರುದ್ಧ ಬಂಡೇಳುವುದನ್ನು ಸಾಹಿತ್ಯದಲ್ಲಿ ಜೀವಂತವಾಗಿ ಇಟ್ಟವರು ಕುವೆಂಪು ಎಂಬ ತೀರ್ಮಾನಕ್ಕೆ ಬರುತ್ತಾರೆ. ಮುಂದೆ ಬಂದ ಪ್ರಗತಿಶೀಲ ಸಾಹಿತಿಗಳಾದ ಕಟ್ಟೀಮನಿ, ಚದುರಂಗ ಅವರು ಅವರಿಂದ ಪ್ರಭಾವಿತರಾದರು ಎನ್ನುತ್ತಾರೆ. ಫ್ರೆಂಚ್ ವಿಮರ್ಶಕರ ದೃಷ್ಟಿಯಲ್ಲಿ ಈ ಪ್ರಪಂಚದ ಸಮಸ್ಯೆಗಳನ್ನು ನಿವಾರಿಸುವುದೇ ಆಗಲಿ ಅಥವಾ ಈ ಪ್ರಪಂಚದ ಮೌಲ್ಯಮಾಪನ ಮಾಡುವುದಾಗಲಿ ಸಾಹಿತ್ಯದ ಕೆಲಸವಲ್ಲ; ಬದಲಿಗೆ ಈ ಪ್ರಪಂಚದ ಕಚ್ಚಾ ಸ್ಥಿತಿಯನ್ನು ಪ್ರಚೋದನಕಾರಿಯಾಗಿ ಓದುಗರ ಅನುಭವಕ್ಕೆ ತರುವುದೇ ಸಾಹಿತ್ಯದ ಪಾತ್ರ ಎಂಬುದನ್ನು ಉಲ್ಲೇಖಿಸಿ ಆ ದೃಷ್ಟಿಯಿಂದ ನೋಡಿದಾಗ ಕುವೆಂಪು ಮೊದಲಿನಿಂದಲೂ ಅತ್ಯಂತ ಸಾರ್ಥಕವಾಗಿ ಮತ್ತು ಸಫಲವಾಗಿ ತಮ್ಮೆಲ್ಲ ಸಾಹಿತ್ಯ ಕೃತಿಗಳಲ್ಲಿ ಈ ಪ್ರಚೋದನೆಯ ಕಾರ್ಯವನ್ನು ಮಾಡುತ್ತ ಬಂದಿದ್ದಾರೆ. "ಪ್ರಜಾಪ್ರಭುತ್ವದ ಆದರ್ಶಗಳಾದ ಮನುಷ್ಯ ಸ್ವಾತಂತ್ರ್ಯ, ಜಾತಿವಿನಾಶ, ಸಾಮಾಜಿಕ ಸಮಾನತೆ, ಅರ್ಥಹೀನವಾದ ಪುರಾತನ ಆಚಾರ ವ್ಯವಹಾರಗಳ ಆಚರಣೆಯ ವಿರೋಧ, ಶೋಷಣೆ ಪ್ರಧಾನವಾದ ವೈದಿಕ ಸಂಸ್ಕೃತಿಯ ಶೋಧನೆ ಮತ್ತು ಸಾಧಾರಣ ಜನರನ್ನು ಅವಿದ್ಯಾವಂತರನ್ನಾಗಿ ಅಜ್ಞಾನದಲ್ಲೇ ಇಡುವ ಈ ಪರಂಪರೆಯನ್ನು ಬದಲಾವಣೆ ಮಾಡುವ ಪ್ರಯತ್ನ ಅವರ ಸಾಹಿತ್ಯದಲ್ಲಿ ನಮಗೆ ಕಾಣುತ್ತದೆ"(ಪು.43) ಎಂದು ರಘುನಾಥ್ ಅವರು ಸರಿಯಾಗಿಯೇ ಗುರುತಿಸಿದ್ದಾರೆ.

ಆದರೆ ಹೀಗೆ ಕುವೆಂಪು ಅವರ ಪ್ರಗತಿಪರ ವೈಚಾರಿಕ ದೃಷ್ಟಿಕೋನವನ್ನು ಎತ್ತಿಹೇಳುವ ವ್ಯತಿಕರದಲ್ಲಿ ಹೋಲಿಕೆಗಾಗಿ ಅಡಿಗರ ಕಾವ್ಯದ ಕೆಲವು ಸಾಲುಗಳನ್ನು ಎತ್ತಿಕೊಂಡು ಅದನ್ನು ವಿಶ್ಲೇಷಿಸಿರುವ ರೀತಿ ಕಿಂಚಿತ್ ಪೂರ್ವಗ್ರಹ ಪೀಡಿತಾಗಿದೆಯೆಂದೇ ಹೇಳ ಬೇಕು. ಸಮಾಜದ ಕೆಳವರ್ಗದಿಂದ ಬಂದ ಕುವೆಂಪು ಅವರನ್ನು ಕಾಡಿದ ಸಮಸ್ಯೆಗಳು ಮೇಲು ವರ್ಗದಿಂದ ಬಂದ ಅಡಿಗರಂಥವರನ್ನು ಕಾಡಲಿಲ್ಲ ನಿಜ. ಆದರೆ ನಮ್ಮ ಹಿಂದಿನ ಪರಂಪರೆಯಲ್ಲಿ ನಮ್ಮನ್ನು ಕಾಪಾಡುವ ಅಥವಾ ಬದುಕಿಗೆ ಆಸರೆಯಾಗುವ ಯಾವುದೋ ಮೌಲ್ಯ ಅಡಗಿದೆ ಎಂಬ ಅನಿಶ್ಚಿತತೆಯ ವಿಶ್ವಾಸ ಇರುವುದೇನೂ ತಪ್ಪಲ್ಲ. ಕಾರಣ ಏನೂ ಸತ್ವವಿಲ್ಲದೆ ಯವುದೇ ಒಂದು ಪರಂಪರೆ ಸಾವಿರಾರು ವರ್ಷಗಳ ಕಾಲ ಉಳಿದು ಬರಲು ಸಾಧ್ಯವಿಲ್ಲ. ಯಾವ ಪರಂಪರೆಯೂ ಎಲ್ಲ ಕಾಲಕ್ಕೂ ನೂರಕ್ಕೆ

ನೂರು ಸರಿ ಎಂದೆನಿಸಿಕೊಳ್ಳಲಾರದು. ಕಾಲದಿಂದ ಕಾಲಕ್ಕೆ ಬದಲಾವಣೆ ಅನಿವಾರ್ಯ. ಕುವೆಂಪು ಕೂಡ ನಮ್ಮ ಪ್ರಾಚೀನ ಪರಂಪರೆಯನ್ನು ಸಾರಾ ಸಗಟಾಗಿ ತಳ್ಳಿಹಾಕಲಿಲ್ಲವೆಂಬುದಕ್ಕೆ, ಅದರಲ್ಲಿಯೂ ಎಲ್ಲ ಕಾಲಕ್ಕೂ ಉಪಾದೇಯವೆನಿಸಬಹುದಾದ ಕೆಲವಾದರೂ ಮೌಲ್ಯಗಳು ಇವೆ ಎಂಬುದನ್ನು ಪುರಸ್ಕರಿಸಿರುವುದಕ್ಕೆ ಅವರ ಸಾಹಿತ್ಯದಲ್ಲೇ ಬೇಕಾದ ಹಾಗೆ ಪುರಾವೆಗಳು ಸಿಕ್ಕುತ್ತವೆ.

ಇದರಲ್ಲಿ ಬಹಳ ಮುಖ್ಯವಾಗಿ, ಮತ್ತು ಸಮರ್ಥವಾಗಿ ಪ್ರತಿಪಾದಿಸಿರುವ ಅಂಶವೆಂದರೆ ಕುವೆಂಪು ಅವರು ಯೂರೋಪಿನ ರಮ್ಯವಾದದಿಂದ ಮತ್ತು ಅದರ ಅಧ್ವರ್ಯುವಾದ ಕವಿ ವರ್ಡ್ಸ್‌ವರ್ತ್‌ನಿಂದ ಪ್ರಭಾವಿತರಾದರೆಂಬುದು ನಮ್ಮಲ್ಲಿ ಪ್ರಸಿದ್ಧವಾಗಿದ್ದರೂ ಅನೇಕ ವಿಷಯಗಳಲ್ಲಿ ವರ್ಡ್ಸ್ ವರ್ತ್‌ನಿಂದ ಸಂಪೂರ್ಣ ಭಿನ್ನರಾಗಿದ್ದಾರೆ ಹಾಗೂ ಯೂರೋಪಿನಲ್ಲಿ ಹುಟ್ಟಿದ ರಮ್ಯವಾದದ ಆದರ್ಶಗಳೇ ಕುವೆಂಪು ಅವರ ಆದರ್ಶಗಳಾಗಿದ್ದುವು ಎನ್ನುವುದನ್ನು ಸಂಪೂರ್ಣವಾಗಿ ಒಪ್ಪಲು ಸಾಧ್ಯವಿಲ್ಲ ಎಂಬ ಮಾತು. ಯೂರೋಪಿನ ರಮ್ಯವಾದ ಫ್ರಾನ್ಸಿನ ಮಹಾಕ್ರಾಂತಿಯ ಪ್ರಮುಖ ಆದರ್ಶಗಳಾದ ಕಾರಣವಾದಿ ಚಿಂತನೆ ಮತ್ತು ಸ್ವಾತಂತ್ರ್ಯಗಳ ವಿರುದ್ಧ ಬೆಳೆಯಿತು. ಆದರೆ ಕುವೆಂಪು ಅವರಲ್ಲಿ ರಮ್ಯವಾದದ ಆದರ್ಶಗಳಾದ ವ್ಯಕ್ತಿನಿಷ್ಠತೆ ಮತ್ತು ಅದರ ಅಭಿವ್ಯಕ್ತಿ, ಆದಿವಾಸಿ ರೂಪದ ಸಮಾಜಗಳು ಮತ್ತು ಪ್ರಕೃತಿಯ ಬಗೆಗಿನ ಅನನ್ಯ ಪ್ರೀತಿ ಮತ್ತು ಅದರಲ್ಲಿ ಆನಂದ ಪರವಶತೆಗಳ ಜೊತೆಗೆ ಮೇಲೆ ಹೇಳಲಾದ ಸಮಾನತೆ ಮತ್ತು ಸ್ವಾತಂತ್ರ್ಯಕ್ಕೂ ಸಮಾನ ಸ್ಥಾನವಿದೆ ಎಂಬುದು ರಘುನಾಥ್ ಅವರ ಅತ್ಯಂತ ಒಳನೋಟದಿಂದ ಕೂಡಿದ ವಿಮರ್ಶೆ. ಅದೇ ರೀತಿ ಪ್ರಕೃತಿಯ ಬಗೆಗಿನ ಕುವೆಂಪು ಅವರ ಅನನ್ಯ ಪ್ರೇಮಕ್ಕೆ ವರ್ಡ್ಸ್ ವರ್ತ್‌ನಿಂದ ಪ್ರೇರಣೆ ಪಡೆದಿರುವುದು ನಿಜವೇ ಆದರೂ, ಕುವೆಂಪು ಆದಿಕವಿ ಪಂಪನಿಂದ ಪ್ರಾರಂಭಿಸಿ ಕನ್ನಡದ ಎಲ್ಲ ಮಹತ್ವದ ಕವಿಗಳಲ್ಲಿಯೂ ನಿತಾಂತವಾಗಿ ಕಂಡುಬರುವ ಪ್ರಕೃತಿವರ್ಣನೆಯ ಪರಂಪರೆಯಲ್ಲಿಯೇ ಇದ್ದರೆ ಅದೇ ವರ್ಡ್ಸ್ ವರ್ತ್‌ನಿಗೆ ಇಂಥ ಪರಂಪರೆಯ ಹಿನ್ನೆಲೆ ಇರಲಿಲ್ಲ; ಅದಕ್ಕೆ ಅವನೇ ಆದಿ ಮತ್ತು ಅಂತ್ಯ ಎಂದು ಹೇಳಿರುವುದು ಮತ್ತೊಂದು ಮಹತ್ವದ ಮಾತು. ಪ್ರಕೃತಿಯ ಬಗೆಗಿನ ಒಲವು ಇಬ್ಬರಲ್ಲೂ ಒಂದೇ ತೆರನಾದರೂ ಇಬ್ಬರ ತಾತ್ವಿಕ ನಿಲುವು ಮತ್ತು ದರ್ಶನಗಳು ಬೇರೆ ಬೇರೆ. ವರ್ಡ್ಸ್ ವರ್ತ್ ಕೋಲರಿಜ್ ಮುಂತಾದ ಯೂರೋಪಿನ ರಮ್ಯವಾದಿ ಕವಿಗಳಲ್ಲಿ ಪ್ರಕೃತಿ ಆರಾಧನೆ, ಅದರ ಸುಂದರ ಮುಖ, ದುರಂತದ ಛಾಯೆಗಳಷ್ಟೇ ಕಂಡುಬಂದರೆ ಕುವೆಂಪು ಅವರಲ್ಲಿ ಪ್ರಕೃತಿಯ ಪ್ರಶಾಂತ ಸುಂದರ ಮುಖದ ಜೊತೆಗೆ ಭೀಕರ ರೌದ್ರ ಮುಖದ ವರ್ಣನೆಯೂ ಪ್ರಬಲವಾಗಿಯೇ ಕಂಡುಬರುತ್ತದೆ ಎಂದು ಹೇಳಿ ಅವರ

ಪ್ರಸಿದ್ಧವಾದ 'ವರ್ಷಭೈರವ,' 'ಕರಾಳ ರಾತ್ರಿ,' 'ಮುಂಗಾರು' ಕವನಗಳನ್ನು ಉದಾಹರಿಸಿ ವಿಶ್ಲೇಷಿಸಿದ್ದಾರೆ. ಜೊತೆಗೆ ಮಲೆನಾಡಿನ ಪ್ರಾಕೃತಿಕ ಪರಿಸರದಿಂದಲೇ ತಮ್ಮ ಕವನಗಳನ್ನು ರೂಪಿಸಿದ ಪದಗಳನ್ನು ಹೆಕ್ಕಿಕೊಂಡಿದ್ದಾರೆ ಎಂಬ ಮಾತು ಕೂಡ ಅವರದೇ.

ವರ್ಡ್ಸ್ ವರ್ತ್‌ನಿಗೂ ಕುವೆಂಪು ಅವರಿಗೂ ಇರುವ ಇನ್ನೊಂದು ಬಹುಮುಖ್ಯ ವ್ಯತ್ಯಾಸವನ್ನು ಸಮರ್ಥವಾಗಿ ಈ ಬರಹ ಎತ್ತಿತೋರಿಸುತ್ತದೆ. ಸಮಾನತೆಯ ವಿಷನ್ ಇಟ್ಟುಕೊಂಡು ಶೋಷಣೆ, ತಾರತಮ್ಯ, ಅಮಾನವೀಯವಾದ ಸಾಮಾಜಿಕ ದಬ್ಬಾಳಿಕೆ ಧಾಮಿಕ ದೌರ್ಜನ್ಯವೇ ಮೊದಲಾದ ಪ್ರಖರ ಸಾಮಜಿಕ ವಿಷಯಗಳ ಚಿಂತನೆ ಮತ್ತು ಕಾಳಜಿಗಳನ್ನು ವಸ್ತುವಾಗುಳ್ಳ ಕವಿತೆಗಳನ್ನು ಬರೆದವರು ಕುವೆಂಪು. ಅಸಮಾನತೆಯ ತಳಹದಿಯ ಮೇಲೆ ಕಟ್ಟಲಾಗಿದ್ದ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ವತಃ ಶೂದ್ರವರ್ಗದಿಂದ ಬಂದ ಕುವೆಂಪು ಅವರಿಗಿದ್ದ ಈ ತೆರನ ಕಾಳಜಿಯ ಆವಶ್ಯಕತೆ ವರ್ಡ್ಸ್ ವರ್ತ್‌ಗೆ ಇರಲಿಲ್ಲ. ಅದು ಅವನ ಸಮಾಜದ ಸಮಸ್ಯೆಯೂ ಆಗಿರಲಿಲ್ಲ ಎನ್ನುವುದು ಕೂಡ ಸರಿಯಾದ ಗಮನಿಕೆ.

ಕುವೆಂಪು ಅವರ ಪ್ರಖರ ಸಾಮಾಜಿಕ ಕಾಳಜಿಗಳನ್ನು ವಸ್ತುವಾಗುಳ್ಳ 'ನಾಗಿ,' 'ಕರಿಸಿದ್ದ' ಕಥನ ಕವನಗಳನ್ನು ಸಮರ್ಥವಾಗಿಯೇ ವಿಶ್ಲೇಷಿಸುತ್ತಾರಾದರೂ ಫ್ರೆಂಚ್ ವಿಮರ್ಶಕರು ಹೇಳುವ sign, signifier, surface structure, deep structure ಮೊದಲಾದ ಭಾಷಾ ವಿಜ್ಞಾನದ ಪರಿಭಾಷೆಗಳನ್ನು/ಪರಿಕರಗಳನ್ನು ಈ ಕವನಗಳಿಗೆ ಪ್ರಾಯೋಗಿಕವಾಗಿ ಅನ್ವಯಿಸಿ ವಿಮರ್ಶಿಸಿದ್ದಾರೆಂದು ಅನ್ನಿಸುವುದಿಲ್ಲ. ಕವನದ ಪಾಡಿಗೆ ಕವನ, ಥಿಯರಿಯ ಪಾಡಿಗೆ ಥಿಯರಿ ಹೀಗೆ ಉಳಿದುಬಿಟ್ಟಿವೆಯೇನೋ ಎನಿಸುತ್ತದೆ. ಆದರೆ ಅದೇ 'ಸತ್ಯ ಮತ್ತು ಸೌಂದರ್ಯ' ಎಂಬ ಕವನಕ್ಕೆ ಇದನ್ನು ಅನ್ವಯಿಸಿರುವುದು ನಿರೀಕ್ಷಿತ ಯಶಸ್ಸನ್ನು ನೀಡಿದೆ. ಕರಿಸಿದ್ದ, ನಾಗಿಯಂಥ ಸಾಧಾರಣ ಮನುಷ್ಯರ ಬದುಕಿನ ಚಿತ್ರಣ ಬರಲು ಶತಮಾನಗಳೇ ಬೇಕಾಯಿತು ಎನ್ನುವುದು ನಿಜವೇ ಆದರು ಕಾಲಿದಾಸನ ಶಾಕುಂತಲದಲ್ಲಿ ಒಬ್ಬ ಬೆಸ್ತ, ಮೃಚ್ಛಕಟಿಕದಲ್ಲಿ ವಸಂತ ಸೇನೆಯಂಥ ವೇಶ್ಯೆ, ರಾಮಾಯಣದಲ್ಲಿ ಗುಹ, ಶಬರಿಯಂಥ ಸಾಧಾರಣರು ವಿರಳವಾಗಿಯಾದರೂ ಕಾಣ ಸಿಗುತ್ತಾರೆಂಬುದು ಆ ಕಾಲದ ದೃಷ್ಟಿಯಿಂದ ನೋಡಿದಾಗ ಕಡೆಗಣಿಸುವಂಥದೇನಲ್ಲ.

ಕುವೆಂಪು ತಮ್ಮ 'ಬೆರಳ್ ಗೆ ಕೊರಳ್,' 'ಶೂದ್ರತಪಸ್ವಿ' ನಾಟಕಗಳಲ್ಲಿ ಕ್ರಮವಾಗಿ ಮಹಾಭಾರತದ ದ್ರೋಣ ರಾಮಾಯಣದ ಬ್ರಾಹ್ಮಣ ಪಾತ್ರಗಳನ್ನು ಶೋಧನೆಗೆ ಒಳಪಡಿಸಿ ಮರು ಮೌಲ್ಯಮಾಪನೆ ಮಾಡುತ್ತಾರೆ. ಆ ಮೂಲಕ ವೈದಿಕ ಧರ್ಮದವರಿಂದಾದ ಕೆಳವರ್ಗದವರ ಶೋಷಣೆಗೆ ಕನ್ನಡಿ ಹಿಡಿಯುತ್ತಾರೆ. ಅದೇ 'ಜಲಗಾರ' ನಾಟಕದಲ್ಲಿ

ವೈದಿಕ ಸಂಸ್ಕೃತಿ ಸೃಷ್ಟಿಸಿದ ಕ್ರೂರ ವ್ಯವಸ್ಥೆಯನ್ನು ತೀಕ್ಷ್ಣ ವಿಡಂಬನೆಗೆ ಗುರಿಮಾಡುತ್ತಾರೆ. ಇನ್ನು 'ಶ್ಮಶಾನ ಕುರುಕ್ಷೇತ್ರ' ಯುದ್ಧದ ಭೀಕರ ಪರಿಣಾಮಗಳು, ಧರ್ಮವ್ಯವಸ್ಥೆಯ ಹೆಸರಿನಲ್ಲಿ ನಡೆಯುವ ದುರಂತಗಳು ಇವನ್ನೆಲ್ಲ ಅತ್ಯಂತ ಪರಿಣಾಮಕಾರಿಯಾಗಿ ಮುಂದಿಡುವ ದಾರ್ಶನಿಕ ನಾಟಕ. ಲೇಖಕರು ಇದನ್ನೆಲ್ಲ ದಾಖಲಿಸುತ್ತ 'ಶೂದ್ರ ತಪಸ್ವಿ' ನಾಟಕಕ್ಕೆ ಸಂಬಂಧಿಸಿದಂತೆ ಕುವೆಂಪು ಮತ್ತು ಮಾಸ್ತಿಯವರ ವಾಗ್ವಾದಗಳನ್ನು ಅಕ್ಕ ಪಕ್ಕದಲ್ಲಿಟ್ಟು ಮಾಸ್ತಿಯವರ ಅಭಿಪ್ರಾಯಗಳು ಹೇಗೆ ಸ್ಥಗಿತ ನೆಲೆಯಿಂದ ಬಂದಿದ್ದು ಅಪ್ರಸ್ತುತವಾಗುತ್ತವೆ ಎಂಬುದನ್ನು ಮನಗಾಣಿಸಿದ್ದಾರೆ.

ಒಟ್ಟಾರೆ "ಕುವೆಂಪು ರಮ್ಯ ಪರಂಪರೆಗೆ ಸೇರಿವರಾಗಿದ್ದು ಆಧ್ಯಾತ್ಮಿಕ ಅಥವಾ ಸಾಮಾಜಿಕ ಕಾಳಜಿ ಉಳ್ಳವರು ಎಂಬುದಕ್ಕಿಂತ ಹೆಚ್ಚು ಸಂಕೀರ್ಣ ಬರಹಗಾರರು"- ಎಂಬುದನ್ನು ಅವರ ಕವನ ಮತ್ತು ನಾಟಕಗಳ ವಸ್ತುನಿಷ್ಠ ವಿಶ್ಲೇಷಣೆಯ ಮೂಲಕ ಸಮರ್ಥವಾಗಿ ಸ್ಥಾಪಿಸಿರುವುದು ಈ ಬರಹದ ವಿಶೇಷ. ಇದರ ಜೊತೆಗೆ ಮುಂದೆಯಾದರೂ ಅವರ ಚಿತ್ರಾಂಗದಾ ಖಂಡಕಾವ್ಯ ಮತ್ತು ರಾಮಾಯಣ ದರ್ಶನಂ ಮಹಾಕಾವ್ಯ ಪಾರಂಪರಿಕ ಮೌಲ್ಯಗಳನ್ನು ಎದುರಿಸಿರುವ ರೀತಿಯನ್ನು ಸೇರಿಸಿಕೊಂಡರೆ ಈ ಬರಹಕ್ಕೆ ಒಂದು ಸಮಗ್ರತೆ ಬರುತ್ತದೆನ್ನ ಬಹುದು. ಆದರೆ ಪ್ರಕೃತಿಯ ನಿಗೂಢ ಸೌಂದರ್ಯದ ಆಕರ್ಷಣೆ , ಸಮಾಜದಲ್ಲಿ ನಡೆಯುತ್ತಿರುವ ಶೋಷಣೆ ಮತ್ತು ಮನುಷ್ಯನ ಬದುಕಿನ ಆಧ್ಯಾತ್ಮಿಕ ಚಿಂತನೆ ಅವರ ಸಾಹಿತ್ಯದಲ್ಲಿ ಸಮಾನಾಂತರವಾಗಿ ಸಾಗುತ್ತವೆ ಎಂಬ ಅವರ ಅಭಿಪ್ರಾಯ ಈಗಾಗಲೇ ಕನ್ನಡ ವಿಮರ್ಶೆ ಕಂಡುಕೊಂಡಿರುವಂಥದೇ ಆಗಿದೆ.

ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ರಘುನಾಥ್ ಅವರು ನಡೆಸಿರುವ ಕುವೆಂಪು ಸಾಹಿತ್ಯದ ಈ ಅನುಸಂಧಾನ ನಿಶ್ಚಯವಾಗಿಯೂ ಕನ್ನಡ ವಿಮರ್ಶೆಗೆ ಹೊಸದನ್ನು ಸೇರಿಸುವಂಥದಾಗಿದೆ.

ಇಷ್ಟೆಲ್ಲ ಹೇಳಿದ ಮೇಲೂ ಸಾಮಾನ್ಯವಾಗಿ ಕುವೆಂಪು ಸಾಹಿತ್ಯ ಕುರಿತು ಉತ್ಸಾಹದಿಂದ ಬರೆಯುವ ವಿಮರ್ಶಕರು ಹೇಳಲು ಮರೆಯುವ ಅಥವಾ ನಿವಾರಿಸುವ ಸಂಗತಿಯೊಂದರ ಬಗೆಗೆ ಇಲ್ಲಿ ಪ್ರಸ್ತಾಪಿಸುವುದು ಬಹುಶಃ ಅನುಚಿತವಾಗಲಾರದು. ಅದು ಕುವೆಂಪು ಅವರ ವೈಚಾರಿಕ ದೃಷ್ಟಿಗಿರುವ ಒಂದು ಮಿತಿ. ಜಾತಿಯ ವಿಷಯಕ್ಕೆ ಸಂಬಂಧಿಸಿದಂತೆ, ಸಾಮಾಜಿಕ ಅಸಮಾನತೆಗಳ ವಿಷಯಕ್ಕೆ ಸಂಬಂಧಿಸಿದಂತೆ ಪುರೋಹಿತಶಾಹಿ ನಡೆಸಿರುವ, ನಡೆಸುತ್ತಿರುವ ಶೋಷಣೆಗೆ ಸಂಬಂಧಿಸಿದಂತೆ, ಕಂದಾಚಾರಗಳಿಗೆ ಸಂಬಂಧಿಸಿದಂತೆ,

ಮೌಢ್ಯ ಆಚಾರ ವಿಚಾರಗಳಿಗೆ ಸಂಬಂಧಿಸಿದಂತೆ ಅವರಷ್ಟು ಉಗ್ರವಾಗಿ ವಿರೋಧಿಸಿದ ಹಾಗೂ ಈ ಬಗೆಯ ವಿರೋಧವನ್ನು ತಮ್ಮ ಕೃತಿಗಳಲ್ಲಿ ಪ್ರಖರವಾಗಿ ಪ್ರತಿಪಾದಿಸಿದ, ಚಿತ್ರಿಸಿದ ಸಾಹಿತಿಗಳು ಅಪರೂಪವೇ ಸರಿ ಎಂಬುದನ್ನು ಒಪ್ಪುತ್ತಲೇ ಪುನರ್ಜನ್ಮ, ವಿಧಿವಾದ, ಕರ್ಮಸಿದ್ಧಾಂತಗಳಿಗೆ ಸಂಬಂಧಿಸಿದಂತೆ ಅವರಿಗೆ ಇದ್ದ ಅಚಲವಾದ ನಂಬಿಕೆಗಳ ಬಗೆಗೂ ಹೇಳಬೇಕಾಗುತ್ತದೆ. ಅವರ ಕೆಲವು ಪ್ರಮುಖ ಕೃತಿಗಳಲ್ಲಿ(ಮಲೆಗಳಲ್ಲಿ ಮದುಮಗಳು, ಬೆರಳ್ ಗೆ ಕೊರಳ್) ಹಾಗೂ ಅವರ ಆತ್ಮಕಥೆ 'ನೆನಪಿನ ದೋಣಿ' ಯಲ್ಲಿ ಇವೆಲ್ಲವೂ ಅತ್ಯಂತ ನಿಚ್ಚಳವಾಗಿ ನಿರೂಪಿತವಾಗಿವೆ. ಮೇಲೆ ಹೇಳಿದ ಈ ಮೂರಕ್ಕೆ ಎಲ್ಲ ಬಗೆಯ ವೈಚಾರಿಕತೆಯನ್ನೂ ಸರ್ವಗ್ರಾಸಿಯಾಗಿ ನುಂಗಿಬಿಡುವಂಥ ಶಕ್ತಿ ಇದೆಯೇನೋ ಎನಿಸುತ್ತದೆ. ಹಾಗಾಗಿ ಕುವೆಂಪು ಅವರ ವೈಚಾರಿಕತೆಗೆ ಅಷ್ಟರ ಮಟ್ಟಿನ ಮಿತಿ ಇದ್ದಿತೆಂಬುದನ್ನು ಅವರ ಬಗೆಗೆ ಗೌರವ ಇಟ್ಟುಕೊಂಡೇ ಅವರ ಸಾಹಿತ್ಯ ಕುರಿತ ವಿಮರ್ಶೆಯ ಸಂದರ್ಭದಲ್ಲಿ ಹೇಳಬಹುದೆನಿಸುತ್ತದೆ.

❖

4

‘ಮಹಾಮಾರ್ಗವಿದ’ ರ ಹೆಜ್ಜೆಗುರುತುಗಳು

ಕನ್ನಡ ಸಂಶೋಧಕರಲ್ಲಿ “ಮೊದಲ ಮಣೆಯ ಗೌರವಕ್ಕೆ” ತಾವು ಅತ್ಯಂತ ಅರ್ಹರೆಂದು ತಮ್ಮ ಮಹಾನ್ ಸಾಧನೆಗಳಿಂದ ಋಜುವಾತು ಮಾಡಿದ್ದ ಡಾ. ಎಂ. ಎಂ. ಕಲಬುರ್ಗಿಯವರ ಅಮಾನುಷ ಹತ್ಯೆಯ ಆಘಾತದಿಂದ ನಮ್ಮ ದೇಶದ ಅಷ್ಟೇ ಏಕೆ ಜಗತ್ತಿನ ಪ್ರಜ್ಞಾವಂತರು ಯಾರೂ ಇನ್ನೂ ಹೊರಬರಲು ಸಾಧ್ಯವಾಗಿಲ್ಲ. ಅವರ ಆಸಕ್ತಿಯ ಕ್ಷೇತ್ರಗಳು ಒಂದೆರಡಲ್ಲ; ಹಲವು. ಶಾಸನ, ಸಂಶೋಧನೆ, ಗ್ರಂಥ ಸಂಪಾದನೆ, ಹಸ್ತಪ್ರತಿ ಶಾಸ್ತ್ರ, ಸಂಶೋಧನಶಾಸ್ತ್ರ, ನಾಮವಿಜ್ಞಾನ, ಛಂದಸ್ಸು, ಜಾನಪದ, ವಚನ ಸಾಹಿತ್ಯ ಈ ಹತ್ತು ಹಲವು ಶಾಸ್ತ್ರ-ಕ್ಷೇತ್ರಗಳಲ್ಲಿ ಅವರಿಗೆ ಅಪಾರವಾದ ಪರಿಶ್ರಮ ವಿದ್ದದ್ದಕ್ಕೆ ಈ ಕ್ಷೇತ್ರಗಳಲ್ಲಿ ಅವರು ರಚಿಸಿರುವ ಕೃತಿಗಳೇ

ಕನ್ನಡದ ಮಹಾಮಾರ್ಗ ಡಾ. ಎಂ.ಎಂ. ಕಲಬುರ್ಗಿ, ಡಾ. ರಾಮಕೃಷ್ಣ ಮರಾಠೆ
ಪುಟಗಳು: 12+ 230=242, ಬೆಲೆ: 100/-
ಲಿಂಗಾಯತ ಅಧ್ಯಯನ ಸಂಸ್ಥೆ, ಎಡೆಯೂರು ಶ್ರೀ ಜಗದ್ಗುರು ಶ್ರೀ ತೋಂಟದಾರ್ಯ ಸಂಸ್ತಾನ ಮಠ, ಡಂಬಳ-ಗದಗ

ಸಾಕ್ಷಿಯಾಗಿವೆ. ಇನ್ನು ಅವರು ಸಂಪಾದಿಸಿದ ಗ್ರಂಥಗಳಿಗಂತೂ ಲೆಕ್ಕವಿಲ್ಲ. ಇಷ್ಟರ ಮಧ್ಯೆ ಸೃಜನಶಿಲ ಕ್ಷೇತ್ರಗಳಾದ ಕಾವ್ಯ, ನಾಟಕಗಳಲ್ಲೂ ಕೈಯಾಡಿಸಿದವರು. ಇಂಥ ಮಹಾನ್ ವ್ಯಕ್ತಿಯ ಸಾವಿನಿಂದ ಕನ್ನಡ ನಾಡು ನುಡಿಗೆ ಆಗಿರುವ ನಷ್ಟವನ್ನು ಲೆಕ್ಕ ಹಾಕಲೇ ಸಾಧ್ಯವಿಲ್ಲ. ಎಪ್ಪತ್ತೇಳರ ಇಳಿ ಹರಯದಲ್ಲೂ ಹರಯದವರನ್ನೂ ನಾಚಿಸುವ ಹಾಗೆ ಪಾದರಸದಂತೆ ಕ್ರಿಯಾಶೀಲರಾಗಿದ್ದ ಕಲಬುರ್ಗಿಯವರ ಅನನ್ಯ ವ್ಯಕ್ತಿತ್ವ ಮತ್ತು ಸಾಧನೆಗಳ ಸಾದ್ಯಂತ ಪರಿಚಯವನ್ನು ಕಲ್ಬುರ್ಗಿಯವರ ನಿಷ್ಠಾವಂತ ಸಾಧನಶೀಲ ವ್ಯಕ್ತಿತ್ವಕ್ಕೆ ತಕ್ಕುದೆನಿಸುವ ರೀತಿಯಲ್ಲಿ ಡಾ ರಾಮಕೃಷ್ಣ ಮರಾಠೆಯವರು ಈ ಕೃತಿಯಲ್ಲಿ ಕಂಡರಿಸಿಕೊಟ್ಟಿದ್ದಾರೆ.

ಕಲ್ಬುರ್ಗಿಯವರ ಮನೆತನದ ಹಿನ್ನೆಲೆ, ಬಾಲ್ಯ, ಪ್ರೌಢಶಾಲೆಯ, ಪದವಿ ಮತ್ತು ಸ್ನಾತಕೋತ್ತರದರದವರೆಗಿನ ಕಲಿಕೆಯ ಸಂದರ್ಭಗಳನ್ನು ಹೆಚ್ಚು ವಿಸ್ತರಿಸದೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ನೀಡಿದ್ದಾರೆ. ಅವುಗಳಿಂದ ಹೊರಪಡುವ ಒಂದು ಅಂಶವಂತೂ ಸ್ಪಷ್ಟ. ಅದೆಂದರೆ ಕಲಬುರ್ಗಿಯವರು ಮೊದಲಿನಿಂದಲೂ ಕಲಿಯುವುದರಲ್ಲಿ ತುಂಬ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದವರು. ಪ್ರಥಮ ಶ್ರೇಣಿಯನ್ನು ಯಾರಿಗೂ ಬಿಟ್ಟುಕೊಟ್ಟವರಲ್ಲ. ಪ್ರತಿಭೆಯ ಜೊತೆಗೆ ಅವರದು ದಣಿವರಿಯದ ನಿರಂತರ ದುಡಿಮೆ.. ಇದರಲ್ಲಿ ಅವರಿಗೆ ಅವರ ತಂದೆಯವರೇ ಆದರ್ಶ. ಅವರ ಈ ಬಗೆಯ ದುಡಿಮೆ ನೆನೆದಾಗ "ಪ್ರತಿಭೆ ಎಂದರೆ 99% ಪ್ರಯತ್ನ+ 1% ಅದೃಷ್ಟ ಎಂದು ಹೇಳುತ್ತಿದ್ದ ಮಹಾನ್ ಸಂಶೋಧಕ ಥಾಮಸ್ ಆಲ್ವಾ ಎಡಿಸನ್ ತಪ್ಪದೆ ನೆನಪಾಗುತ್ತಾನೆ. ಇನ್ನು ಪದವಿ ತರಗತಿಯಲ್ಲಿ ಅವರಿಗೆ ಕನ್ನಡದ ದೀಕ್ಷೆ ನೀಡಿ ಸಾಹಿತ್ಯದ ರುಚಿ ಹತ್ತಿಸಿ ಶಬ್ದ ಮಣಿ ದರ್ಪಣಕ್ಕೆ ಸರಿಯಾದ ಕೀಲಿಕೈ ನೀಡುವ ಮೂಲಕ ಮುಂದಿನ ಶಾಸ್ತ್ರ ಸಂಶೋಧನೆಯ ಮಹಾ ಸಂಗ್ರಾಮರಂಗಕ್ಕೆ ಸಜ್ಜುಗೊಳಿಸದವರು ಪ್ರೊ. ಬಿ.ಟಿ. ಸಾಸನೂರರು. ಅದನ್ನು ಮರಾಠೆ ಚಿಕ್ಕದಾಗಿ ಆದರೆ ಚೊಕ್ಕದಾಗಿ ಕಟ್ಟಿಕೊಟ್ಟಿದ್ದಾರೆ. ಮುಂದೆ ಎಂ. ಎ. ಅಧ್ಯಯನಕ್ಕ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಬಂದಾಗ ಅವರಿಗೆ ಸಿಕ್ಕ ಗುರುಗಳಾದ ಡಾ. ಆರ್, ಸಿ. ಹಿರೇಮಠರಾದರೋ– ತನ್ನೆಲ್ಲದನ್ನೂ ಸಂಪೂರ್ಣವಾಗಿ ಧಾರೆಯೆರೆಯಲು ಯೋಗ್ಯ ಶಿಷ್ಯ ನರೇಂದ್ರನ ಬರವಿಗೋಸ್ಕರ ಕಾದುಕುಳಿತಿದ್ದ ಪರಮಹಂಸರಂತೆ ಕಲಬುರ್ಗಿಯವರಿಗೆ ಜ್ಞಾನ ಮತ್ತು ಶ್ರಮದ ದೀಕ್ಷೆ ನೀಡಿದರು. ಅವರಿಗೆ ಸಿಕ್ಕ ಗಿರಡ್ಡಿ, ಪಟ್ಟಣಶೆಟ್ಟಿ, ಕಂಬಾರ, ಕುಳ್ಳಿ, ಕೊಟ್ರಶೆಟ್ಟಿ, ಚಂಪಾ ಮುಂತಾದ ಗೆಳೆಯರಾದರೋ ಒಬ್ಬರಿಗಿಂತ ಒಬ್ಬರು ಘಟಾನುಘಟಿಗಳು. ಇಂಥ ಗುರು, ಗೆಳೆಯ ಮತ್ತು ವಿದ್ಯಾಸಂಸ್ಥೆಯ ವಿಶಿಷ್ಟ ಪರಿಸರದಲ್ಲಿ ಪಾಂಡಿತ್ಯ ಪ್ರತಿಭೆ ಮತ್ತು

ಪರಿಶ್ರಮಗಳ ತ್ರಿಪುಟಿಯೆಂಬಂತೆ ರೂಪುಗೊಂಡ ಕಲಬುರ್ಗಿಯವರು ಗುರು ಆಶಿಸಿದಂತೆ ಅವರ ನಿಜವಾದ ಉತ್ತರಾಧಿಕಾರಿಯಾಗಲು ಸಜ್ಜುಗೊಳಿಸಿಕೊಂಡ ಕಥೆಯನ್ನು ಅದರ ಎಲ್ಲ ಆಳ, ಅಗಲ ವಿಸ್ತಾರಗಳಲ್ಲಿ ಮುಂದಿನ ಅಧ್ಯಾಯಗಳಲ್ಲಿ ಮರಾಠೆ ಕಟ್ಟಿಕೊಡುತ್ತಾರೆ.

ಮುವ್ವತ್ತ ನಾಲ್ಕು ಪುಟಗಳಷ್ಟು ವಿಸ್ತಾರವಾದ 'ದುಡಿಮೆಯಿಂದ ದುಡಿಮೆಗೆ' ಅಧ್ಯಾಯದಲ್ಲಿ ಅವರು ಅತ್ಯಂತ ಪ್ರತಿಭಾವಂತ ವಿದ್ವಾಂಸ ವಿದ್ಯಾರ್ಥಿಯೆಂದು ಎಲ್ಲರೂ ಕೊಂಡಾಡುವ ಮಟ್ಟಿಗೆ ಎಂ. ಎ. ಪ್ರಥಮ ರ್‍ಯಾಂಕ್ ಗಳಿಸಿ ಕರ್ನಾಟಕ ಕಾಲೇಜಿನಲ್ಲಿ, ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ನೇಮಕಹೊಂದಿದ ನಂತರದಲ್ಲಿ ಮೈಲಿಗಲ್ಲೆನಿಸುವಂಥ "ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ" ದ ಕುರಿತಾದ ಸಂಶೋಧನೆ ನಡೆಸುತ್ತಲೇ ವಿದ್ಯಾರ್ಥಿಗಳ ಮನಸ್ಸನ್ನು ಬಹುಮಡಿಯಾಗಿ ಬೆಳೆಸುವ ಪ್ರಾಧ್ಯಾಪಕರಾಗಿ, ವಿದ್ಯಾರ್ಥಿ ಸಂಶೋಧಕರನ್ನು ದುಡಿಮೆಗೆ ಹಚ್ಚಿ ಅವರಿಂದ ಸಾರ್ಥಕ ಸಂಶೋಧನೆಯ ಫಲ ತೆಗವ ಬೇಸಾಯಗಾರರಾಗಿ, ಮಿತ್ರರ ಸಂಶೋಧನೆಗೂ ನೆರವು ನೀಡುವ ಸ್ನೇಹಿಯಾಗಿದ್ದ ಬಗೆಯನ್ನು ಅವರ ಪಾಠ ಕೇಳಿದ ವಿದ್ಯಾರ್ಥಿಗಳ, ಅವರ ಬಳಿ ಸಂಶೋಧನೆ ನಡೆಸಿದ ವಿದ್ಯಾರ್ಥಿ ಸಂಶೋಧಕರ ಮಾತುಗಳಿಂದಲೇ ಮನಮುಟ್ಟುವಂತೆ ಕಟ್ಟಿಕೊಟ್ಟಿದ್ದಾರೆ.. ತಾವೂ ದುಡಿದು ಬೆಳೆಯುತ್ತಲೇ ಅನ್ಯರನ್ನೂ ದುಡಿಮೆಗೆ ಹಚ್ಚುತ್ತ ಬೆಳೆಸುತ್ತ ಹೋದ ಕಲಬುರ್ಗಿಯವರ ಪರಿ ಒಬ್ಬ ಆದರ್ಶ ಗುರುವಿನ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಕಟ್ಟಿಕೊಡುತ್ತದೆ. ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿ ಒಂದು ಜಲಚಿಹ್ನೆಯನ್ನು ಸ್ಥಾಪಿಸಿದ ಅವರ ಚಿತ್ರವೇ ಎದ್ದು ಕಾಣುತ್ತದೆ.

ಕಲಬುರ್ಗಿಯವರು ತಾವೇ ಒಂದು ಸಂಸ್ಥೆಯಂತಿದ್ದ ಕಾರಣದಿಂದ ಯಾವೊಂದು ಸಂಸ್ಥೆಯ ಮುಖ್ಯಸ್ಥನ ಜವಾಬ್ದಾರಿ ಹೊತ್ತುಕೊಂಡರೂ ಅಲ್ಲಿ ಹಿಂದಿನ ದಾಖಲೆಗಳನ್ನು ಮುರಿದು ಹೊಸ ದಾಖಲೆ ನಿರ್ಮಿಸುವಷ್ಟು ಮಟ್ಟಿನ ಕೆಲಸ ನಿರ್ವಹಿಸಿಯೇ ಅಲ್ಲಿಂದ ಬಿಡುಗಡೆ ಪಡೆದಂಥ ಛಲವಂತರು. ಹಾಗಾಗಿಯೇ ಅವರು ಕನ್ನಡ ಅಧ್ಯಯನ ಪೀಠವೆಂದರೆ ಅದೊಂದು ಮಾದರಿ ಅಧ್ಯಯನ ಪೀಠವಾಗಬೇಕೆಂಬ ಹಿರೇಮಠರ ಕನಸನ್ನು ನನಸು ಮಾಡುವ ರೀತಿಯಲ್ಲಿ ತಾವು ಮುಖ್ಯಸ್ಥರಾಗಿದ್ದ ಎಂಟು ವರ್ಷಗಳಲ್ಲಿ ಶಾಸನ, ಜಾನಪದ, ಭಾಷಾ ಶಾಸ್ತ್ರ ಶಾಖೆಗಳನ್ನು ಹಲವು ರೀತಿಯಲ್ಲಿ ಕ್ರಿಯಾಶಿಲಗೊಳಿಸಿ ವಚನಸಾಹಿತ್ಯ, ಸಂಪಾದನೆ ಪ್ರಕಟಣೆಗಳ ಬೃಹದ್ ಯೋಜನೆಯನ್ನು ಆಗುಗೊಳಿಸಿ ಅವರ ಶತ್ರುಗಳೂ ಮೆಚ್ಚುವ ಹಾಗೆ ಕೆಲಸಮಾಡಿದರು. ಮುಂದಾದರೂ ಅವರ ವಿದ್ವತ್ತು, ಕ್ರಿಯಾಶಿಲತೆಗಳ ಕಾರಣವಾಗಿಯೇ ಅವರನ್ನರಸಿ ಬಂದ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಹುದ್ದೆ, ಬಸವೇಶ್ವರ ಅಧ್ಯಯನ ಪೀಠದ ಮುಖ್ಯಸ್ಥ ಹುದ್ದೆ, ತೋಂಟದಾರ್ಯ ಮಠದ ಲಿಂಗಾಯತ ಅಧ್ಯಯನ ಸಂಸ್ಥೆ, ನಾಗನೂರು ರುದ್ರಾಕ್ಷಿ ಮಠದ ಲಿಂಗಾಯತ ಅಧ್ಯಯನ ಅಕಾಡೆಮಿ, ಮೈಸೂರಿನ ಜೆ. ಎಸ್. ಎಸ್. ಗ್ರಂಥ ಮಾಲೆಗಳ

ಮಾರ್ಗದರ್ಶಕರಾಗಿ ನಿರ್ದೇಶಕರಾಗಿ ಅವುಗಳ ಮೂಲಕ ಪ್ರಕಟಣೆಗಳ ಮಹಾಪೂರವನ್ನೇ ಹರಿಸಿದರು. ಲಿಂಗಾಯತ ಮಠಗಳು ಕೇವಲ ಮತಧರ್ಮಕ್ಕೆ ಸೀಮಿತವಾಗದೆ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗುವಂತೆ ರೂಪಿಸಿದ್ದೇ ಅವರ ಅಗ್ಗಳಿಕೆ. ಅದೇ ಪ್ರಕಾರದ ರಚನಾತ್ಮಕ ದುಡಿಮೆಯೆಂದರೆ ಕಟ್ಟೀಮನಿ ಮತ್ತು ಬೇಂದ್ರೆ ಟ್ರಸ್ಟ್ ಗಳ ಅಧ್ಯಕ್ಷರಾಗಿ ಅವರು ಮಾಡಿದ ಕೆಲಸ.

"ಸಂಶೋಧನೆ ಯೆಂದರೆ ಅರ್ಧವಿರಾಮ ಅಲ್ಪವಿರಾಮಗಳ ಮೂಲಕ ಪೂರ್ಣವಿರಾಮದತ್ತ ಸಾಗುವ ಕ್ರಿಯೆ" ಎಂಬ ಅವರದೇ ಸೂತ್ರಕ್ಕನುಸಾರವಾಗಿ ಶಾಸನ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ಸಂಶೋಧನಶಾಸ್ತ್ರ, ವಚನ ಸಾಹಿತ್ಯದ ವಿಶ್ಲೇಷಣೆ– ವ್ಯಾಖ್ಯಾನ, ಜಾನಪದ ಮುಂತಾದ ರಂಗಗಳಲ್ಲಿನ ಅವರ ಸಾಧನೆಗಳನ್ನು ಸಾಕಲ್ಯವಾಗಿ ಪರಿಚಯಿಸುತ್ತ ಅವರು ಸಂಪಾದಿಸಿದ ಗ್ರಂಥಗಳ ಒಂದು ದೊಡ್ಡ ಪಟ್ಟಿಯನ್ನೇ ನೀಡಿದ್ದಾರೆ. ಕಲಬುರ್ಗಿಯವರ ವ್ಯಕ್ತಿತ್ವಕ್ಕೆ ಕೋಡು ಮೂಡಿಸಿರುವ ಈ ಸಾಧನೆಗಳ ಕುರಿತು ಓದುವುದೇ ಒಂದು ಸಂತೋಷ. ಜೊತೆಗೇ ಅವರ ಅಕಾಲಿಕ ಸಾವಿನಿಂದ ಈ ಕ್ಷೇತ್ರಗಳಿಗಾದ, ತನ್ಮೂಲಕ ಕನ್ನಡಕ್ಕಾದ ಅಪಾರ ನಷ್ಟದ ಅಂದಾಜಾಗಿ ನಮ್ಮ ಮನಸ್ಸು ಮುದುಡುತ್ತದೆ.

ಇಷ್ಟಾಗಿಯೂ ಕಲಬುರ್ಗಿಯವರು ವಿವಾದಾತೀತ ವ್ಯಕ್ತಿಯೇನಲ್ಲ. ಅನೇಕ ವಾದ– ವಿವಾದಗಳ ಪುರಸ್ಕರ್ತರಾಗಿದ್ದರು. ಅವರ ಸಾವೂ ಅದಕ್ಕೊಂದು ಸಾಕ್ಷಿ. ಜೊತೆಗೆ ಅವರ ಕೆಲವು ಸಂಶೋಧನ ಸಂಗತಿಗಳು ಆತುರದ ತೀರ್ಮಾನಗಳಾಗಿರುತ್ತಿದ್ದುವು ಎಂಬ ಮಾತೂ ಉಂಟು. ಕೆಲವೊಮ್ಮೆ ತೋಲ ತಪ್ಪಿದಂಥ ಮಾತೂ ಬರುತ್ತಿತ್ತು. ಉದಾಹರಣೆಗೆ "ಜಾಗತಿಕ ವಿದ್ವಾಂಸರ ಸಾಲಿನಲ್ಲಿ ನಿಲ್ಲಬಲ್ಲ ವಿದ್ವಾಂಸ ಡಿ.ಎಲ್. ಎನ್. ಅವರಿಗೆ ಸಂಶೋಧನೆಯೇ ಉಸಿರಾಗಿತ್ತು" (ಪು.161) ಎಂದು ಹೇಳಿದ ಕಲಬುರ್ಗಿಯವರೇ ಇನ್ನೊಂದು ಕಡೆ (ಬಹುಶಃ 'ಹೊಸತು'–ಪತ್ರಿಕೆ– ಸುಮಾರು 2005–06) "ಡಾ. ಹಿರೇಮಠರ ಪಾಂಡಿತ್ಯದ ಮುಂದೆ ತೀನಂಶ್ರೀ, ಡಿ. ಎಲ್. ಎನ್ ಪಾಂಡಿತ್ಯ ಏನೇನೂ ಅಲ್ಲ" ಎಂದು ಹೇಳಿರುವುದನ್ನು ಹೇಗೆ ಸ್ವೀಕರಿಸಬೇಕು? ಇಂಥ ಕೆಲವೊಂದು ವಿಚಾರಗಳನ್ನೂ ಪ್ರಸ್ತಾಪಿಸಿದ್ದರೆ ಬಹುಶಃ ಇದಕ್ಕೊಂದು ಪೂರ್ಣತೆ ಬರುತ್ತಿತ್ತು. ಆದರೆ ಕಲಬುರ್ಗಿಯವರ ಪ್ರಾಮಾಣಿಕತೆಯನ್ನು ಯಾರೂ ಶಂಕಿಸುವಂತಿರುತ್ತಿರಲಿಲ್ಲ ಎಂಬುದೇ ಅವರ ಸುವರ್ಣ ಸದೃಶ ವ್ಯಕ್ತಿತ್ವಕ್ಕೆ ಸುಗಂಧವನ್ನು ನೀಡಿರುವ ಅಂಶ. ಇಂಥ ಶಿಖರ ಸದೃಶ ವ್ಯಕ್ತಿತ್ವಕ್ಕೆ ತಗುವ ರೀತಿಯಲ್ಲಿ ಅವರ ಸರ್ವಾಂಗೀಣ ವ್ಯಕ್ತಿತ್ವ ಸಾಧನೆಗಳ ಪರಿಚಯ ಮಾಡಿಕೊಟ್ಟಿರುವ ಲೇಖಕರು ಅಭಿನಂದನಾರ್ಹರು.

❖

5

‘ವೀರಶೈವ ಸಾಹಿತ್ಯ ಚರಿತ್ರೆ’ ಸಂಪುಟಗಳು

ಸುಮಾರು ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಸಮೃದ್ಧ ಪರಂಪರೆ ಮತ್ತು ಸಾಹಿತ್ಯ ಸಂಪತ್ತನ್ನೊಳಗೊಂಡ ಕನ್ನಡ ಸಾಹಿತ್ಯದ ಇತಿಹಾಸವನ್ನು ನೂರಾರು ಕೃತಿಕಾರರು, ಕೃತಿಗಳನ್ನು ಕಾಲಾನುಕ್ರಮಣಿಯಲ್ಲಿ ಪರಿಗಣಿಸಿ ಅವರುಗಳು ಬದುಕಿದ ನಿಶ್ಚಿತ ಕಾಲಮಾನವನ್ನು ಗೊತ್ತುಪಡಿಸುತ್ತ ಅವರು ಸೇರಿದ ಮತಧರ್ಮಗಳು ಮತ್ತು ಅವರುಗಳು ಬದುಕಿ ಬಾಳಿದ ಸನ್ನಿವೇಶದ ಹಿನ್ನೆಲೆಯಲ್ಲಿ ಅವರ ಕೃತಿಗಳನ್ನು ಒಂದು ಸಮತೋಲನದ ವಿಮರ್ಶೆಯ ತಕ್ಕಡಿಯಲ್ಲಿ ತೂಗಿನೋಡಿ ಅವರುಗಳ ಸ್ಥಾನ ನಿರ್ದೇಶ ಮಾಡುತ್ತ ರಚಿಸುವುದೆಂದರೆ ಅದು ಯಾವೊಬ್ಬ ವ್ಯಕ್ತಿಗೇ ಆದರೂ ಅತ್ಯಂತ ಸವಾಲಿನ ಕೆಲಸವೇ ಸರಿ.

ವೀರಶೈವ ಸಾಹಿತ್ಯ ಚರಿತ್ರೆ, ಎಸ್. ವಿದ್ಯಾಶಂಕರ್
ಒಟ್ಟು ಸಂಪುಟಗಳು : 5 ಪ್ರಿಯದರ್ಶಿನಿ ಪ್ರಕಾಶನ
ನಂ.138, 7ನೇ ‘ಸಿ’ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು–560 104

ಕನ್ನಡದಲ್ಲಿ ಇಂಥ ಸವಾಲನ್ನು ಮೊದಲಿಗೆ ಸಾರ್ಥಕವಾಗಿ ಎದುರಿಸಿ ಅದರಲ್ಲಿ ಬಹುಮಟ್ಟಿಗೆ ಯಶಸ್ವಿಯಾದವರೆಂದರೆ ಡಾ. ರಂ.ಶ್ರೀ.ಮುಗಳಿಯವರು. ಕೆಲವೊಂದು ಮಿತಿಗಳ ಹೊರತಾಗಿಯೂ ಅವರ 'ಕನ್ನಡ ಸಾಹಿತ್ಯ ಚರಿತ್ರೆ' ಇಂದಿಗೂ ತನ್ನ ಮಹತ್ವವನ್ನು ಕಳೆದುಕೊಂಡಿಲ್ಲ. ಮುಗಳಿಯವರ ನಂತರದಲ್ಲಿ ವ್ಯಕ್ತಿನೆಲೆಯಲ್ಲಿ ಮತ್ತು ಸಾಂಸ್ಥಿಕ ನೆಲೆಯಲ್ಲಿ ಅನೇಕ ಸಾಹಿತ್ಯ ಚರಿತ್ರೆಗಳು ಬಂದಿವೆ. ಅವುಗಳೆಂದರೆ, ಹೆಚ್ಚಾಗಿ ವಿದ್ಯಾರ್ಥಿಗಳನ್ನು ಮತ್ತು ಸಾಮಾನ್ಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡಂತೆ ವ್ಯಕ್ತಿ ನೆಲೆಯಲ್ಲಿ ತ.ಸು. ಶಾಮರಾಯರು ಮತ್ತು ರಾಜೇಶ್ವರಯ್ಯನವರು ಜೊತೆಗೂಡಿ ರಚಿಸಿದ 'ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ', ಸಿ. ವೀರಣ್ಣನವರು ಇತಿಹಾಸದ ಗತಿ ತಾರ್ಕಿಕತೆಯ ನೆಲೆಗಟ್ಟಿನಲ್ಲಿ ಕವಿಗಳನ್ನು, ಸಾಹಿತ್ಯ ಕೃತಿಗಳನ್ನು ಅವುಗಳ ಧೋರಣೆಯನ್ನು ವಿಶ್ಲೇಷಿಸಿ ನೋಡಿದ ಎರಡು ಸಂಪುಟಗಳು, ಸಾಂಸ್ಥಿಕ ನೆಲೆಯಲ್ಲಿ ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳು ಹೊರತಂದ ಸಾಹಿತ್ಯ ಚರಿತ್ರೆಯ ಸಂಪುಟಗಳು ಹಾಗೂ ಬೆಂಗಳೂರು ವಿಶ್ವವಿದ್ಯಾಲಯ ಆಧುನಿಕ ಸಾಹಿತ್ಯವನ್ನೂ ಒಳಗೊಂಡಂತೆ ಹೊರತಂದ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ'ಯ ಹತ್ತು ಸಂಪುಟಗಳು.

ವ್ಯಕ್ತಿ ನೆಲೆಯ ಸಾಹಿತ್ಯ ಚರಿತ್ರೆಗಳಿಗಿಂತ ಸಾಂಸ್ಥಿಕ ನೆಲೆಯ ಸಾಹಿತ್ಯ ಚರಿತ್ರೆಗಳು ವಿಸ್ತಾರವಾದ ಪರಿಪ್ರೇಕ್ಷ್ಯದಲ್ಲಿ ಕೃತಿಕಾರರು ಮತ್ತು ಕೃತಿಗಳನ್ನು ಇಟ್ಟು ನೋಡುವಲ್ಲಿ ಯಶಸ್ಸು ಸಾಧಿಸಿರುವುದು ನಿಜವಾದರೂ ಹಲವು ಲೇಖಕರ ಕಾರಣದಿಂದಾಗಿ ಕೆಲವೊಂದು ಸಂದರ್ಭದಲ್ಲಿ ವಿಷಯ, ವಿವರ ಮತ್ತು ಸಂಗತಿಗಳ ಪುನರಾವೃತ್ತಿಗಳನ್ನು ತಪ್ಪಿಸಲು ಮತ್ತು ಸಮಗ್ರದೃಷ್ಟಿ ಸಾಧಿಸಲು ಸಾಧ್ಯವಾಗದಿರುವುದು ಇವುಗಳ ಲೋಪವೆನ್ನಬಹುದು. ಇದೀಗ ಡಾ. ವಿದ್ಯಾಶಂಕರ್ ಅವರು ಕನ್ನಡ ಸಾಹಿತ್ಯದ ಬೃಹತ್ ಭಾಗವಾದ ವೀರಶೈವ ಸಾಹಿತ್ಯದ ಸಮಗ್ರ ಅಧ್ಯಯನಕ್ಕೆ ಸಂಬಂಧಿಸಿದಂತೆ ಮಹದ್ ಯೋಜನೆಯೊಂದನ್ನು ರೂಪಿಸಿಕೊಂಡು ವೀರಶೈವ ಸಾಹಿತ್ಯ ಚರಿತ್ರೆ ಎಂಬ ಶೀರ್ಷಿಕೆಯಲ್ಲಿ 2013ರಿಂದ 2014ರ ಅವಧಿಯಲ್ಲಿ ಮೂರು ಬೃಹತ್ ಸಂಪುಟಗಳನ್ನು ಪ್ರಕಟಿಸಿದ್ದಾರೆ. 'ವಚನಸಾಹಿತ್ಯ' (ಬಸವಯುಗ) ಎಂಬ ಮೊದಲ ಸಂಪುಟ ಒಂದು ಸಾವಿರ ಪುಟಗಳಿಂದ ಕೂಡಿದ್ದರೆ 'ಹರಿಹರದೇವ ಯುಗ' ಎಂಬ ಎರಡನೇ ಸಂಪುಟ 635 ಪುಟಗಳನ್ನೊಳಗೊಂಡಿದೆ. 'ಪ್ರೌಢದೇವರಾಯ ಯುಗ'ವೆಂಬ ಮೂರನೇ ಸಂಪುಟವಂತೂ ಮೂರು ಪ್ರತ್ಯೇಕ ಉಪಸಂಪುಟಗಳನ್ನು ಒಳಗೊಂಡಿದ್ದು, ಒಂದೊಂದೂ ಸುಮಾರು ಏಳುನೂರು ಪುಟಗಳನ್ನು ಒಳಗೊಂಡಿದೆ.

ಇದುವರೆಗೆ ಪ್ರಕಟವಾಗಿರುವ ಐದು ಸಂಪುಟಗಳಿಂದ ಒಟ್ಟಾರೆ ಸುಮಾರು ಮೂರು ಸಾವಿರದ ಎಂಟುನೂರು ಪುಟಗಳಿಂದ ಕೂಡಿರುವ ಈ ಬೃಹತ್ ಗಾತ್ರದ ಗ್ರಂಥಗಳನ್ನು ನೋಡುತ್ತಿದ್ದಂತೆ ಯಾರಿಗಾದರೂ ಅಬ್ಬಾ ಎನಿಸದಿರದು. ಇದೆಲ್ಲವೂ ಒಬ್ಬನೇ ವ್ಯಕ್ತಿಯ ಏಕಾಂಗ ಸಾಹಸದ ಫಲವೆಂದು ಅರಿತರಂತೂ ಈ ದೈತ್ಯ ಸಾಹಸಕ್ಕೆ ಯಾರಾದರೂ ತಲೆದೂಗಲೇಬೇಕು. ವಿದ್ಯಾಶಂಕರರ ಯೋಜನೆಯಂತೆ ಇದು ಐದು ಸಂಪುಟಗಳ ಸರಣಿ. ಈಗ ಪ್ರೌಢದೇವರಾಯ ಯುಗದ ಅಂತ್ಯದವರೆಗೆ (ಸುಮಾರು 1600) ನಿಂತಿದೆ. 'ಷಡಕ್ಷರದೇವ ಯುಗ' ಮತ್ತು 'ಷಣ್ಮುಖಸ್ವಾಮಿ ಯುಗ' ಎಂದು ಕನಿಷ್ಠ ಇನ್ನೆರಡು ಸಂಪುಟಗಳಾದರೂ ಬರುವುದಿತ್ತು. ಆದರೆ ಈ ಸಾಹಸೀ ವಿದ್ವಾಂಸರು ತನ್ನ ಗುರಿಮುಟ್ಟುವುದು ವಿಧಿಯ ಇಚ್ಛೆಯಾಗಿರಲಿಲ್ಲವೇನೋ ಎಂಬಂತೆ ತೀರ ಅನಿರೀಕ್ಷಿತವಾಗಿ ಇತ್ತೀಚೆಗೆ ತಾನೆ ತಮ್ಮ ಇಹಲೋಕ ವ್ಯಾಪಾರವನ್ನು ಮುಗಿಸಬೇಕಾಗಿ ಬಂದದ್ದು ದುರ್ದೈವವೇ ಸರಿ. "ಓವೋ ಕಾಲಪುರುಷಂಗೆ ಗುಣಮಣುಲ್ಲಂ ಗಡ! ಅವಂ ಜಡಂಗಡ!" ಎಂದು ಕವಿ ಮುದ್ದಣನು ಉದ್ಗರಿಸಿದಂತೆ ಉದ್ಗರಿಸುವುದೊಂದೇ ನಮಗುಳಿದಿರುವುದು. ಈ ಬೃಹತ್ ಸಂಪುಟಗಳ ಸಂಬಂಧದ ರಾಕ್ಷಸ ಓದು ಬರಹಗಳೇ ಅವರನ್ನು ಬಲಿ ತೆಗೆದುಕೊಂಡವೇನೋ ಎನಿಸುತ್ತದೆ. ಅಧ್ಯಯನದ ಶಿಸ್ತು ಪರಿಶ್ರಮಗಳಿಗೆ ಹೆಸರಾದ ಈ ವಿದ್ವಾಂಸರು ಈಗಾಗಲೇ ಇನ್ನೊಂದು ಸಂಪುಟದ ಬರವಣಿಗೆ ಮುಗಿಸಿ ಅಚ್ಚಿಗೆ ಸಿದ್ಧಪಡಿಸಿದ್ದರೂ ಆಶ್ಚರ್ಯವಿಲ್ಲ!

ಈ ಹಿನ್ನೆಲೆಯಲ್ಲಿ ವಿದ್ಯಾಶಂಕರರ ವೀರಶೈವ ಸಾಹಿತ್ಯ ಚರಿತ್ರೆಯ ಸಂಪುಟಗಳನ್ನು ನೋಡುವುದು ಕುತೂಹಲಕಾರಿ. ಸಾಹಿತ್ಯ ಚರಿತ್ರೆಯ ರಚನೆಗೆ ತೊಡಗಿದವರು ಅದರ ಅಧ್ಯಯನಕ್ಕೆ ಅನುಸರಿಸಿರುವ ವಿಧಾನಗಳಲ್ಲಿ ಮತಾನುಸಾರವಾದ ವಿಭಾಗ ಕ್ರಮವೂ ಒಂದು. ಅದರ ಪರವಾಗಿ ವಾದಿಸುವವರ ಮನಸ್ಸಿನಲ್ಲಿದ್ದದ್ದು ಕಾವ್ಯವಿಷಯ, ವಸ್ತುರಚನೆ, ರಸನಿಷ್ಪತ್ತಿ, ತತ್ವಬೋಧೆ ಈ ಮುಂತಾದ ಅಂಶಗಳಲ್ಲಿ ಅವರು ಸೇರಿದ ಮತಧರ್ಮಗಳ ಪ್ರಭಾವಳಿಯಲ್ಲಿ ಕೃತಿಕಾರರು ಬೆಳೆದುಬಂದಿರುವ ಕಾರಣ ಅದನ್ನು ತಿಳಿಯದೆ ಕೃತಿ ವಿಮರ್ಶೆ ಮಾಡಲಾಗದು ಎಂಬುದು ಮತ್ತು ಹೀಗೆ ಹೆಸರಿಸಲಾಗಿರುವ ಕಾಲಘಟ್ಟಗಳಲ್ಲಿ ಆಯಾ ಧರ್ಮದ ಕವಿ ಮತ್ತು ಕೃತಿಗಳ ಸಂಖ್ಯೆ ಉಳಿದ ಧರ್ಮದವರ ಕೃತಿಗಳಿಗಿಂತ ತುಂಬ ಹೆಚ್ಚಾಗಿದೆ ಎಂಬುದು. ಸಾಹಿತ್ಯದ ಇತಿಹಾಸವನ್ನು ಮತಧರ್ಮದ ಆಧಾರದ ಮೇಲೆ ವಿಭಾಗಿಸುವುದು ಆಧುನಿಕ ದೃಷ್ಟಿಗೆ ಸರಿಹೊಂದದೆ ಹೋದರೂ ಡಾ.

ವಿದ್ಯಾಶಂಕರ್ ಅವರು ತಮ್ಮ ಕೃತಿಯನ್ನು 'ವೀರಶೈವ ಸಾಹಿತ್ಯ ಚರಿತ್ರೆ' ಎಂದೇ ಹೆಸರಿಸಿದ್ದಾರೆ. ಧರ್ಮ ಹಾಗೂ ಸಾಹಿತ್ಯಗಳ ನಡುವಣ ಸಂಬಂಧ ಪರಸ್ಪರ ಪೂರಕವಾಗಿ ನಿಂತದ್ದು ಕನ್ನಡ ಸಾಹಿತ್ಯ ಚರಿತ್ರೆಯ ಅವಿಭಾಜ್ಯ ಅಂಗವಾದ್ದರಿಂದ ಧರ್ಮವನ್ನು ಸಾಹಿತ್ಯದಿಂದ ಬೇರ್ಪಡಿಸುವುದು, ಸಾಹಿತ್ಯ ಧರ್ಮದ ಸಂಬಂಧವನ್ನು ಕಡಿದುಕೊಳ್ಳುವುದು ಕನ್ನಡ ಸಾಹಿತ್ಯದ ವಸ್ತುಸ್ಥಿತಿಯಲ್ಲಿ ಅಸಾಧ್ಯದ ಮಾತು ಎಂದು ಹೇಳಿ ಅದನ್ನು ಸಮರ್ಥಿಸಿಕೊಂಡಿದ್ದಾರೆ. ಕನ್ನಡ ಸಾಹಿತ್ಯಕ್ಕೆ ವೀರಶೈವ ಧರ್ಮ ಮತ್ತು ಅದರ ಉಪ ಉತ್ಪನ್ನವಾಗಿ ಉದಿಸಿದ ವೀರಶೈವ ಸಾಹಿತ್ಯದ ಕೊಡುಗೆ ಅಪಾರವಾದ್ದು. ಈ ಕೊಡುಗೆಯ ದಾಖಲೆ ಮತ್ತು ಮೌಲ್ಯಮಾಪನವನ್ನು ಕಾಲದಿಂದ ಕಾಲಕ್ಕೆ ಬೇರೆ ಬೇರೆ ವಿದ್ವಾಂಸರು ಮಾಡಿದ್ದಾರಾದರೂ ಅದು ಸಮಗ್ರವಾಗಿ ಒಂದೆಡೆ ಆಗಬೇಕಾದ ಅಗತ್ಯವಿದ್ದೇ ಇತ್ತು. ವೀರಶೈವ ಸಾಹಿತ್ಯ ಚರಿತ್ರೆಯ ಸಂಪುಟಗಳ ಮೂಲಕ ವಿದ್ಯಾಶಂಕರ್ ಅವರು ಆ ಅಗಾಧವಾದ ಕೆಲಸವನ್ನು ಆಗುಮಾಡುವ ದಾರಿಯಲ್ಲಿ ದಾಪುಗಾಲು ಹಾಕಿ ಮುನ್ನಡೆದಿದ್ದರು. ಎರಡು ಕಾರಣಗಳಿಂದಾಗಿ ಈ ಸಂಪುಟಗಳನ್ನು ವೀರಶೈವ ಸಾಹಿತ್ಯ ಚರಿತ್ರೆ ಎಂದು ಹೆಸರಿಸುವುದಕ್ಕಿಂತ ಸಮಗ್ರ ವೀರಶೈವ ಸಾಹಿತ್ಯ ಸಮೀಕ್ಷೆ ಎಂದೋ ವೀರಶೈವ ಸಾಹಿತ್ಯದ ಸಮಗ್ರ ಅಧ್ಯಯನವೆಂದೋ ಹೆಸರಿಸಿದ್ದರೆ ಔಚಿತ್ಯಪೂರ್ಣವಾಗುತ್ತಿತ್ತೇನೋ ಎನಿಸುತ್ತದೆ. ಕಾರಣ ಸಾಹಿತ್ಯ ಚರಿತ್ರೆ ಎಂದರೆ ಪ್ರಧಾನವಾಗಿ ಸಾಹಿತ್ಯ ವಿಮರ್ಶೆಯೆಂದೇ ಅರ್ಥ. ಕಾಲದ ದಾರದಲ್ಲಿ ಕೃತಿಯ ಮಣಿಗಳನ್ನು ಪೋಣಿಸುವುದಷ್ಟೇ ಸಾಹಿತ್ಯ ಚರಿತ್ರಕಾರನ ಕೆಲಸವಲ್ಲ. ಪ್ರತಿಯೊಂದು ಕೃತಿಯ ಮೂಲ ಸಾಮಗ್ರಿಯನ್ನು ಸೋಸುವುದು, ಆಧಾರವನ್ನು ಹುಡುಕುವುದು, ಆ ಕೃತಿಯ ಪ್ರಭಾವವನ್ನು ಅಳೆಯುವುದು.....ಕೃತಿಕಾರನ ಅನುಭವದ ಸ್ವರೂಪದ ಬಗೆಯನ್ನು ಗಮನಿಸಿ ಈ ಅನುಭವಕ್ಕೆ ಅವನ ಸಾಮಾಜಿಕ, ಸಾಂಸ್ಕೃತಿಕ ಪರಿಸರ ಎಷ್ಟರಮಟ್ಟಿಗೆ ಕಾರಣ ಎಂಬುದನ್ನು ಪರಿಶೀಲಿಸಿ..... ಕೃತಿಯ ಸ್ಥಾನ ನಿರ್ದೇಶಿಸುವುದು ಕೂಡ ಅವನ ಹೊಣೆಗಾರಿಕೆಯಾಗಿರುತ್ತದೆ (ಹಾ.ಮಾ. ನಾಯಕ: ಮೈ...ಸಾಹಿತ್ಯ ಚರಿತ್ರೆ, ಸಂ1. ಪು.26–27). ಅಲ್ಲದೆ ಒಂದು ಭಾಷೆಯ ಹರಿಗಡಿಯದ ಸಾಹಿತ್ಯ ಪರಂಪರೆಯ ಸಾತತ್ಯದ ಜೊತೆಜೊತೆಯಲ್ಲಿ ಸಾಹಿತ್ಯ ಕೃತಿಗಳನ್ನು ತೌಲನಿಕವಾಗಿ ವಿವೇಚಿಸಿದಾಗಲೇ ಸಾಹಿತ್ಯ ಚರಿತ್ರೆ ಎಂಬ ಶೀರ್ಷಿಕೆಗೆ ಸಾರ್ಥಕ್ಯ ಬರುವುದು. ಕಾಲಾನುಕ್ರಮಣಿಯೂ ಇದರಲ್ಲಿ ಪೂರ್ತಿ ಸಾಧಿತವಾಗಿಲ್ಲ. ಕಾರಣ ವೀರಶೈವ ಸಾಹಿತ್ಯದಲ್ಲಿ ವಿಪುಲವಾಗಿ ರಚಿತವಾಗಿರುವ ಅಷ್ಟಕ ಸಾಹಿತ್ಯ, ಶತಕ ಸಾಹಿತ್ಯ , ಕಾಲಜ್ಞಾನ ಸಾಹಿತ್ಯ

ಮೊದಲಾದವನ್ನೆಲ್ಲ ಕಾಲದ ಕಟ್ಟಿಗೆ ಒಳಪಡಿಸದೆ ಪ್ರಕಾರಬದ್ಧವಾಗಿ ವಿವೇಚಿಸಿದ್ದಾರೆ. ಹಾಗೆ ಮಾಡಿದ್ದರಲ್ಲಿ ಔಚಿತ್ಯವೂ ಇದೆ. ಆದರೆ ಸಾಹಿತ್ಯ ಚರಿತ್ರೆಯ ಕಾಲಾನುಕ್ರಮಣಿ ಸಾಧ್ಯವಾಗಿಲ್ಲ. ವಿದ್ಯಾಶಂಕರ್ ಅವರೇನೋ "ಸಾಹಿತ್ಯದ ವಿದ್ಯಾರ್ಥಿಯಾಗಿ ಮಮಕಾರರಹಿತವಾಗಿ ಸಾಹಿತ್ಯವನ್ನು ಓದುವ, ಮೌಲ್ಯಮಾಪನ ಮಾಡುವ ಸಮ್ಯಕ್ ದೃಷ್ಟಿ..... ಧರ್ಮವನ್ನು ಬದಿಗಿಟ್ಟು ಆ ಧರ್ಮದ ಕವಿ, ಕೃತಿಯ ಸಾಧನೆಯ ಸಿದ್ಧಿಯನ್ನು ಪ್ರಧಾನವಾಗಿ ವಿವೇಚಿಸಬೇಕೆನ್ನುವುದು ಒಟ್ಟಾರೆ ಪ್ರಯತ್ನದ ಹಿಂದಿರುವ ಧೋರಣೆ" ಎಂದು ಹೇಳಿದ್ದಾರಾದರೂ ಅವರ ಆಶಯ ಪೂರ್ಣವಾಗಿ ಈಡೇರಿದೆಯೆನ್ನುವಂತಿಲ್ಲ.

ವಿದ್ಯಾಶಂಕರ್ ಅವರ ಈ ಸಂಪುಟಗಳ ಒಂದು ಸ್ಥೂಲ ಸ್ವರೂಪವನ್ನು ಗಮನಿಸುವುದಾದರೆ ಮೊದಲ ಸಂಪುಟ ಮೂರು ಭಾಗಗಳನ್ನು ಒಳಗೊಂಡಿದೆ. ವೀರಶೈವ ಧರ್ಮದ ಹಿನ್ನೆಲೆ ಎಂಬ ಮೊದಲ ಭಾಗದಲ್ಲಿ ನೂರು ಪುಟಗಳಲ್ಲಿ ಲಕುಲೀಶ ಪಾಶುಪತ, ಕಾಳಾಮುಖ, ಕಾಪಾಲಿಕವೇ ಮೊದಲಾದ ವಿವಿಧ ಶೈವೋಪಾಸಕ ಪಂಥಗಳ ವಿವರಣೆ, ಬಸವಪೂರ್ವದ ಶೈವ ಶಾಖೆಗಳು, ಬಸವಪೂರ್ವದ ವಚನಕಾರರಾದ ಶಂಕರ ದಾಸಿಮಯ್ಯ, ಜೇಡರ ದಾಸಿಮಯ್ಯ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಕೊಂಡಗುಳಿ ಕೇಶಿರಾಜನೇ ಮೊದಲಾದ ಪ್ರಸಿದ್ಧ ವಚನಕಾರರನ್ನು ಸುಮಾರು 40 ಪುಟಗಳಲ್ಲಿ ಪರಿಚಯಿಸಿದ್ದಾರೆ. ಎರಡನೇ ಭಾಗವಾದ ವಚನ ಸಾಹಿತ್ಯದಲ್ಲಿ ಪ್ರಮುಖ ವಚನಕಾರರಾದ ಬಸವ, ಅಲ್ಲಮ, ಚೆನ್ನಬಸವಣ್ಣನೇ ಮೊದಲಾದ ಪ್ರಮುಖ ವಚನಕಾರರಿಂದ ತೊಡಗಿ ಹೆಸರು ತಿಳಿಯದ ಅಂಕಿತ ಮಾತ್ರ ತಿಳಿದಿರುವ ವಚನಕಾರರನ್ನೂ ಒಳಗೊಂಡಂತೆ 629 ಪುಟಗಳಲ್ಲಿ ನೂರಿಪ್ಪತ್ತಕ್ಕಿಂತಲೂ ಹೆಚ್ಚು ವಚನಕಾರರನ್ನು ವಿಸ್ತಾರವಾಗಿ ವಿವೇಚಿಸಲಾಗಿದೆ. ಮೂರನೇ ಭಾಗದಲ್ಲಿ ಅಕ್ಕನಾಗಾಯಿ, ಅಕ್ಕಮಹಾದೇವಿ, ಅಕ್ಕಮ್ಮನೇ ಮೊದಲಾದ ಮೂವತ್ತಾರು ವಚನಕಾರ್ತಿಯರನ್ನು 100 ಪುಟಗಳಲ್ಲಿ ವಿವರಿಸಿದ್ದಾರೆ. 625 ಪುಟಗಳ ಎರಡನೇ ಸಂಪುಟವಷ್ಟೂ ವಚನಕಾರರ ನಂತರ ಬಂದ ಅತ್ಯಂತ ಪ್ರಮುಖ ಕವಿಗಳಾದ ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಕುಮಾರ ಪದ್ಮರಸ ಮುಂತಾದವರಿಂದ ತೊಡಗಿ ನೀಲಕಂಠ ಶಿವಾಚಾರ್ಯನವರೆಗೆ ಇಪ್ಪತ್ತೆರಡು ಜನ ಕವಿಗಳ ವಿಸ್ತಾರವಾದ ವಿವೇಚನೆಗೆ ಮೀಸಲಾಗಿದೆ. ಮೂರನೇ ಸಂಪುಟದ ಎರಡು ಭಾಗಗಳು ವಚನ ಸಾಹಿತ್ಯದ ವಿಧಾಯಕ ಕಾರ್ಯಗಳೂ ಸೇರಿದಂತೆ ವಚನ ಸಾಹಿತ್ಯದ ಪುನರುಜ್ಜೀವನಕ್ಕೆ ಮೀಸಲಾದ ಯುಗವೆಂದೇ ಹೆಸರಾದ

‘ಪ್ರೌಢದೇವರಾಯ ಯುಗದ’ ಸಾಹಿತ್ಯ ವಿವೇಚನೆಗೆ ಮೀಸಲಾಗಿವೆ. ಇದರಲ್ಲಿ ನೂರೊಂದು ಜನ ವಿರಕ್ತರು, ಚಾಮರಸ, ಸರ್ವಜ್ಞ, ಗುಬ್ಬಿಯ ಮಲ್ಲಣಾರ್ಯ, ವಿರೂಪಾಕ್ಷ ಪಂಡಿತನೇ ಮೊದಲಾದ ಕವಿಗಳು, ಶೂನ್ಯ ಸಂಪಾದನೆಗಳು, ವೀರಶೈವ ಪುರಾಣಗಳು, ಸ್ತೋತ್ರ ಸಾಹಿತ್ಯ, ಕರಸ್ಥಲದ ಮಲ್ಲಿಕಾರ್ಜುನ, ತೋಂಟದ ಸಿದ್ಧಲಿಂಗೇಶ್ವರ, ಸ್ವತಂತ್ರ ಸಿದ್ಧಲಿಂಗೇಶ್ವರನೇ ಮೊದಲಾದ ವಚನಕಾರರವರೆಗಿನ ಸಮಸ್ತ ಕೃತಿಕಾರರನ್ನು ಕುರಿತ ವಿವೇಚನೆ ಇದೆ. ಇದಲ್ಲದೆ ಕಾಲಾನುಕ್ರಮಣಿಕೆಯನ್ನು ಬಿಟ್ಟುಕೊಟ್ಟಂತೆ ಮಾಡಿದ ಅಷ್ಟಕ, ಸ್ತೋತ್ರ, ಕಾಲಜ್ಞಾನ ಮತ್ತು ಶತಕ ಸಾಹಿತ್ಯಗಳ ವಿವೇಚನೆ ಇದೆ.

ವಿದ್ಯಾಶಂಕರ್ ಅವರ ಈ ಅಧ್ಯಯನದ ವಿಶೇಷತೆಯೆಂದರೆ ಇದು ವಿವರಗಳಲ್ಲಿ ಸೊಕ್ಕಿಬಿಟ್ಟಿರುವುದು. ಯಾವುದನ್ನೂ ಬಿಡದ ಹಾಗೆ ಸಾಮಾನ್ಯ ವಿಚಾರಗಳನ್ನೂ ವಿವರವಾಗಿ ನೀಡುವುದೇ ಅವರ ರೀತಿ. ಅತಿ ಹೆಚ್ಚೆನಿಸುವಷ್ಟು ಉದ್ಧೃತ ಭಾಗಗಳನ್ನು ನಿವಾರಿಸಬಹುದಿತ್ತೇನೋ. ಹೀಗೆ ಮಾಡುವಲ್ಲಿ ಕೆಲವು ಸಂದರ್ಭಗಳಲ್ಲಿ ಪ್ರಮಾಣಜ್ಞಾನಕ್ಕೆ ಅಪೋಹ ಬಂದಿದೆಯೇನೋ ಎನಿಸುತ್ತದೆ ಅಥವಾ ಸಾಹಿತ್ಯ ಚರಿತ್ರೆಯೆಂಬ ಶೀರ್ಷಿಕೆಯ ಬರವಣಿಗೆಯ ವ್ಯಾಪ್ತಿಯನ್ನು ಖಂಡಿತವಾಗಿಯೂ ಮೀರಿದೆ. ಆ ಕಾರಣಕ್ಕಾಗಿಯೇ ಈ ಸಂಪುಟಗಳನ್ನು ವೀರಶೈವ ಸಾಹಿತ್ಯದ ಸಮಗ್ರ ಅಧ್ಯಯನ ಎಂದು ಕರೆದರೆ ಸರಿಹೋಗಬಹುದೆಂದು ಹೇಳಿದ್ದು. ಉದಾಹರಣೆಗೆ ಜನಪ್ರಿಯತೆಯಲ್ಲಿ ಸರ್ವಜ್ಞನು, ರಾಘವಾಂಕನನ್ನು ಮೀರಿಸುತ್ತಾನಾದರೂ ಕವಿಯಾಗಿ ಅಲ್ಲ. ಸರ್ವಜ್ಞನ ಕಾಲ, ಅಂಕಿತ, ವಚನಗಳ ಸಂಖ್ಯೆ, ಅವನ ವೈಯಕ್ತಿಕ ವಿವರಗಳು, ವಚನಗಳಲ್ಲಿ ಪ್ರಕ್ಷೇಪಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿವಾದಗಳಿವೆಯೆಂಬುದು ನಿಜವಾದರೂ ಅವನನ್ನು ಕುರಿತ ವಿವೇಚನೆಗೆ ನೂರು ಪುಟ ಮೀಸಲಾಗಿದ್ದರೆ ನಾಲ್ಕು ಕಾವ್ಯಗಳ ಕರ್ತೃ ರಾಘವಾಂಕನಿಗೆ ಇರುವುದು ಅರುವತ್ತೈದು ಪುಟಗಳು ಮಾತ್ರ. ಹರಿಹರ ಕನ್ನಡದ ಮಹಾಕವಿಗಳಲ್ಲಿ ಒಬ್ಬನಾಗಿದ್ದು ನೂರಕ್ಕೂ ಹೆಚ್ಚು ರಗಳೆಗಳು, ಮಹಾಕಾವ್ಯ, ಎರಡು ಶತಕಗಳು ಇವನ್ನೆಲ್ಲ ರಚಿಸಿದವನು. ಶತಕಗಳನ್ನು ಹೊರತುಪಡಿಸಿ ಅವನ ಉಳಿದ ಸಾಹಿತ್ಯಕ್ಕೆ ಇಲ್ಲಿ ನಿಗದಿಯಾಗಿರುವ ಪುಟಗಳು 341 ಎಂದರೆ ಇದರ ಅರ್ಥವಾದೀತು. ವೀರಶೈವ ಕವಿ, ಕೃತಿಗಳಿಗೆ ಸಂಬಂಧಿಸಿದ ಸಮಸ್ತವನ್ನೂ ಅಡಕಗೊಳಿಸಲು ಯತ್ನಿಸಿರುವುದರ ಪರಿಣಾಮವಿದು. ಕೆಲವು ವಿಚಾರಗಳನ್ನು ಕುರಿತಂತೆ ಮಾಡಿರುವ ವಿವೇಚನೆಗಳು ಬೆಲೆಯುಳ್ಳವಾಗಿವೆ. ವೀರಶೈವ ಧರ್ಮದ ಉಗಮದ ಬಗ್ಗೆ ಹೇಳುತ್ತ ವೀರಶೈವ ಲಿಂಗಾಯಿತಗಳ ತೋರಿಕೆಯ

ಭೇದವನ್ನು ಆಧಾರಸಹಿತ ನಿವಾರಿಸಿದ್ದಾರೆ. ಮಾದಾರ ಚೆನ್ನಯ್ಯ, ಸಕಲೇಶ ಮಾದರಸ, ಶಂಕರ ದಾಸಿಮಯ್ಯ ಮುಂತಾದವರ ಬಗೆಗಿನ ವಿಮರ್ಶೆ ಹಾಳತವಾಗಿದೆ. ಕೊಂಡಗುಳಿ ಕೇಶಿರಾಜನ ವಚನಗಳು ಮತ್ತು ಬಸವಣ್ಣವರ ವಚನಗಳನ್ನು ಅಕ್ಕಪಕ್ಕದಲ್ಲಿಟ್ಟು ಬಸವ ವಚನಗಳು ಅವನಿಂದ ಪ್ರಭಾವಿತವಾಗಿರುವ ಬಗ್ಗೆ ಹೇಳಿರುವ ಮಾತುಗಳು ವಸ್ತುನಿಷ್ಠ ವಿಮರ್ಶೆಗೆ ಒಳ್ಳೆಯ ಉದಾಹರಣೆ. ಕೊಂಡಗುಳಿ ಕೇಶಿರಾಜನ ಮಂತ್ರಮಹತ್ವದ ಕಂದಗಳನ್ನು ಉಲ್ಲೇಖಿಸಿ ಭಕ್ತಿಯ ಹೊಸ ಸಾಧ್ಯತೆ ತೋರಿಸಿಕೊಟ್ಟ ಆದ್ಯಕವಿ ಎಂದು ಹೇಳಿರುವುದು ವಿಶೇಷ. ಹರಿಹರನ ಗಿರಿಜಾ ಕಲ್ಯಾಣವನ್ನು ಕಾಳಿದಾಸನ ಕುಮಾರಸಂಭವದೊಂದಿಗೆ ಹೋಲಿಸಿ ನೋಡುವ ಪ್ರಯತ್ನ, ಭಿಮಕವಿಯ ಬಸವ ಪುರಾಣವನ್ನು ಹರಿಹರನ ಬಸವರಾಜದೇವರ ರಗಳೆ ಮತ್ತು ಪಾಲ್ಕುರಿಕೆ ಸೋಮನಾಥನ ತೆಲುಗು ಬಸವ ಪುರಾಣದೊಂದಿಗೆ ತೌಲನಿಕ ವಿಮರ್ಶೆಗೆ ಒಳಪಡಿಸಿರುವುದು ಇವೆಲ್ಲ ಈ ಬರಹದ ಧನಾತ್ಮಕ ಅಂಶಗಳಾಗಿವೆ. ಇನ್ನುಳಿದಂತೆ ವಚನ ಸಾಹಿತ್ಯದ ವಿಶೇಷ ಲಕ್ಷಣಗಳೆಂದು ಪಟ್ಟಿ ಮಾಡಿರುವುದರಲ್ಲಿ ಹೊಸ ಅಂಶಗಳೇನೂ ಇದ್ದಂತಿಲ್ಲ. ವಿಪುಲವಾಗಿ ವಚನಗಳನ್ನು ಉಲ್ಲೇಖಿಸುವ ಬದಲು ವಚನದ ರೂಪ, ಸ್ವರೂಪ, ಅಭಿವ್ಯಕ್ತಿ ವಿಧಾನ, ಅಭಿವ್ಯಕ್ತಿಯಲ್ಲಿನ ಹೊಸ ಸಾಧ್ಯತೆಗಳನ್ನು ಕುರಿತಂತೆ ಮಾನ್ಯರಾದ ಜಿ.ಎಸ್. ಸಿದ್ಧಲಿಂಗಯ್ಯ, ಪ್ರೊ. ಗಿರಡ್ಡಿ, ಅ.ರಾ.ಮಿತ್ರ, ಎಸ್.ವಿ. ಪರಮೇಶ್ವರ ಭಟ್ಟ ಮೊದಲಾದವರು ನಡೆಸಿರುವ ಚರ್ಚೆಯ ಮುಖ್ಯಾಂಶಗಳನ್ನಾದರೂ ದಾಖಲಿಸಬಹುದಿತ್ತು. ಹಾಗೆಯೇ ರಾಘವಾಂಕನ ಸಂದರ್ಭದಲ್ಲಿ ಜಿ.ಎಚ್. ನಾಯಕರ ಅಧ್ಯಯನದ ಚರ್ಚೆಯ ಕೆಲವು ಅಂಶಗಳನ್ನು ಸೇರಿಸಬಹುದಿತ್ತು. ಒಟ್ಟಾರೆ ವಿಮರ್ಶೆಗಿಂತ ಸಮೀಕ್ಷೆಯ ಸ್ವರೂಪ ಪಡೆದುಕೊಂಡಿರುವುದೇ ಹೆಚ್ಚು.

ಇಂಥದೊಂದು ವಿಸ್ತಾರವಾದ ಬರವಣಿಗೆಯಲ್ಲಿ ಅಲ್ಲಲ್ಲಿ ಹೀಗೆ ಕೊರತೆ ಅಥವಾ ಲೋಪಗಳನ್ನು ಎತ್ತಿ ತೋರಿಸಬಹುದಾದರೂ ಲೇಖಕರು ಸಾಧಿಸಿರುವುದರ ಎದುರು ಅದೆಲ್ಲ ಅಷ್ಟೊಂದು ಮುಖ್ಯವಾಗುವುದಿಲ್ಲ. ಒಟ್ಟಾರೆ ವೀರಶೈವ ಸಾಹಿತ್ಯವನ್ನು ಅದರೆಲ್ಲ ವಿಸ್ತಾರ, ವೈವಿಧ್ಯ, ವೈಪುಲ್ಯಗಳೊಂದಿಗೆ ವಿವೇಚಿಸುತ್ತ ಅದರ ಆಳ-ಅಗಲಗಳನ್ನು ಅಳೆದು ನೋಡುವ, ಶೋಧಿಸಿ ನೋಡುವ, ಮಹತ್ವಾಕಾಂಕ್ಷೆಯ ಈ ಸಂಪುಟಗಳು ಲೇಖಕರ ಅಪಾರವಾದ ಅಧ್ಯಯನ, ವ್ಯುತ್ಪತ್ತಿಗಳಿಗೆ ಜ್ವಲಂತಸಾಕ್ಷಿಯಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ವಿದ್ವಾಂಸರಿಗೆ ತಕ್ಕ ನಯ, ಪ್ರಾಮಣಿಕತೆಗಳು ಜೊತೆಗೂಡಿವೆ.

ಸಾಹಿತ್ಯ ಚರಿತ್ರೆಯಂಥ ಬರಹಗಳಲ್ಲಿ ಓದು ಮುಂದೆ ಹೋಗಲಾರದಷ್ಟುಮಟ್ಟಿಗೆ ಸಾಮಾನ್ಯವಾಗಿ ಕಂಡುಬರುವ ಸಂಶೋಧಕರು, ವಿದ್ವಾಂಸರ ಉಲ್ಲೇಖ ಅಡಿಟಿಪ್ಪಣಿಗಳಿಂದ ಇಲ್ಲಿಯ ಬರಹ ಭಾರವಾಗಿಲ್ಲ. ಹಾಗೆಂದು ವಿದ್ವಾಂಸರು, ಲೇಖಕರ ಸಂಶೋಧನೆಯ ಫಲಿತಗಳನ್ನು ಒಳಗೊಂಡಿಲ್ಲವೆಂದೇನಲ್ಲ. ಏನೇ ಆದರೂ ಅಪಾರವಾದ ಓದು, ಅಗಾಧವಾದ ಪರಿಶ್ರಮಗಳನ್ನು ಅಪೇಕ್ಷಿಸುವ ಇಂಥದೊಂದು ಮಹಾಸಾಹಸಕ್ಕೆ ಕೈಹಾಕಿ ಬಹು ವಿಷಯಗರ್ಭಿತವೂ ಬಹುಮಹತ್ವವೂ ಆದ ಈ ಸಂಪುಟಗಳನ್ನು ಹೊರತಂದ ಲೇಖಕರ ಕೊಡುಗೆ ಈಗಿರುವಂತೆ ಅಪೂರ್ಣವಾದರೂ ಚಿರಸ್ಮರಣೀಯವೆನ್ನುವುದು ನಿಶ್ಚಿತ.

❖

6

ಅಂತರಾಳವನ್ನು ಕಲಕುವ ಕಥೆಗಳ ಗುಚ್ಛ

ತಂತಿಬೇಲಿಯ ಒಂಟಿಕಾಗೆ' ಎಂಬ ತಮ್ಮ ಮೊದಲ ಕಥಾಸಂಕಲನದ ಮೂಲಕ ವಿಶಿಷ್ಟ ಕಥೆಗಾರ್ತಿಯೆಂದು ಈಗಾಗಲೇ ಛಾಪು ಮೂಡಿಸಿರುವ ಶ್ರೀಮತಿ ಜಯಶ್ರೀ ಕಾಸರವಳ್ಳಿಯವರ ಎರಡನೇ ಕಥಾಸಂಕಲನ 'ದಿನಚರಿಯ ಕಡೇ ಪುಟದಿಂದ' ಹತ್ತು ಕಥೆಗಳನ್ನು ಒಳಗೊಂಡಿದೆ.

ಸಂಕೀರ್ಣವಾದ ಅನುಭವಗಳನ್ನು ಕಟ್ಟಿಕೊಡಲು ತಕ್ಕನಾದ ಭಾಷೆಯನ್ನು ರೂಪಿಸಿಕೊಂಡಿರುವ ಜಯಶ್ರೀಯವರ ಕಥೆಗಳು ಆ ಕಾರಣಕ್ಕಾಗಿಯೇ ಎಲ್ಲೂ ಜಾಳಾಗುವುದಿಲ್ಲ. ಸಣ್ಣದೆನಿಸುವ ಅನುಭವವೂ ತೀರ ವಿಶಿಷ್ಟವೆಂಬಂತೆ ತೋರುವುದು ಅವರ ಈ ಕಥೆಯ 'ಕಟ್ಟೋಣದಿಂದಲೇ' ಎನ್ನಬಹುದು. ಅದು ಮಲೆನಾಡಿನ ಹವ್ಯಕರ ಪರಿಸರದ ಕಥೆಯಾಗಬಹುದು ಇಲ್ಲವೆ

ದಿನಚರಿಯ ಕಡೇ ಪುಟದಿಂದ, ಜಯಶ್ರೀ ಕಾಸರವಳ್ಳಿ
ಪುಟ: 138, ಬೆಲೆ: 110/- ರೂ.,
ಮನೋಹರ ಗ್ರಂಥಮಾಲಾ ಲಕ್ಷ್ಮೀ ಭವನ, ಸುಭಾಷ್ ರಸ್ತೆ, ಧಾರವಾಡ-580 001.

ಕಡಲತೀರದ ಮದ್ರಾಸ್ ಪರಿಸರದ ಕಥೆಯಾಗಬಹುದು, ದಟ್ಟವಾದ ಆಥೆಂಟಿಕ್ ಎನ್ನುವಂಥ ವಿವರಗಳಿಂದ ತುಂಬಿಕೊಂಡು ಸಜೀವವಾಗಿ ನಮ್ಮ ಕಣ್ಣೆದುರು ತೆರೆದುಕೊಳ್ಳುತ್ತದೆ. ಜೊತೆಗೆ ಅಲ್ಲಿ ಬರುವ ಯಾವ ವಿವರವೂ ವ್ಯರ್ಥ ಇಲ್ಲವೆ ಅನಗತ್ಯ ಎನಿಸದಂತಿರುವುದೂ ಅವುಗಳ ಕಲೆಗಾರಿಕೆಯ ಇನ್ನೊಂದು ಗುಣ.

ಇದು ಕಥೆಯ ಕಣಕವಾದರೆ ಇನ್ನುಕಥೆಯ ಹೂರಣ ಬದುಕಿನ ಗಾಢವಾದ ಅನುಭವಶೋಧನೆ. ಹೆಣ್ಣಿನ ಲೋಕದ ಅನುಭವಗಳನ್ನು ಅದರ ಎಲ್ಲ ವಾಸ್ತವದಲ್ಲಿ ಸೆರೆ ಹಿಡಿಯುತ್ತ ಮನಸ್ಸಿನ ನಿಗೂಢ ಆಳಪಾತಾಳಗಳನ್ನು ಹೋಗಿಮುಟ್ಟುವ ಪಾತಾಳಗರಡಿ ಅವರಿಗೆ ಕೈವಶವಾಗಿದೆಯೆನಿಸುವಷ್ಟು ಸಹಜವೂ ಸಾರ್ಥಕವೂ ಆಗಿಮೂಡಿಬಂದಿವೆ ಇಲ್ಲಿಯ ಕಥೆಗಳು. ವಾಸ್ತವ ಎಂದರೆ ಮುನ್ನುಡಿಕಾರರಾದ ಡಾ. ಆಶಾದೇವಿಯವರು ಈಗಾಗಲೇ ಗುರುತಿಸಿರುವಂತೆ 'ಸಂಘರ್ಷವೂ' ಆಗಬಹುದು ಜೊತೆಗೆ ಗಂಡಿನೊಡನೆಯ ಅನುಸಂಧಾನವೂ ಆಗಬಹುದು. ಉದಾಹರಣೆಗೆ 'ಅಂಬುಜಾ ಕಂಡದ್ದೇನು' ಕಥೆಯಲ್ಲಿ ತನಗಿಂತ ಹದಿನಾರು ವರ್ಷ ದೊಡ್ಡವನಾದ, ಹೆಣ್ಣಿನ ಅಸಹಾಯಕತೆಯನ್ನೇ ಅಸ್ತ್ರವನ್ನಾಗಿ ಮಾಡಿಕೊಂಡ, ತನಗೆ ದೈಹಿಕವಾಗಿ ಯಾವ ರೀತಿಯಲ್ಲೂ ಈಡಲ್ಲದ ಗಂಡನ ದಾಸಿಯಾಗಿ, ಪ್ರೀತಿ ಎಂದರೇನೆಂಬುದನ್ನೇ ಕಾಣದ, ಆದರೆ ಅವನಿಂದ 'ಎಂಜಲು ಹೆಣ್ಣು' ಎಂಬ ಹೀಯಾಳಿಕೆಗೆ ಗುರಿಯಾದ ಅಂಬುಜಾಳ ನೋವಿನ ತೀವ್ರತೆಯನ್ನಾಗಲಿ, ತನ್ನದೇನೂ ತಪ್ಪೇ ಇಲ್ಲದಿದ್ದರೂ ಅಪರಾಧೀ ಪ್ರಜ್ಞೆಯಿಂದ ಪರಿತಪಿಸುವ 'ಸ್ವಗತದಾಚೆಯೂ' ಕಥೆಯ ಸುನಂದಾಳ ನೋವಿನ ತೀವ್ರತೆಯನ್ನಾಗಲಿ, ವಯಸ್ಸಲ್ಲದ ವಯಸ್ಸಿನಲ್ಲಿ ಪ್ರೇಮಪಾಶಕ್ಕೆ ಬಿದ್ದು ಪ್ರೀತಿಯಿಲ್ಲದ ಪ್ರೀತಿಯಿಂದ ಪ್ರಾರಂಭಗೊಂಡ ಬದುಕಿನೊಳಗೆ ಮೇಲೇಳಲಾಗದೆ ಕೆಳಬೀಳಲು ತಯಾರಿಲ್ಲದೆ ಸೆಣಸಾಡುತ್ತಲೇ ಹೆಂಡತಿ ಮಕ್ಕಳ ಬಗ್ಗೆ ಕಾಳಜಿಯೇ ಇಲ್ಲದ, ಸಾಯುವುದಕ್ಕೆ ಮುಂಚೆಯೇ ಸತ್ತಂತೆ ಗಂಡನ ಜೊತೆ ಬಾಳು ಸಾಗಿಸಬೇಕಾಗಿ ಬಂದ ಇಜ್ಜೋಡು ದಾಂಪತ್ಯದ ಕಥೆ 'ದಿನಚರಿಯ ಕಡೇ ಪುಟದಿಂದ'-ಯಲ್ಲಿನ ಅಮ್ಮನ ನೋವಿನ ತೀವ್ರತೆಯನ್ನಾಗಲಿ ಇಂಥ ಲೇಖನಿ ಮಾತ್ರ ಚಿತ್ರಿಸಬಲ್ಲುದೆಂಬಂತಿರುವುದೇ ಅದರ ಅನನ್ಯತೆ. ಹಾಗಾಗಿ ಇವು ನಮ್ಮನ್ನು ತುಂಬ ಆಳದಲ್ಲಿ ಡಿಸ್ಟರ್ಬ್ ಮಾಡು ವಷ್ಟು ಶಕ್ತವಾಗಿವೆ. ಅದರ ಜೊತೆ ಜೊತೆಗೇ ಲೋಕಜ್ಞಾನ ತಂದುಕೊಟ್ಟ ಧಾರ್ಷ್ಟ್ಯದಲ್ಲಿ ಗಂಡನಿಗೇ ಸೆಡ್ಡು ಹೊಡೆದು ನಿಲ್ಲುವ ಅಂಬುಜಾ, ಸತ್ತಹಾಗೆಯೇ ಬದುಕಿದ ತಾನು ಎಲ್ಲರಂತೆ ಬದುಕಿಯೇ ಸಾಯಬೇಕೆಂಬ ಹಟ ತೊಡುವ ಸುನಂದ, ಗಂಡ ಕೈಬಿಟ್ಟರೂ ಮಕ್ಕಳಲ್ಲಿ ಅಭದ್ರತೆಯನ್ನು ತುಂಬಬಾರದೆಂದು ಏನು ಬಂದರೂ ಎದುರಿಸುತ್ತೇನೆಂದು ಗಟ್ಟಿ ಮನಸ್ಸು ಮಾಡಿದ

ಪೊರೆಯುವ ಗುಣದ 'ಮರಳಿ ಮಣ್ಣಿಗೆ'ಯ ನಾಗವೇಣಿ ಯಂಥ ಅಮ್ಮ ಇವರನ್ನು ಕೂಡ ಚಿತ್ರಿಸುವ ಮೂಲಕ ಭಾರತೀಯ ಹೆಣ್ಣಿಗೊಂದು ಶಾಶ್ವತವಾದ ಧನಾತ್ಮಕ ಸಂದೇಶ ನೀಡುವ ಹವಣಿಕೆಯೂ ಇರುವಂತಿದೆ.

ಹೆಣ್ಣಿನ ಲೋಕದಷ್ಟೇ ಜಯಶ್ರೀಯವರ ಆಸಕ್ತಿಯ ವಿಷಯವಾಗಿದ್ದು ನಮ್ಮನ್ನು ತೀವ್ರವಾಗಿ ಕಲಕಿಬಿಡುವ ಸಂಗತಿಗಳಾದ ಜಾಗತೀಕರಣದ ಪರಿಣಾಮವಾಗಿ ದುರ್ಬಲಗೊಳ್ಳುತ್ತಿರುವ, ಯಾಂತ್ರಿಕವಾಗುತ್ತಿರುವ ಮನುಷ್ಯ ಸಂಬಂಧಗಳು, ಮನುಷ್ಯನ ಮುಗಿಲುಮುಟ್ಟಿದ ಧೂರ್ತತನ, ಸ್ವಾರ್ಥ,ದುರಾಶೆಗಳು, ಮನುಷ್ಯನ ಏಕಾಂಗಿತನಗಳೂ ಇಲ್ಲಿಯ ಕಥೆಗಳ ಒಡಲನ್ನು ರೂಪಿಸಿವೆ. ಅಸಂಖ್ಯ ಬಂಧು ಬಾಂಧವರು, ಸ್ನೇಹಿತರುಗಳಿದ್ದರೂ ಅಂತಿಮವಾಗಿ ಮನುಷ್ಯ ಏಕಾಕಿಯೇ ಎಂದು ಅಸ್ತಿತ್ವವಾದಿಗಳು ಸಾರಿಹೇಳುವ, ಮನುಷ್ಯನನ್ನು ಕಾಡುವ ಏಕಾಂಗಿತನ, ಶೂನ್ಯತೆಗಳು ಮತ್ತು ವೃದ್ಧಾಪ್ಯದ ಸಮಸ್ಯೆಗಳು 'ಮನೆಯೊಳಗೊಬ್ಬ' ಕಥೆಯಲ್ಲಿ ಚಿತ್ರಿತವಾಗಿರುವ ರೀತಿ, ನಿಜವಾಗಿ ಕೊಪ್ಪರಿಕೆ ಹೊತ್ತವನು ಧಣಿಯೇ ಆದರೂ ಅನ್ನವಿಟ್ಟು ಸಲಹಿದವನ ಮರ್ಯಾದೆ ಕಾಪಾಡಲು ಅಪವಾದ ತಾನು ಹೊತ್ತು ಜೈಲು ಸೇರಿದವನ ಬಗ್ಗೆ ಯಾವ ಕಾಳಜಿಯನ್ನೂ ತೋರದ ಉಳ್ಳವರ ಸ್ವಾರ್ಥ, ದುರಾಶೆ, ಧೂರ್ತತೆ ನಿಷ್ಕರುಣೆಗಳನ್ನು ಚಿತ್ರಿಸುವ 'ಕೊಪ್ಪರಿಕೆ ಹೊತ್ತವರು' ಕಥೆ ಇವು ಕೂಡ ನಮ್ಮನ್ನು ಕಾಡುತ್ತವೆ. ಮೂಲಭೂತವಾಗಿ ಒಳ್ಳೆಯವನಾಗಿದ್ದೂ ಸಂದರ್ಭದ ಅನಿವಾರ್ಯತೆಯಿಂದ ಅಪರಾಧ ಮಾಡಬೇಕಾಗಿ ಬಂದವನನ್ನು ಕಾನೂನು ನೋಡುವ ದೃಷ್ಟಿಗಿಂತ ಬೇರೆಯಾಗಿ ನೋಡಬಹುದಾದ ಸಾಧ್ಯತೆ ಉಂಟೆ ಎಂಬ ಪ್ರಶ್ನೆಯನ್ನು ಎತ್ತುವ 'ಒಬ್ಬ ಕೊಲೆಗಾರನನ್ನು ನೋಡುವುದು ಹೇಗೆ' ಕಥೆ ಕೂಡ ನಮ್ಮನ್ನು ಬೇರೆಯದೇ ರೀತಿಯಲ್ಲಿ ಡಿಸ್ಟರ್ಬ್ ಮಾಡುತ್ತದೆ. ಇನ್ನುಳಿದಂತೆ ಇಜ್ಜೋಡು ದಾಂಪತ್ಯದ ಫಲವಾದ ಪರಸ್ಪರರ ಇಕ್ಕಟ್ಟುಗಳು, ತುಮುಲಗಳು, ಸಂಕೋಚಗಳು. ಗಂಡಿನ ಕ್ರೌರ್ಯ, ಸ್ವಾರ್ಥ,ಕಾಮುಕತೆ, ಅತ್ಯಾಚಾರಕ್ಕೊಳಗಾದ ಹೆಣ್ಣಿನ ಅಂತರಂಗದ ತೊಳಲಾಟ ಮತಾಂತರ ಹೊಂದಿದರೂ ಹಳೆಯ ಮತದ ನಂಬಿಕೆಗಳು ಆಚರಣೆಗಳನ್ನು ಪೂರ್ತಿ ಬಿಡಲಾಗದವರ ಇಬ್ಬಂದಿತನಗಳು ಕೂಡ ಇಲ್ಲಿ ಚಿತ್ರಿತಗೊಂಡಿವೆ. ಸಾಂದ್ರವೂ ಸಂಕೀರ್ಣವೂ ಆದ ಅನುಭವಲೋಕವನ್ನು ಅದರೆಲ್ಲ ವಾಸ್ತವಗಳೊಂದಿಗೆ ಕಟ್ಟಿಕೊಡುತ್ತಲೇ ನಮ್ಮ ಅಂತರಾಳವನ್ನು ಕಲಕುವಂಥ ಕಥೆಗಳ ಈ ಸಂಕಲನ ನಿರ್ವಿವಾದವಾಗಿ ಒಂದು ಉತ್ತಮ ಸಂಕಲನವೆನ್ನಬಹುದು.

❖

7

ಕಾವ್ಯಸ್ಪರ್ಶದ ಜೀವನ ಕಥನ

ಇದೊಂದು ನಮ್ಮ ಎದೆನಡುಗಿಸುವ, ಮನಕಲಕುವ, ಅದೇ ಸಮಯಕ್ಕೆ ಅಬ್ಬಾ ಎಂದು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡುವ, 'ವಾಹ್' ಎಂದು ಮೆಚ್ಚಿಕೆಯ ಉದ್ಗಾರ ಹೊಮ್ಮಿಸುವಂತೆ ಮಾಡುವ ಅಪೂರ್ವ ಆತ್ಮಕಥನ. ಆಫ್ರಿಕಾಖಂಡದ ಸೋಮಾಲಿಯಾದ ಮರುಭೂಮಿಯ ಮುಸ್ಲಿಂ ಅಲೆಮಾರಿ ಕುಟುಂಬದ ಅನಕ್ಷರಸ್ಥ ಹೆಣ್ಣು ಮಗಳೊಬ್ಬಳು, ಹುಟ್ಟಿದಾರಭ್ಯ ಹಸಿವು, ಬಡತನಗಳನ್ನೇ ಬಳುವಳಿಯಾಗಿ ಪಡೆದಿದ್ದಾಗ್ಯೂ, ಸಂಕಷ್ಟಗಳೇ ಬದುಕಿನ ರೀತಿ ಎಂದು ತಿಳಿದು ಅವುಗಳ ಮಧ್ಯದಲ್ಲೇ ಅರಳುತ್ತ ತನಗೊದಗಿ ಬಂದ ಪ್ರತಿಕೂಲ ಪರಿಸ್ಥಿತಿಗಳ ವಿರುದ್ಧ ದಿಟ್ಟವಾಗಿ ಹೋರಾಡುತ್ತ ತನ್ನ ಬದುಕನ್ನು ಕಟ್ಟಿಕೊಂಡ ಕುತೂಹಲಕಾರಿ ಜೀವನಗಾಥೆ.

ಮರುಭೂಮಿಯ ಹೂ, ಲೇಖಕರು: ಡಾ. ಎನ್. ಜಗದೀಶ್ ಕೊಪ್ಪ
ಪುಟ: 176 ಬೆಲೆ: 125/–
ಮಣಿ ಪ್ರಕಾಶನ, ನಂ.2, 2ನೇ ಕ್ರಾಸ್, 3ನೇ ಮಹಡಿ,
ನಂ.1 ಮುನೇಶ್ವರ ಬ್ಲಾಕ್, ಪ್ಯಾಲೇಸ್ ಗುಟ್ಟಳ್ಳಿ, ಬೆಂಗಳೂರು–03.

1990ರ ದಶಕದಲ್ಲಿ ಜಾಹೀರಾತು ಜಗತ್ತಿನ ಅನಭಿಷಿಕ್ತ ರಾಣಿಯ ಹಾಗೆ ಮೆರೆದ ವಾರಿಸ್‌ಡೆರಿಸ್ ಸೌಂದರ್ಯವರ್ಧಕ ಉತ್ಪನ್ನಗಳ ಬಹುರಾಷ್ಟ್ರೀಯ ಕಂಪನಿ ಯೊಂದರ ಜಾಗತಿಕ ಮಟ್ಟದ ರೂಪದರ್ಶಿಯ ಹಾಗೆ ಹಲವಾರು ವರ್ಷಗಳ ಕಾಲಮಿಂಚಿದವಳು. ಧಾರ್ಮಿಕ ಆಚರಣೆಯ ವಿಧಾನವಾಗಿ ಮುಸ್ಲಿಂ ಹೆಣ್ಣುಮಕ್ಕಳ ಮರ್ಮಾಂಗಕ್ಕೆ ಹೊಲಿಗೆ ಹಾಕುವ ತನ್ನ ದೇಶದ ಅಮಾನುಷ ಕ್ರೌರ್ಯವನ್ನು ತನ್ನ ಆತ್ಮಕಥೆಯಲ್ಲಿ ಲೋಕದ ಮುಂದೆ ತೆರೆದಿಟ್ಟ ನಂತರ, ಇಡೀ ಜಗತ್ತು ಬೆಚ್ಚಿಬಿದ್ದಿತು. ಇದರ ಪರಿಣಾಮವಾಗಿ ವಿಶ್ವಸಂಸ್ಥೆ ಈ ಬರ್ಬರ ಆಚರಣೆಯ ವಿರುದ್ಧ ಆಫ್ರಿಕಾದ ಹೆಣ್ಣು ಮಕ್ಕಳನ್ನು ಶಿಕ್ಷಿತರನ್ನಾಗಿಸುವ ತನ್ನ ಕಾರ್ಯಕ್ರಮಕ್ಕೆ ಈಕೆಯನ್ನು ರಾಯಭಾರಿಯನ್ನಾಗಿ ನೇಮಿಸಿತು.

ಆಫ್ರಿಕಾದ ಸೋಮಾಲಿಯಾ ದೇಶದ ಮುಸ್ಲಿಂ ಅಲೆಮಾರಿ ಬುಡಕಟ್ಟು ಜನಾಂಗದ ತಂದೆ ತಾಯಿಗಳ ಮಗಳಾದ ಡೆರಿಸ್ ಸಾಗಿಹೋದ ಬದುಕಿನ ದಾರಿ ಅತ್ಯಂತ ದುರ್ಗಮವಾದದ್ದು. ಮರುಭೂಮಿಯಲ್ಲಿ ಮೇಕೆ, ಕುರಿ, ಒಂಟೆ ಮುಂತಾದ ಪ್ರಾಣಿಗಳನ್ನು ಸಾಕಿಕೊಂಡು ಜೀವನ ನಡೆಸುವ ಈ ಕುಟುಂಬಗಳದು ಅತ್ಯಂತ ಕಷ್ಟಕರವಾದ ಬಾಳ್ವೆ. ಒಂದು ತೊಟ್ಟು ನೀರಿಗಾಗಿ ರಣ ಬಿಸಿಲಿನಲ್ಲಿ ಮರಳುಗಾಡಿನಲ್ಲಿ ಮೈಲಿಗಟ್ಟಲೆ ನಡೆಯುವ, ಒಂದೆರಡು ದಿನ ನೀರೇ ಇಲ್ಲದೆ ಬದುಕು ಸಾಗಿಸುವ, ತಗಡಿನ ಗೂಡುಗಳಲ್ಲಿ ವಾಸಿಸುವ ಈ ಜನರ ದಾರುಣ ಬದುಕಿನ ಚಿತ್ರಣ, ಪ್ರಾರಂಭದಲ್ಲೇ ಚಿತ್ರವತ್ತಾಗಿ ಬಂದಿದೆ. ಮರಳುಗಾಡಿನಲ್ಲಿ ಕ್ರೂರ ಮೃಗಗಳಿಗೆ ತುತ್ತಾಗುವ ಸಂಭವವೂ ಸಾಕಷ್ಟೇ ಇರುವಂಥದು. ಈ ಕಪ್ಪು ಜನರಲ್ಲಿ ಸ್ವಲ್ಪ ಲಕ್ಷಣವಾದ ಹೆಣ್ಣುಮಕ್ಕಳಿದ್ದರಂತೂ, ಅವರ ಅಪ್ಪನಿಗೆ ಇವರನ್ನು ಯಾವಾಗ ಮದುವೆಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಹೆಚ್ಚು ವಧುದಕ್ಷಿಣೆ

ಗಳಿಸಿಯೇನು ಎಂಬುದೇ ಚಿಂತೆ. ಧರ್ಮ, ಬಡತನ, ಅನಕ್ಷರತೆ, ಮೌಢ್ಯ, ಗಂಡಿನ ದಬ್ಬಾಳಿಕೆ, ಇವು ಒಂದೊಂದೇ ಹೆಣ್ಣನ್ನು ತುಳಿಯಲು ಸಾಕುಬೇಕಾಗಿರು ವಾಗ, ಎಲ್ಲವೂ ಒಟ್ಟಾಗಿ ಸೇರಿದರೆ ಆ ಹೆಣ್ಣುಗಳ ಗತಿ ಏನಾದೀತೆಂದು ಊಹಿಸಲೂ ಸಾಧ್ಯವಿಲ್ಲ. ಹೀಗೆ ಹೆಚ್ಚಿನ ವಧುದಕ್ಷಿಣೆಯ ದುರಾಸೆಗೆ ಬಲಿಬಿದ್ದು ಅರುವತ್ತು ವರ್ಷದ ಮುದುಕನೊಬ್ಬನಿಗೆ ಕಟ್ಟಲು ಹಂಚಿಕೆ ಹಾಕಿದ್ದ ತನ್ನ ಅಪ್ಪನಿಂದ ತಪ್ಪಿಸಿಕೊಳ್ಳಲು ಮನೆಬಿಟ್ಟು ಓಡಿದ ವಾರಿಸ್‌ಡೆರಿಸ್ ಪಡಬಾರದ ಬವಣೆಗಳನ್ನು ಪಟ್ಟು ತನ್ನ ಬದುಕನ್ನು ರೂಪಿಸಿಕೊಂಡದ್ದು ನಿಜಕ್ಕೂ ಅದ್ಭುತ. ಅವಳ ದೃಢ ನಿರ್ಧಾರ, ಸಂಕಷ್ಟಗಳನ್ನೆದುರಿಸುವ ಸಂಕಲ್ಪ ಬಲ, ಕಷ್ಟ ಸಹಿಷ್ಣುತೆಗಳ ಜೊತೆಗೆ ಕಿಂಚಿತ್ ಅದೃಷ್ಟವೂ ಇದ್ದದ್ದರಿಂದ, ಜಾಹೀರಾತು ಜಗತ್ತಿನ ಕಣ್ಮಣಿಯಾಗಿ ಮೆರೆಯಲು ಸಾಧ್ಯವಾಯಿತು.

ಓದುಗರನ್ನು ಹಿಡಿದಿರಿಸುವ ಅನೇಕ ಕುತೂಹಲಕಾರಿ ಪ್ರಸಂಗಗಳು ಈ ಪುಸ್ತಕದ ಜೀವಾಳ. ಮುದುಕನನ್ನು ಮದುವೆಯಾಗುವುದರಿಂದ ತಪ್ಪಿಸಿಕೊಳ್ಳಲು ಮನೆ ಬಿಟ್ಟು ಹೊರಟು, ಹಸಿವು, ನೀರಡಿಕೆ, ಬಳಲಿಕೆಗಳಿಂದ ಬೆಂಡಾಗಿದ್ದ ಈಕೆ ಮರಳು ಗಾಡಿನಲ್ಲಿ ಹುಲಿ ಬಾಯಿಗೆ ಆಹಾರವಾಗುವುದರಿಂದ ತಪ್ಪಿಸಿಕೊಂಡದ್ದೇ ಒಂದು ಮೈನಡುಗಿಸುವ ಪ್ರಸಂಗ.

ಚಿಕ್ಕಪ್ಪನ ಮನೆ, ಅಕ್ಕನಮನೆ, ಅತ್ತೆಯಮನೆ, ತಾಯಿಯ ತಂಗಿಯ ಮನೆ ಹೀಗೆ ಆಶ್ರಯಕ್ಕಾಗಿ ರಕ್ತ ಸಂಬಂಧಿಗಳನ್ನೇ ಆಶ್ರಯಿಸಿದರೂ ಒಂದೆಡೆ ಗಾಣದೆತ್ತಿನಂತೆ ಸೇವಕಿಯಾಗಿ, ಕಟ್ಟಡ ಕಾರ್ಮಿಕಳಾಗಿ ಮೈಮುರಿಯ ದುಡಿತ, ಇನ್ನೊಂದೆಡೆ ಗಂಡಿನ ಕಾಮದ ಕಣ್ಣು, ಇವೆರಡರ ನಡುವೆ ಜರ್ಜರಿತಳಂತಾದ ವಾರಿಸ್ ಕೊನೆಗೆ ಚಿಕ್ಕಮ್ಮನ ಮನೆಯಲ್ಲಿದ್ದಾಗ, ಸೋಮಾಲಿಯಾದ ರಾಯಭಾರಿಯಾಗಿ ಲಂಡನ್‌ನಲ್ಲಿದ್ದ ಇನ್ನೊಬ್ಬ ಚಿಕ್ಕಮ್ಮನ ಗಂಡನ ಮನೆಗೆಲಸಕ್ಕೊಬ್ಬ ನಂಬಿಗಸ್ಥೆಯಾದ ಬಾಲಕಿಯ ಅಗತ್ಯವಿದ್ದು ಅವರ ಮನೆಯಲ್ಲಿರುವ ಅವಕಾಶವನ್ನು ಪಡೆದುಕೊಂಡದ್ದು ಇವಳ ಭಾಗ್ಯದ ಬಾಗಿಲು ತೆರೆಯಲು ಕಾರಣವಾಗುತ್ತದೆ. ಅಲ್ಲಿಯೂ ಅವಳದ್ದು ಮನೆಗೆಲಸದ ಕತ್ತೆಚಾಕರಿಯೇ ಆದರೂ, ಹರಕು ಮುರುಕು ಇಂಗ್ಲೀಷ್ ಕಲಿತು, ನಾಗರಿಕ ಪ್ರಪಂಚದ ಪರಿಚಯ ಪಡೆದುಕೊಳ್ಳುತ್ತಾಳೆ. ಚಿಕ್ಕಪ್ಪನ ತಂಗಿಯ ಮಗುವನ್ನು ಶಾಲೆಗೆ ಕರೆದೊಯ್ಯುವಾಗ ಅಕಸ್ಮಾತ್ತಾಗಿ ಫೋಟೋಗ್ರಾಫರನ ಕಣ್ಣಿಗೆ ಬಿದ್ದು, ಅವನು ಅವಳ ಫೋಟೋ ತೆಗೆದು ವರ್ಣಪಾರದರ್ಶಿಕೆಯಾಗಿ ಪ್ರದರ್ಶಿಸಿದ್ದರಿಂದಾಗಿ ಮಾಡೆಲಿಂಗ್ ಪ್ರಪಂಚಕ್ಕೆ ಆ ಮೂಲಕ ಜಾಹೀರಾತು ಜಗತ್ತಿಗೆ ರಹದಾರಿ ದೊರೆತು, ಅವಳ ಕಷ್ಟ–ಕಾರ್ಪಣ್ಯಗಳಿಂದ ಬಿಡುಗಡೆ ಹೊಂದುತ್ತಾಳೆ. ಈ ನಡುವೆ ಚಿಕ್ಕಪ್ಪನ ರಾಯಭಾರಿ ಅವಧಿಮುಗಿದ ಮೇಲೆ ಒಬ್ಬಂಟಿಯಾಗಿ, ಲಂಡನ್‌ನಲ್ಲೇ ಉಳಿವ ನಿರ್ಧಾರ ತೆಗೆದುಕೊಂಡುದು, ಲಂಡನ್ ಪಾಸ್‌ಪೋರ್ಟ್‌ಗಳಿಸುವ ಸಲುವಾಗಿ ತಾತ್ಕಾಲಿಕವಾಗಿ 'ನಾಮಕೆವಾಸ್ತೆ' ಪತಿರಾಯನೆಂಬುವನನ್ನು ಎರಡೆರಡು ಬಾರಿ ಮದುವೆಯಾಗ ಬಂದು, ಅದರಿಂದ ಪಟ್ಟ ಬವಣೆಗಳು ಒಂದೊಂದೂ ಸಾಮಾನ್ಯರನ್ನು ಕಂಗೆಡಿಸುವಂಥವೇ.

ಎಲ್ಲಕ್ಕಿಂತ ಮುಖ್ಯವಾಗಿ ಈ ಪುಸ್ತಕದಲ್ಲಿ ಓದುಗರನ್ನು ತೀವ್ರವಾಗಿ ಕಂಗೆಡಿಸುವುದು ಧಾರ್ಮಿಕ ವಿಧಿಯ ರೂಪದಲ್ಲಿ , ಹೆರಿಗೆಯಾದ ನಂತರ ಗಂಡಸರ ಸುಖಕ್ಕಾಗಿ ಯೋನಿ ಸಡಿಲವಾಗಬಾರದು ಎಂಬ ಕಾರಣಕ್ಕೆ ಇನ್ನೂ ಐದಾರು ವರ್ಷದ ಬಾಲೆಯರಾಗಿರುವಾಗಲೇ ಹರಿದ ಬಟ್ಟೆ ಹೊಲಿಯುವ ಹಾಗೆ ಸೂಜಿದಾರಗಳ ಮೂಲಕ ಹೆಣ್ಣು ಮಕ್ಕಳ ಮರ್ಮಾಂಗಗಳನ್ನು ಹೊಲಿಯುವ ಅಮಾನುಷವೂ ಕ್ರೂರವೂ ಆದ

ಪದ್ಧತಿ ರೂಢಿಯಲ್ಲಿದ್ದು, ವಾರಿಸ್‌ಳೂ ಅದಕ್ಕೆ ಬಲಿಪಶುವಾಗಿದ್ದುದು ಈ ಯೋನಿ ವಿಚ್ಛೇದ (Mutilisation) ದಿಂದಾಗಿ, ಪ್ರತಿಸಲ ಮೂತ್ರ ವಿಸರ್ಜನೆಯ ಸಮಯದಲ್ಲಿ, ಅದಕ್ಕಿಂತ ಹೆಚ್ಚಾಗಿ ಮುಟ್ಟಿನ ದಿನಗಳಲ್ಲಿ ಹೆಣ್ಣು ಅನುಭವಿಸಬೇಕಾಗಿದ್ದ ಮಾತಿಗೆ ಮೀರಿದ ಯಾತನೆ ಇದು ಲಂಡನ್ನಿನಲ್ಲಿ ಇವಳ ಗೆಳತಿಗೆ ತಿಳಿದು, ಅವಳ ನೆರವಿನಿಂದ ಮಾಕ್ಸೆ ಎಂಬ ವೈದ್ಯರ ಶಸ್ತ್ರ ಚಿಕಿತ್ಸೆಯಿಂದ ಅಷ್ಟು ವರ್ಷದ ನೋವು ಕೊನೆಗೊಂಡು ಹೊಸಹುಟ್ಟು ಪಡೆದಳು. ಜಗತ್ ಪ್ರಸಿದ್ಧ ರೂಪದರ್ಶಿಯೆಂದು ಬಿಂಬಿತವಾದ ಕೂಡಲೇ ಬಿಬಿಸಿ ಛಾನಲ್‌ನವರು ಇವಳ ಸಾಕ್ಷ್ಯಚಿತ್ರ ತಯಾರಿಸಲು ಆಸಕ್ತಿ ತೋರಿದ್ದರಿಂದ ಸೋಮಾಲಿಯಾಕ್ಕೆ ಪಯಣಿಸಿ ತಾನು ಹುಟ್ಟಿ ಬೆಳೆದ ಊರು, ಮನೆ, ಅಮ್ಮ ಇವರನ್ನೆಲ್ಲ ಕಾಣುವ ಸುಯೋಗ ಸಿಕ್ಕಿತು. ಅನಂತರದಲ್ಲಿ ಹೀಗೆ ಅನಕ್ಷರತೆ, ಅಜ್ಞಾನ, ಮೌಢ್ಯಗಳಲ್ಲಿ ತೊಳಲುವ ಹೆಣ್ಣು ಮಕ್ಕಳ ಶಿಕ್ಷಣಕ್ಕೆಂದು ವಿಶ್ವಸಂಸ್ಥೆಯ ರಾಯಭಾರಿಯಾಗಿ ನೇಮಕಗೊಂಡುದೊಂದು ಜೀವನದ ಸಾರ್ಥಕ ಕ್ಷಣ. 'ಮೇರಿಡ್ಕ್ಲೈರ್' ಪತ್ರಿಕೆಯಲ್ಲಿ ಹೆಣ್ಣೊಬ್ಬಳ ಯೋನಿ ವೇದನದ ದುರಂತ ಕಥೆ' ಎಂಬ ಶೀರ್ಷಿಕೆಯಲ್ಲಿ ಇವಳ ಸಂದರ್ಶನ ಪ್ರಕಟವಾಗಿ ಅಮೇರಿಕಾದ ಇಡೀ ನಾಗರಿಕ ಸಮಾಜ ಬೆಚ್ಚಿ ಬಿತ್ತು. ಇದರ ಬಗ್ಗೆ ಅರಿವು ಮೂಡಿಸುವ ಜಾಗೃತಿ ಆಂದೋಲನದ ರಾಯಭಾರಿಯಾಗಿ ಆ ಕಾರಣಕ್ಕೇ ಆಯ್ಕೆಯಾಗಿ, ಧರ್ಮಗುರುಗಳ ವಿರೋಧ ಕಟ್ಟಿಕೊಂಡು ಸಾವನ್ನು ಲೆಕ್ಕಿಸದೆ, ಈ ಅನಿಷ್ಟ ಪದ್ಧತಿಯ ವಿರುದ್ಧ ಜಗತ್ತಿಗೆ ಮನವರಿಕೆ ಮಾಡಿಕೊಡುತ್ತಾಳೆ.

ಕ್ರಮವಾದ ವಿದ್ಯಾಭ್ಯಾಸವಿಲ್ಲದಿದ್ದರೂ ಮನುಷ್ಯನ ಅನುಭವವೇ ಅವನ ಗುರು ಎಂಬುದಕ್ಕೆ ಸಾಕ್ಷಿಯಾಗಿ ವಾರಿಸ್‌ಡೆರಿಸ್ ಇಲ್ಲಿ ಬದುಕಿನ ಸಾರ್ಥಕತೆ, ಸುಖ, ನೆಮ್ಮದಿ ಇತ್ಯಾದಿಗಳ ಬಗೆಗೆ ನಡೆಸಿರುವ ವಿಶ್ಲೇಷಣೆ ನಮ್ಮನ್ನು ವಿಶೇಷವಾಗಿ ಸೆಳೆಯುತ್ತದೆ. ತಾನು ತಾಯಿಯಾಗಲಿರುವೆನೆಂದು ತಿಳಿದಾಗ ಅವಳು ಪಡುವ ಸಂತಸ, ತಾಯಿಯಾದ ಕ್ಷಣದಲ್ಲಿ 'ಒಂದು ಜೀವನಕ್ಕೆ ಜನ್ಮ ಕೊಟ್ಟ ಆ ಕ್ಷಣ ನನ್ನ ಪಾಲಿಗೆ ಅವಿಸ್ಮರಣೀಯವೆನ್ನುವ, ಕಂದನ ತಲೆಯ ಮೇಲೆ ಕೈಯಾಡಿಸಿದ ತಕ್ಷಣ ಇದ್ದಕ್ಕಿದ್ದಂತೆ ಅಮ್ಮನನ್ನು ನೆನೆಸಿಕೊಂಡು, ಮರಳು ಗಾಡಿನ ಸುಡು ಬಿಸಿಲು ಗಾಳಿಯಲ್ಲಿ ಒಂಟೆ, ಕುರಿಗಳನ್ನು ಮೇಯಿಸಿಕೊಂಡು ಹಸಿವಿನಿಂದ ಸುಸ್ತಾಗಿ ಬಂದು ಅಮ್ಮನ ತೊಡೆಗೊರಗಿ ನಿದ್ರೆಗೆ ಜಾರಿದ ವೇಳೆ, ಅಮ್ಮ ತನ್ನ ನೀಳ ಬೆರಳುಗಳ ಮೂಲಕ ಮುಂಗುರುಗಳನ್ನು ನೇವರಿಸುತ್ತಿದ್ದುದು ನೆನಪಾಗಿ 'ಅಮ್ಮನ ಕೈಬೆರಳುಗಳ ಆ ಸ್ಪರ್ಶದಲ್ಲಿ ಸ್ವರ್ಗ ಸುಖದ ಅನುಭವವಿರುತ್ತಿತ್ತು", ಎಂದು ಹೇಳಿ ಎದೆಯ ಮೇಲೆ ಮಲಗಿದ್ದ ನನ್ನ ಮಗು ಸಹ ಕಣ್ಮುಚ್ಚಿಕೊಂಡು ಆ ಸುಖವನ್ನು

ಅನುಭವಿಸುತ್ತಿದೆ ಎನಿಸಿತು" ಎನ್ನುವ ಹೃದಯ ಸ್ಪರ್ಶಿ ಸಾಲುಗಳು ಯಾವ ಕಾವ್ಯಕ್ಕೂ ಕಡಿಮೆಯಿಲ್ಲ.

ಅದೇರೀತಿ ತನ್ನ ಜನಾಂಗದ ಕೆಲವು ಅನಿಷ್ಟ ಆಚರಣೆಗಳ ಕುರಿತಂತೆ ಅವಳಿಗೆ ಅಸಹನೆ ಇದೆಯೇ ಹೊರತು, 'ಬಡತನ, ಬೌದ್ಧಿಕ ದಾರಿದ್ರ್ಯದ ನಡುವೆಯೂ ಒಟ್ಟಿಗೆ ಬಾಳುತ್ತಾ, ಇದ್ದುದನ್ನು ಹಂಚಿಕೊಂಡು ತಿನ್ನುವ, ರಾತ್ರಿಯ ಹೊತ್ತು ಕುಟುಂಬದ ಸದಸ್ಯರು ಬುವಿಯನ್ನೇ ಹಾಸಿಗೆಯ ಹಾಗೆ ಮಾಡಿಕೊಂಡು, ಬಾನನ್ನೇ ಹೊದಿಕೆಯಾಗಿ ಮಾಡಿಕೊಂಡು, ಮಲಗುವುದು, ವೃತ್ತಾಕಾರದಲ್ಲಿ ಕುಳಿತು ಹಾಡು ಹೇಳುವುದು ಇದರ ಬಗ್ಗೆ ಎಲ್ಲಿಲ್ಲದ ಪ್ರೀತಿ ಅಭಿಮಾನ. ಅಲ್ಲಿದ್ದಂಥ ನೆಮ್ಮದಿ, ಐಶಾರಾಮಿ, ಭೋಗ ಜೀವನದ ಕೊಳ್ಳು ಬಾಕ ಸಂಸ್ಕೃತಿಯ ನೆಮ್ಮದಿಗೇಡಿನ, ಅಮೆರಿಕಾದ ಜನಜೀವನದಲ್ಲಿ ಕಾಣೆಯಾಗಿದೆ ಎಂದು ವಿಶ್ಲೇಷಿಸಿ ಮನುಷ್ಯನಿಗೆ ಬದುಕಿನಲ್ಲಿ ನೆಮ್ಮದಿ ಸಿಗುವುದು ಹಣ ಮತ್ತು ಅಂತಸ್ತಿನಲ್ಲಿ ಅಲ್ಲ; ಸರಳ ಜೀವನ ಮತ್ತು ಸ್ವಾರ್ಥ ಅಸೂಯೆಗಳಿಲ್ಲದೆ ಮುಕ್ತವಾಗಿ ಬೆರೆಯುವುದರಲ್ಲಿ ಎಂದು ಮಾಡಿರುವ ಜೀವನ ವಿಮರ್ಶೆ ಈ ಆತ್ಮಕಥನದ ಉತ್ಕೃಷ್ಟ ಭಾಗ. ಅವಳು ಮೆಚ್ಚುವುದು ಒಂದನ್ನು ಮಾತ್ರ; ಸದಾಕಳ್ಳರು, ಭಯೋತ್ಪಾದಕರು, ಬಂಡುಕೋರರ ನಡುವೆ, ಸಾವಿನ ತೂಗುಕತ್ತಿಯ ಕೆಳಗೆ ಬದುಕಬೇಕಾದ ಸೋಮಾಲಿಯಾದ ಸ್ಥಿತಿ ಅಮೆರಿಕಾದಲ್ಲಿ ಇಲ್ಲದೆ ಮನುಷ್ಯ ಜೀವಕ್ಕೆ ಹೆಚ್ಚು ಭದ್ರತೆ ಇರುವುದು. ಭಯೋತ್ಪಾದನೆಯಿಂದ ಕಂಗೆಟ್ಟಿರುವ ಭಾರತೀಯ ಉಪಖಂಡದ ಜನರಿಗೆ ಇದು ಬಹು ಚೆನ್ನಾಗಿ ಅರ್ಥವಾಗುತ್ತದೆ.

ಎಂಥ ದೀನ ಹೀನ, ದುರ್ಭರ ಸ್ಥಿತಿಯಲ್ಲಿರುವ ಮುನುಷ್ಯನಿಗೂ ಶ್ರೇಷ್ಠ ಬದುಕು ಸಾಧ್ಯವೆಂಬ ಭರವಸೆ ಹುಟ್ಟಿಸುವ ಇಂಥದೊಂದು ಸೊಗಸಾದ ಜೀವನ ಕಥನವನ್ನು ಅತ್ಯಂತ ಸೊಗಸಾಗಿ ಕನ್ನಡಿಗರಿಗೆ ದೊರಕಿಸಿಕೊಟ್ಟಿರುವ ಲೇಖಕ-ಪ್ರಕಾಶಕರಿಬ್ಬರ ಪರಿಶ್ರಮವೂ ಸಾರ್ಥಕ. ಮೂಲದಲ್ಲಿ 280 ಪುಟಗಳಿರುವುದೆಂದು ಹೇಳಲಾದ ಇದು ಅನುವಾದದಲ್ಲಿ ಕೇವಲ 170 ಪುಟಗಳಿರುವುದನ್ನು ನೋಡಿದಾಗ ಬಹುಶಃ ಇದು ಮೂಲ ಕೃತಿಯ ಯಥಾವತ್ತಾದ ಅನುವಾದವಾಗಿರದೆ ಅದರ ಸಂಕ್ಷಿಪ್ತ ಅಳವಡಿಕೆಯಿರಬೇಕೆನಿಸುತ್ತದೆ.

❖

೮

ವಿಸ್ತೃತ ಅಧ್ಯಯದ 'ಸಂಶೋಧನ ತೆನೆಗಳು'

'ಸಂಶೋಧನ ತೆನೆಗಳು' ಡಾ. ಎಂ.ಜಿ. ನಾಗರಾಜ್ ಅವರ ಹನ್ನೆರಡು ವಿಸ್ತಾರವಾದ ಸಂಶೋಧನ ಬರಹಗಳ ಸಂಪುಟ. ಧರ್ಮ, ಸಂಸ್ಕೃತಿ, ಇತಿಹಾಸ, ಶಾಸನಗಳು ಅವರ ಅಧ್ಯಯನ ವಿಷಯಗಳು. ಯಾವುದನ್ನೂ ಕೇವಲ ಬೀಸು ಹೇಳಿಕೆಯಾಗಿ ಹರಿಯಬಿಡದೆ, ಆಧಾರ ಪೂರ್ವಕವಾಗಿ ಅದನ್ನು ಸ್ಥಾಪಿಸುವುದು ಸಂಶೋಧಕನ ರೀತಿ. ಇಲ್ಲಿಯ ಯಾವುದೇ ಬರಹಗಳ ಒಳಹೊಕ್ಕು ನೋಡಿದರೂ, ಬೆರಗುಗೊಳಿಸುವ ಅಪಾರ ಸಾಮಗ್ರಿ ಮತ್ತು ಅದನ್ನು ವ್ಯವಸ್ಥಿತವಾಗಿ ವಿಶ್ಲೇಷಿಸಿ ನೋಡುವ ವಿಚಿಕಿತ್ಸಕ ಬುದ್ಧಿ ಕಣ್ಣಿಗೆ ಹೊಡೆದು ಕಾಣುತ್ತದೆ. ವಿಸ್ತಾರವಾದ ಅಧ್ಯಯನದ ಹಿನ್ನೆಲೆಯಲ್ಲಿ ಮೂಡಿ ಬಂದಿರುವ ಈ ವಿಶ್ಲೇಷಣಾತ್ಮಕ ಬರಹಗಳನ್ನು ಯಾರೂ

ಸಂಶೋಧನ ತೆನೆಗಳು, ಡಾ.ಎಂ.ಜಿ. ನಾಗರಾಜ್
ಪುಟಗಳು: 448 ಬೆಲೆ: ರೂ. 275/–
ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಗುಲ್ಬರ್ಗಾ – 585 101

ಕಡೆಗಣಿಸಲು ಸಾಧ್ಯವೇ ಇಲ್ಲ. ಬೇಕಾದುದೇನಿದ್ದರೂ ಇವುಗಳ ಒಳಹೋಗಲು ಅಗತ್ಯವಾದ ಆಸಕ್ತಿ ಮತ್ತು ತಾಳ್ಮೆ.

ಎಂ.ಜಿ.ನಾಗರಾಜರ ಆಸಕ್ತಿ ಮೊದಲಿಗೇ ತಿಳಿಸಿದಂತೆ ಧರ್ಮ, ಸಂಸ್ಕೃತಿ ಮತ್ತು ಶಾಸನಗಳು. ಅದಕ್ಕೆ ತಕ್ಕಂತೆ ಈ ದೇಶದ ಮಣ್ಣಿನಲ್ಲಿ ಬೆಳೆದ ವಟವೃಕ್ಷಗಳಂತೆ ವಿಶಾಲವಾಗಿ ಹರಡಿಕೊಂಡು ತಮ್ಮ ಪರಿಧಿಯಲ್ಲಿ ಬಂದ ಜನ ಕೋಟಿಗೆ ವಿಪುಲಾಶ್ರಯವನ್ನು ನೀಡಿರುವ ವೈದಿಕ, ಜೈನ, ಬೌದ್ಧ ಮತ್ತು ವೀರಶೈವ ಧರ್ಮಗಳನ್ನು ವಿಸ್ತಾರವಾದ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಅವುಗಳ ಕುರಿತೇ ಸುಮಾರು ಒಂಬತ್ತು ಲೇಖನಗಳಿವೆ. ಇನ್ನುಳಿದ ಮೂರು ಲೇಖನಗಳಲ್ಲಿ ಶಾಸನಗಳಲ್ಲಿ ಗಂಗರು ಮತ್ತು ಕೊಡವರ ಉಲ್ಲೇಖಗಳು, ಯಲಹಂಕ ವಂಶ ಮತ್ತು ಅದರ ಸಾಂಸ್ಕೃತಿಕ ಸಾಧನೆಗಳ ವಿವರಗಳು ಇದ್ದರೆ, ಕೊನೆಯದು ಇವೆಲ್ಲವುಗಳಿಗಿಂತ ಪೂರ್ತಿ ಭಿನ್ನವಾದ 'ಹೆಂಗಸರ ನಡುವೆ ಕವಿಗೋಷ್ಠಿ ಮತ್ತು ನಂತರ' ಎಂಬ ಲೇಖನ. 'ವೈದಿಕ ಧರ್ಮ'ದ ಹೆಸರು ಹೇಳಿದ ಕೂಡಲೇ ಟೀಕೆಗಳ ಗದಾ ಪ್ರಹಾರಕ್ಕೆ ಕಾದುಕುಳಿತಿರುವ ಸಂದರ್ಭದಲ್ಲಿ, ವೈದಿಕ ಧರ್ಮದ ಅಂತಸ್ಸತ್ವ ಮತ್ತು ಅದರ ಧನಾತ್ಮಕವಾದ ಅಂಶಗಳನ್ನು ವಿಸ್ತಾರವಾದ ಪರಿಪ್ರೇಕ್ಷ್ಯದ ನೆಲೆಯಲ್ಲಿ ತೆರೆದು ತೋರುತ್ತಲೇ ಅದರ ಋಣಾತ್ಮಕವೆನ್ನಬಹುದಾದ ಅಂಶಗಳನ್ನು, ಅದರ ದೌರ್ಬಲ್ಯಗಳನ್ನು, ಬರುಬರುತ್ತ ಅದು ಹೇಗೆ ಸಂಕುಚಿತಗೊಳ್ಳುತ್ತ ಸಾಗಿತು ಎಂಬುದನ್ನು ವಿವರಿಸುತ್ತಾರೆ.

ಸಂಸ್ಕೃತಿಯೆಂದರೆ, 'ಜೀವನಕ್ರಮದ ವಿಧಾನಗಳ ಮೊತ್ತವಷ್ಟೆ ಅಲ್ಲ, ಆ ಜೀವನ ಕ್ರಮದ ಅಂತರಂಗ, ಬಹಿರಂಗ ಸೊಬಗಿನ ಚರ್ಯೆಯೂ ಆಗಿದೆ. ದರ್ಶನ ಸಾರವಾಗಿದೆ' ಎಂದು ವಿವರಿಸಿಕೊಂಡಿರುವುದಕ್ಕೆ ತಕ್ಕಂತೆ ವೈದಿಕ, ಜೈನ, ಬೌದ್ಧ ಮತ್ತು ವೀರಶೈವ ಧರ್ಮಗಳು ಅಳವಡಿಸಿಕೊಂಡಿರುವ ಜೀವನಕ್ರಮ, ತತ್ವ ದರ್ಶನಗಳನ್ನು ಪೂರ್ವಗ್ರಹಗಳಿಗೊಳಗಾಗದೆ ತೆರೆದು ತೋರುತ್ತಾರೆ.

ವೇದಗಳು 'ಅಪೌರುಷೇಯ' ಎಂಬುದಕ್ಕೆ ಅವರು ಕೊಡುವ ವ್ಯಾಖ್ಯೆ ಬಹಳ ಅರ್ಥಪೂರ್ಣವಾಗಿದೆ. ಮನುಷ್ಯ ರಚಿಸಿದ್ದಲ್ಲ, ದೇವರ ಬಾಯಿಂದಲೇ ನೇರವಾಗಿ ಬಂದದ್ದು ಎಂದು ತಿಳಿಯುವುದು ಆಸ್ತಿಕರ ರೀತಿಯಾದರೆ, ಪುರುಷ ಸಾಮಾನ್ಯನ ಪರಿಶ್ರಮ ಮೀರಿದ ಅಸಾಮಾನ್ಯತೆ, ಅತಿಮಾನಸದ ಅರಿವು ತೋರಿದ ಕಾರಣ ಹಾಗೂ ಸಮಾಜ ಪುರುಷನ ಸರ್ವತೋಮುಖ ಪ್ರಯತ್ನದ, ಋಷಿ ಸಮುದಾಯದ ಸಮರಸದೌನ್ನತ್ಯದ ಚಿಂತನೆಗಳಾದ ಕಾರಣ ಎಂದು ತಿಳಿಯುವುದು ವೈಚಾರಿಕ ವಿಧಾನ. ಜೊತೆಗೆ 'ಆತ್ಮವತ್ ಸರ್ವಭೂತಾನಿ' ಅಂದರೆ ಸರ್ವಭೂತಗಳನ್ನೂ ತನ್ನಂತೆಯೇ

ಕಾಣುವುದು ಅಥವಾ ಸರ್ವಭೂತಗಳಲ್ಲಿ ತನ್ನಾತ್ಮ ಕಂಡುಕೊಳ್ಳುವುದು ಅಪೌರುಷೇಯತ್ವದ ಮುಖ್ಯತತ್ವ ಎಂಬ ವ್ಯಾಖ್ಯಾನ ಕೂಡ ಸಮಂಜಸವಾಗಿದೆ.

ವೇದಗಳ ವಿಸ್ತೃತವಾದ ಪರಿಚಯ, ಸ್ತೋತ್ರಭಾಗ, ಪೂಜಾಭಾಗ, ಹಾಡುಗಳ ಭಾಗ, ಮಂತ್ರಭಾಗ (ಸಂಹಿತೆ), ಬ್ರಾಹ್ಮಣಗಳು (ಯಾಗ ಅದರ ವಿಧಾನಗಳನ್ನು ತಿಳಿಸುವುದು), ಉಪನಿಷತ್ತು ವೇದಾಂತ ಎನಿಸಿದೆ ಎಂದು ಅವುಗಳ ವಿವರ ನೀಡಿದ್ದಾರೆ.

ವೇದಕಾಲೀನ ಸಮಾಜ ಕೃಷಿಕ ಸಮಾಜವಾಗಿದ್ದುದನ್ನು 'ಋಕ್ಕುಗಳ ಆಧಾರದ ಮೇಲೆ ಸ್ಥಾಪಿಸಿದ್ದಾರೆ. ವೇದಗಳ ದೇವಾರಾಧನೆಯ ಕುರಿತಾಗಿ ಹೇಳುತ್ತ – ಅಲ್ಲಿ ಮೂಡಿರುವ ಉಷಸ್ಸಿನ ವರ್ಣನೆ, ಆರಾಧನೆ, ಭಾರತದಲ್ಲಿ ಸೈಂಧವ ಸಂಸ್ಕೃತಿ ಕಾಲದಿಂದ ಮೂಡಿಬಂದ ಮಾತೃ ಪ್ರಧಾನ ವ್ಯವಸ್ಥೆಗೆ ಸಲ್ಲಿಸಿದ ಗೌರವ ಎಂಬ ತೀರ್ಮಾನ, ವೈದಿಕ ದೇವತೆಗಳ ಆರಾಧನೆಯ ಜೊತೆಗೆ ವೈದಿಕ ಪೂರ್ವ ದೇವತೆಗಳ ಆರಾಧನೆ ಅಳವಡಿಸಿತು ಎಂದು ಹೇಳಿರುವುದು ಹಾಗೂ ವೈದಿಕ ವಾಙ್ಮಯವು ಜೀವನ ಕ್ರಮಕ್ಕೆ

ಹೊಸ ಆಯಾಮ ತೋರಿಸಿತು, ಕ್ರಿಯೆ ಇಲ್ಲಿ ಮುಖ್ಯ ಗುರಿ, ಸ್ಥಗಿತತೆಗೆ ಇಲ್ಲಿ ನೆಲೆ ಇಲ್ಲ, ಚತುರ್ವೇದಗಳು ಜಂಗಮದ ಆವರಣದಲ್ಲೇ ಜ್ಞಾನ ದಾಸೋಹ ನಡೆಸುತ್ತವೆ – ಎಂಬ ಮಾತುಗಳೆಲ್ಲವೂ ವೇದಗಳನ್ನು ಕುರಿತಾದ ನಮ್ಮ ಪೂರ್ವಗ್ರಹಗಳನ್ನು ತೊಡೆದು ಹಾಕುವಲ್ಲಿ ಖಂಡಿತಾ ನೆರವಾಗುತ್ತವೆ. ಋಗ್ವೇದದ ಋಷಿಗಳಿಗೆ ಜಗತ್ತು ಸತ್ಯವೆನಿಸಿತ್ತು. ಬದುಕಿನ ವಾಸ್ತವತೆಯಲ್ಲಿ ಜೀವನ ಸಂಘರ್ಷ ತಿಳಿದಿದ್ದರಿಂದ ಅದನ್ನು ಭ್ರಮೆ ಎನ್ನದೆ ಸ್ವೀಕರಿಸಿದರು ಎನ್ನುತ್ತಾರೆ. ಲೇಖಕರ ಮುಕ್ತ ಹಾಗೂ ಪೂರ್ವಗ್ರಹ ರಹಿತ ದೃಷ್ಟಿಗೆ ಸಾಕ್ಷಿಯಾಗಿ ವೇದಾಗಮಾದಿ ಗ್ರಂಥಗಳು ವೀರಶೈವಕ್ಕೆ ಮುಖ್ಯ ಪ್ರಮಾಣ ಒದಗಿಸಿರುವ ವಿಚಾರ, ವೈದಿಕ ಧರ್ಮ ಶಿವಪರವಾದ ನಿಲುಮೆಗಳಿಗೆ ಸ್ಪಂದಿಸಿರುವುದು ಮಾತ್ರವಲ್ಲದೆ, ವೀರಶೈವವೂ ವೇದಾಗಮ ಸಮ್ಮತವಾಗಿಯೇ ಪ್ರತಿಪಾದಿತವಾಗಿದೆ ಎನ್ನುವುದನ್ನು ಹೇಳಿರುವುದು ಮಾತ್ರವಲ್ಲದೆ, ವೈದಿಕ ಧರ್ಮ ಜಡವಾದಾಗ, ವೈದಿಕ ಪರ್ಯಾಯಗಳು ವೇದಾಗಮ, ಉಪನಿಷತ್ತುಗಳ ಉತ್ತಮ ಅಂಶಗಳನ್ನು ಅಳವಡಿಸಿ ಕೊಂಡುವು, ಸರ್ವಸಮ್ಮತವಲ್ಲದ ಅಸ್ಪೃಶ್ಯತೆಯಂಥದನ್ನು ತಿರಸ್ಕರಿಸಿದವು ಎಂದು ದಾಖಲಿಸಿರುವುದು.

ಲೇಖಕರ ಅತ್ಯಂತ ಆರೋಗ್ಯಕರ ಮನೋಧರ್ಮ– 'ನಮ್ಮ ಸಂಸ್ಕೃತಿಯ ಅಂಗವಾದ ವೈದಿಕ ಧರ್ಮದ ಒಳ್ಳೆಯ ಅಂಶಗಳನ್ನು ವರ್ತಮಾನಕ್ಕೆ ಸಲ್ಲುವಂತೆ ಪರಿಷ್ಕರಿಸಿ, ಗುರುತಿಸುವುದರಲ್ಲಿ ಒಲುಮೆ ಬೇಡವೇ? ಅದರಲ್ಲಿರುವುದೆಲ್ಲ ಶೋಷಣೆ, ಜಡತ್ವ ಎಂದುಬಿಟ್ಟರೆ ಒಮ್ಮುಖ ನೋಟವಾಗುತ್ತದೆ. ಜಾಗತೀಕರಣ ಜಗತ್ತಿನಲ್ಲಿ ಸಾಂಸ್ಕೃತಿಕ

ದಿವಾಳಿತನಕ್ಕೀಡಾಗುತ್ತೇವೆ ಎಂದು ಘಂಟಾಘೋಷವಾಗಿ ಸಾರಿರುವುದರಲ್ಲಿ ಹಾಗೂ ಈ ದಿಸೆಯಲ್ಲಿ ಶರಣರು ಅಗತ್ಯವಾದ ವಿವೇಚನೆ ತೋರಿ ಮಾರ್ಗದರ್ಶಿಗಳಾಗಿದ್ದಾರೆಂದು ಸಾರಿರುವುದರಲ್ಲಿ ನಿಚ್ಚಳವಾಗಿ ಕಂಡು ಬರುತ್ತದೆ.

ಇದರ ನಂತರ 'ವೈದಿಕದ ಅಂಶಗಳನ್ನು ಒಳಗೊಂಡು, ಅದರ ಮೇಲೆ ತಮ್ಮ ಪ್ರಭಾವವನ್ನು ಬೀರಿರುವ ಅವೈದಿಕ'ವೆನ್ನಲಾದ ಜೈನ, ಬೌದ್ಧ ಮತ್ತು ವೀರಶೈವಗಳ ವಿವೇಚನೆ ಮಾಡಲಾಗಿದೆ.

ಜೈನಧರ್ಮದ ಬಗ್ಗೆ ಬರೆಯುತ್ತಾ, ಶೈವ ಪಂಥ, ಶ್ರಮಣ ಪಂಥವಾದ ಜೈನಧರ್ಮದೊಡನೆ ಪೌರಾಣಿಕವಾಗಿ ಸಮಾನಸ್ತರದಲ್ಲಿ ಆರಾಧ್ಯ ದೈವವನ್ನು ಕಂಡಿರುವುದರ ದ್ಯೋತಕವಾಗಿ ಜೈನರಲ್ಲಿ ವೃಷಭ ಜಿನನ ಮಂಗಲಕಲಶ ಪೂಜೆ, ನಂದೀಶ್ವರ ಅಷ್ಟಾಹ್ನಿಕ ಪರ್ವದಾಚರಣೆ ಹಾಗೂ ಬಸದಿಗಳಲ್ಲಿ ಅಷ್ಟಮ ನಂದೀಶ್ವರ ಪ್ರತಿಮೆ ಕಂಡು ಬರುವುದು ಪರಂಪರಾಗತ ಶ್ರಮಣ – ಶೈವ ಸಮನ್ವಯವೆಂದು ಗುರುತಿಸಿದ್ದಾರೆ. ಇದರ ಬಗ್ಗೆ ಇನ್ನೂ ಹಲವಾರು ಸಾಮ್ಯಗಳನ್ನು ಗುರುತಿಸುತ್ತಾರೆ. ಜೈನ ಪರಂಪರೆಯ ರೀತ್ಯಾ ವೇದಗಳು ಒಂದುಕಾಲಕ್ಕೆ ಅಹಿಂಸಾ ತತ್ವಾಧಾರಿತವಾಗಿದ್ದು ಕಾಲಾಂತರದಲ್ಲಿ ಯಜ್ಞದ ಅಂಗವಾಗಿ ಪ್ರಾಣಿಬಲಿ ಸೇರ್ಪಡೆಯಾದಾಗ, ವೇದ ವಿರೋಧಿ ಪಂಗಡ ಅಹಿಂಸಾಧಾರಿತ ತತ್ವಕ್ಕೆ ಅಂಟಿಕೊಂಡು ಜೈನರಾದರು, ಯಜ್ಞ ವಿರೋಧಿ ಧರ್ಮದ ವೀರಶೈವರು– ವೃಷಭ ಸಂಹಿತೆಯವರಾದರು ಎಂದು ವಿಶ್ಲೇಷಿಸಲಾಗಿದೆ. ಮುಂದೆ ಜೈನಧರ್ಮದ ತಾತ್ವಿಕತೆ, ಜೈನರ ವಿವಿಧ ಪಂಥ ಗಳು, ಯಕ್ಷ–ಯಕ್ಷಿಯರು ಕರ್ನಾಟಕದಲ್ಲಿನ ಜೈನ ದೇವಾಲಯಗಳು, ಕನ್ನಡದ, ಜೈನ ಸಾಹಿತ್ಯ, ನೆಲೆ, ಜೈನ ಸಾಂಸ್ಕೃತಿಕ ನೆಲೆಗಳಾದ ಕಲೆ, ವಾಸ್ತುಶಿಲ್ಪ, ಆಚಾರ, ಹಬ್ಬ ಇತ್ಯಾದಿ ವಿಚಾರಗಳು, ಜೈನಶಾಸನಗಳು ಇವನ್ನೆಲ್ಲ ವಿವರಿಸಿದ್ದಾರೆ.

ಇದೇ ವಿಚಾರ ಸರಣಿಯನ್ನು ಮುಂದುವರಿಸಿ, ಬೌದ್ಧ ದರ್ಶನದ ಹಿನ್ನೆಲೆ, ಅದು ಅಸ್ತಿತ್ವಕ್ಕೆ ಬಂದ ಬಗೆ, ಬುದ್ಧ ತತ್ವ ವಿಕಾಸವಾದ ಪರಿ ಹಾಗೂ ವೀರಶೈವರ ಶೂನ್ಯತತ್ವಕ್ಕೂ, ಬೌದ್ಧರ ಶೂನ್ಯವಾದಕ್ಕೂ ಇರುವ ವ್ಯತ್ಯಾಸಗಳನ್ನು ನಿಖರವಾಗಿ ದಾಖಲುಗೊಳಿಸಿದ್ದಾರೆ. ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿಯ ನೆಲೆಗಳು, ಶಾಸನಗಳ ವಿಚಾರ, ಬೌದ್ಧ ವಾಸ್ತು – ಶಿಲ್ಪದ ವಿಚಾರ, ಬೌದ್ಧ ಧರ್ಮದ ಪ್ರಭಾವಗಳು, ಇವುಗಳ ವಿವರಗಳನ್ನೆಲ್ಲ ನೀಡಲಾಗಿದೆ. ಬೌದ್ಧ ಧರ್ಮದ ಇತಿಮಿತಿಗಳ ಬಗ್ಗೆ ಹೇಳುವಾಗ ಆತ್ಮವನ್ನು ನಿರಾಕರಿಸಿದರೂ ಕರ್ಮ ಹಾಗೂ ಪುನರ್ಜನ್ಮ ಸಿದ್ಧಾಂತವನ್ನು ಸ್ವೀಕರಿಸಿದ ಕಾರಣ, ಮನುಷ್ಯರ ನಡುವೆ ಅಸಮಾನತೆಯ ಸೃಷ್ಟಿಯನ್ನು ತಪ್ಪಿಸಲಾಗಲಿಲ್ಲ, ನಿರೀಶ್ವರವಾದಿ ಎನಿಸಿದ್ದ ಮೂಲ

ಬೌದ್ಧವು ವಿಗ್ರಹಾರಾಧನೆಗೆ ಜೋತುಬಿದ್ದಿತು. ಬೌದ್ಧರ ಶೂನ್ಯವಾದ, ಎಷ್ಟೇ ಪ್ರಯತ್ನಪಟ್ಟರೂ ನಿಷೇಧದಲ್ಲಿಯೇ ಕೊನೆಗೊಳ್ಳುವ ಕಾರಣ ಭಾರತೀಯ ಮನಸ್ಸಿಗೆ ತೀರ ಸನಿಹವಾಗಲಿಲ್ಲ ಎಂದು ಹೇಳಿರುವುದು ಅವರ ನಿಷ್ಪಕ್ಷಪಾತ ದೃಷ್ಟಿಗೆ ದ್ಯೋತಕವಾಗಿದೆ. ಇದೆಲ್ಲದರ ನಡುವೆಯೂ ಗ್ರೀಕರು, ಶಕರು ಕುಷಾಣರೇ ಮೊದಲಾದ ವಿದೇಶಿ ತತ್ವಗಳಿಗೂ ಭಾರತೀಯತೆಯ ದೀಕ್ಷೆ ನೀಡಿತು ಎಂಬ ಮಾತು ನಿಜ. ಕೊಡಗಿನ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ 10, 11ನೇ ಶತಮಾನಗಳಲ್ಲಿ ಜೈನಧರ್ಮದ ಪ್ರಾಬಲ್ಯವಿದ್ದ ಬಗ್ಗೆ ಹಾಗೂ ದಕ್ಷಿಣ ಕೊಡಗಿನ ಮಂಚಳ್ಳಿಯಲ್ಲಿ ಬೌದ್ಧ ಧರ್ಮದ ಪ್ರಾಬಲ್ಯವಿದ್ದ ಬಗ್ಗೆ ಶಿಲ್ಪಗಳೂ ದೊರೆತಿರುವುದನ್ನು ವಿವರವಾಗಿ ಕಟ್ಟಿಕೊಡಲಾಗಿದೆ.

ವೀರಶೈವ ಧರ್ಮಕ್ಕೆ ಸಂಬಂಧಿಸಿದ ಲೇಖನಗಳಲ್ಲಿ 'ಅನುಭವ-ಅನುಭೂತಿ-ಅನುಭಾವ' ಸಂಶೋಧನೆಗಿಂತ ಹೆಚ್ಚಾಗಿ ತಾತ್ವಿಕ ಸ್ವರೂಪದ್ದು. ಪ್ರಾಕೃತಿಕ ಅನುಭವಗಳಿಂದ ತಾತ್ವಿಕ ಅನುಭಾವ, ಅನುಭೂತಿಗಳು ರೂಪುಗೊಳ್ಳುವುದನ್ನು ಭೌತ ಶಾಸ್ತ್ರೀಯ ಮತ್ತು ಗಣಿತಾತ್ಮಕ ವಿಧಾನದಿಂದ ನಿರೂಪಿಸಲು ಮಾಡಿರುವ ಪ್ರಯತ್ನ ಅದರ ನಾವೀನ್ಯತೆ ಕಾರಣಕ್ಕಾಗಿ ಸ್ವಾಗತಾರ್ಹವೆನಿಸಿದರೂ ಗ್ರಹಿಸಲು ಕಷ್ಟವೆನಿಸಬಹುದು. ಶಕ್ತಿ ವಿಶಿಷ್ಟಾದ್ವೈತದ ಸ್ವರೂಪವನ್ನು ಶರಣರ ವಚನಗಳಿಂದ ಮನದಟ್ಟು ಮಾಡಿಕೊಡುವ ರೀತಿ ಸುಗಮವಾಗಿದೆ.

'ಹಾಸನ ಜಿಲ್ಲೆಯ ವೀರಶೈವ ಮಠಗಳು, ಸಾಂಸ್ಕೃತಿಕ ನೆಲೆಗಳು' ಲೇಖನದಲ್ಲಿ 1015-44ರಲ್ಲಿದ್ದು ಜಯಸಿಂಹನ ರಾಣಿಗೆ ಶೈವೋಪದೇಶ ನೀಡಿದ ಶರಣ ದೇವರದಾಸಿಮಯ್ಯನು ಚಂದ್ರಗುಂಡ ಶಿವಾಚಾರ್ಯರಿಂದ ಲಿಂಗ ದೀಕ್ಷೆ ಪಡೆದವನಾಗಿದ್ದು ಅವನು ಕೂಡ ತಾನೇ ನೆಯ್ದ ನಾದಿ ವ್ಯಾಸ್ತ್ರಗಳನ್ನು ಶಿವನಿಗೆ ಅರ್ಪಿಸಿದ ಬಗ್ಗೆ ಶ್ರೀಶೈಲ ಪಂಡಿತಾರಾಧ್ಯ ಚರಿತ್ರಮ್‌ನಲ್ಲಿ ಆಧಾರವಿರುವ ಬಗ್ಗೆ ಹೇಳಿರುವುದನ್ನು ದಾಖಲಿಸಿದ್ದಾರೆ. ಈಗ ಪ್ರಸಿದ್ಧನಾಗಿರುವ ವಚನಕಾರ ಜೇಡರ ದಾಸಿಮಯ್ಯ (ಕಾಲ ಸು.1160) ನಿಗಿಂತ ಇವನು ಭಿನ್ನ. ಇವನು ಕೂಡ 14 ಗ್ರಂಥಗಳನ್ನು ರಚಿಸಿದನೆಂಬುದನ್ನು ಉಲ್ಲೇಖಿಸಿದ್ದಾರೆ. ಜೊತೆಗೆ 'ತೊರೆಯೊಳಗೆ ಬಿದ್ದ ಲಿಂಗ ಕರೆದರೆ ಬಂದುದು ಕರಸ್ಥಲಕ್ಕೆ' ಎಂಬ ವಚನ ಕೂಡ ಅವನದೆಂದು ಹೇಳಿ, ಅವನು ಕೂಡ ವಚನಕಾರನಾಗಿದ್ದಿರಬಹುದಾದ ಸಂಭಾವ್ಯತೆ ಬಗ್ಗೆ ಹೇಳಿರುವುದು ಮುಖ್ಯ ವಿಚಾರ.

'ಇತಿಹಾಸದ ನೆಲೆಗಳಲ್ಲಿ ಬಸವಣ್ಣ – ಬಿಜ್ಜಳ' ದಲ್ಲಿ ವಿವಿಧ ಐತಿಹಾಸಿಕ ಆಧಾರಗಳಿಂದ ಬಸವಣ್ಣನ ಜೀವಿತ ಕಾಲ ಕ್ರಿ.ಶ 1135ರಿಂದ 1168 ಎಂದು ಸ್ಥಾಪಿಸಿದ್ದಾರೆ.

'ತಮಿಳು ಭಾಷೆಯಲ್ಲಿ ಶರಣ ಸಾಹಿತ್ಯ-ಸಂಸ್ಕೃತಿ ಪರಂಪರೆ' ಎಂಬುದು, ತಮಿಳಿನ ಶೈವ ಮತ್ತು ಕನ್ನಡನಾಡಿನ ವೀರಶೈವಗಳ ಪರಸ್ಪರ ಸಂಬಂಧ ಪ್ರಭಾವಗಳ ಕುರಿತಾದ

ವಿಸ್ತಾರವೂ ಆಳವೂ ಆದ ಅಧ್ಯಯನವಾಗಿದ್ದು ಅನೇಕ ಮೌಲಿಕ ವಿಚಾರಗಳನ್ನೊಳಗೊಂಡಿದೆ. ತಮಿಳುನಾಡಿನ 63 ಪುರಾತನರಲ್ಲಿ ಕೆಲವರಾದರೂ ವೀರಶೈವರಾಗಿದ್ದಿರಬೇಕೆಂಬ ಮಾತು ವೀರಶೈವದ ಉಗಮವನ್ನು ಮತ್ತೂ ಹಿಂದಕ್ಕೆ ಕೊಂಡೊಯ್ಯುತ್ತದೆ. ತಮಿಳು ವೇದವೆನಿಸಿದ 'ತೇವಾರಂ' ಗಳು ಕನ್ನಡ ಶಿವಶರಣರಿಗೆ ಆಧಾರವೆಂಬುದು ಪ್ರಸಿದ್ಧವೇ ಇದೆ. ಹೀಗಾಗಿ ತಮಿಳುನಾಡಿನ 9ನೇ ಶತಮಾನದಲ್ಲಿನ ಶೈವಧರ್ಮ ಪರಂಪರೆ, ವೀರಶೈವದ ಅಂಶಗಳನ್ನು ತನ್ನ ಮಡಿಲಲ್ಲಿ ತುಂಬಿಕೊಂಡಿದ್ದ ಬಗ್ಗೆ, ಸಾಹಿತ್ಯಿಕ ಗ್ರಂಥಗಳು ಇದ್ದಿರಬಹುದಾದ ಸೂಚನೆಯ ಬಗ್ಗೆ ದಾಖಲಿಸಿದ್ದಾರೆ. 4–5 ನೇ ಶತಮಾನದಲ್ಲಿದ್ದ 'ಶಿವಾನುಭಾವಿ ತಿರುಮಲರ ಸ್ತೋತ್ರ'ಗಳಲ್ಲಿ ಬಸವಣ್ಣನವರ ವಚನಗಳಿಗೆ ಪ್ರೇರಣೆ ನೀಡಿರುವ ಸಾಧ್ಯತೆಯ ಬಗೆಗೂ ಪ್ರಸ್ತಾಪಿಸಲಾಗಿದೆ.

'ಶಾಸನಗಳಲ್ಲಿ ಗಂಗರು ಮತ್ತು ಕೊಡಗು' ಹಾಗೂ 'ಯಲಹಂಕ ವಂಶ ಮತ್ತು ಸಾಂಸ್ಕೃತಿಕ ಸಾಧನೆಗಳು' ಎಂಬ ಲೇಖನಗಳು ಅನೇಕ ಆಸಕ್ತಿಯುತ ಮತ್ತು ಕುತೂಹಲಕಾರಿ ಅಂಶಗಳನ್ನು ಅನಾವರಣ ಮಾಡುತ್ತವೆ. ಪ್ರತಿ ಲೇಖನದ ಕೊನೆಯಲ್ಲಿ ಶಾಸನಗಳು, ಶಿಲ್ಪಗಳು, ದೇವಾಲಯಗಳು ಇವುಗಳ ಛಾಯಾಚಿತ್ರಗಳನ್ನು ನೀಡಿರುವುದು ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಒಂದು ಸಣ್ಣ ಆಕ್ಷೇಪಣೆಯೆಂದರೆ, ಲೇಖನದ ಶೀರ್ಷಿಕೆಯ ಕೇಂದ್ರ ವಿಷಯಕ್ಕಿಂತ ದೂರವಾದ ವಿಷಯಗಳನ್ನೂ ಅಗತ್ಯವಿರಲಿ, ಬಿಡಲಿ ತುಂಬಿಬಿಡುವುದರಿಂದ– ಫೋಕಸ್ ಕಡಿಮೆಯಾಗುವುದಲ್ಲದೇ ಕೆಲವೊಮ್ಮೆ ವಿಷಯಾಂತರಕ್ಕೂ ಕಾರಣವಾಯಿತೇನೋ ಎನಿಸುತ್ತದೆ. ಉದಾಹರಣೆಗೆ ವೈದಿಕ ಧರ್ಮದ ಬಗ್ಗೆ ಹೇಳುವಾಗ ಭಾಷೆ, ಭಾಷಾಶಾಸ್ತ್ರ ಸಂಬಂಧೀ ವಿಚಾರವಾದ– ಕನ್ನಡದಿಂದ ಸಂಸ್ಕೃತಕ್ಕೆ ಹೋಗಿರಬಹುದಾದ ಶಬ್ದಗಳ ಪ್ರಸ್ತಾಪ. ಕಿಟ್ಟೆಲ್ ನಿಘಂಟಿನ ಪ್ರಸ್ತಾವನೆಯಲ್ಲಿ ಈ ಬಗ್ಗೆ ವಿಸ್ತಾರವಾಗಿ ಹೇಳಲಾಗಿದೆ. ಹೀಗೆ ಹತ್ತು ಹಲವು ವಿಷಯಗಳನ್ನು ತೂರಿಬಿಡುವುದು ಸಂಶೋಧನೆಯ ಶಿಸ್ತಿಗೆ ಕಿಂಚಿತ್ ದೂರವೆನಿಸುತ್ತದೆ.

ಈ ಸಣ್ಣ ಅಂಶವನ್ನು ಹೊರತುಪಡಿಸಿದರೆ ಡಾ' ಎಂ.ಜಿ. ನಾಗರಾಜ್ ಅವರ 'ಸಂಶೋಧನ ತೆನೆ' ವಿಸ್ತಾರವಾದ ಅಧ್ಯಯನ ಮತ್ತು ವ್ಯಾಪಕ ಕ್ಷೇತ್ರ ಕಾರ್ಯಗಳ ಹಿನ್ನೆಲೆಯಲ್ಲಿ ರಚಿಸಿರುವ ಸಂಶೋಧನ ಕೃತಿಯಾಗಿರುವ ಕಾರಣ, ವಿದ್ವಾಂಸರಿಗೂ ಸಂಶೋಧನಾಸಕ್ತರಿಗೂ ಒಳ್ಳೆಯ ಪರಾಮರ್ಶನ ಗ್ರಂಥ ಎನ್ನಬಹುದು.

❖

9

ಜ್ಞಾನಯೋಗಿಯ ಬದುಕಿನ ಸತ್ಯ ಕಥನ

ಬದುಕಿನ ಅರ್ಥವೇನು..? ಜಗತ್ತಿನ ಸ್ವರೂಪ ವೇನು..? ಜೀವ ಮತ್ತು ಜಗತ್ತುಗಳ ಸಂಬಂಧವೇನು..? ಕಣ್ಣಿಗೆ ಕಾಣುವ ಈ ಪ್ರಪಂಚವಷ್ಟೇ ಸತ್ಯವೇ..? ಅದನ್ನೂ ಮೀರಿದ್ದು ಬೇರೇನಾದರೂ ಇದೆಯೆ..? ಆತ್ಮವೆಂಬುದು ಉಂಟೆ..? ಜಗತ್ತನ್ನು ಸೃಷ್ಟಿಸಿದ ಪರಮಾತ್ಮ ಅಥವಾ ದೇವನೆನ್ನುವನೊಬ್ಬನಿದ್ದಾನೆಯೇ..? ಈ ಮುಂತಾದ ನಿಗೂಢ ಪ್ರಶ್ನೆಗಳ ಬಗ್ಗೆ ಮನುಷ್ಯನು ಅನಾದಿಕಾಲ ದಿಂದಲೂ ವಿಚಾರ ಮಾಡುತ್ತ ಬಂದಿದ್ದಾನೆ. ನಿಸರ್ಗದ ನಿಗೂಢಗಳನ್ನು ಹೊರಗೆಡಹುವ ಉದ್ದೇಶದಿಂದ ಕೈಗೊಂಡ ಸಂಶೋಧನೆಗಳಿಂದ ಬಂದ ಫಲಿತಗಳು ಹಾಗೂ ಕಣ್ಣಿಗೆ ಕಾಣುವಷ್ಟು ಮಾತ್ರ ಸತ್ಯ ಎಂದು ಹೇಳುವ ವಿಜ್ಞಾನ ಮತ್ತು ಅದಕ್ಕೆ ಮಾತ್ರ ಸ್ವರೂಪದಲ್ಲಿರುವ ವೈಚಾರಿಕ ಚಿಂತನೆ ಯಾವುದೋ ಒಂದು ಹಂತದಲ್ಲಿ

ಅರುಣಾಚಲದ ಆತ್ಮಜ್ಯೋತಿ ರಮಣ ಮಹರ್ಷಿ, ಡಾ.ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ
ಪುಟಗಳು : 392, ಬೆಲೆ : 295
ಅಂಕಿತ ಪುಸ್ತಕ, 53, ಶ್ಯಾಮ್‌ಸಿಂ

ನಿಲುಕಡೆ ಹೊಂದಿದಾಗ ತತ್ವಶಾಸ್ತ್ರ ಈ ಪ್ರಶ್ನೆಗಳ ಬೆನ್ನು ಹತ್ತಿ ತನ್ನದೇ ಆದ ವಿಧಾನದಲ್ಲಿ ಉತ್ತರ ಕಂಡುಕೊಳ್ಳುವ ಯತ್ನ ನಡೆಸಿರುವುದು, ನಡೆಸುತ್ತಿರುವುದು ತಿಳಿದ ವಿಚಾರವೇ ಆಗಿದೆ.

ಜಗತ್ತಿನಲ್ಲಿ ಎಲ್ಲರಿಗಿಂತ ಮೊದಲು ಭಾರತೀಯ ವೇದಾಂತ ಇಂಥ ನಿಗೂಢಗಳ ಬಗ್ಗೆ ನಡೆಸಿದ ಜಿಜ್ಞಾಸೆಗೆ ಕೊನೆ ಮೊದಲಿಲ್ಲ. ಇವುಗಳನ್ನರಿಯಲು ತಮ್ಮ ಬದುಕನ್ನೇ ಮೀಸಲಾಗಿಟ್ಟು ಸಾಧನೆ ಮಾಡಿದ ಮಹಾಪುರುಷರಿಗೂ ಲೆಕ್ಕವಿಲ್ಲ. ನಮ್ಮ ಕಾಲದಲ್ಲಿ ಅಂದರೆ ಇಪ್ಪತ್ತನೇ ಶತಮಾನದಲ್ಲಿ ಈ ಚಿರಂತನ ಪ್ರಶ್ನೆಗಳನ್ನೆತ್ತಿಕೊಂಡು ಆಧ್ಯಾತ್ಮ ರಂಗದಲ್ಲಿ ಶಿಖರ ಸಾಧನೆ ಮಾಡಿದ ಮಹಾವಿಭೂತಿಗಳೆಂದರೆ ರಾಮಕೃಷ್ಣ ಪರಮಹಂಸರು, ವಿವೇಕಾನಂದರು, ಅರವಿಂದರು ಮತ್ತು ರಮಣ ಮಹರ್ಷಿಗಳು. ಅದರಲ್ಲೂ ಭಗವದ್ಗೀತೆ ಹೇಳುವ ಭಕ್ತಿ, ಜ್ಞಾನ , ಕರ್ಮ ಮತ್ತು ರಾಜಯೋಗಗಳೆಂಬ ನಾಲ್ಕು ಬಗೆಯ ಆತ್ಮಸಾಕ್ಷಾತ್ಕಾರದ ಸಾಧನಾ ಪಥಗಳಲ್ಲಿ ಜ್ಞಾನಯೋಗದ ಹಾದಿ ಹಿಡಿದು, ಅದರ ತುತ್ತ ತುದಿಯನ್ನು ತಲುಪಿದ್ದೇ ಅಲ್ಲದೆ, ಅಲ್ಲಿಂದ ಕೆಳಗಿಳಿದು ಬಂದು ಆ ಹಾದಿಯಲ್ಲಿ ಸಾಗಬೇಕೆಂದು ಸಂಕಲ್ಪಿಸಿದ ಸಾಮಾನ್ಯರಿಗೆ ಅವರ ಮಟ್ಟಕ್ಕಿಳಿದು, ಅವರ ಮನಸ್ಸು ಬುದ್ಧಿಗಳಿಗೆ ನಿಲುಕುವಂತೆ ಅದನ್ನು ಮನದಟ್ಟು ಮಾಡಿಕೊಟ್ಟು ಅವರ ಜೀವನ ಸಾರ್ಥಕತೆಗೆ ದಾರಿ ತೋರಿದ ಮಹಾನ್ ಆಧ್ಯಾತ್ಮಿಕ ಜ್ಯೋತಿ ಎಂದರೆ ಶ್ರೀ ರಮಣ ಮಹರ್ಷಿಗಳು. ಭಾರತೀಯ ಋಷಿ ಪರಂಪರೆಯ ಸರ್ವಶ್ರೇಷ್ಠ ಪ್ರತಿನಿಧಿಯೆಂಬಂತಿದ್ದ ಈ ಮಹಾನ್ ಚೇತನದ ಸಾಧನಾ ಪಥವನ್ನು ಅತ್ಯುಜ್ವಲವಾಗಿ ತೆರೆದು ತೋರುವುದರ ಜೊತೆ ಜೊತೆಗೇ ಪ್ರೊ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಈ ಮಹಾ ಜ್ಯೋತಿಯಿಂದ ತಮ್ಮ ಬಾಳನ್ನು ಬೆಳಗಿಸಿಕೊಂಡ ಜಿಜ್ಞಾಸುಗಳ, ಸಾಧಕರ, ಮತ್ತು ಭಕ್ತರ ವೈವಿಧ್ಯಪೂರ್ಣ ಅನುಭವಗಳನ್ನು ಅವರ ಮಾತುಗಳಲ್ಲೇ ವಿಪುಲವಾಗಿ ನಿರೂಪಿಸಿದ್ದಾರೆ. ಇದಕ್ಕಾಗಿ ಅವರು ಇಂಗ್ಲಿಷಿನಲ್ಲಿ ಮತ್ತು ಕನ್ನಡದಲ್ಲಿ ಬಂದಿರುವ ಅಪಾರ ಸಾಹಿತ್ಯವನ್ನೆಲ್ಲಾ ಜಾಲಾಡಿದ್ದಾರೆ.

ತಮಿಳುನಾಡಿನ ತೀರ ಸಾಮಾನ್ಯವಾದೊಂದು ಕೆಳಮಧ್ಯಮ ವರ್ಗದ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿಬಂದ ತೀರ ಸಾಧಾರಣ ವ್ಯಕ್ತಿಯೊಬ್ಬ ತಾನಿದ್ದ ಕಡೆಗೇ ಜಾತಿ, ಮತಗಳ ಭೇದವಿಲ್ಲದೆ ಜಗತ್ತಿನ ಮೂಲೆ ಮೂಲೆಗಳಿಂದ ಸಾಮಾನ್ಯರಿಂದ ಹಿಡಿದು ವಿಖ್ಯಾತ ವ್ಯಕ್ತಿಗಳವರೆಗೆ ಸಹಸ್ರಾರು ಜನರನ್ನು ಸೂಜಿಗಲ್ಲಿನಂತೆ ಸೆಳೆದದ್ದು ಸಾಮಾನ್ಯ ಸಂಗತಿಯಂತೂ ಅಲ್ಲ. ಇದು ಸಾಧ್ಯವಾದದ್ದು ಹೇಗೆ, ಅವರು ಕ್ರಮಿಸಿದ ಹಾದಿಯ ಹೆಜ್ಜೆ ಗುರುತುಗಳಾವುವು, ಅವರ ಬಳಿಗೆ ಬಂದ ಜನರ ಅನುಭವಗಳು ಯಾವ

ಬಗೆಯವು, ಅವರ ವ್ಯಕ್ತಿತ್ವ ಎಂಥದು ಎಂಬುದನ್ನೆಲ್ಲ, ಯಾವ ಬಣ್ಣವನ್ನೂ ಬೆರೆಸದೆ, ಯಾವ ಉತ್ಪ್ರೇಕ್ಷೆಗಳನ್ನೂ ಸೇರಿಸದೆ, ನಿರುದ್ವಿಗ್ನವಾಗಿ ನಿರೂಪಿಸುತ್ತ ಹೋಗಿರುವುದೇ ಈ ಪುಸ್ತಕದ ವೈಶಿಷ್ಟ್ಯ.

ರಮಣರದು ಜ್ಞಾನಮಾರ್ಗದ ದಾರಿ. ತನ್ನನ್ನು ತಾನು ಅರಿಯುವ ಆತ್ಮಸಾಕ್ಷಾತ್ಕಾರದ ಮಾರ್ಗದ್ದು. ಹೊರಗಿನ ದೇವರನ್ನು ಕುರಿಯದ ಮಾರ್ಗ. ಆತ್ಮವೇ ಪರಮಾತ್ಮ. ದೇವರು, ಬ್ರಹ್ಮ, ಆತ್ಮ, ಹೃದಯ ಎಂದು ಯಾವುದೇ ಹೆಸರಿನಿಂದ ಕರೆದರೂ ಅದೆಲ್ಲವೂ ಒಂದೇ. ಹೃದಯವೇ ಬ್ರಹ್ಮವೆಂಬ, ಅದರ ಸಾಕ್ಷಾತ್ಕಾರವೇ ಬ್ರಹ್ಮ ಸಾಕ್ಷಾತ್ಕಾರವೆಂಬ "ಅಹಂ ಬ್ರಹ್ಮಾಸ್ಮಿ" ಎನ್ನುವ ನಿರ್ಗುಣ ನಿರಾಕಾರದ ಅದ್ವೈತ ಮಾರ್ಗ. ಆಶ್ಚರ್ಯದ ಸಂಗತಿಯೆಂದರೆ ಎಷ್ಟೆಷ್ಟೋ ವರ್ಷಗಳ ಕಠಿಣಸಾಧನೆ, ತಪಶ್ಚರ್ಯೆಗಳಿಂದ ಮಾತ್ರ ಸಿದ್ಧಿಸಬಹುದಾದ ಆತ್ಮಸಾಕ್ಷಾತ್ಕಾರದ ಈ ಅನುಭವ, ಅನುದ್ದೇಶಪೂರ್ವಕವಾಗಿಯೇ, ಅವರಿಗೆ ಅರಿವಿಲ್ಲದಂತೆ, ಅವರ ಯಾವ ಪ್ರಯತ್ನವೂ ಇಲ್ಲದೆ, ಶಾಲಾ ಬಾಲಕನಾಗಿದ್ದ ಹದಿನೇಳನೇ ವಯಸ್ಸಿನಲ್ಲಿಯೇ ಹಠಾತ್ತನೆ ಆಗಿಹೋದದ್ದು ರಮಣ ಮಹರ್ಷಿಗಳ ಜೀವನದ ಮಹಾ ಯೋಗಾಯೋಗ. ಅದರ ನಂತರ ಅವರಿಗೆ ಲೌಕಿಕ ಭೋಗ ಭಾಗ್ಯಗಳಲ್ಲಿ, ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತಿ ಇಲ್ಲವಾಯಿತು. ಅಹಂಕಾರ ಸತ್ತು, ಆತ್ಮಸಾಕ್ಷಾತ್ಕಾರದ ಅನುಭವವಾಗಿ, ಆನಂದಾನುಭವದ ಅರಿವಿನಲ್ಲಿ ಇರತೊಡಗಿದರು. ಮುಂದೆ ಅರುಣಾಚಲಕ್ಕೆ ಹೋದಮೇಲೂ ಧ್ಯಾನ, ತಪಸ್ಸು, ಸಮಾಧಿಗಳು ಮುಂದುವರಿದರೂ, ಅದು ಅವರು ಅಲ್ಲಿಗೆ ಬರುವುದಕ್ಕೆ ಮುನ್ನವೇ ಸಾಧಿಸಿದ್ದರ ಮುಂದುವರಿಕೆ ಅಷ್ಟೆ.

ವೇದಾಂತ ಗ್ರಂಥಗಳಲ್ಲಿ ಹೇಳಿದ ಸಂಗತಿಗಳು, ಕೇವಲ ಹೇಳಿಕೆಗಳಲ್ಲ, ಅವೆಲ್ಲ ವಾಸ್ತವ. ಆದರೆ ಅವೇನಿದ್ದರೂ ಅನುಭವ ವೇದ್ಯ ಎಂದು ಹೇಳಿ, ತಮ್ಮ ಬದುಕನ್ನೇ ಅದಕ್ಕೆ 'ದಿವ್ಯ'ವಾಗಿ ಒಡ್ಡಿಕೊಂಡ ಮಹಾನ್ ಚೇತನ ರಮಣಮಹರ್ಷಿಗಳು.

ರಮಣರ ಜೀವನ ಕಥೆಯೆಂಬುದು ಅವರು ತಮ್ಮ ಮನೆ ಬಿಟ್ಟು ಅರುಣಾಚಲಕ್ಕೆ ಬಂದು ನೆಲಸುವವರೆಗಿನದು ಅಷ್ಟೆ. ಅಲ್ಲಿಂದ ಮುಂದಕ್ಕೆ ಅವರು ಅರುಣಾಚಲದಲ್ಲಿ ಒಂದೆರಡು ವರ್ಷ ಮಾಡಿದ ಕಠೋರ ತಪಶ್ಚರ್ಯೆಯನ್ನು ಹೊರತುಪಡಿಸಿದರೆ, ಮುಂದಿನ ಅಧ್ಯಾಯಗಳೆಲ್ಲವೂ ಸಮಾಜದ ಬೇರೆ ಬೇರೆ ಸ್ತರದ, ದೇಶ ವಿದೇಶದ ವ್ಯಕ್ತಿಗಳು ಬಂದು ಅವರನ್ನು ಭೇಟಿಯಾಗಿ ಅವರ ತೇಜಃಪುಂಜ ವ್ಯಕ್ತಿತ್ವದಿಂದ ತಮ್ಮ ಬದುಕಿಗೆ ಬೆಳಕನ್ನು ತಂದುಕೊಂಡದ್ದೇ ರಮಣ ಮಹರ್ಷಿಗಳ ಚರಿತ್ರೆ ಎನ್ನುವ ಹಾಗಿದೆ. ರಮಣರ ಈ 'ಲೋಕಸಂಗ್ರಹ ಕಾರ್ಯ'ದಲ್ಲಿ ಅವರ ವ್ಯಕ್ತಿತ್ವದ ಒಂದೊಂದೇ ಮುಖ,

ಅವರ ಮಹಾನತೆ, ಮಹಾಸಾಧನೆ ಸುರುಳಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಒಂದೊಂದೂ ಪ್ರಸಂಗ, ಸಂದರ್ಭ ನಮ್ಮನ್ನು ವಿಸ್ಮಯದ ಕಡಲಿನಲ್ಲಿ ಅದ್ದುತ್ತಾ ಹೋಗುತ್ತದೆ. ಅವರ ಉನ್ನತ 'ಮಾನವ ದಯಾಮೃತ'ಕ್ಕೆ, ಅವರ ತಾಯ ಮಮತೆಗೆ, ಅವರ ದಿವ್ಯ ಮಹಿಮೆಗೆ ನಾವು ಬೆರಗಾಗುವ ರೀತಿಯಲ್ಲಿ ಈ ಪ್ರಸಂಗಗಳು ನಿರೂಪಿತವಾಗಿವೆ. ಅವರನ್ನು ಭೇಟಿ ಮಾಡಿದ, ಅವರ ಸಂಪರ್ಕಕ್ಕೆ ಬಂದ ವ್ಯಕ್ತಿಗಳಾದರೋ ಅತ್ಯಂತ ಖ್ಯಾತನಾಮರೆನಿಸಿದ ಡಾ. ರಾಧಾಕೃಷ್ಣನ್, ಮೊರಾರ್ಜಿ ದೇಸಾಯಿ, ರಾಜೇಂದ್ರಪ್ರಸಾದ್, ನಾಲ್ವಡಿ ಕೃಷ್ಣರಾಜ ಒಡೆಯರ್, ಶಿವಪ್ರಕಾಶಂ ಪಿಳ್ಳೆ, ಶೇಷಾದ್ರಿ ಸ್ವಾಮಿಗಳು, ಕಾವ್ಯಕಂಠ ಗಣಪತಿ ಮುನಿಗಳು, ಪಾಲ್‌ಬ್ರಂಟನ್, ಎಫ್.ಎಚ್. ಹಂಫ್ರೀಜ್, ಸೈಯದ್ ಎಂ. ಹಫೀಜ್, ಮೇಜರ್ ಚಾಡ್‌ವಿಕ್ ಆರ್ಥರ್ ಆಸ್ಬರ್ನ್, ಪ್ರೊ.ಕೆ. ಸ್ವಾಮಿನಾಥನ್ ಮುಂತಾದವರಿಂದ ಹಿಡಿದು ಸಾಮಾನ್ಯರಲ್ಲಿ ಸಾಮಾನ್ಯರೂ ಇದ್ದರು.

ಆತ್ಮ ಸಾಕ್ಷಾತ್ಕಾರದ ಅತ್ಯುನ್ನತ ನೆಲೆಯನ್ನು ತಲುಪಿದ್ದ ಮಹಾಚೇತನ ರಮಣರು ತಾವಾಗಿ ಉದ್ದೇಶಿಸಿ ಯಾವುದೇ ಪವಾಡ ಮಾಡದಿದ್ದರೂ, ಅವರನ್ನು ಭೇಟಿ ಮಾಡಿದ, ಮೇಲೆ ಹೆಸರಿಸಲಾದ ಭಕ್ತರು, ವ್ಯಕ್ತಿಗಳ ದೃಷ್ಟಿಯಲ್ಲಿ , ರಮಣರ ಸಾನ್ನಿಧ್ಯದಲ್ಲಿ ಪವಾಡವೆನ್ನಿಸದ ಒಂದೂ ಘಟನೆ, ಸಂಗತಿಗಳಿರುತ್ತಿರಲಿಲ್ಲ ಎನ್ನುವ ಹಾಗಿವೆ ಇಲ್ಲಿ ನಿರೂಪಿತವಾಗಿರುವ ಅವರೆಲ್ಲರ ಪ್ರಾಂಜಲ ಅನುಭವಗಳು. ಅವನ್ನು ಹೇಗೆ ಅರ್ಥೈಸಬೇಕೆಂದು ಗಲಿಬಿಲಿಯಾಗುತ್ತದೆ. ಸ್ವತಃ ರಮಣರಿಗೆ ಅನೇಕ ಅಲೌಕಿಕ ಶಕ್ತಿಗಳು ಸಿದ್ಧಿಸಿದ್ದರೂ, ನಿಜವಾದ ಆಧ್ಯಾತ್ಮಿಕ ವ್ಯಕ್ತಿಯಾದ ಅವರೆಂದೂ ಪವಾಡಗಳ ಹಿಂದೆ ಬಿದ್ದವರಲ್ಲ. ಅಷ್ಟೇ ಅಲ್ಲ, ಅದನ್ನು ಹೀಗಳೆಯುತ್ತಿದ್ದರು. ಮನೋದೇಹಿಯಾದ ಮಾನವನ ಮನಸ್ಸಿನ ಶಕ್ತಿಗಳು ಅಪರಿಮಿತ. ಜ್ಞಾನಯೋಗದ ಶಿಖರ ತಲುಪಿದ್ದ ಮಹಾ ಮನಸ್ಸಿನ ಮಹರ್ಷಿಗಳ ಇಚ್ಛಾಶಕ್ತಿಗೆ ನಿಲುಕದ್ದು ಯಾವುದೂ ಇಲ್ಲ ಎನ್ನುವ ಹಾಗೆ ಭಕ್ತರು ಬಯಸಿದ್ದು, ಆಶಿಸಿದ್ದು, ಕಲ್ಪಿಸಿದ್ದು ಎಲ್ಲವೂ ನಡೆದೇ ಹೋಗುತ್ತಿದ್ದವು. ಆ ವಿಷಯಕ್ಕೆ ವಿಸ್ಮಯವಿರುತ್ತಿದ್ದುದು ಭಕ್ತರಿಗೇ ಹೊರತು ಅವುಗಳಿಗೆ ಕಾರಣರೆಂದು ಹೇಳಲಾದ ರಮಣರಿಗಲ್ಲ. ಅವರಿಗೆ ಅದೆಲ್ಲವೂ ಸಹಜ ನಡೆಯೇ ಆಗಿರುತ್ತಿತ್ತು. ಹರಿಹರ ಅಲ್ಲಮನ ಬಗ್ಗೆ ಹೇಳುವ – "ನಡೆದುದೇ ಬಟ್ಟೆಯಾದುದು ಶಿವನ ಮದಕರಿಗೆ, ನುಡಿದುದೇ ವೇದವಾದುದು ಲಿಂಗವಂತಂಗೆ" ಎನ್ನುವ ನೆಲೆಯನ್ನು ಅವರು ತಲುಪಿದ್ದರೆನ್ನಬೇಕು. ಎಂಥ ಮಾನಸಿಕ ತಳಮಳವನ್ನೂ ತಣ್ಣಗಾಗಿಸುವಂಥ ಶಕ್ತಿ ಹೊಂದಿದ್ದ ಅವರ ಮುಖದಲ್ಲಿನ ಶಾಂತಿ, ಆನಂದ, ಅಪೂರ್ವ ತೇಜಸ್ಸುಗಳ ಬಗ್ಗೆ ಅವರೆಲ್ಲರೂ ಮನತುಂಬಿ ಹೇಳಿದ್ದಾರೆ. ಈ ಎಲ್ಲದರ ಸತ್ಯಾಸತ್ಯತೆ ಪರೀಕ್ಷಿಸಲು ಭಕ್ತರ ವೈಯಕ್ತಿಕ ಅನುಭವದ ಹೊರತು ಬೇರೆ ಪ್ರಮಾಣಗಳಿಲ್ಲವೆಂಬುದೇ ಅದರ ಮಿತಿ.

ಒಬ್ಬ ನಿಜವಾದ ಋಷಿ ಮನಸ್ಸಿನ ವ್ಯಕ್ತಿ ಜಗತ್ತಿನ ಸಕಲ ವಸ್ತುಗಳಲ್ಲೂ, ಸಕಲ ಪ್ರಾಣಿಗಳಲ್ಲೂ ತನ್ನ ಆತ್ಮದ ಅಥವಾ ಪರಮಾತ್ಮನ ಪ್ರತಿರೂಪವನ್ನೇ ಕಾಣುತ್ತಿರುತ್ತಾನೆಂಬುದಕ್ಕೆ ನಿದರ್ಶನವಾಗಿ ಈ ಗ್ರಂಥದ 'ಪಶು ಪಕ್ಷಿಗಳ ಒಡನಾಟದಲ್ಲಿ' ಎಂಬ ಅಧ್ಯಾಯದಲ್ಲಿನ ರಮಣರು ತಾವು ಸಾಕಿದ್ದ ಕೋತಿ, ಅಳಿಲು, ನವಿಲು, ಪಾರಿವಾಳ, ಹಸು, ನಾಯಿ, ಮುಂಗುಸಿ, ಗಿಳಿ, ಜಿಂಕೆ, ಕಡೆಗೆ ಚೇಳು, ಹಾವು ಮುಂತಾದ ಪ್ರಾಣಿ – ಪಕ್ಷಿಗಳ ಬಗ್ಗೆ ಅವರು ಹರಿಸುತ್ತಿದ್ದ ಅನನ್ಯ ಪ್ರೀತಿ, ವಾತ್ಸಲ್ಯಗಳ ಮಹಾಪೂರದ ವಿವರಗಳು ಎಂಥವರನ್ನೂ ಮುಗ್ಧಗೊಳಿಸುತ್ತವೆ. 'ಸರ್ವಂ ಖಲ್ವಿದಂ ಬ್ರಹ್ಮ' ಎಂದು ವೇದಾಂತ ಹೇಳುವ ಹಾಗೆ ಸಕಲ ಜೀವಗಳನ್ನೂ ಸಮಾನವಾಗಿ ಕಾಣುವ ಮಹಾಮನಸ್ಸು ಅವರದು. ಪ್ರಾಣಿಗಳಾದರೂ, ಅವರು ಆಹಾರ ತೆಗೆದುಕೊಂಡ ಹೊರತು ಅವು ಮುಟ್ಟುತ್ತಿರಲಿಲ್ಲ.

ಇಂಥ ವ್ಯಕ್ತಿಯಲ್ಲಿ ಮಡಿ, ಮೈಲಿಗೆ, ಉಚ್ಚ ನೀಚ ಮುಂತಾದ ಭೇದ ಭಾವಗಳಿಗೆ ಎಡೆ ಇರದಿದ್ದುದು ಸಹಜವೇ ಆಗಿತ್ತು. ಸ್ಕಂದಾಶ್ರಮದಲ್ಲಿದ್ದಾಗ, ಹೊರಗಾದ ಮಹಿಳೆಯರನ್ನು, ದಲಿತರನ್ನು, ಆಶ್ರಮಕ್ಕೆ ಸೌದೆ ತಂದು ಹಾಕುತ್ತಿದ್ದವರನ್ನು ಮೇಲ್ವಿಚಾರಕರು ಆಶ್ರಮದ ಹೊರಗೆ ಕೂಡಿಸಿ ಊಟ ಹಾಕುತ್ತಿದ್ದುದನ್ನು ತಪ್ಪಿಸಿ, ತಮ್ಮ ಜೊತೆಯಲ್ಲೇ ಎಲ್ಲರೊಂದಿಗೆ ಕುಳ್ಳಿರಿಸಿ ಊಟ ಹಾಕಲು ಏರ್ಪಾಟು ಮಾಡುತ್ತಾರೆ ಅಲ್ಲಿನವರಿಗೆ "ಅವರನ್ನೂ ನಮ್ಮಂತೆಯೇ ನಡೆಸಿಕೊಳ್ಳಬೇಕು" ಎಂದು ಹಟ ಹಿಡಿದು ಒಪ್ಪಿಸುತ್ತಾರೆ. ಛೀ.. ಛೀ... ಎಂಥದಿದು ಮನುಷ್ಯ ಮನುಷ್ಯರ ನಡುವೆಯೇ ಭೇದವೇ..? ಪ್ರತಿಯೊಬ್ಬನಲ್ಲೂ ಭಗವಂತನನ್ನು ಕಾಣಬೇಕು. ಅದು ಬಿಟ್ಟು ಇಂಥ ನಡತೆ ಸರಿಯೇ..? ಎನ್ನುತ್ತಾರೆ. ತಾಯಿಯನ್ನೂ ಹಟ ಹಿಡಿದು ಒಪ್ಪಿಸುತ್ತಾರೆ. ಒಮ್ಮೆ ಒಬ್ಬ ಹರಿಜನ ವ್ಯಕ್ತಿ – "ನಾವು ಅಸ್ಪೃಶ್ಯರು, ಭಗವಾನರನ್ನು ನೋಡಬಹುದೋ ಬಾರದೋ ತಿಳಿಯದು ಎಂದಾಗ – ಅವರ ಶಿಷ್ಯರು – ಅದಕ್ಕೆ ಯಾವ ಅಡ್ಡಿಯೂ ಇಲ್ಲ. ಭಗವಾನರಿಗೆ ಜಾತಿ ಎಂಬುದಕ್ಕೆ ಯಾವ ಅರ್ಥವೂ ಇಲ್ಲ. ಅಗತ್ಯವಾಗಿ ಬರಬಹುದು" ಎಂದು ಹೇಳಿದ್ದರಿಂದ ಅವರು ಹೋಗಿ ನಮಸ್ಕರಿಸಿ ಆಶೀರ್ವಾದ ಪಡೆದರಂತೆ. "ಹತ್ತು ನಿಮಿಷಗಳಷ್ಟು ಕಾಲ ಅವರು ಕರುಣೆ ಪ್ರೀತಿ ತುಂಬಿದ ಕಣ್ಣುಗಳಿಂದ ಅವರನ್ನು ನೋಡುತ್ತಿದ್ದರು" ಎಂದು ಆ ಶಿಷ್ಯರು ದಾಖಲಿಸಿ "ಎಷ್ಟೋ ಗಣ್ಯ ವ್ಯಕ್ತಿಗಳಿಗೆ ಇಂಥ ಅದೃಷ್ಟವಿರಲಿಲ್ಲ ಎನ್ನುತ್ತಾರೆ. ಅರ್ಥವಿಲ್ಲದ ಬ್ರಾಹ್ಮಣ ಮಡಿವಂತಿಕೆಯನ್ನು ಮೀರಿದವರು ಅವರು. ಸಾಂಪ್ರದಾಯಿಕ ಅರ್ಥದ ಋಷಿ, ಮುನಿ, ಗುರು ಅವರು ಅಲ್ಲವೇ ಅಲ್ಲ. ಸರಳರಲ್ಲಿ ಸರಳರು. ಅಡಿಗೆ ಮಾಡುವುದರಲ್ಲಿ ಸ್ವತಃ ನಿಸ್ಸೀಮರಾದ ಅವರು ಬೆಳಗಿನ ಜಾವ ಮೂರು, ಮೂರೂವರೆಗೇ

ಎದ್ದು, ಅಡಿಗೆ ಕೆಲಸದಲ್ಲಿ ತೊಡಗಿಕೊಂಡು, ಅಡಿಗೆಯವರಿಗೆ ನೆರವಾಗುತ್ತಿದ್ದರು. ಇದರಲ್ಲಿ ಅವರಿಗೆ ಇದ್ದ ಇನ್ನೊಂದು ಉದ್ದೇಶ, ಎಲ್ಲರಂತೆ 'ಧ್ಯಾನ ಭವನ'ಕ್ಕೆ ಬರಲಾಗದ ಅಡಿಗೆಯವರ ಜೊತೆ ಇದ್ದು ಅವರಿಗೆ ಹತ್ತಿರದವರೆನಿಸಿ ಪ್ರೀತಿ ತೋರುವುದು, ತಾವು ಭಗವಾನರ ಕೃಪೆಯಿಂದ ವಂಚಿತರಾದೆವೆಂಬ ಭಾವ ಅವರಿಗೆ ಬರದಿರಲೆಂಬುದು.

ದೇಹದಿಂದ ಆತ್ಮವನ್ನು ಬೇರ್ಪಡಿಸಿ ನೋಡುವ ಆತ್ಮವಿಜ್ಞಾನ ಅವರಿಗಿದ್ದದ್ದರಿಂದಲೇ ತಮ್ಮ ದೇಹಕ್ಕೆ ಶಸ್ತ್ರ ಚಿಕಿತ್ಸೆಯಿಂದಾದ ನೋವನ್ನು ದೃಢವಾಗಿ ಸಹಿಸಿದರು. ದೇಹ ಅದರ ಧರ್ಮಕ್ಕನುಗುಣವಾಗಿ ರೋಗ, ರುಜಿನ, ವ್ರಣಗಳಿಗೆ ಈಡಾಗುತ್ತದೆ. ಆದರೆ ಜ್ಞಾನಿಯ ಮನಸ್ಸು ಸಂಪೂರ್ಣ ನಾಶವಾಗುವುದರಿಂದ, ಮತ್ತು ತಾವು ಆನಂದಾನುಭವದಲ್ಲಿದ್ದದ್ದರಿಂದ, ಅದರ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳುವುದಿಲ್ಲ. ಶರೀರದ ಬಗ್ಗೆ ಅವರ ದೃಷ್ಟಿ – ಅದು ಊಟಕ್ಕೆ ಉಪಯೋಗಿಸುವ ಬಾಳೆ ಎಲೆಯಂತೆ. ಬಾಳೆ ಎಲೆ ಎಷ್ಟೇ ಚೆನ್ನಾಗಿದ್ದರೂ, ಊಟವಾದ ನಂತರ ಅದನ್ನು ಎಸೆಯಲೇಬೇಕಲ್ಲವೆ..?

ರಮಣರ ಕೃತಿಗಳ ಪರಿಚಯವೂ ಸೇರಿದಂತೆ, ಅವರ ಕೆಲವು ಕೃತಿಗಳ, ಸ್ತೋತ್ರಗಳ ಸುಂದರ ಅನುವಾದ, ರಮಣರನ್ನು ಕುರಿತ ಸಾಹಿತ್ಯದ ಮಾಹಿತಿ, ರಮಣರು ಹಾಗೂ ಅದರ ಸಾಧನಾ ಭೂಮಿಯಾದ ಅರುಣಾಚಲದ ಅತ್ಯಪೂರ್ವ ಚಿತ್ರಸಂಪುಟವನ್ನೂ ಒಳಗೊಂಡು, ಸಾರ್ಥಕ ಬದುಕಿಗೊಂದು ಸುಂದರ ಭಾಷ್ಯವೆನಿಸುವ ಜ್ಞಾನಯೋಗಿಯೊಬ್ಬರ ಬದುಕಿನ ಸತ್ಯಕಥನವಾಗಿ ಈ ಗ್ರಂಥ ರೂಪುಗೊಳ್ಳಲು ಕಾರಣರಾದ ಲೇಖಕ, ಪ್ರಕಾಶಕರಿಬ್ಬರೂ ಅಭಿನಂದನಾರ್ಹರು.

❖

10

ಗಾಂಧಿ ಕುರಿತ ಆಪ್ತ ಬರಹ

ಗಾಂಧಿಯವರ ವ್ಯಕ್ತಿತ್ವದ ನೂರು ಮುಖಗಳನ್ನು ಅದರೆಲ್ಲ ರಾಗಚ್ಛಾಯೆಗಳೊಂದಿಗೆ ಬಿಂಬಿಸಿ ತೋರಿಸುವ ಪ್ರಯೋಗ ವಿಜ್ಞಾನಿಯ ಕೆಲಸವನ್ನು ಈ ಹಿಂದೆ "ಗಾಂಧೀ ಅಂತಿಮ ದಿನಗಳು" ಕೃತಿಯಲ್ಲಿ ಮಾಡಿದ ಹಾಗೆಯೇ "ಗಾಂಧಿ : ಮುಗಿಯದ ಅಧ್ಯಾಯ"ದಲ್ಲೂ ರಾಗಂ ಅವರು ಇನ್ನಷ್ಟು ಥಾಳವಾಗಿ ಮಾಡಿದ್ದಾರೆ. ಈ ಹಿಂದೆ ನಾನು ಹೇಳಿದ ಹಾಗೆ ಅದಕ್ಕೆ ಅವರು ಪಟ್ಟಿಕೆ (ಪ್ರಿಸಂ)ಯಾಗಿ ಬಳಸಿರುವುದು ದೇಶ ವಿಭಜನೆಯ ಘೋರ ದುರಂತದ ಸಂದರ್ಭವನ್ನು.

ಭಾರತ ವಿಭಜನೆಯ ಘೋರ ದುರಂತದ ದಿನಗಳಿಗೆ ಮೂಕಸಾಕ್ಷಿಯಾಗಬೇಕಾಗಿ ಬಂದ ಗಾಂಧಿಯ ಪಾಲಿಗೆ ಅವು ಒಂದೊಂದೂ ಅತ್ಯಂತ ಯಾತನಾಮಯ

ಗಾಂಧಿ – ಮುಗಿಯದ ಅಧ್ಯಾಯ, ಡಾ. ರಾಜಶೇಖರ ಮಠಪತಿ (ರಾಗಂ)
ಪುಟಗಳು : 288, ಬೆಲೆ : ರೂ. 185/–
ಕಣ್ವ ಪ್ರಕಾಶನ, 'ಕಾಲ ಕನಸು', ನಂ. 894, 1ನೇ ಮುಖ್ಯರಸ್ತೆ
ನಿಗರ್ಸ ಬಡಾವಣೆ, ಚಂದ್ರಾ ಲೇಔಟ್, ಬೆಂಗಳೂರು – 560 072

ಭರ್ಜಿಗಳು. ಭಾರತ ಸ್ವಾತಂತ್ರ್ಯ ಹೋರಾಟದ ಯಜ್ಞಕುಂಡದಿಂದ ತಾನು ಹೊರ ತೆಗೆದ ದಿವ್ಯಾಸ್ತ್ರಗಳಾದ ಸತ್ಯ, ಅಹಿಂಸೆ, ಸತ್ಯಾಗ್ರಹಗಳಿಗೆ ಒಂದು ರೀತಿಯಲ್ಲಿ ಸವಾಲೆನ್ನುವಂಥ, ಅವುಗಳತ್ತ ವಿಕಟನಗೆ ಬೀರಿ ಅವುಗಳ ಸಾರ್ಥಕತೆಯನ್ನು ಪ್ರಶ್ನಿಸುವಂಥ ಸಂದರ್ಭ ಎದುರಾದಾಗ, ತನ್ನ ಅದುವರೆಗಿನ ಸಾಮಾಜಿಕ, ರಾಜಕೀಯ, ಧಾರ್ಮಿಕ ಜೀವನವನ್ನು ಒರೆಹಚ್ಚಿ ನೋಡುವ 'ನಿಕಷ'ದಂಥ ಸಂದರ್ಭವನ್ನು ಗಾಂಧಿ ಎದುರಿಸಿದ ಬಗೆ ಹೇಗೆ ಎಂಬುದನ್ನು ಅದರೆಲ್ಲ ವಿವರಗಳೊಂದಿಗೆ ಕಣ್ಣಿಗೆ ಕಟ್ಟುವಂತೆ ಕಟ್ಟಿಕೊಡುವ ಪ್ರಯತ್ನ ರಾಗಂ ಅವರದು. ಎಂದಿನಂತೆ ರಾಗಂ ಅವರು ಇಲ್ಲಿ ಸಾಧಿಸಿರುವ ನಿರ್ಲಿಪ್ತತೆ ಆಶ್ಚರ್ಯಕರವಾದುದು. ಒಂದು ರೀತಿಯಲ್ಲಿ ಪ್ರಯೋಗನಿರತ ವಿಜ್ಞಾನಿಯ ಹಾಗೆ ಫಲಿತಾಂಶದ ಬಗ್ಗೆ ತಲೆಕೆಡಿಸಿಕೊಳ್ಳದೆ, ಪರದೆಯಲ್ಲಿ ಮೂಡಿಬರುವ ವರ್ಣ ಯಾವುದೆಂಬುದರ ಬಗ್ಗೆ ಎಲ್ಲರ ಹಾಗೆ ಕುತೂಹಲವನ್ನು ಮಾತ್ರ ಉಳಿಸಿಕೊಂಡವರಂತೆ ಕಂಡುಬರುತ್ತಾರೆ.

ಏಕ ಕಾಲಕ್ಕೆ ಒಬ್ಬ ಸರಳ ಮನುಷ್ಯನೂ, ಸಂತನೂ, ವ್ಯವಹಾರ ಕುಶಲ ರಾಜಕಾರಣಿಯೂ, ನಿಷ್ಠುರ ಸತ್ಯಾಗ್ರಹಿಯೂ ಆಗಿದ್ದ ಗಾಂಧಿಯ ವ್ಯಕ್ತಿತ್ವ ಯಾರದೇ ಗ್ರಹಿಕೆಗೆ ಪೂರ್ಣವಾಗಿ ದಕ್ಕುವಂಥದಲ್ಲವೇ ಅಲ್ಲ. ಆದರೆ ಪ್ರತಿಕ್ಷಣವೂ ತನ್ನನ್ನು ತಾನು ಅಂತರ್ನಿರೀಕ್ಷಣೆಗೆ ಒಳಪಡಿಸಿಕೊಳ್ಳುತ್ತಾ ಸಾಗುವ ಈ ವ್ಯಕ್ತಿಯೊಂದಿಗೆ ಹೋಲಿಸಬಹುದಾದ ಇನ್ನೊಬ್ಬ ವ್ಯಕ್ತಿಯೆಂದರೆ ಬಸವಣ್ಣ ಮಾತ್ರ. ಅದರಿಂದಾಗಿಯೇ ಗಾಂಧಿ ಮಹಾನ್ ಆದರು. ಎಂಥ ಸಂಕಷ್ಟಗಳ ಎದುರಿನಲ್ಲಿಯೂ ಸೋಲಲಿಲ್ಲ. ಸೋತರೆಂದು ಹೊರಗಿನಿಂದ ನೋಡುವ ಅವನ ಟೀಕಾಕಾರರಿಗೆ ಅನ್ನಿಸಿದರೂ, ಆಗಲೂ ಗಾಂಧಿಯೇ ಗೆದ್ದಿರುತ್ತಾನೆಂಬುದೇ ಗಾಂಧಿಯ ವ್ಯಕ್ತಿತ್ವದ ಒಗಟು, ಒಳ ಗುಟ್ಟು. ಮಠಪತಿಯವರು ಗಾಂಧಿಯ ವ್ಯಕ್ತಿತ್ವದ ಈ ಒಡಪನ್ನು, ಸಂಕೀರ್ಣ ಪದರಗಳನ್ನು ಬಿಡಿಸುತ್ತಾ ಹೋಗುವ ಪರಿ ಅತ್ಯಂತ ಅನನ್ಯವಾದುದು. ಅದಕ್ಕೆ ಅಗತ್ಯವಾದ ಭಾಷಾ ಸಿದ್ಧಿ ಅವರಿಗೆ ಸಿದ್ಧಿಸಿದೆ. ಎಲ್ಲಿಯೂ ಕೂಡ ಕಿಂಚಿತ್ತಾದರೂ ಬೇಸರವಾಗುವುದು ಹಾಗಿರಲಿ, ಒಂದು 'ಥ್ರಿಲ್ಲರ್ ಕಾದಂಬರಿ'ಯಂತೆ ಓದಿಸಿಕೊಂಡು ಹೋಗುವ ಗುಣದ ಈ ಬರಹ ಆ ಕಾರಣಕ್ಕಾಗಿಯೇ ಅನನ್ಯ ಮತ್ತು ಆಪ್ತವೆನಿಸುತ್ತದೆ. "ಗಾಂಧಿ: ಮುಗಿಯದ ಅಧ್ಯಾಯ" ಎಂಬ ಶೀರ್ಷಿಕೆಗೆ ತಕ್ಕಂತೆ ಇದರ ಕೊನೆಯ ಅಧ್ಯಾಯದ ಶೀರ್ಷಿಕೆ "ಆssssssಹ್ or ಹೇ ರಾಮ್?" ಎಂದಿರುವುದೇ ಒಂದು ಚೋದ್ಯ.

"ಜನಮ್ ಜನಮ್ ಮುನಿಜತನ್ ಕರಾಹಿ!

ಅಂತ್ ರಾಮ್ ಕಹಿ ಆವತ್ ನಾಹಿ" ಎಂಬುದನ್ನು (ಜನ್ಮ ಜನ್ಮಾಂತರಗಳಿಂದ ಋಷಿ ಮುನಿಗಳು ಪ್ರಯತ್ನಿಸಿದರೂ ಸಾಯುವ ಗಳಿಗೆಯಲ್ಲಿ 'ರಾಮ್' ಶಬ್ದ ಬಾಯಿಂದ ಬರುವುದಿಲ್ಲ). ಸುಳ್ಳು ಮಾಡಿ, "ಶರಣರ ಗುಟ್ಟನ್ನು ಮರಣದಲ್ಲಿ ನೋಡು" ಎಂಬಂತೆ ಗಾಂಧಿ ಜೀವನ ಪರ್ಯಂತ ತಾನು ನಂಬಿದ ರಾಮನಾಮವನ್ನು ಉಚ್ಚರಿಸುತ್ತಾ ಪ್ರಾಣಬಿಟ್ಟನೆಂಬುದು ಕೇವಲ ಕಥೆಯೋ ಇಲ್ಲ ವಾಸ್ತವ ಸಂಗತಿಯೋ ಎಂಬುದರಿಂದಲೇ ಗಾಂಧಿ ಕುರಿತ ಚರ್ಚೆಗಳು ಪ್ರಾರಂಭವಾಗಬಹುದು. ಮಠಪತಿಯವರೇನೋ ಗಾಂಧಿ 'ಆಹ್' ಎಂದು ಉದ್ಗರಿಸುತ್ತ ನೆಲಕ್ಕುರುಳಿದ ಎಂದೇ – ಬಹುಜನರ ಹೇಳಿಕೆಗೆ ವಿರುದ್ಧವಾಗಿ ದಾಖಲಿಸಿದ್ದಾರೆ. ಆದರೆ ಅದರ ವಿರೋಧದಿಂದಲೇ ಮುಂದಿನ ಚರ್ಚೆ ಪ್ರಾರಂಭವಾಗಬಹುದು. ಗಾಂಧಿಯವರ ಬಗ್ಗೆ ಎಷ್ಟು ಬರೆದರೂ, ಇನ್ನೂ ಬರೆಯಬೇಕಾದ್ದು ಉಳಿದೇ ಇರುವುದೇ ಅವರ ವ್ಯಕ್ತಿತ್ವದ ವಿಶೇಷ.

ಈಚಿನ ವರ್ಷಗಳಲ್ಲಿ ಗಾಂಧಿ ಮತ್ತು ಅಂಬೇಡ್ಕರರನ್ನು ಪರಸ್ಪರ ವಿರುದ್ಧ ನೆಲೆಗಳಲ್ಲಿ ನಿಲ್ಲಿಸಿ ನೋಡುವ ಹಾಗೂ ಆ ವ್ಯತಿಕರದಲ್ಲಿ ಗಾಂಧಿಗೆ ದಲಿತರ ಬಗ್ಗೆ ಇದ್ದ ಕಾಳಜಿ "ಅಷ್ಟರಲ್ಲೇ ಇತ್ತು" ಎಂಬಂತೆ ಬಿಂಬಿಸುತ್ತಿರುವುದನ್ನು ಗಮನಿಸಿಯೋ ಏನೋ, ಈ ಪುಸ್ತಕದ ಕೊನೆಯಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಮುಖಾಮುಖಿಯಾಗಿಸುವ ಒಂದು ದೃಶ್ಯವನ್ನು ರಾಗಂ ಅವರು ಸಂಯೋಜಿಸಿದ್ದಾರೆ. ಅದರಲ್ಲಿ ಅಂಬೇಡ್ಕರ್‌ರಿಗೆ ದೇಶದ ಬಗ್ಗೆ ಇರುವ ಅಪೂರ್ವ ಕಾಳಜಿ, ದಲಿತರ ಬಗೆಗಿನ ಕಕ್ಕುಲತೆ, ಅವರು ಶತಶತಮಾನಗಳಿಂದ ಅನುಭವಿಸಿರುವ ನೋವು, ಅಪಮಾನಗಳನ್ನು ಗಾಂಧಿಯನ್ನೂ ಒಳಗೊಂಡಂತೆ ಈ ದೇಶದ ಯಾರೊಬ್ಬರೂ ಮನಗಂಡಿಲ್ಲವೆಂಬ ಬಗ್ಗೆ ಅವರಿಗಿರುವ ಸಾತ್ವಿಕ ಸಿಟ್ಟನ್ನು ತೆರೆದು ತೋರುತ್ತಲೇ, ದಲಿತರ ದಾರುಣ ಪರಿಸ್ಥಿತಿಯ ಅರಿವಿದ್ದೂ ಅವರು ಬೃಹತ್ ಹಿಂದೂ ಸಮುದಾಯದಿಂದ ಹೊರಗಾಗಬಾರದೆಂಬ ವಿಷಯಕ್ಕೆ ಗಾಂಧಿಗಿದ್ದ ಕಳಕಳಿಯನ್ನು ಅಂಬೇಡ್ಕರ್ ಕಂಡುಕೊಂಡ ಬಗೆಯನ್ನು ಪರಿಣಾಮಕಾರಿಯಾಗಿ ತೆರೆದು ತೋರುವ ಸಮತೋಲನದ ಚಿತ್ರ ಇದಾಗಿದೆ. ಒಟ್ಟಾರೆ ಗಾಂಧಿ ಕುರಿತ ಅತ್ಯಂತ ಹೃದ್ಯವೂ ಆಪ್ತವೂ ಆದ ಈ ಬರಹ ಓದುಗರನ್ನು ಸೆರೆಹಿಡಿದು ನಿಲ್ಲಿಸುವಲ್ಲಿ ಯಶಸ್ವಿಯಾಗುತ್ತದೆ.

❖

11

ಈಶ್ವರ ಅಲ್ಲಾ ತೇರೋ ನಾಮ್

ಪ್ರಚಲಿತ ವಿದ್ಯಮಾನವೊಂದರ ವಸ್ತುನಿಷ್ಠ ಸಮಾಜಶಾಸ್ತ್ರೀಯ ಅಧ್ಯಯನ ಪ್ರಸ್ತುತ ಗ್ರಂಥ ಗುರು ದತ್ತಾತ್ರೇಯ- ಬಾಬಾ ಬುಡನ್‌ಗಿರಿ ದರ್ಗಾದ ವಿವಾದ ವನ್ನು ಕೇಂದ್ರವಾಗಿಟ್ಟುಕೊಂಡು ಒಟ್ಟಾರೆ ದರ್ಗಾ ಸಂಪ್ರದಾಯಗಳನ್ನು ಕುರಿತಂತೆ ನಡೆಸಿದ ವಸ್ತುನಿಷ್ಠ ಸಮಾಜಶಾಸ್ತ್ರೀಯ ಸಂಶೋಧನಾತ್ಮಕ ಅಧ್ಯಯನವಾಗಿದೆ.

ನಮ್ಮ ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನವೂ ಸೇರಿದಂತೆ ಮಾನವಿಕ ವಿಷಯಗಳಲ್ಲಿ ಪಿಎಚ್.ಡಿ ಪದವಿಗಾಗಿ ನಡೆಸಲಾಗುವ ಸಂಶೋಧನಾತ್ಮಕವೆಂದು ಹೇಳಲಾಗುವ ಬಹಳಷ್ಟು ಅಧ್ಯಯನಗಳು ಡಿಗ್ರಿಗಾಗಿಯೇ ಹೊರತು ಸಮಾಜದೊಂದಿಗೆ ಸಾವಯವ ಸಂಬಂಧ ಹೊಂದಿ ರುವುದಾಗಲಿ ಇಲ್ಲವೆ ಸಮಾಜಕ್ಕೆ ಪ್ರಯೋಜನ ಕರವಾಗಲಿ ಆಗಿರುವುದಿಲ್ಲ ಎಂಬ ಒಂದು ಸಾಮಾನ್ಯ ಆಕ್ಷೇಪವಿದೆ.

ಈಶ್ವರ ಅಲ್ಲಾ ತೇರೋ ನಾಮ್, ಡಾ. ಮಹೇಶ್ ಕುಮಾರ್ ಸಿ.ಎಸ್.
ಪುಟಗಳು: 240 ಬೆಲೆ: 200 ರೂ.
ಪ್ರಗತಿ ಗ್ರಾಫಿಕ್ಸ್, ನಂ.119, 3ನೇ ತಿರುವು, 8ನೇ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು

ಈ ಆಕ್ಷೇಪದಲ್ಲಿ ಬಹಳಷ್ಟು ಸತ್ಯವಿದೆ. ಇಂಥ ಸನ್ನಿವೇಶದಲ್ಲಿ ಪ್ರಸ್ತುತ ಪ್ರಬಂಧ ಆ ಆಕ್ಷೇಪವನ್ನು ಸುಳ್ಳು ಮಾಡುವ ರೀತಿಯಲ್ಲಿ ಪ್ರಚಲಿತ ಜ್ವಲಂತ ವಿವಾದವೊಂದರ ಮಗ್ಗುಲುಗಳೆಲ್ಲವನ್ನೂ ಕೂಲಂಕಷವಾದ ವಿಶ್ಲೇಷಣೆಗೆ ಒಳಪಡಿಸುವ ಉಪಕ್ರಮಕ್ಕೆ ಮೊದಲಿಟ್ಟಿದೆ.

ಪ್ರಸಿದ್ಧ ರಾಜಕೀಯ ಚಿಂತಕರಾದ ಎಂ. ಎನ್ ರಾಯ್ ಅವರು ತಮ್ಮ `Historical role of Islam' ಎಂಬ ವಿದಗ್ಧ ಕೃತಿಯಲ್ಲಿ ಜಗತ್ತಿನ ಯಾವುದೇ ಮುಸ್ಲಿಂ ರಾಷ್ಟ್ರಗಳಲ್ಲಿರುವುದಕ್ಕಿಂತ ಹೆಚ್ಚು ಮುಸ್ಲಿಮರು ನೂರಾರು ವರ್ಷಗಳಿಂದ ತಮ್ಮ ನೆರೆಮನೆಯಲ್ಲೇ ವಾಸಿಸುತ್ತಿದ್ದರೂ ಇಸ್ಲಾಂ ಬಗ್ಗೆ ಹಿಂದೂಗಳಿಗಿರುವ ಅಜ್ಞಾನ ಆಶ್ಚರ್ಯಕರ ಎನ್ನುತ್ತಾರೆ. ಬಹುಶಃ ಅವರು ಹಿಂದೂಗಳು ಮತ್ತು ಮುಸ್ಲಿಮರು ಬೆರೆತು ಪಾಲ್ಗೊಳ್ಳುವ ದರ್ಗಾಗಳ ಆಚರಣೆಯನ್ನು ಲೆಕ್ಕಕ್ಕೆ ತಂದುಕೊಂಡಿರಲಿಲ್ಲವೇನೋ ಎನಿಸುತ್ತದೆ. ಭಾರತದಲ್ಲಿ ದರ್ಗಾಗಳಲ್ಲಿ ಸಾಮಾನ್ಯವಾಗಿ ಹಿಂದೂ ಮತ್ತು ಮುಸಲ್ಮಾನರಿಬ್ಬರೂ ಪೂಜಾಚರಣೆಯಲ್ಲಿ ತೊಡಗಿಸಿಕೊಳ್ಳುವುದು ಸರ್ವೇ ಸಾಮಾನ್ಯ ವಾಗಿದೆ. ಅದರಂತೆ ಬಹಳ ಹಿಂದಿನಿಂದಲೂ ಬಾಬಾಬುಡನ್‌ಗಿರಿ ಪ್ರದೇಶದಲ್ಲಿರುವ ಗುರು ದತ್ತಾತ್ರೇಯ ಬಾಬಾಬುಡನ್ ದರ್ಗಾವನ್ನು ಗುರು ದತ್ತಾತ್ರೇಯ ಮತ್ತು ಸೂಫಿಸಂತ ಹಜರತ್ ದಾದ ಹಯಾತ್ ಮೀರ್ ಖಲಂಧರ್ ಈ ಇಬ್ಬರ ಜೊತೆಗೂ ಗುರುತಿಸಿ ಪೂಜೆ ಆಚರಣೆಗಳನ್ನು ನಡೆಸಿಕೊಂಡು ಬರಲಾಗುತ್ತಿತ್ತು. 1975ರವರೆಗೂ ಮುಜರಾಯಿ ಇಲಾಖೆಯ ಸುಪರ್ದಿನಲ್ಲಿದ್ದ ಈ ದರ್ಗಾವನ್ನು ಅದು ವಕ್ಫ್ ಆಸ್ತಿ ಎಂದು ಪರಿಗಣಿತವಾದ ಕಾರಣಕ್ಕೆ 1975ರಲ್ಲಿ ಅದರ ನಿರ್ವಹಣೆ ವಕ್ಫ್ ಆಡಳಿತಕ್ಕೆ ವರ್ಗಾವಣೆಯಾದದ್ದೇ ಹಿಂದುತ್ವ ವಾದಿಗಳು ಮತ್ತು ಮುಸಲ್ಮಾನರ ನಡುವಿನ ವಿವಾದಕ್ಕೆ ಕಾರಣವಾಗಿ ಕೋರ್ಟ್ ಕಟ್ಟೆ ಏರಿದಾಗ ಅದನ್ನು ಗುರುತಿಸಿದ ಕೋರ್ಟು 1975ಕ್ಕಿಂತ ಹಿಂದಿನ ಸ್ಥಿತಿಯನ್ನು ಕಾಯ್ದುಕೊಂಡು ಬರಲು ಆದೇಶಿಸಿದೆ.

ದರ್ಗಾವು ಹಿಂದೂ ಮುಸ್ಲಿಮ್ ಎರಡೂ ಕೋಮುಗಳು ಆಚರಣೆಯಲ್ಲಿ ಭಾಗವಹಿಸುವ ಸ್ಥಳವಾದ್ದರಿಂದ ಕರ್ನಾಟಕದ ಬೌದ್ಧಿಕ ವಲಯ ಅದನ್ನು ಸೆಕ್ಯುಲರಿಸಂನ ಜೀವಂತ ಪ್ರತೀಕವೆಂದು ಗುರುತಿಸಿದಂತೆಯೇ ಕೋರ್ಟು ಕೂಡ ತನ್ನ ಆದೇಶಕ್ಕೆ ಸೆಕ್ಯುಲರ್ ನೆಲೆಯ ಸಮರ್ಥನೆಯನ್ನೇ ನೀಡಿದೆ. ದರ್ಗಾದ ವಿವಾದವನ್ನು ತಗ್ಗಿಸಲೆಂದು ಮೊರೆಹೋದ ಮತ್ತು ಈಗಲೂ ಮೊರೆ ಹೋಗುತ್ತಿರುವ ಸೆಕ್ಯುಲರ್ ವಾದ ಹಾಗೂ ಹೀಗೆ ಇವನ್ನು ಸೆಕ್ಯುಲರ್ ನೆಲೆಯಲ್ಲಿ ನೋಡಲು ಅವಕಾಶ ಮಾಡಿಕೊಟ್ಟಿರುವ ಸಿಂಕ್ರೆಟಿಸಂ ಸಿದ್ಧಾಂತಗಳೇ ಸಕಲವಿವಾದಗಳ ಗಂಗೋತ್ರಿಯಾಗಿರುವುದು ಎಂಬುದೇ ಪ್ರಬಂಧಕಾರರ

ಬಹುಮುಖ್ಯ ಪ್ರಮೇಯ. ತಮ್ಮ ಪ್ರಬಂಧದ ಈ ಕೇಂದ್ರ ಪ್ರಶ್ನೆಯನ್ನು ವಿಸ್ತೃತವಾದ ಪರಿಪ್ರೇಕ್ಷ್ಯದಲ್ಲಿಟ್ಟು ಹಲವು ನೆಲೆ, ಮಗ್ಗುಲುಗಳಿಂದ ವಿಶ್ಲೇಷಣೆಗೆ ಒಳಪಡಿಸುತ್ತ ಸಾಗುವ ರೀತಿಯೇ ನಮ್ಮನ್ನು ಬೆರಗುಗೊಳಿಸುತ್ತದೆ.

ಇದರಲ್ಲಿ ಅವರು ಚರ್ಚೆಗೆ ಎತ್ತಿಕೊಂಡಿರುವ ಸಂಗತಿಗಳು ಹಲವು: ಒಬ್ಬ ದೇವರು, ಒಬ್ಬ ಸಂಸ್ಥಾಪಕ ಅಥವಾ ಪ್ರವಾದಿ, ಒಂದು ಧರ್ಮಗ್ರಂಥ, ಒಂದು ಡಾಕ್ಟ್ರೀನ್ ಮತ್ತು ಅದನ್ನು ಕಟ್ಟುನಿಟ್ಟಾಗಿ ಅನುಸರಿಸುವ ಒಂದು ಕ್ರೀಡ್ ಎಂದು ಸ್ಪಷ್ಟವಾಗಿ ಗುರುತಿಸಲಾಗುವ ಕ್ರಿಶ್ಚಿಯನ್, ಜುಡಾಯಿಸಂ ಮತ್ತು ಇಸ್ಲಾಮ್ ಮೊದಲಾದ ಸೆಮೆಟಿಕ್ ರಿಲಿಜನ್ನುಗಳಂತೆ ಭಾರತದ ಧಾರ್ಮಿಕ ಸಂಪ್ರದಾಯಗಳಾದ ಹಿಂದೂ, ಜೈನ ಮತ್ತು ಬೌದ್ಧಗಳು– ಇಲ್ಲ ಮತ್ತು ಅವು ರಿಲಿಜನ್ನುಗಳಲ್ಲ ಎಂಬುದು ಅವರ ಅತ್ಯಂತ ಪ್ರಮುಖ ಸಿದ್ಧಾಂತ. ಇದನ್ನು ಹಲವು ನೆಲೆಗಳಿಂದ ಮನದಟ್ಟು ಮಾಡಿಕೊಡುವ ಪ್ರಯತ್ನವಿದೆ. 'ಸಿಂಕ್ರೆಟಿಸಂ' ಎಂದರೆ ಎರಡು ವಿಭಿನ್ನ ಅಥವಾ ವಿರುದ್ಧವಾದ ರಿಲಿಜನ್ನುಗಳ ತತ್ವ ಆಚರಣೆಗಳ ಕೊಡು–ಕೊಳ್ಳುವಿಕೆ. ಅರ್ಥಾತ್ ಹೈಬ್ರಿಡೈಜೇಷನ್ ಅಥವಾ ಸಮ್ಮಿಶ್ರ . ನಮ್ಮಲ್ಲಿ ಇದನ್ನು ಸಮನ್ವಯವೆಂದು ಹೇಳಿಕೊಂಡು ಬರಲಾಗಿದೆ. ಚೋದ್ಯದ ಸಂಗತಿಯೆಂದರೆ ಕ್ರಿಶ್ಚಿಯಾನಿಟಿ ಮತ್ತು ಇಸ್ಲಾಂಗಳು ಯಾವುದೇ ರೀತಿಯ ಸಿಂಕ್ರೆಟಿಸಂ ಅನ್ನು ಮಾನ್ಯ ಮಾಡುವುದಿಲ್ಲ. ಅಷ್ಟೇ ಅಲ್ಲ, ವಿರೋಧಿಸುತ್ತವೆ. ಅದು ಪಾಪವೆಂದೇ ಅವುಗಳ ನಂಬಿಕೆ.

ದರ್ಗಾದಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಭಾಗವಹಿಸುತ್ತಾರೆಂಬುದನ್ನು ಬಿಟ್ಟರೆ ಅವರುಗಳು ನಡೆಸುವ ಆಚರಣೆಗಳಲ್ಲಿ ಎರಡು ವಿಭಿನ್ನ ಧರ್ಮಗಳ ಅಂಶಗಳು ಮತ್ತು ಆಚರಣೆಗಳು ಬೆರೆತು ಎರಡರ ಅಂಶಗಳನ್ನೂ ಒಳಗೊಂಡು ಎರಡೂ ಅಲ್ಲದ ಮೂರನೆಯದಾದ ಪ್ರತ್ಯೇಕವಾದ ಸಿಂಕ್ರೆಟಿಕ್ ಎನ್ನುವಂಥ ರಿಲಿಜನ್ ಅಸ್ತಿತ್ವಕ್ಕೆ ಬರಲು ಕಾರಣವಾಗಿದೆ ಮತ್ತು ಬಂದಿದೆ ಎಂದು ಹೇಳುವಂತಿಲ್ಲ ಎಂಬುದನ್ನು ಅನೇಕ ಆಧಾರಗಳನ್ನು ಕೊಟ್ಟು ಲೇಖಕರು ಸಿದ್ಧಮಾಡಿದ್ದಾರೆ. ಮುಖ್ಯವಾಗಿ ವ್ಯಾಪಕ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ದರ್ಗಾದ ಆಚರಣೆಯಲ್ಲಿ ಪಾಲ್ಗೊಳ್ಳುವ ಹಿಂದೂ ಮತ್ತು ಮುಸ್ಲಿಮರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಅದರ ಆಧಾರದ ಮೇಲೆ ಈ ತೀರ್ಮಾನಕ್ಕೆ ಅವರು ಬಂದಿರುವುದು ಎನ್ನುವುದು ಮುಖ್ಯವಾದ ಮಾತು.

ತಮ್ಮ ಈ ಪ್ರಬಂಧಕ್ಕೆ ಆಧಾರ ಸಿದ್ಧಾಂತವಾಗಿ ಸ್ವೀಕರಿಸಿರುವುದು ಪ್ರಸಿದ್ಧ ಅಂತಾರಾಷ್ಟ್ರೀಯ ಸಮಾಜ ವಿಜ್ಞಾನಿಯಾದ ಎಸ್.ಎನ್. ಬಾಲಗಂಗಾಧರರ ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನದ ಚಿಂತನೆಯ ಚೌಕಟ್ಟು, ಅದೆಂದರೆ ಪಶ್ಚಿಮವು ತನ್ನ ಅನುಭವದ ಮೂಲಕವೇ, ತನ್ನ ಪರಿಭಾಷೆಗಳ ಮೂಲಕವೇ ಅನ್ಯ ಸಂಸ್ಕೃತಿಗಳನ್ನು ಚಿತ್ರಿಸಿದುದರ

ಪರಿಣಾಮವಾಗಿ ಜಗತ್ತಿನ ಬೇರೆ ಬೇರೆ ಸಂಸ್ಕೃತಿಗಳು ಐರೋಪ್ಯರ ಕನ್ನಡಕದ ಮೂಲಕವೇ ತಮ್ಮನ್ನು ನೋಡಿಕೊಳ್ಳುವ ಪರಿಸ್ಥಿತಿ ಉಂಟಾಯಿತು. ಅವರ ಚೌಕಟ್ಟನ್ನು ರೂಪಿಸುವಲ್ಲಿ ಕ್ರಿಶ್ಚಿಯಾನಿಟಿ ಎಂಬ ರಿಲಿಜನ್ನು ಮಹತ್ವದ ಪಾತ್ರ ವಹಿಸಿದೆ ಎಂಬುದು. ಅದನ್ನು ಬಿಟ್ಟುಕೊಟ್ಟು ನಮ್ಮ ಅನುಭವಗಳ ಮೂಲಕವೇ ನಮ್ಮ ಸಂಸ್ಕೃತಿಗಳನ್ನು ಅರ್ಥೈಸಿಕೊಳ್ಳುವುದು ಮತ್ತು ವ್ಯಾಖ್ಯಾನಿಸಿಕೊಳ್ಳುವುದು ಆಗಬೇಕು ಎಂಬುದು ಅದರ ಮುಖ್ಯ ಪ್ರಮೇಯ.

ದರ್ಗಾದ ವಿದ್ಯಮಾನವನ್ನು ಅದರ ಭಕ್ತರ ಅನುಭವದಲ್ಲಿ ಅಂದರೆ ಅದರ ನೈಜತೆಯಲ್ಲಿ ವಿವರಿಸುವ ನಿಟ್ಟಿನಲ್ಲಿ ಪ್ರಬಂಧಕಾರರು ವ್ಯಾಪಕವಾದ ಕ್ಷೇತ್ರಕಾರ್ಯ ನಡೆಸಿರುವುದು ಪ್ರಶಂಸನೀಯ.

ಬಾಲಗಂಗಾಧರರ ವಾದದ ಬಗ್ಗೆ ಇರುವ ಒಂದು ತಪ್ಪು ಕಲ್ಪನೆಯಾದ "ಇದು ಬಲಪಂಥೀಯ ಸಂಘ–ಪರಿವಾರದ ಅಥವಾ ಹಿಂದು ಹಕ್ಕಿನ ವಿಚಾರವನ್ನು ಬಲಪಡಿಸುವ ಹುನ್ನಾರವನ್ನು ಹೊಂದಿದೆ" ಎಂಬ ಮಿಥ್ಯೆಯನ್ನು ಅಲ್ಲಗಳೆಯುತ್ತದೆ ಎಂದು ಲೇಖಕರು ಹೇಳುತ್ತಾರೆ.

ಸೂಫಿಗಳಿಗೆ, ಫಕೀರರುಗಳಿಗೆ ಮತ್ತು ಅವರುಗಳ ಗೋರಿಗಳಿಗೆ ತಮ್ಮ ಆಚರಣೆಗಳನ್ನು ನಡೆಸುವುದರ ಮೂಲಕ ದರ್ಗಾದ ಆಚರಣೆಯನ್ನು ರೂಢಿಗೆ ತಂದ ಜನರು ಭಾರತೀಯ ಸಂಪ್ರದಾಯಕ್ಕೆ ಸೇರಿದ ಜನರೇ. ಭಾರತೀಯ ಸಂಪ್ರದಾಯದ ಕ್ರಿಯಾಶೀಲತೆಯೇ ದರ್ಗಾದ ಸಂಪ್ರದಾಯವನ್ನು ಹುಟ್ಟುಹಾಕಿತು. ದರ್ಗಾಕ್ಕೆ ಹೋಗುವ ಭಾರತೀಯರು ದೇಗುಲಗಳಿಗೆ ಹೋಗಿ ಪೂಜೆ ಸಲ್ಲಿಸುವ ರೀತಿಯಲ್ಲಿಯೇ ಪೂಜೆ ಸಲ್ಲಿಸುತ್ತಾರೆ. ಅವರು ತಮ್ಮ ದೇವರಿಗೂ ಸಂತನಿಗೂ ಅಲ್ಲಾನಿಗೂ ವ್ಯತ್ಯಾಸವನ್ನು ಕಾಣುವುದಿಲ್ಲ. ಅದು ಸಿಂಕ್ರೆಟಿಸಂನ ವಿದ್ಯಮಾನವಾಗಿರದೆ ಯಲ್ಲಮ್ಮ , ರಾಘವೇಂದ್ರ ಸ್ವಾಮಿ ಅಯ್ಯಪ್ಪದಂಥದೇ ಇನ್ನೊಂದು ವಿದ್ಯಮಾನ ಎಂಬುದು. ಆದರೆ ಅಲ್ಲಾನ ಹೊರತು ಬೇರೆ ಯಾರಿಗೂ ತಲೆಬಾಗಬಾರದೆಂಬ ತತ್ವ ಪಾಲಿಸುವ ಮುಸ್ಲಿಮರು ದರ್ಗಾದಲ್ಲಿ ಸೂಫಿ ಸಂತನಿಗೆ ತಮ್ಮ ಪರವಾಗಿ ಅಲ್ಲಾನಲ್ಲಿ ಪ್ರಾರ್ಥಿಸಬೇಕೆಂದು ಕೋರಲು ಹೋಗುತ್ತಾರೆಯೇ ಹೊರತು ಅವನಿಗೆ ತಲೆಬಾಗಲು ಅಲ್ಲ. ಆದ್ದರಿಂದ ದರ್ಗದಲ್ಲಿ ಹಿಂದು ಮುಸ್ಲಿಮರಿಬ್ಬರೂ ಸಮಾನವಾಗಿಯೇ ಭಾಗವಹಿಸಿದರೂ ಆಚರಣೆಗಳು ಮತ್ತು ಧೋರಣೆಗಳಲ್ಲಿ ಇಬ್ಬರಲ್ಲೂ ಭಿನ್ನತೆ ಇದೆ.

ರಿಲಿಜನ್ ಮತ್ತು ಸಂಪ್ರದಾಯಗಳ ನಡುವಿನ ದೊಡ್ಡ ವ್ಯತ್ಯಾಸವೆಂದರೆ ಸಂಪ್ರದಾಯದಲ್ಲಿ ಯಾವುದೇ ಅನ್ಯ ರಿಲಿಜನ್ ಇಲ್ಲವೆ ಸಂಪ್ರದಾಯವನ್ನು ಅಲ್ಲಗಳೆಯುವುದಾಗಲಿ ಸುಳ್ಳು

ಎಂದು ಹೇಳುವುದಾಗಲಿ ಇಲ್ಲವೇ ಇಲ್ಲ. ಬದಲಿಗೆ ತನ್ನದರಂತೆಯೇ ಅದೂ ಒಂದು ಸಂಪ್ರದಾಯ ಅಥವಾ ನಂಬಿಕೆ ಎಂದೇ ಭಾವಿಸಲಾಗುತ್ತದೆ. ಅಲ್ಲಾಹ್ ಅಥವಾ ಏಸುವನ್ನು ತನ್ನ ಸಂಪ್ರದಾಯದ ದೈವಗಳಾದ ಈಶ್ವರ ಅಥವಾ ಕೃಷ್ಣನೊಂದಿಗೆ ಸಮೀಕರಿಸಿಕೊಳ್ಳುವುದು ಅದಕ್ಕೇನೂ ಕಷ್ಟವಲ್ಲ– ಬಾಪೂಜಿಯವರ ಪ್ರಿಯವಾದ ಪ್ರಾರ್ಥನಾ ಪದ್ಯದ "ಈಶ್ವರ ಅಲ್ಲಾ ತೇರೋ ನಾಮ್" ಎಂಬ ಸಾಲಿನಲ್ಲಿರುವಂತೆ. ಆದರೆ ರಿಲಿಜನ್‌ಗಳ ಸಂದರ್ಭದಲ್ಲಿ ಹೀಗಲ್ಲ. ಬದಲಿಗೆ ತನ್ನದೇ ರಿಲಿಜನ್ನಿನ ಮತ್ತೊಂದು ಶಾಖೆಯ ಅಥವಾ ಇನ್ನೊಂದು ಸಂಪ್ರದಾಯದ ಅರ್ಥ ನಿರೂಪಣೆಯನ್ನು ತಪ್ಪು ಎಂದು ತಿಳಿಯುವುದೇ ರಿಲಿಜನ್ನಿನ ರೀತಿ.

ದರ್ಗಾಗಳು ಸೌಹಾರ್ದದ ಸ್ಥಳಗಳೆಂದೇನೂ ಅಲ್ಲ. ದರ್ಗಾದ ಆಚರಣೆಗಳಿಗೂ ಸೂಫಿಗಳಿಗೂ ಸಂಬಂಧವಿಲ್ಲ.

ಇಸ್ಲಾಂಗೆ ಭಾರತೀಯ ಸಂಪ್ರದಾಯಗಳು ನೀಡಿದ ಕ್ರಿಯಾಶೀಲತೆಯ ಪರಿಣಾಮವಾಗಿ ದರ್ಗಾದ ಆಚರಣೆ ಹುಟ್ಟಿಕೊಂಡಿತು. ಸೂಫಿಸಂ ಇಸ್ಲಾಮಿಗಿಂತ ಭಿನ್ನವಲ್ಲ. ದರ್ಗಾದ ಆಚರಣೆಯು ಯಾವುದೋ ಒಂದು ಇಲ್ಲವೆ ಎರಡು ರಿಲಿಜನ್‌ಗಳ ಆಚರಣೆಯೂ ಅಲ್ಲ. ಅದು ಸಿಂಕ್ರೆಟಿಸಂನ ವಿದ್ಯಮಾನವಲ್ಲ. ಹೀಗೆಲ್ಲ ವಾದ ಮಂಡಿಸುತ್ತ ಹಿಂದೂಯಿಸಂ ರಿಲಿಜನ್ ಅಲ್ಲವೆಂದು ಸಾಧಿಸುವ ಕಾರಣ ಸೆಕ್ಯುಲರ್ ತತ್ವದ ಪರಿಸರದಲ್ಲಿ ಇನ್ನೊಂದು ರಿಲಿಜನ್ನಿನ ಹಕ್ಕುಗಳ ಹಿನ್ನೆಲೆಯಲ್ಲಿ ಅದನ್ನು ರಕ್ಷಿಸಬೇಕಾದ ಹೊಣೆ ಹೊತ್ತಿರುವ ಹಿಂದುತ್ವ ವಾದಿಗಳಿಗೆ ನೆಲೆಯೇ ಇಲ್ಲದಂತಾಗುತ್ತದೆಂಬುದು ಪ್ರಸ್ತುತ ಪ್ರಬಂಧಕಾರರ ಮತ್ತು ಅವರ ತಾತ್ವಿಕತೆಯ ರೂವಾರಿಗಳ ಆಧಾರ ಕಲ್ಪನೆ (hypothesim) ಸಿದ್ಧಾಂತ. ಆದರೆ ಅಂತಿಮವಾಗಿ ಬಾಬಾ ಬುಡನ್‌ಗಿರಿ ವಿವಾದಕ್ಕೆ ಇದು ಪರಿಹಾರವನ್ನೇನೂ ಸೂಚಿಸಿಲ್ಲ. ಅಥವಾ ಅದರ ಉದ್ದೇಶವೂ ಅದಲ್ಲ.

ಆದರೆ ಇಲ್ಲಿ ಮರೆಯಬಾರದ ಸಂಗತಿಯೆಂದರೆ ಸೆಮೆಟಿಕ್ ರಿಲಿಜನ್‌ಗಳು ಹೇಳುವಂಥ ರಿಲಿಜನ್ ನಮ್ಮಲ್ಲಿ ಇಲ್ಲವೆಂದೇ ಅಂಗೀಕರಿಸಿದರೂ ನಮ್ಮಲ್ಲಿ ಸಹಸ್ರಾರು ವರ್ಷಗಳಿಂದ ಅಸ್ತಿತ್ವ ದಲ್ಲಿದ್ದು ಅರ್ಥಪೂರ್ಣವಾಗಿ ಬಳಕೆಯಾಗುತ್ತಲೇ ಇರುವ ಅನೇಕಾರ್ಥಗಳಿಂದ ಕೂಡಿದ ಮತ್ತು ವಿಶಾಲಾರ್ಥದ 'ಧರ್ಮ' ಎಂಬ ಪದವನ್ನು ಚರ್ಚೆಗೆ ಒಳಪಡಿಸದೆ ಪೂರ್ತಿಯಾಗಿ ಕಡೆಗಣಿಸಿರುವುದು. ಪ್ರಬಂಧಕಾರರು ಮತ್ತು ಅವರ ಸೈದ್ಧಾಂತಿಕ ತಳಹದಿಗೆ ಕಾರಣರಾದ ಬಾಲಗಂಗಾಧರರು ಹೇಳುವಂತೆ ಹಿಂದೂ ಎನ್ನುವುದು ಒಂದು ರಿಲಿಜನ್ ಅಲ್ಲ ಎಂದೇ ಇಟ್ಟುಕೊಂಡರೂ ಈ ದೇಶದಲ್ಲಿ ಇರುವ ಸೆಮೆಟಿಕ್ ಮತ್ತು ಇನ್ನಿತರೆ ರಿಲಿಜನ್ನುಗಳಿಂತ ಭಿನ್ನವಾದ; ನೂರಾರು ಜಾತಿ, ಪಂಗಡಗಳನ್ನು ಒಳಗೊಂಡಿದ್ದೂ

ಸಾವಿರಾರು ವರ್ಷಗಳಿಂದ ಎಲ್ಲರಿಗೂ ಸಮಾನವಾದ ಕೆಲವೊಂದು ನಂಬಿಕೆಗಳು ಆಚರಣೆಗಳು ತತ್ವ ಸಿದ್ಧಾಂತಗಳು ಗ್ರಂಥಗಳು ಮತ್ತು ಪೂಜಾಸ್ಥಾನಗಳನ್ನು ಹೊಂದಿದ್ದು ಅದರಂತೆ ಬದುಕು ಸಾಗಿಸುತ್ತ ಬಂದಿರುವ ಬಹುಸಂಖ್ಯಾತ ಸಮುದಾಯವೊಂದು ಇರುವುದಂತೂ ನಿಜ. ಇಂಥದನ್ನು ಒಳಗೊಳ್ಳುವ ಮತ್ತು ವಿವರಿಸುವ ಸಲುವಾಗಿಯೇ ರಿಲಿಜನ್ ಅನ್ನು ಅತ್ತ ಸರಿಸಿ ನಮ್ಮ ಸಂದರ್ಭದಲ್ಲಿ ರೂಢಮೂಲವಾಗಿರುವ 'ಧರ್ಮ' ಎಂಬ ಶಬ್ದವನ್ನೇ ಇದನ್ನೂ ಒಳಗೊಳ್ಳುವ ರೀತಿಯಲ್ಲಿ ವ್ಯಾಖ್ಯಾನಿಸುವ ಮತ್ತು ರಿಲಿಜನ್ನಿನ ಅರ್ಥಕ್ಕಿಂತ ಇದು ಬೇರೆಯಾದ್ದು ಎಂದು ಹೇಳುವುದನ್ನು ಚಾಲ್ತಿಗೆ ತರಬೇಕು. ಅದು ಬಿಟ್ಟು ಪ್ರಚ್ಛನ್ನವಾಗಿಯೋ ಪ್ರಕಟವಾಗಿಯೋ ಹಿಂದೂ ಎಂಬುದನ್ನು ವಿರೋಧಿಸುವ ಮತ್ತು ಹಿಂದೂ ವ್ಯಾಪ್ತಿಯಲ್ಲೇ ಇದ್ದುಕೊಂಡೂ ಅದನ್ನು ಖಂಡಿಸುವ ಇಲ್ಲವೇ ವಿರೋಧಿಸುವ ಸಲುವಾಗಿ 'ಹಿಂದೂ' ಒಂದು ಧರ್ಮವೇ ಅಲ್ಲ ಎಂದು ಹೀಗಳೆಯುವ ಹುಸಿ ಜಾತ್ಯತೀತವಾದಿಗಳನ್ನು ಸಮರ್ಥಿಸುವ ರೀತಿಯಲ್ಲಿ ಹೇಳುವುದಲ್ಲ.

ಒಟ್ಟಾರೆ ಈ ಸಂಶೋಧನಾತ್ಮಕ ಬರಹ ದರ್ಗಾದ ಆಚರಣೆಯನ್ನು ವಿಶ್ಲೇಷಿಸುತ್ತಲೇ ನಮ್ಮ ಸಂದರ್ಭದ ಸೆಕ್ಯುಲರ್ ಸಿದ್ಧಾಂತವನ್ನು ಕೂಡ ಪ್ರಬಲವಾದ ಪರೀಕ್ಷೆಗೆ ಒಳಪಡಿಸುತ್ತ ಸಾಗುತ್ತದಾದರೂ ಅದಕ್ಕೆ ಪರ್ಯಾಯವನ್ನೇನೂ ಸೂಚಿಸಿಲ್ಲ. ಅದು ಪ್ರಸ್ತುತವಲ್ಲ ಎಂಬುದೇ ಅವರ ವಾದವೆನಿಸುತ್ತದೆ. ಹಾಗಾಗಿ ಸೆಕ್ಯುಲರಿಸಂ ಮೂಲತಃ ಯಾವ ಪರಿಸರದಲ್ಲಿ ಹೇಗೇ ಹುಟ್ಟಿದ್ದರೂ ಹಾಗೂ ಪ್ರಸ್ತುತ ನಮ್ಮ ದೇಶದಲ್ಲಿ ಚುನಾವಣೆ ಮತ್ತು ರಾಜಕೀಯ ಅಧಿಕಾರದ ಮೇಲೆಯೇ ಕಣ್ಣಿಟ್ಟಿರುವ ರಾಜಕೀಯ ಪಕ್ಷಗಳು ಅಲ್ಪಸಂಖ್ಯಾತ ರಿಲಿಜನ್‌ಗಳನ್ನು ಮತ್ತು ಜಾತಿಗಳನ್ನು ಓಲೈಸುವುದೇ ಸೆಕ್ಯುಲರಿಸಂ ಎಂಬಂತೆ ನಡೆದುಕೊಳ್ಳುತ್ತಿರುವುದು ನಿಜವೇ ಆದರೂ ಇನ್ನಾದರೂ ವಿವೇಕದ ಮೇಲ್ಪ್ಟು ಆಗಿ ಬಹು ರಿಲಿಜನ್‌ಗಳು, ಸಂಪ್ರದಾಯಗಳು ಮತ್ತು ಆಚರಣೆಗಳ ಜನರಿಂದ ಇಡಿಕಿರಿದ ಈ ದೇಶದಲ್ಲಿ ಸೆಕ್ಯುಲರಿಸಂ ಅನ್ನು ಅದರ ನಿಜವಾದ ಅರ್ಥದಲ್ಲಿ ಅಂದರೆ ಸರ್ಕಾರ ಯಾವುದೇ ರಿಲಿಜನ್ ಅಥವಾ ಸಂಪ್ರದಾಯದ ಪರ ಅಥವಾ ವಿರೋಧವಾಗಿಯೂ ನಿಲ್ಲದಂತೆ ನಿರ್ಲಿಪ್ತವಾಗಿರುವುದನ್ನು ಅನುಷ್ಠಾನಕ್ಕೆ ತರುವುದನ್ನು ಬಿಟ್ಟು ಅನ್ಯ ಮಾರ್ಗವಿಲ್ಲ.ವೆಂಬಂತಾಗಬೇಕು. ಅದೇ ಧರ್ಮವಾಗಬೇಕು.

ಅತ್ಯಂತ ಪ್ರೌಢವಾದ ರೀತಿಯಲ್ಲಿ, ವ್ಯಾಪಕ ಕ್ಷೇತ್ರಕಾರ್ಯದ ಅನುಭವಗಳ ಮತ್ತು ಓದಿನ ಆಧಾರದ ಮೇಲೆ ತಮ್ಮ ವಾದಗಳನ್ನು ಸಮರ್ಥವಾಗಿ ಮತ್ತು ಸಕಾರಣವಾಗಿ ಮಂಡಿಸುತ್ತ ಸಾಗುವ ಲೇಖಕರ ಈ ಬರಹವನ್ನು ಅವರ ಕೆಲವೊಂದು ವಿಚಾರಗಳನ್ನು ವಿರೋಧಿಸುವವರು ಕೂಡ ಮೆಚ್ಚದಿರುವುದು ಸಾಧ್ಯವಿಲ್ಲ. ತಮ್ಮ ವಿಚಾರಗಳನ್ನು ಸ್ಪಷ್ಟಪಡಿಸುವ ನಿಟ್ಟಿನಲ್ಲಿ ಆಗಿರುವ ಕೆಲವು ಪುನರುಕ್ತಿಗಳನ್ನು ತಪ್ಪಿಸಬಹುದಿತ್ತು.

❖

12

ಜನಪದ ರಮ್ಯ ಕಥಾನಕಗಳು

ಕಥೆ ಹೇಳುವುದು ಕೇಳುವುದು ಮನಷ್ಯನ ಹುಟ್ಟಿನೊಂದಿಗೇ ಹುಟ್ಟಿಕೊಂಡಿತೆಂದು ತೋರುತ್ತದೆ. ಎಲ್ಲ ಕಥೆಗಳ ಮೂಲ ಮತ್ತು ಗಮ್ಯ ಮನುಷ್ಯನೇ. ಒಂದು ರೀತಿಯಲ್ಲಿ ಕಥೆಗಳೆಂದರೆ, ಮನುಷ್ಯನ, ಮನುಷ್ಯನಿಂದ ಮತ್ತು ಮನುಷ್ಯನಿಗಾಗಿ ಇರುವ ಚರಿತೆಗಳೆಂದೇ ಸ್ಥೂಲವಾಗಿ ಸೂತ್ರೀಕರಿಸಿಬಿಡಬಹುದು. ನಮ್ಮ ದೇಶವಂತೂ ಅನಾದಿ ಕಾಲದಿಂದಲೂ ಕಥೆಗಳಿಗೆ ಹೆಸರಾದ ದೇಶ. ಯಾವ ದೇಶದಲ್ಲೇ ಆದರೂ ಮೊದಲು ಹುಟ್ಟುವುದೇ ಜನಪದ ಸಾಹಿತ್ಯ. ರಾಮಾಯಣ ಮಹಾಭಾರತಗಳಾದರೂ ಮೊದಲಿಗೆ ಜನಪದರಲ್ಲೇ ಕಥಾ ರೂಪದಲ್ಲಿ ಪ್ರಚತಲಿತವಿದ್ದು ಆನಂತರದಲ್ಲಿ ಅವು ವಾಲ್ಮೀಕಿ ವ್ಯಾಸರೆಂಬ ಮಹಾ ಮನಸ್ಸುಗಳಿಂದಾಗಿ

ಜನಪದ ರಮ್ಯ ಕಥಾನಕಗಳು ಜನಪದ ಕಥೆಗಳ ಸೊಗಸಾದ ಸಂಗ್ರಹ.
ಸಂಪಾದಕರು : ಡಾ. ಹನೂರು ಕೃಷ್ಣಮೂರ್ತಿ
ಪ್ರಕಾಶಕರು – ಮನೋಹರ ಗಂಥ್ರಮಾಲೆ ಧಾರವಾಡ

ಕಾವ್ಯದ ರೂಪವನ್ನು ಪಡೆದು ಕೊಂಡಿರಬೇಕೆಂದು ವಿದ್ವಾಂಸರ ಊಹೆ. ಜನಪದ ಕಥೆಗಳಾದರೂ ಅಷ್ಟೆ. ಪೈಶಾಚಿ ಭಾಷೆಯ ಗುಣಾಢ್ಯನ 'ಬೃಹತ್ ಕಥೆ' ಕಥೆಗಳ ಗಂಗೋತ್ರಿ ಎನ್ನಬಹುದು. ಅದು ಜನಪದರ ಭಾಷೆಯಲ್ಲಿ ರಚಿತವಾದ ಕೃತಿ. ಆದರೆ ಇಂದು ಅದು ಮೂಲ ರೂಪದಲ್ಲಿ ಸಿಗುತ್ತಿಲ್ಲ. ಅದರ ಭಾಷೆಯೂ ಎಂದೋ ಮರೆಯಾಗಿ ಹೋಯಿತು. ಸೋಮದೇವನ ಕಥಾಸರಿತ್ಸಾಗರ, ಕ್ಷೇಮೇಂದ್ರನ ಬೃಹತ್ಕಥಾಮಂಜರಿ ಮತ್ತು ಬುಧಸ್ವಾಮಿಯ ಬೃಹತ್ಕಥಾಶ್ಲೋಕಸಂಗ್ರಹಗಳು ಗುಣಾಢ್ಯನ ಬೃಹತ್ಕಥೆಯ ಸಂಸ್ಕೃತ ರೂಪಗಳನ್ನು ಒಳಗೊಂಡಿವೆ. ಬೃಹತ್ಕಥೆಯಷ್ಟೇ ಜನಪ್ರಿಯವೂ ಪ್ರಸಿದ್ಧವೂ ಆದ ಮತ್ತೊಂದು ಬೃಹತ್ಕಥಾ ಗುಚ್ಛವೆಂದರೆ ಪಂಚತಂತ್ರ . ಸಂಸ್ಕೃತದಲ್ಲಿ ವಿಷ್ಣುಶರ್ಮನ ಪಂಚತಂತ್ರ ಮತ್ತು ವಸುಭಾಗಭಟ್ಟನ ಪಂಚತಂತ್ರಗಳೆಂಬ ಎರಡು ಪರಂಪರೆಗಳಿವೆ. ಆದರೆ ತುಂಬ ಜನಪ್ರಿಯವೂ ಪ್ರಸಿದ್ಧವೂ ಆಗಿರುವ ಪರಂಪರೆ ವಿಷ್ಣುಶರ್ಮನ ಪಂಚತಂತ್ರ. ವಸುಭಾಗಭಟ್ಟನ ಪಂಚತಂತ್ರ ಈಗ ಲಭ್ಯವಿಲ್ಲ. ಇದರಲ್ಲಿ ಕನ್ನಡಿಗರು ಹೆಮ್ಮೆ ಪಟ್ಟುಕೊಳ್ಳಬಹುದಾದ ಸಂಗತಿಯೊಂದಿದೆ. ಅದೆಂದರೆ ಸಂಸ್ಕೃತದಲ್ಲಿ ವಸುಭಾಗಭಟ್ಟನ ಪಂಚತಂತ್ರದ ಪರಂಪರೆಯೊಂದಿತ್ತು ಎಂದು ಜಗತ್ತಿಗೆ ತಿಳಿದು ಬಂದದ್ದೇ ಕನ್ನಡದ ಪ್ರಸಿದ್ಧಕವಿಯಾದ ದುರ್ಗಸಿಂಹನ ಪಂಚತಂತ್ರದಿಂದ. ಕಾರಣ ಅವನು ಕನ್ನಡಕ್ಕೆ ಅನುವಾದಿಸಿರುವುದು ವಸುಭಾಗಭಟ್ಟನ ಪಂಚತಂತ್ರವನ್ನು. ಪಂಚತಂತ್ರದ ಕಥೆಗಳ ಬೇರೆ ಬೇರೆ ರೂಪಗಳು ಜಗತ್ತಿನಾದ್ಯಂತ ಚದುರಿಹೋಗಿವೆ. ಇದರ ಪರಿಣಾಮ ಎಷ್ಟೆಂದರೆ ಜಗತ್ತಿನ ಎಲ್ಲ ಜನಪದಕಥೆಗಳಿಗೂ ಭಾರತವೇ ಮೂಲ ಎಂದು ಥಿಯೋಡೊರ್ ಬೆನ್ಫೆ ಎಂಬ ವಿದ್ವಾಂಸ ಸಿದ್ಧಾಂತಮಾಡುವಷ್ಟು. ಅದು ಸರ್ವಸಮ್ಮತವಲ್ಲದಿದ್ದರೂ ಜನಪದಕಥೆಗಳ ಉಗಮ ಕೇಂದ್ರಗಳಲ್ಲಿ ಭಾರತ ಒಂದು ಪ್ರಮುಖ ಕೇಂದ್ರವೆಂಬುದು ನಿಸ್ಸಂದೇಹ.

ಜನರ ಕುತೂಹಲವನ್ನು ಅನನ್ಯ ರೀತಿಯಲ್ಲಿ ತಣಿಸುವುದರ ಜೊತೆಗೆ ಕಷ್ಟಕಾರ್ಪಣ್ಯ, ಬೇನೆ ಬೇಸರುಗಳಿಂದ ತುಂಬಿದ ಬದುಕಿನಿಂದ ಅವರಿಗೆ ಸ್ವಲ್ಪಮಟ್ಟಿಗಾದರೂ ಬಿಡುಗಡೆಯನ್ನು ನೀಡಿ ಮನರಂಜನೆಯನ್ನು ನೀಡುವ ಕಥೆಗಳನ್ನು ಗ್ರಾಮೀಣ ಜನರು ಅಪಾರವಾಗಿ ಇಷ್ಟಪಡುವುದರಲ್ಲೇನೂ ಆಶ್ಚರ್ಯವಿಲ್ಲ. ಈ ಕಥೆಗಳಲ್ಲಿ ಬರುವ ವ್ಯಕ್ತಿಗಳೆಲ್ಲ ಸಾಮಾನ್ಯವಾಗಿ ಸಮಾಜದ ಕೆಳವರ್ಗದ ಇಲ್ಲವೆ ಕೆಳ ಮಧ್ಯಮವರ್ಗದ ಜನ. ಬಡತನವನ್ನೇ ಹಾಸಿಹೊದೆದಿದ್ದರೂ ಪ್ರಾಮಾಣಿಕತೆ, ಉನ್ನತ ಮಟ್ಟದ ಆಸೆ ಆಕಾಂಕ್ಷೆಗಳು, ತಾವು ನಿಜಜೀವನದಲ್ಲಿ ಪಡೆದುಕೊಳ್ಳಲಾಗದಿರುವ ಭೋಗ ವಸ್ತುಗಳು ಮತ್ತು ಶ್ರೀಮಂತ ಬದುಕಿನ ಬಗೆಗೆ ತಮ್ಮದೇ ಆದ ಬಯಕೆಗಳನ್ನು ಹೊಂದಿರುವವರು. ಆದರೆ ತಮ್ಮ

ಆಸೆಗಳು ಈಡೇರುವುದಿದ್ದರೂ ನ್ಯಾಯವಾದ ರೀತಿಯಲ್ಲಿ ಈಡೇರಬೇಕೆಂಬ ದೃಷ್ಟಿ ಉಳ್ಳವರಾದ್ದರಿಂದ ಒಂದು ಸರ್ವಸಮ್ಮತವಾದ ನೀತಿಯ ಚೌಕಟ್ಟಿನ ಒಳಗೇ ಈ ಕಥೆಗಳ ವ್ಯಾಪ್ತಿ ಇರುತ್ತದೆ.

ಡಾ. ಕೃಷ್ಣಮೂರ್ತಿ ಹನೂರರಿಂದ ಸಂಪಾದಿತವಾಗಿ ಮನೋಹರ ಗ್ರಂಥ ಮಾಲೆಯವರು ಪ್ರಕಟಿಸಿರುವ 'ಜನಪದರಮ್ಯ ಕಥಾನಕಗಳ' ಈ ಸುಂದರ ಸಂಕಲನ ಈ ಎಲ್ಲ ಮಾತುಗಳನ್ನು ಸಾಕಾರಗೊಳಿಸುವ ರೀತಿಯಲ್ಲಿ ನಮ್ಮ ಕಣ್ಣೆದುರಿನಲ್ಲಿದೆ. ಡಾ. ಹನೂರರು ನಾಲ್ಕು ದಶಕಗಳಿಗೂ ಹೆಚ್ಚಿನ ಕಾಲಾವಧಿಯಿಂದ ಜಾನಪದಕ್ಷೇತ್ರದಲ್ಲಿ ಅತ್ಯಂತ ಸಕ್ರಿಯವಾಗಿ ತೊಡಗಿಸಿಕೊಂಡು ಜನಪದ ಕಥೆ, ಕಾವ್ಯಗಳ ಸಂಗ್ರಹ, ಜನಪದ ಸಾಹಿತ್ಯದ ವಿಶ್ಲೇಷಣೆ ವಿಮರ್ಶೆಯ ಕೃತಿಗಳನ್ನು ಪ್ರಕಟಿಸಿರುವ ಹಿರಿಯ ವಿದ್ವಾಂಸರು. ಅಲ್ಲದೆ ಸೃಜನಶೀಲ ಲೇಖಕರಾಗಿ ಶ್ರೇಷ್ಠ ಕಥೆ ಮತ್ತು ಕಾದಂಬರಿಗಳನ್ನು ನೀಡಿರುವವರು. ಅವರ 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಎಂಬ ಕಾದಂಬರಿ ವಿಪುಲವಾಗಿ ಚರ್ಚಿತವಾದ ಮತ್ತು ಬಹು ಸಂಖ್ಯೆಯ ಓದುಗರ ಮೆಚ್ಚುಗೆಯನ್ನು ಗಳಿಸಿರುವ ಕೃತಿ.

ಪ್ರಸ್ತುತ 'ಜನಪದ ರಮ್ಯ ಕಥಾನಕಗಳು' ಚಿತ್ರದುರ್ಗ ಜಿಲ್ಲಾ ಪರಿಸರದ ಆರು ಜನಪದ ಕಥೆಗಳ ಸಂಕಲನ. ಗೊಲ್ಲರ ಜಾತಿಗೆ ಸೇರಿದ ಕ್ಯಾತಗಾನಹಳ್ಳಿ ಗಿರಿಯಯ್ಯನೆಂಬ ವ್ಯಕ್ತಿಯ ಬಾಯಿಂದ ಸಂಪಾದಕರ ಮುಂದೆ ನಿರೂಪಿತವಾದ ಈ ಕಥೆಗಳು ಇಡಿಯಾಗಿ ಅವನ ಮಾತಿನಲ್ಲೇ ಇಲ್ಲ. ಲೇಖಕರೇ ಹೇಳಿರುವಂತೆ 'ಕಥೆಗಾರನ ನುಡಿಗಟ್ಟುಗಳನ್ನು ಉಳಿಸಿಕೊಂಡು ಎಲ್ಲರಿಗೂ ಪರಿಚಿತವಾದ ಕಥನಪ್ರಧಾನಭಾಷೆಯಲ್ಲಿ' ಲೇಖಕರಿಂದ ನಿರೂಪಿತವಾರುವ ಕಥೆಗಳು. ಮಿರ್ಜಿ ಅಣ್ಣಾರಾಯರ, ದೇವನೂರರ, ರಾವ್‌ಬಹದ್ದೂರರ ಕಷ್ಟಸಾಧ್ಯವಾದ ಕನ್ನಡವನ್ನೇ ನಮ್ಮ ಜನ ಅರ್ಥಮಾಡಿಕೊಳ್ಳುತ್ತಾರೆಂದ ಮೇಲೆ ಚಿತ್ರದುರ್ಗದ ಪ್ರಾಂತೀಯ ಭಾಷೆ ಎಲ್ಲರಿಗೂ ಸಂವಹನವಗಲಾರದೆಂದು ಹನೂರರು ಅದೇಕೆ ತೀರ್ಮಾನಿಸಿದರೋ ತಿಳಿಯದು. ಆದರೆ ಇವು ಒಂದೊಂದೂ, ಕಥೆಯೊಳಗೆ ಕಥೆ ಸೇರಿಕೊಂಡು ಅಡಿಗಡಿಗೆ ಓದುಗರ ಕುತೂಹಲವನ್ನು ಹೆಚ್ಚಿಸುತ್ತ ಹೋಗುವ ಅತ್ಯಂತ ಸ್ವಾರಸ್ಯಭರಿತವಾದ ಕಥೆಗಳು. ಮೂಲದಲ್ಲಿ ಸಂಸ್ಕೃತದ ಪ್ರಸಿದ್ಧ ವಿದ್ವಾಂಸ ವರರುಚಿವಿರಚಿತ ಕಥೆಗಳಾದ ಇವು ಶಿಷ್ಟಸಾಹಿತ್ಯದಿಂದ ಜನಪದಕ್ಕೆ ಬಂದವಾಗಿರಬೇಕು. ಇದರ ಮೂಲ ಹೆಸರು ಶೃಂಗಾರಾದ್ಭತ ಝುರೀಚಿತ್ರ ಬೃಹತ್ಕಥಾಮಂಜರಿ ಅಥವಾ ಸೌಂದರ್ಯಾದ್ಭುತ ಝುರೀಚಿತ್ರ ಬೃಹತ್ಕತಾಮಂಜರಿ. ನಾವೆಲ್ಲ ಬೇತಾಳಕಥೆಗಳನ್ನು ಕೇಳಿಯೇ ಇದ್ದೆವಲ್ಲವೆ? ಬೇತಾಳನನ್ನು ವಶಪಡಿಸಿಕೊಂಡ ವಿಕ್ರಮಾದಿತ್ಯರಾಜನು ತನ್ನ ಮಂತ್ರಿ ಭಟ್ಟಿಯೊಂದಿಗೆ ಮಣಿಪುರ ದ್ವೀಪಕ್ಕೆ ಹೋಗಿ ಅಲ್ಲಿಯ ರಾಣಿಯರಾದ ಪದ್ಮಾವತಿ, ಲೀಲಾವತಿ, ಕಳಾವತಿ

ಮತ್ತು ಭೋಗವತಿಯರನ್ನು ಸೋಲಿಸಿ ಮದುವೆಯಾಗುತ್ತಾನೆ. ತಮಗೂ ರಾಜನಿಗೂ ನಡುವೆ ತೆರೆ ಇಳಿಬಿಟ್ಟುಕೊಂಡು ಮೌನಧಾರಿಗಳಾಗಿದ್ದ ರಾಣಿಯರನ್ನು ಮಾತನಾಡುವಂತೆ ಮಾಡಿದರೆ ಅವರು ಸೋತಂತೆ ಎಂಬ ಒಪ್ಪಂದಕ್ಕೆ ಬದ್ಧನಾದ ರಾಜನ ಸೂಚನೆಯ ಮೇರೆಗೆ ಬೇತಾಳನು ತೆರೆಯ ಗೋಡೆಯ ಮೆಲಿದ್ದ ಮೃಗ, ಪಕ್ಷಿ ಚಿತ್ರಗಳ ಒಳಹೊಕ್ಕು ಕತೂಹಲಭರಿತ ಕಥೆಗಳನ್ನು ಹೇಳುತ್ತ ಹೋಗುತ್ತಾನೆ. ತೀವ್ರ ಕೂತೂಹಲದ ಘಟ್ಟದಲ್ಲಿ ಬೇತಾಳ ಕಥೆಹೇಳುವುದನ್ನು ನಿಲ್ಲಿಸಿದಾಗ ಕಥೆ ಕೇಳುವ ಸಲುವಾಗಿ ವಿಕ್ರಮಾದಿತ್ಯನನ್ನು ಮಾತನಾಡಿಸಿ ಸೋತ ಪರಿಣಾಮವಾಗಿ ಮದುವೆಯಾಗಬೇಕಾಗಿ ಬರುವುದು ಎಲ್ಲ ಕಥೆಗಳ ಸಾಮಾನ್ಯ ಚೌಕಟ್ಟು, ಇಲ್ಲಿರುವ ಆರು ಕಥೆಗಳೆಂದರೆ ಲೀಲಾವತಿ ರಾಣಿಯ ವಿವಾಹ ಕಥೆ, ಪದ್ಮಾವತೀ ರಾಣಿಯ ವಿವಾಹ ಕಥೆ, ವಜ್ರಮಕುಟರಾಯನ ಕಥೆ, ಗಜಪತಿರಾಯನ ಕಥೆ, ರತ್ನಾದೇವಿಯ ಕಥೆ ಮತ್ತು ಚೋರರ ಕಥೆ. ಕೊನೆಯ 'ಚೋರರ ಕಥೆ'ಯೊಂದನ್ನು ಹೊರತು ಪಡಿಸಿದರೆ ಉಳಿದೆಲ್ಲ ಕಥೆಗಳೂ ಮಹಿಳಾಪ್ರಧಾನ ಕಥೆಗಳು. ಪ್ರಸ್ತುತ ಲೀಲಾವತಿ ಪದ್ಮಾವತಿ ಕಥೆಗಳಲ್ಲಿ ವಿಕ್ರಮಾದಿತ್ಯ ರಾಜನ ಬದಲು ಚಿತ್ರಕಲ್ಲು ದುರ್ಗದ ರಾಜ ಚಂದ್ರಾವತನಿದ್ದಾನೆ. ಚಿತ್ರಕಲ್ಲು ದುರ್ಗದ ಪಟ್ಟಣಕ್ಕೆ ಹತಿರದಲ್ಲೇ ಇದ್ದ ಅವಳಿ ಊರುಗಳಾದ ಹೆಣ್ಣರಸಿಯರ ಪಟ್ಟಣಗಳಿಗೆ ಅಕ್ಕ ತಂಗಿಯರಾದ ಲೀಲಾವತಿ ಪದ್ಮಾವತಿಯರು ರಾಣಿಯರು. ಅವರನ್ನು, ಅವರ ಪಟ್ಟಣವನ್ನು ನೋಡಲೇಬೇಕೆಂದು ಪ್ರತ್ಯೇಕವಾಗಿ ಬಂದ ಚಂದ್ರಾವತನಿಗೆ ತಮ್ಮ ಮೌನಮುರಿಯುವ ಸವಾಲು ಒಡ್ಡಿ ಆ ಸವಾಲಿನಂತೆ ಅವನಿಗೆ ಅಡ್ಡವಾಗಿ ತೆರೆಯಾಚೆ ಮಲಗಿದ್ದು ರಾಜನು ಕೇಳಿದ್ದರಿಂದ ತೆರೆಯಮೆಲಿದ್ದ ಹಂಸಪಕ್ಷಿಯಲ್ಲಿ ಸೇರಿಕೊಂಡಿದ್ದ ಬೇತಾಳ ಕಥೆಹೇಳುತ್ತ ಕುತೂಹಲದ ಘಟ್ಟದಲ್ಲಿ ಕತೆ ನಿಲ್ಲಿಸಿದಾಗ, ಕಥೆ ಮುಂದುವರೆಸಲು ಹೇಳಿ ತಮ್ಮ ಮೌನ ಮುರಿದು ರಾಜನನ್ನು ಮದುವೆಯಾಗುವರು. ಬೇತಾಳ ಹೇಳುವ ಲೀಲಾವತಿ ಕಥೆ– ದ್ವಾರಕಾವತಿ ಪಟ್ಟಣದರಾಜನ ಆಜ್ಞೆಯ ಮೇರೆಗೆ ಮದವೆ ವಯಸ್ಸಿಗೆ ಬಂದ ರಾಜನ ಹಿರಿಯ ಮಗನಿಗೆ ಮಂತ್ರಿ ಹೆಣ್ಣು ಹುಡುಕಿಕೊಂಡು ಬಂದರೆ ಮಂತ್ರಿಯ 'ವಿಷಬುದ್ಧಿ' ಎಂಬ ದುಷ್ಟ ಮಗ ತಾನೇ ಅವಳನ್ನು ಲಪಟಾಯಿಸಲು ಸಂಚು ಹೂಡುವುದು, ಅವನ ದುಷ್ಟ ಸಂಚಿನಿಂದ ತಪ್ಪಿಸಿಕೊಂಡು ಕಾಡುಮೇಡು ಅಲೆದು ವರ್ತಕ ಕಿರಾತಕ, ಸಾಬಣ್ಣ ಇವರುಗಳ ಉಪಟಳ, ಅನಾಚಾರಗಳಿಂದ ಉಪಾಯಾಂತರದಿಂದ ಪಾರಾಗಿ ಗಂಡನನ್ನು ಸೇರಿಕೊಳ್ಳವುದು ಈ ಕಥಾಹಂದರವನ್ನು ಹೊಂದಿದೆ. ಆ ಹುಡುಗಿಯ ಕಿಲಾಡಿತನ ಕೂಡ ಬೆರಗು ಹುಟ್ಟಿಸುತ್ತದೆ. ವಿಷಬುದ್ದಿ ಚಂದ್ರಹಾಸನ ಕಥೆಯ ದುಷ್ಟಬುದ್ಧಿಯನ್ನು ನೆನಪಿಸುತ್ತಾನೆ.

ಜನಪದರ ಕಥೆಗಳು ಸಮಾಜ ಅನೂಚಾನವಾಗಿ ನಂಬಿಕೊಂಡುಬಂದಿರುವ ನೈತಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಂಥವೇ. ಸಮಾಜದ ಕಟ್ಟುಪಾಡುಗಳನ್ನು, ನಂಬಿಕೆಗಳನ್ನು ಗೌರವಿಸುವಂಥವೇ. ಮತ್ತು ಅವು ಆದರ್ಶಗಳನ್ನು ಎತ್ತಿ ಹಿಒಡಿಯುವಂಥವೇ. ಉದಾಹರಣೆಗೆ ದುಷ್ಟರು, ದುರ್ಜನರು, ಕೇಡಿಗರಿಗೆ ಮೊದಮೊದಲಲ್ಲಿ ಗೆಲುವಾಗುವಂತೆ ಕಂಡರೂ ಅಂತಿಮವಾಗಿ ತಮ್ಮ ದುಷ್ಟತನ ದೌರ್ಜನ್ಯ ಕೇಡುಗಳಿಗೆ ತಕ್ಕ ಶಿಕ್ಷೆಯನ್ನು ಅವರು ಪಡೆದೇ ತೀರುತ್ತಾರೆ. ಹೆಣ್ಣುಮಕ್ಕಳು ಪ್ರಾಣವನ್ನು ಪಣವಿಟ್ಟಾದರೂ ತಮ್ಮ ಪಾತಿವ್ರತ್ಯವನ್ನು ಕಾಪಾಡಿಕೊಳ್ಳುತ್ತಾರೆ ಮತ್ತು ಕಾಪಾಡಿಕೊಳ್ಳಲೇ ಬೇಕು. ಮೇಲೆ ಹೆಸರಿಸಲಾದ ಲೀಲಾವತಿ ಕಥೆಯಲ್ಲಿ ಈ ಎರಡೂ ಆಶಯಗಳು ನೆರವೇರುತ್ತವೆ. ಪರಮಾತ್ಮನು ಈ ಭೂಮಿಯಲ್ಲಿ ಹುಟ್ಟಿದ ಸಕಲಜೀವಿಗಳಿಗೂ ಅನ್ನ ಇಟ್ಟೇ ಇಟ್ಟಿರುತ್ತಾನೆ. ಎಲ್ಲ ಜೀವಿಗಳಿಗೂ ಪಡಿಭತ್ಯ ಅಳೆಯುವುದೇ ಅವನ ಕೆಲಸ ಎನ್ನುವುದೊಂದು ಗಾಢ ನಂಬುಗೆ. ಗಜಪತಿರಾಯನ ಕಥೆಯಲ್ಲಿ ಬದ್ರ ಗೊಮಾರನ ಗೋಳು ಕಿವಿಗೆ ಬಿದ್ದ ಪಾರ್ವತಿ ಅತ್ಲಾಗೆ ಹೋಗಿ ಅವನ ಗೋಳು ಕೇಳೋಣ ಎಂದು ಗಂಡನಿಗೆ ಹೇಳಿದರೆ, ಲೋಕಕ್ಕೆಲ್ಲ ಅನ್ನ ಒದಗಿಸಿ ಸುಸ್ತಾಗಿದ್ದ ಶಿವ ನಾಳೆ ನೋಡಿಕೊಂಡರಾಯಿತು ಎಂದರೆ ಪಾರ್ವತಿಯ ಹೆಂಗರುಳು ತಡೆಯದೆ ತಾನೆ ನೋಡಿಬರುವುದಾಗಿ ಹೇಳಿ ಬದ್ರಗೊಮಾರನು ಬಿದ್ದಿದ್ದ ಹಾಳು ಬಾವಿಯೊಳಕ್ಕೆ ತನ್ನ ಸೀರೆಯನ್ನೇ ಬಿಚ್ಚಿ ಹಗ್ಗಮಾಡಿ ಒಳಗೆ ಬಿಡುತ್ತಾಳೆ. ಹೀಗೆ ದೇವರು ಬಡವರ ಕಷ್ಟಕ್ಕೆ ಸಿಕ್ಕಿ ಆರ್ತನಾಗಿ ತನಗೆ ಮೊರೆಯಿಡುವವರ, ನೆನೆಯುವವರ ಪಾಲಿಗೆ ಒದಗಿ ಬರುತ್ತಾನೆ ಎಂದು ಸಾಮಾನ್ಯವಾಗಿ ಎಲ್ಲ ಕಥೆಗಳಲ್ಲೂ ಬರುತ್ತದೆ. ಇಂಥ ಕೆಲವು ನಂಬಿಕೆಗಳು ಭಾವನೆಗಳು ಈ ಎಲ್ಲ ಕಥೆಗಳ ಹಿಂದಿವೆ. ಮಕ್ಕಳಿಲ್ಲದವರಿಗೆ ಸದ್ಗತಿಯಿಲ್ಲ ಎಂಬ ನಂಬಿಕೆ ಬಲವಾಗಿರುವ ಸಮಾಜ ನಮ್ಮದು. ಅದಕ್ಕೆ ತಕ್ಕಂತೆ ಇಲ್ಲಿಯ ಬಹುತೇಕ ಕಥೆಗಳಿಗೆ ಚಾಲನೆ ನೀಡಿರುವುದೇ ಸಂತಾನ ಹೀನರ ಸಂತಾನ ಹೊಂದಬೇಕೆಂಬ ಅಪೇಕ್ಷೆ. ಪದ್ಮಾವತಿ, ಗಜಪತಿರಾಯನ ಕಥೆಗಳಲ್ಲೂ ಸಂತಾನಹೀನರ ಕೊರಗು ಇದೆ.

ಜನಪದರ ಕಥಾ ಜಗತ್ತಿನಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿರುವ ವೃತ್ಯನುಸಾರವಾದ ಜಾತಿಗಳು ಇರುತ್ತವಾದರೂ ಎಲ್ಲಿಯೂ ಪರಸ್ಪರರ ನಡುವಿನ ಸೌಹಾರ್ದಕ್ಕೆ ಚ್ಯುತಿಬರುವುದಿಲ್ಲ. ಆದರೆ ಕ್ರೂರಿಗಳು, ರಾಕ್ಷಸ ಸ್ವಭಾವದ ಮನುಷ್ಯರ ಜೊತೆಗೆ ಮಾನವೀಯ ಅಂತಃಕರಣವುಳ್ಳ ರಾಕ್ಷಸರು, ಬಡ ಸಾಬಣ್ಣಗಳೂ ಇಲ್ಲಿಯ ಜಗತ್ತಿನಲ್ಲಿದ್ದಾರೆ. ನಿಜಜೀವನದಲ್ಲಿ ಈಡೇರಲಾರದ ಆಸೆಗಳನ್ನು ಈಡೇರಿಸಿಕೊಳ್ಳುವ

ಸದಾಶಯವಾಗಿ ದೇಶ ಆಳುವ ರಾಜಕುಮಾರರು ಶ್ರೀಮಂತರು ಹಳ್ಳಿಯ ಬಡ ಹೆಣ್ಣುಮಗಳನ್ನು ಅವಳ ರೂಪಕ್ಕೋ ಗುಣಕ್ಕೋ ಮನಸೋತು ಮದುವೆಯಾಗುವ ಸಂದರ್ಭಗಳ ಚಿತ್ರಣಗಳಿವೆ.

ಈ ಕಥೆಗಳ ಭಾಷೆಯೇ ನಮ್ಮನ್ನು ಆಕರ್ಷಿಸುವಂಥದು. ಅದು ನಮಗೆ ಪರಿಚಿತವಾದ ದಿನನಿತ್ಯದ ಮಾತು.. ಉದಾಹರಣೆಗೆ:

ಚಿತ್ರಕಲ್ಲು ದುರುಗದಿಂದ ಬಂದಿದ್ದು ವನಾಶ್ರಮದಮೂಲೆಯಲ್ಲಿ ಕೂತಿದ್ದ ರಾಜ ದಿನ್ನೆ ಮೇಲೆ ತಪಸ್ಸಿನಲ್ಲಿ ಕೂತಿದ್ದ ಋಷಿಯನ್ನು ಮಹಾಸ್ವಾಮಿಗಳೇ ಅಂತ ಮಾತಡಿಸಿದ.

ಋಷಿ ಏನಪ್ಪಾ ತಮ್ಮಾ ಅಂದ

ರಾಜ, ತಮ್ಮ ಪಾದದರ್ಶನ ಮಾಡಿಹೋಗೋಣಾ ಅಂತ ಬಂದೆ ಅಂದ.

ಋಷಿ, ಆಹಾ ದೊಡ್ಡ ಮಾತು. ನನ್ನಂಥಾ ವನವಾಸಿಯಿಂದ ನಿನಗೆ ಏನು ತಾನೆ ಆದಾತು ಅಂದ.

ಬಂಜೆಯಾದ ಹೆಣ್ಣು ರಾಣಿಯಾದರೇನು? ಹೆಂಗಸರ ನಿಂದೆಯಿಂದ ತಪ್ಪಿಸಿಕೊಳ್ಳಲಾರಳು. "ಒಂದಡಕೆ ತಾರೆ ಸಕೀರಾ ಅಂದರೆ ಬಸಿರಿಲ್ಲದ ರಾಣಿ ಅಡಕೆ ಹೋಳು ಕೇಳ್ತಾವಳೆ ಕೊಡಿರೆ" ಅಂತ ಆಡಿಕೊಂಡು ನಗಾಡುತ್ತಿದ್ದರು. "ಒಂದು ವೀಳೆದೆಲೆ ಕೊಡಿರೇ ಸಖಿಯರಾ ಅಂದರೂ ಸಾಕು, ಸಖಿಯರು ಓಹೋ, ಹೊಟ್ಟೆಯಲ್ಲಿ ಫಲವಿಲ್ಲದಿದ್ದರೂ ಬಿಮ್ಮನಸೆ ಥರ ಎಲೆಸುಣ್ಣ ಭ್ರಮಿಸುತ್ತಿದ್ದಾಳೆ ನೋಡ್ರೆ ಕೊಡ್ರೆ" ಎನ್ನುತ್ತಿದ್ದರು.

ಇಂಥ ಸ್ವಾರಸ್ಯಕರವಾದ ಕಥೆಗಳನ್ನು ಇವುಗಳ ಅಧ್ಯಯನಕ್ಕೆ ಅಗತ್ಯವಾದ ಉದ್ಬೋಧಕವಾದ ಪೀಠಿಕೆಯೊಡನೆ ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟಿರುವ ಹನೂರರ ಪರಿಶ್ರಮ ಅಭಿನಂದನಾರ್ಹವಾದುದು.

ಅಬ್ಬಾಲಕ್ಕ ಅಜ್ಜಿ ಮನೆಗೆ ಹೋಗಿದ್ದು

ತಮ್ಮ ಶ್ರೇಷ್ಠ ಕಥೆ. ಕಾದಂಬರಿ ಕಾವ್ಯಗಳಿಂದ ಸಾಹಿತ್ಯಾಸಕ್ತರ ಪ್ರೀತಿ ಗೌರವಗಳನ್ನು ಗಳಿಸಿರುವ ಸಂವೇದನಾಶೀಲ ಲೇಖಕಿ ವೈದೇಹಿಯವರು ಸುಂದರವೂ ಆಸಕ್ತಿಪೂರ್ಣವೂ ಆದ ಈ ಆರು ಮಕ್ಕಳ ಕಥೆಗಳ ಸಂಕಲನದ ಮೂಲಕ ಕನ್ನಡಿಗರಿಗೆ ಹೊಸರುಚಿಯನ್ನು ಉಣಬಡಿಸಿದ್ದಾರೆ. ಈಗಾಗಲೇ ಮಕ್ಕಳ ನಾಟಕಗಳನ್ನು ಬರೆದು ಕೈಪಳಗಿಸಿಕೊಂಡಿರುವ ವೈದೇಹಿಯವರಿಗೆ ಮಕ್ಕಳಮನಸ್ಸು ಹೇಗೆ ಕೆಲಸಮಾಡುತ್ತದೆಂಬುದು ಚೆನ್ನಾಗಿ ಮನವರಿಕೆಯಾಗಿದೆ. 'ಅಬ್ಬಾಲಕ್ಕ ಅಜ್ಜೀಮನೆಗೆ ಹೋಗಿದ್ದು', 'ಅರ್ಧಚಂದ್ರ ಮಿಠಾಯಿ' ಮತ್ತು 'ಪುಟ್ಟಮರಿಯೂ ಮುಗಿಲ ಹಡಗೂ' ಹಾಗೂ 'ಪುಟ್ಟಿ ಪುಟ್ಟರ ಪುಟಾಣಿ

ದಿನಗಳು' ಎಂಬ ಕಥೆಗಳು ಮಕ್ಕಳ ಕುತೂಹಲವನ್ನು ಕೆರಳಿಸುತ್ತ ಅವರ ಭಾವನಾ ಲೋಕವನ್ನು ವಿಸ್ತರಿಸುವುದು ಮಾತ್ರವಲ್ಲದೆ ಅವರ ಕಲ್ಪನೆಯನ್ನು ಬೆಳೆಸಬಲ್ಲ ಸ್ವಾರಸ್ಯಪೂರ್ಣ ಕತೆಗಳಾಗಿವೆ. 'ಪೋಗೋ' 'ನಿಕ್ಕಿ' ಮುಂತಾದ ಇಂಗ್ಲಿಷ್ ಛಾನಲ್‌ಗಳಲ್ಲಿ ಕಣ್ಣು ಕೀಲಿಸಿಕೊಳ್ಳುತ್ತ ಕನ್ನಡದ ಮಕ್ಕಳೆಲ್ಲ ಕನ್ನಡಕ್ಕೇ ಪರಕೀಯವಾಗುತ್ತಿವೆಯೇನೋ ಅಥವಾ ಕನ್ನಡವೇ ಅವರಿಗೆ ಪರಕೀಯವಾಗಿ ಬಿಡುತ್ತಿದೆಯೇನೋ ಎಂದು ಆತಂಕ ಪಡುತ್ತಿರುವ ಕಾಲದಲ್ಲಿ ಭರವಸೆಯ ಬೆಳಕಾಗಿ ಇಂಥ ಕಥಾ ಸಂಗ್ರಹ ಪ್ರಕಟವಾಗುತ್ತಿರುವುದು ಸ್ವಾಗತಾರ್ಹ. ಮಕ್ಕಳ ಸಾಹಿತ್ಯ ಎಂಬ ವಿಭಾಗಕ್ರಮದ ಬಗ್ಗೆಯೇ ಆಕ್ಷೇಪ, ಸಂದೇಹವೆತ್ತುವ ಮುನ್ನುಡಿಕಾರ ಕೆ.ವಿ.ಅಕ್ಷರರ ವಾದಸರಣಿ ಅಷ್ಟು ತರ್ಕಬದ್ಧವಾದದ್ದಲ್ಲವೆನೋ ಎನಿಸುತ್ತದೆ. ಮಕ್ಕಳಿಗೆಂದು ರಚಿಸಲಾದ ಸಾಹಿತ್ಯವನ್ನು ದೊಡ್ಡವರೂ ಓದಿ ಸವಿಯಬಹುದಾದರೂ ದೊಡ್ಡವರು ಓದಿ ಆಸ್ವಾದಿಸುವ ಕಾವ್ಯ, ಕಥೆ ಕಾದಂಬರಿ ನಾಟಕ ಇತ್ಯಾದಿಗಳನ್ನೆಲ್ಲ ವೈದೇಹಿಯವರ ಈ ಕಥಾಸಂಕಲನವನ್ನು ಓದುವ ವಯಸ್ಸಿನ ಮಕ್ಕಳು ಓದಿ ಸವಿಯಲು ಖಂಡಿತಾ ಸಾಧ್ಯವಿಲ್ಲವೆಂಬ ಕಾರಣಕ್ಕಾಗಿಯಾದರೂ ಮಕ್ಕಳಸಾಹಿತ್ಯವೆಂಬ ವಿಭಾಗವನ್ನು ಒಪ್ಪಲೇ ಬೇಕಾಗುತ್ತದೆ.

❖

13

ಲೇಖಕಿಯ ವ್ಯಕ್ತಿತ್ವ ಸಾಹಿತ್ಯ ಕುರಿತ ಆಕರಗ್ರಂಥ

'ಪ್ರೇಮಾಭಟ್–70 : ಸಂಸ್ಕೃತಿ– ಸಂಭ್ರಮ' ನಾಡಿನ ಹಿರಿಯ ಲೇಖಕಿ ಶ್ರೀಮತಿ ಪ್ರೇಮಾಭಟ್ ಅವರಿಗೆ ಎಪ್ಪತ್ತು ತುಂಬಿದ ಸಂದರ್ಭದಲ್ಲಿ ಅವರ ಅಭಿಮಾನಿಗಳು, ಹಿತೈಷಿಗಳು ಬರಹಗಾರರು ಸೇರಿ ಅರ್ಪಿಸಿದ ನುಡಿ ಬಾಗಿನ.

ಕನ್ನಡದಲ್ಲಿ ಅಭಿನಂದನ ಗ್ರಂಥಗಳಿಗೆ ಒಂದು ಸುದೀರ್ಘಪರಂಪರೆಯೇ ಇದೆ. ಕನ್ನಡದ ಕಣ್ವ ಆಚಾರ್ಯ ಬಿ. ಎಂ.ಶ್ರೀ ಯವರಿಗೆ ಅವರ ಶಿಷ್ಯರು, ಮಿತ್ರರು, ಅಭಿಮಾನಿಗಳು ಸೇರಿ 1940 ರಲ್ಲಿ ಅರ್ಪಿಸಿದ "ಸಂಭಾವನೆಯೇ ಕನ್ನಡದಲ್ಲಿ ಮೊದಲ ಅಭಿನಂದನ ಗ್ರಂಥ. ಅದು ಲೇಖಕಿ ಪ್ರೇಮಾ ಭಟ್ ಅವರು ಹುಟ್ಟುವ

* ಪ್ರೇಮಾ ಭಟ್ – 70

ಸಂಸ್ಕೃತಿ–ಸಂಭ್ರಮ : (ಲೇಖಕಿ ಶ್ರೀಮತಿ ಪ್ರೇಮಾಭಟ್ ಅವರ ಬಗೆಗಿನ ಅಭಿನಂದನಾ ಗ್ರಂಥ)

ಪ್ರಕಾಶಕರು: ಪ್ರೇಮಾಭಟ್ ಅಭಿನಂದನ ಸಮಿತಿ, ನಂ: 845, 4ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು

ಒಂದು ವರ್ಷ ಮುಂಚೆ ಅರ್ಪಿಸಿದ ಗ್ರಂಥ. ಅಲ್ಲಿಂದೀಚೆಗೆ ಈ ಎಪ್ಪತ್ತು ವರ್ಷಗಳಲ್ಲಿ ನೂರಾರು ಅಭಿನಂದನ ಗ್ರಂಥಗಳು ಬಂದಿವೆ. ಮುಖ್ಯವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ವರ್ಷ ಸಾರ್ಥಕ ಕೃಷಿ ನಡೆಸಿದ ಹಿರಿಯರಿಗೆ ಪ್ರೀತಿ, ಗೌರವಗಳನ್ನು ತೋರಿಸುವ ದ್ಯೋತಕವಾಗಿ ಬಂದಿರುವ ಒಂದು ಸತ್ಸಂಪ್ರದಾಯ ಈ ಅಭಿನಂದನ ಗ್ರಂಥ ಸಮರ್ಪಣೆ.

ಮೊದಮೊದಲು ಸಾಹಿತ್ಯ ಕ್ಷೇತ್ರದ ಗೌರವಾನ್ವಿತರನ್ನು ಕುರಿತ ಅಭಿನಂದನ ಗ್ರಂಥಗಳು ಬಂದವು. ಅನಂತರದ ದಿನಗಳಲ್ಲಿ ಧಾರ್ಮಿಕ, ಸಾಮಾಜಿಕ, ರಾಜಕೀಯ, ವೈದ್ಯಕೀಯ, ಕ್ರೀಡೆ ಹೀಗೆ ವಿಭಿನ್ನ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಿರಿಯರಿಗೆ ಗೌರವ ತೋರಿಸಲು ಅಭಿನಂದನ ಗ್ರಂಥಗಳು ಬಂದಿವೆ. ಇತ್ತೀಚೆಗಂತೂ 60–70 ವಯಸ್ಸಾದ ಸ್ವಲ್ಪ ಹೆಸರಾದವರಿಗೆ ಅಭಿನಂದನ ಗ್ರಂಥ ಸಲ್ಲಿಕೆಯಾಗಲಿಲ್ಲವೆಂದರೆ ಅದೇ ಏನೋ ಒಂದು ಲೋಪವೆಂಬಷ್ಟು ಮಟ್ಟಿಗೆ ಅವುಗಳ ಭರಾಟೆ ಸಾಗಿದೆ. ಕೆಲವರಿಗೆ ಅವರ ಅಧಿಕಾರ, ಪ್ರಸಿದ್ಧಿ ಪ್ರಭಾವಗಳಿಗೆ ತಕ್ಕಂತೆ ಎರಡು– ಮೂರು ಗೌರವ ಗ್ರಂಥಗಳು ಅರ್ಪಣೆ ಯಾಗಿರುವುದು ಒಂದು ವೈಪರೀತ್ಯವಾದರೆ ನಿಜವಾಗಿಯೂ ಗ್ರಂಥ ಗೌರವಕ್ಕೆ ಪಾತ್ರರಾಗಬೇಕಾದವರು ಅದರಿಂದ ವಂಚಿತರಾಗಿರುವುದು ಇನ್ನೊಂದು ವೈಪರೀತ್ಯ ತಮ್ಮ ಚೇಲಾಗಳಿಗೆ ತಾವೇ ಹೇಳಿ ತಮ್ಮ ಅಭಿನಂದನ ಗ್ರಂಥದ ಏರ್ಪಾಟು ಮಾಡಿಸಿಕೊಳ್ಳುವವರೂ, ಇದನ್ನೊಂದು ದುಡ್ಡು ಮಾಡುವ ಧಂಧೆಯಾಗಿ ಮಾಡಿಕೊಂಡವರೂ ಇದ್ದಾರೆಂದು ಕೇಳಿದಾಗ ವಿಷಾದವೆನಿಸುತ್ತದೆ.

ಏನೇ ಆದರೂ ಮಹತ್ಸಾಧನೆ ಮಾಡಿದವರಿಗೆ ಗೌರವ ತೋರುವ ಅತ್ಯಂತ ಶ್ರೇಷ್ಠ ವಿಧಾನವಾಗಿಯೇ ಈಗಲೂ ಅದು

ಉಳಿದಿರುವುದು ಕನ್ನಡ ಸಂಸ್ಕೃತಿಯ ವೈಶಿಷ್ಟ್ಯ. ಹತ್ತಿರ ಹತ್ತಿರ ಅರ್ಧ ಶತಮಾನದಿಂದಲೂ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ನಿರಂತರವಾಗಿ ಕೃತಿ ರಚನೆ ಮಾಡುತ್ತ ಬಂದಿರುವ ಶ್ರೀಮತಿ ಪ್ರೇಮಾ ಭಟ್ ಅವರಂಥವರಿಗೆ ಅಭಿನಂದನ ಗ್ರಂಥ ಸಲ್ಲಿಕೆಯಾದಾಗ ಅದಕ್ಕೊಂದು ಸಾರ್ಥಕತೆ ಉಂಟಾಗುತ್ತದೆ.

ಅಭಿನಂದನ ಗ್ರಂಥಗಳ ಸ್ವರೂಪವೂ ವೈವಿಧ್ಯಪೂರ್ಣವಾಗಿದೆ. ಕೆಲವು ಅಭಿನಂದನ ಗ್ರಂಥಗಳಲ್ಲಿ ಅಭಿನಂದನೆಗೆ ಪಾತ್ರರಾದ ವ್ಯಕ್ತಿಯನ್ನು ಕುರಿತಂತೆ ಆತ್ಮೀಯರು, ಒಡನಾಡಿಗಳು, ವಿಶ್ವಾಸಿಗಳು, ಅವರ ಸ್ನೇಹ, ಪ್ರೀತಿ, ವಿಶ್ವಾಸ, ಸೌಹಾರ್ದಗಳನ್ನು ನೆನಪಿಸಿಕೊಂಡಿರುವ ಬರಹಗಳದೊಂದು ಭಾಗವಾದರೆ ಆ ಲೇಖಕರದೇ ಸಾಹಿತ್ಯವನ್ನು ಕುರಿತಾದ ವಿಮರ್ಶಾತ್ಮಕ, ಸಮೀಕ್ಷಾತ್ಮಕ ಲೇಖನಗಳದು ಇನ್ನೊಂದು ಭಾಗ. ಸಮೃದ್ಧವಾದ ಸಾಹಿತ್ಯವನ್ನು ರಚಿಸಿರುವ ಹಿರಿಯ ಲೇಖಕರಾದ ಕುವೆಂಪು, ಮಾಸ್ತಿ, ಕಾರಂತ, ಮುಂತಾದವರಿಗೆ ಸಂಬಂಧಿಸಿದ ಅಭಿನಂದನ ಗ್ರಂಥಗಳಖು ಈ ಸಾಲಿಗೆ

ಸೇರುವಂಥವು. ಇನ್ನು ಕೆಲವು ಅಭಿನಂದನ ಗ್ರಂಥಗಳಲ್ಲಿ ಇವುಗಳ ಜೊತೆಗೆ ಅದು ಒಂದು ಶ್ರೇಷ್ಠ ಪರಾಮರ್ಶನ ಗ್ರಂಥವಾಗಿಯೂ ಉಳಿದು ಬರಬೇಕೆಂಬ ಉದ್ದೇಶದಿಂದ ಸಾಹಿತ್ಯ ಸಂಶೋಧನೆ, ಕಲೆ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ, ಬೇರೆ ಬೇರೆ ಹೆಸರಾಂತ ಬರಹಗಾರರ ಲೇಖನಗಳ ಒಂದು ಭಾಗವೂ ಕೂಡಿಕೊಂಡಿರುತ್ತದೆ. ಇಂಥವುಗಳ ಸಂಖ್ಯೆ ಈಚಿನ ದಿನಗಳಲ್ಲಿ ಹೆಚ್ಚುತ್ತಿರುವುದು ನಿಜ. ಅಂಥವುಗಳ ಉಪಯೋಗವೂ ಸಹಜವಾಗಿಯೇ ಹೆಚ್ಚು.

ಪ್ರಸ್ತುತ 'ಪ್ರೇಮಾಭಟ್–70 ಸಂಸ್ಕೃತಿ–ಸಂಭ್ರಮ' ಸರಿ ಸುಮಾರು ಏಳುನೂರು ಪುಟಗಳ ಹೆಬ್ಬೊತ್ತಿಗೆ. ಇದರಲ್ಲಿ ಒಟ್ಟು ಏಳು ಭಾಗಗಳಿವೆ. ಹಿರಿಯ ಬರಹಗಾರರ, ಮಠಾಧೀಶರ ಶುಭಾಶಂಸನೆಯ ಮೊದಲ ಭಾಗ, ನಾಡಿನ ಖ್ಯಾತ ಬರಹಗಾರರು, ಧರ್ಮ, ಸಂಸ್ಕೃತಿ ಇತಿಹಾಸ, ಕುರಿತು ಬರೆದಿರುವ 'ಇಹ–ಪರ' ಎಂಬ ಎರಡನೆಯ ಭಾಗ,(80 ಪುಟಗಳು), ಭಾಷೆ, ಸಾಹಿತ್ಯ ಸಂಸ್ಕೃತಿ, ಕಲೆ ಸಂಶೋಧನೆ ಇತ್ಯಾದಿಗಳನ್ನು ಕುರಿತಂತೆ ಹೆಸರಾಂತ ಬರಹಗಾರರ ಬರಹಗಳಿಂದ ಪುಷ್ಟಗೊಂಡಿರುವ ಸುಮಾರು 365 ಪುಟಗಳಿಂದ ಕೂಡಿರುವ ಸಾಹಿತ್ಯ ಸೃಜನ'ವೆಂಬ ಮೂರನೆಯ ಭಾಗ, ಪ್ರೇಮಾಭಟ್ ಅವರ ಸಾಹಿತ್ಯವನ್ನು ಕುರಿತ ವಿಮರ್ಶೆ, ವಿಶ್ಲೇಷಣೆಗಳನ್ನೊಳಗೊಂಡಿರುವ ನಾಲ್ಕನೆಯ ಭಾಗ(85 ಪುಟ), ಪ್ರೇಮಾಭಟ್ ಅವರ ವ್ಯಕ್ತಿತ್ವ, ಒಡನಾಟಗಳನ್ನು ಕುರಿತಂತೆ ಹಿರಿಯರು, ಹಿತೈಷಿಗಳ ಆತ್ಮೀಯ ಬರಹಗಳನ್ನು ಒಳಗೊಂಡಿರುವ ಸುಮಾರು ನೂರು ಪುಟಗಳ ಐದನೆಯ ಭಾಗ, ಕೊನೆಯದು ಪ್ರೇಮಾಭಟ್ ಅವರೊಂದಿಗೆ ಎಸ್. ಡಿ. ಶಶಿಕಲಾ ಅವರು ನಡೆಸಿರುವ ಸಂದರ್ಶನ ಮತ್ತು ಅವರ ವ್ಯಕ್ತಿ–ವಿವರಗಳನ್ನೊಳಗೊಂಡಿರುವ ಭಾಗ.

ಯಾವುದೇ ಅಭಿನಂದನ ಗ್ರಂಥದ ಅತ್ಯಂತ ಮೌಲಿಕ ಭಾಗಗಳೆಂದರೆ ಅದರಲ್ಲಿ ಸೇರಿರುವ ಧರ್ಮ, ಇತಿಹಾಸ, ಸಾಹಿತ್ಯ, ಕಲೆ ಸಂಸ್ಕೃತಿ ಇತ್ಯಾದಿ ವಿಚಾರಗಳನ್ನು ಕುರಿತಂತೆ ಆಯಾಯಾ ಕ್ಷೇತ್ರದ ನುರಿತ ಮತ್ತು ಅನುಭವಿ ಲೇಖಕರು ಬರೆದಿರುವ ಲೇಖನಗಳ ಹಾಗೂ ಅಭಿನಂದಿತರ ಸಾಹಿತ್ಯವನ್ನು ಕುರಿತಂತೆ ಸೋದರ ಲೇಖಕ ಲೇಖಕಿಯರು ಬರೆದಿರುವ ವಿಚಾರ ವಿಮರ್ಶೆಯ ಭಾಗಗಳು. ಆ ದೃಷ್ಟಿಯಿಂದ 'ಸಂಸ್ಕೃತಿ–ಸಂಭ್ರಮ' ಒಂದು ಮೌಲಿಕ ಆಕರ ಗ್ರಂಥವೆಂದು ಧಾರಾಳವಾಗಿ ಹೇಳಬಹುದು. ಇಲ್ಲಿರುವ ಕೆಲವು ಲೇಖನಗಳ ಶೀರ್ಷಿಕೆ ಮತ್ತು ಲೇಖಕರ ಹೆಸರನ್ನು ಹೆಸರಿಸಿದರೂ ಸಾಕು ಅವುಗಳು ಎಷ್ಟೊಂದು ಮೌಲ್ಯಯುತವಾದ ಲೇಖನಗಳೆಂದು ತಿಳಿಯಬಹುದು. ಅವುಗಳಲ್ಲಿ ಶತಾವಧಾನಿ ಡಾ. ಆರ್. ಗಣೇಶ್ ಅವರ 'ಗೌತಮ ಧರ್ಮಸೂತ್ರದ

ಎಂಟು ಆತ್ಮಗುಣಗಳು', ಡಾ. ಸೂರ್ಯನಾಥ ಕಾಮತರ 'ವೇದಕಾಲದಲ್ಲಿ ಸ್ತ್ರೀ', ಸಿ. ಪಿ. ಕೆ. ಅವರ "ಧರ್ಮ ಮತ್ತು ಶಾಂತಿ', ಪ್ರೊ. ರಂಗನಾಥ ಭಾರದ್ವಾಜರ 'ದಾಸ ಸಾಹಿತ್ಯ-ಒಂದು ಹೊಸನೋಟ', ಮುಂತಾದವು ನಿದರ್ಶನ ಮಾತ್ರ. 'ಸಾಹಿತ್ಯ ಸೃಜನ' ಭಾಗವಂತೂ ಸಾಹಿತ್ಯ, ಚಿತ್ರಕಲೆ, ಜಾನಪದ, ಭಾಷೆ, ಭಾಷಾ ಚಳುವಳಿಗಳು, ಅನಕೃ, ಕಾರಂತ, ಭೈರಪ್ಪನವರ ಸಾಹಿತ್ಯ ಕುರಿತ ವಿಮರ್ಶಾತ್ಮಕ ಲೇಖನಗಳು, ವೈದ್ಯವಿಜ್ಞಾನ, ಶಿಕ್ಷಣ, ಸಂಶೋಧನೆ, ಸಮಾಜ ವಿಜ್ಞಾನ- ಹೀಗೆ ವೈವಿಧ್ಯಮಯವಾದ ವಿಷಯಗಳಿಗೆ ಸಂಬಂಧಿಸಿದ ಲೇಖನಗಳಿಂದ ಸಮೃದ್ಧವಾಗಿದೆ.

ಅಷ್ಟೇ ಮುಖ್ಯವಾಗಿರುವ ಭಾಗವೆಂದರೆ ಗ್ರಂಥ ಗೌರವಕ್ಕೆ ಪಾತ್ರರಾಗಿರುವ ಶ್ರೀಮತಿ ಪ್ರೇಮಾಭಟ್ ಅವರ ಸಾಹಿತ್ಯ ಕುರಿತ ಬರಹಗಳು.. 1960ರಲ್ಲಿ ಬರವಣಿಗೆ ಪ್ರಾರಂಭಿಸಿದ ಅವರು ಈ ಐದು ದಶಕಗಳಲ್ಲಿ ಐವತ್ತೆರಡು ಕಾದಂಬರಿಗಳು, ಹನ್ನೆರಡು ಕಥಾ ಸಂಕಲನಗಳಲ್ಲದೆ 365 ಕಥೆಗಳ 'ಕಥಾವರ್ಷ' ವೆಂಬ ಬೃಹತ್ ಕಥಾ ಸಂಪುಟವೂ ಸೇರಿದಂತೆ ಆರು ನೂರಕ್ಕೂ ಮಿಕ್ಕ ಕಥೆಗಳು, ಮೂರು ನಗೆ ಬರಹಗಳ ಸಂಗ್ರಹ, ಏಳು ವ್ಯಕ್ತಿಚಿತ್ರ ಮತ್ತು ಜೀವನಚರಿತ್ರಾತ್ಮಕ ಗ್ರಂಥಗಳು, ಎಂಟು ಕವನ ಸಂಕಲನಗಳು ಎರಡು ಪ್ರವಾಸ ಗ್ರಂಥಗಳು ಹೀಗೆ ಅಪಾರವಾದ ಸಾಹಿತ್ಯ ರಚನೆ ಮಾಡಿದ್ದಾರೆ. ಅವರದು ನಿಜಕ್ಕೂ ದೈತ್ಯಸಾಧನೆಯೇ ಸರಿ. ಅವರ ನಲವತ್ತು ಕಾದಂಬರಿಗಳು ಧಾರಾವಾಹಿಯಾಗಿ ನಾಡಿನ ವಿವಿಧ ನಿಯತ ಕಾಲಿಕೆಗಳಲ್ಲಿ ಪ್ರಕಟವಾಗಿ ಅಪಾರವಾದ ಜನಪ್ರೀತಿ ಮತ್ತು ಜನಮನ್ನಣೆಗೆ ಪಾತ್ರರಾದ ಲೇಖಕಿಯಾಗಿದ್ದಾರೆ.

ಮಹಿಳಾ ಸಾಹಿತ್ಯವೆಂದರೆ ಅಡುಗೆ ಮನೆಯ ಸಾಹಿತ್ಯವೆಂದು ಅನೇಕ ಬಾರಿ ಓದದೆಯೇ ಮೂಗುಮುರಿಯುತ್ತಿದ್ದ ಕಾಲವೊಂದಿತ್ತು... ಅದು ಅನಕೃ ಪರಂಪರೆಯಲ್ಲಿ ಬಂದ, ಬರವಣಿಗೆಯನ್ನು ಸಲೀಸು ಮಡಿಕೊಂಡು ಬದುಕಿನ ಬಗೆಗೆ ಆಳವಾದ ಅನುಭವವಿಲ್ಲದೆ ಇದ್ದಾಗ್ಯೂ ತನ್ನ ಸೀಮಿತ ಪ್ರಪಂಚದ ಮೇಲು ಮೇಲಿನ ಚಿತ್ರಣವನ್ನಷ್ಟೇ ಮಾಡುತ್ತ ಜನಪ್ರಿಯ ಬರವಣಿಗೆಯ ಜಾಡಿಗೆ ಬಿದ್ದ ಲೇಖಕಿಯರಿಗೆ ಅನ್ವಯಿಸುವಂಥದು. ಪ್ರೇಮಾಭಟ್ ಅವರು ಎರಡನೆಯ ತಲೆಮಾರಿನ ಹಿರಿಯ ಲೇಖಕಿ. ಪರಂಪರೆ ಮತ್ತು ಆಧುನಿಕತೆ ಮುಖಾಮುಖಿಯಾಗಿದ್ದ ಸಂಕ್ರಮಣ ಕಾಲದಲ್ಲಿ ಬರಹದ ಲೋಕಕ್ಕೆ ಅಡಿಯಿಟ್ಟ ಲೇಖಕಿ. ಸಾಂಪ್ರದಾಯಿಕ ಮನೆತನದಲ್ಲಿ ಹುಟ್ಟಿಬಂದವರಾದರೂ ತಮ್ಮ ಅನುಭವ, ಲೋಕ ನಿರೀಕ್ಷೆ ಮತ್ತು ಅಧ್ಯಯನಗಳಿಂದ ಸಮಕಾಲೀನ ಅನುಭವಗಳಿಗೆ, ವಿದ್ಯಮಾನಗಳಿಗೆ ಸ್ಪಂದಿಸಿ ಬರೆದ ಲೇಖಕಿ. ಅಷ್ಟೇ ಅಲ್ಲ; ಬರವಣಿಗೆಯನ್ನು ಸೂರ್ಯ ನೇಮಿ ಕ್ರಮದಂತೆ ನಿರಂತರವಾಗಿ ನಡೆಸಿಕೊಂಡು ಬಂದವರು. ಡಾ. ಜಿ. ಎಂ. ಹೆಗಡೆಯವರು ಅಭಿಪ್ರಾಯ

ಪಟ್ಟಿರುವಂತೆ,– "ಕೌಟುಂಬಿಕ ಜೀವನದ ರಸ ನಿಮಿಷಗಳನ್ನು, ಸಾಮಾಜಿಕ ಸಮಸ್ಯೆಗಳನ್ನು, ಹೆಣ್ಣಿನ ಮನೋಭಾವದ ವಿವಿಧ ಆಯಾಮಗಳನ್ನು ವಸ್ತುವಾಗಿಸಿಕೊಂಡು ಕಥೆ ಕಾದಂಬರಿಗಳನ್ನು ವಿಪುಲವಾಗಿ ರಚಿಸಿದವರು. ಅವರು ಸಾಹಿತ್ಯ ಜಗತ್ತಿಗೆ ತೆರೆದುಕೊಂಡದ್ದೇ ಕಥೆ ಕಾದಂಬರಿಗಳ ಮೂಲಕ. ನಗರದ ಸಂಕೀರ್ಣ ಬದುಕು, ಮಧ್ಯಮ ವರ್ಗದ ಕುಟುಂಬ ಜೀವನದ ನೂರೆಂಟು ಮುಖಗಳು, ಸಮಸ್ಯೆಗಳು, ಅದರೆಲ್ಲ ವಾಸ್ತವದಲ್ಲಿ ಅವರ ಕಥೆ ಕಾದಂಬರಿಗಳ ಜಗತ್ತಿನಲ್ಲಿ ಆಕಾರ ತಾಳಿವೆ. ಯಾವುದೇ ಇಸಂ ಅಥವಾ ಚಳುವಳಿಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಸದ್ದಿಲ್ಲದೆ ತಮ್ಮ ಅನುಭವಕ್ಕೆ ನಿಲುಕಿದ್ದಕ್ಕೆ ಅಕ್ಷರ ರೂಪ ನೀಡುತ್ತ ಬಂದವರು".

ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿಗೈದಿರುವ ಇಂಥ ಲೇಖಕಿಯ ಸಾಹಿತ್ಯ ಸಮೀಕ್ಷೆ ಇನ್ನಷ್ಟು ವಿಸ್ತಾರಗೊಳ್ಳಬಹುದಿತ್ತು. ಅಭಿನಂದನ ಗ್ರಂಥದಲ್ಲಿ ನಿಷ್ಠುರ ವಿಮರ್ಶೆಯನ್ನು ನಿರೀಕ್ಷಿಸಲಾಗದು. ಆದರೂ ಇಲ್ಲಿನ ಬಹುಪಾಲು ಬರಹಗಳು ವಸ್ತುನಿಷ್ಠವಾಗಿ ಅವರ ಸಾಹಿತ್ಯವನ್ನು ವಿವೇಚಿಸಿವೆ. ಲೇಖಕಿಯ ಸ್ನೇಹಪೂರ್ಣ ಸರಳ ವ್ಯಕ್ತಿತ್ವವನ್ನು ಅವರ ಸೌಜನ್ಯ, ಹೃದಯವಂತಿಕೆ ದಾಕ್ಷಿಣ್ಯಪರತೆಗಳನ್ನು ಕೊಂಡಾಡುವ ಬರಹಗಳು ಅವರ ವ್ಯಕ್ತಿತ್ವದ ಸಕೃದ್ದರ್ಶನ ಮಾಡಿಸುವಲ್ಲಿ ಯಶಸ್ವಿಯಾಗಿವೆ. ಇಂಥ ಸಂಗ್ರಹಯೋಗ್ಯ ಬೃಹತ್ ಆಕರ ಗ್ರಂಥವನ್ನು ಇಷ್ಟೊಂದು ಸುಂದರವಾಗಿ ಅರ್ಥಪೂರ್ಣವಾಗಿ ಸಂಪಾದಿಸಿಕೊಟ್ಟಿರುವ ಸಂಪಾದಕರ ಶ್ರಮ, ಶ್ರದ್ಧೆಗಳನ್ನು ಮರೆಯುವಂತೆಯೇ ಇಲ್ಲ.

❖

14

ವಿಶ್ವ ಕವಿಯ ಜೀವನ ಚಿತ್ರಗಳು

'ಭಾರತೀಯ ಕಾವ್ಯ, ಘಮಘಮಿಸಿ ಅರಳುವ ಹೂವಾಗಿ ವಿಶ್ವಾದ್ಯಂತ ತನ್ನ ಕಂಪು ಪಸರಿಸುವಂತಾದ್ದು ಮೂರು ಸಲ ಎಂದು ಹೇಳುತ್ತಾರೆ. ಮೊದಲಿಗೆ ಋಷಿಕವಿ ವಾಲ್ಮೀಕಿಯ ಕಾವ್ಯ ತಪೋವನದ ಸಾನ್ನಿಧ್ಯದಲ್ಲಿ. ಎರಡನೇ ಸಲ ಕವಿ ಕುಲ ಗುರುವಾದ ಕಾಳಿದಾಸನ ಕಾವ್ಯೋದ್ಯಾನದಲ್ಲಿ. ಮೂರನೇ ಸಲ ಗುರುದೇವ ರವೀಂದ್ರರ ಕಾವ್ಯಾರಾಮದಲ್ಲಿ ಅದು ತನ್ನ ಉತ್ಕರ್ಷವನ್ನು ಮುಟ್ಟಿತು. ಹಾ. ಮಾ.ನಾಯಕ ರವೀಂದ್ರನಾಥ ಠಾಕೂರ್ ತಮ್ಮ ಕಾವ್ಯಕ್ಕೆ ನೊಬೆಲ್ ಪ್ರಶಸ್ತಿಯನ್ನು ಪಡೆಯುವ ಮೂಲಕ ವಿಶ್ವಕವಿ ಎಂದು ಹೆಸರಾದವರು ಭಾರತೀಯ ಭಾಷಾ ಸಾಹಿತ್ಯಗಳ ಮೇಲೆ ಅತ್ಯಂತ ಗಾಢವಾದ ಪ್ರಭಾವ ಬೀರಿದ ಬರಹಗಾರರೆಂದರೆ ರವೀಂದ್ರರು. ರವೀಂದ್ರರ

ಬಾಲ್ಯಕಾಲ ಜೀವನ ಸ್ಮೃತಿ, ರವೀಂದ್ರನಾಥ ಠಾಕೂರ್ ಅನು – ಗೀತಾ ವಿಜಯಕುಮಾರ್
ಪ್ರಕಟಣೆ : 2013, ಬೆಲೆ : 175/-
ಪ್ರಿಸಮ್ ಬುಕ್ಸ್ ಪ್ರೈ. ಲಿ.
ನಂ. 1865, 32ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 040

ಕೃತಿಗಳನ್ನು ಓದುವ ಸಲುವಾಗಿಯೇ ಬಂಗಾಳಿ ಕಲಿತವರಿದ್ದಾರೆ. ತಮ್ಮ ಕೃತಿಗಳಿಂದಷ್ಟೇ ಅಲ್ಲದೆ ತಮ್ಮ ಅನನ್ಯ ವ್ಯಕ್ತಿತ್ವದಿಂದಲೂ ಭಾರತೀಯರ ಮೇಲೆ ಅಚ್ಚಳಿಯದ ಪ್ರಭಾವ ಮುದ್ರೆ ಒತ್ತಿದವರು. ದೇಶದ ಸ್ವಾತಂತ್ರ್ಯ ಚಳವಳಿಯನ್ನು ಅಖಂಡವಾಗಿ ಬೆಂಬಲಿಸಿದವರು. ವಂಗ ವಿಭಜನೆ ವಿರೋಧಿಸಿ ಆಳುವ ಬ್ರಿಟಿಷ್ ಸರ್ಕಾರ ಕೊಡಮಾಡಿದ್ದ 'ಸರ್' ಪದವಿಯನ್ನು ಹಿಂತಿರುಗಿಸಿದ ದೇಶಭಕ್ತ ಕವಿ. ಕಾಳಿದಾಸನ ನಂತರ ಅತ್ಯಂತ ಸಮೃದ್ಧವಾದ ಬದುಕನ್ನು ಬದುಕಿ ತಮ್ಮ ಸಮೃದ್ಧವಾದ ಜೀವನಾನುಭವವನ್ನು ಕವಿಯಾಗಿ, ನಾಟಕಕಾರರಾಗಿ, ಕತೆಗಾರರಾಗಿ, ಕಾದಂಬರಿಕಾರರಾಗಿ, ಪ್ರಬಂಧಕಾರರಾಗಿ ತಮ್ಮ ಕೃತಿಗಳಲ್ಲಿ ಕಟ್ಟಿಕೊಟ್ಟವರು.

ಇಂಥ ಒಬ್ಬ ಮಹಾನ್ ವ್ಯಕ್ತಿಯ ಬದುಕಿನ ಬಗ್ಗೆ ಎಲ್ಲರಿಗೂ ಕುತೂಹಲ ಮತ್ತು ಆಸಕ್ತಿಗಳಿರುವುದು ಸಹಜ. ಸ್ವತಃ ರವೀಂದ್ರರೇ ತಮ್ಮ ಬದುಕಿನ ಬಗ್ಗೆ ಬರೆದುಕೊಂಡಿದ್ದಾರೆ. ಬಾಲ್ಯಕಾಲ ಮತ್ತು ಜೀವನ ಸ್ಮೃತಿ ಎಂಬ ಪ್ರಸ್ತುತ ಎರಡು ಕೃತಿಗಳಲ್ಲಿ ರವೀಂದ್ರರು ಬಾಲ್ಯದಿಂದ ತೊಡಗಿ ಯುವ ಕವಿಯಾಗಿ ಬೆಳೆಯುವವರೆಗಿನ ಬದುಕಿನ ಸಮಗ್ರ ವಿವರಗಳು ಅನಾವರಣಗೊಂಡಿವೆ. ಶ್ರೀಮತಿ ಗೀತಾ ವಿಜಯಕುಮಾರ್ ಅವರು ಅತ್ಯಂತ ಸೊಗಸಾಗಿ, ಮೂಲದ ಭಾಷಾ ಸೌಂದರ್ಯವೂ ಕೂಡಿ ಬರುವಂತೆ ಅನುವಾದಿಸಿಕೊಟ್ಟಿದ್ದಾರೆ. ಇವೆರಡೂ ಒಟ್ಟಾಗಿ ರವೀಂದ್ರರ ಬದುಕಿನ ವಿವರಗಳನ್ನು ಕಟ್ಟಿ ಕೊಡುವುದರ ಜೊತೆ ಜೊತೆಗೇ ಕಲ್ಕತ್ತದ ನಗರ ಜೀವನದ ಹಾಗೂ ಬಂಗಾಳದ ಸಾಮಾಜಿಕ ಜೀವನದ ಮತ್ತು ರವೀಂದ್ರರ ಕೌಟುಂಬಿಕ ಜೀವನದ ದಟ್ಟ ಚಿತ್ರಣವನ್ನು ನೀಡುತ್ತವೆ.

ರವೀಂದ್ರರು ವಿಶಿಷ್ಟ ಸಾಮಾಜಿಕ ಹಿನ್ನೆಲೆಯಿಂದ ಬಂದವರು. ತಂದೆ ಬ್ರಹ್ಮ ಸಮಾಜದ ಸಂಸ್ಥಾಪಕರೆಂದು ಹೆಸರಾದ ಮಹರ್ಷಿ ದೇವೇಂದ್ರನಾಥ ಠಾಕೂರರು ದೊಡ್ಡ ಜಮೀನುದಾರರು. ಶ್ರೀಮಂತಿಕೆ ತಾಂಡವವಾಡುತ್ತಿದ್ದ ಮನೆತನ. ಅವರ ತಾತ ದ್ವಾರಕನಾಥರಂತೂ ಅರಸರ ವೈಭವವನ್ನು ಮೆರೆದವರು. ತಂದೆಯವರಲ್ಲಿ ಶ್ರೀಮಂತಿಕೆ, ಆಧ್ಯಾತ್ಮಿಕತೆಗೆ ಅಡಿಯಾಳಾಗಿತ್ತು. ಕಲಿಯುಗದ ಜನಕ ಮಹಾರಾಜ ಎಂದು ಶ್ರೀ ರಾಮಕೃಷ್ಣ ಪರಮಹಂಸರಿಂದ ಪ್ರಶಂಸಿತರಾದ ರಾಜರ್ಷಿ ಸ್ವರೂಪದ ವ್ಯಕ್ತಿ. ಆಗಾಗ್ಗೆ ಹಿಮಾಲಯದ ಪರ್ವತಾರಣ್ಯಗಳಿಗೆ ಹೋಗಿ ತಪೋನುಷ್ಠಾನದಲ್ಲಿ ನಿರತರಾಗಿದ್ದು ಬಿಡುತ್ತಿದ್ದರು. ಹದಿಮೂರು ಮಕ್ಕಳ ತಂದೆಯಾದ ಈ ಮಹಾರಾಜ ಸಂಸಾರಿಯ ಕೊನೆಯ ಮಗ ರವೀಂದ್ರರು. ಮನೆಯ ತುಂಬ ಆಳು ಕಾಳುಗಳು, ನೆಂಟರು, ಇಷ್ಟರು ತುಂಬಿ ತುಳುಕಾಡುತ್ತಿದ್ದ ಪರಿಸರ.

ರವೀಂದ್ರರು ಕವಿಯಾಗಿ ಬೆಳೆಯಲು ಪ್ರೇರಣೆ ನೀಡಿದ ಗಂಗೆಯ ಪರಿಸರದ ಮನೆಗಳು, ಹಿಮಾಲಯದ ರುದ್ರ ಪರ್ವತಾರಣ್ಯಗಳಲ್ಲಿಯ ಸುಂದರ, ಪ್ರಕೃತಿ ಪರಿಸರ ಹಾಗೂ ರವೀಂದ್ರರ ಮನೆಯಲ್ಲಿನ ಸಂಗೀತ, ಸಾಹಿತ್ಯದ ವಾತಾವರಣಗಳ ಆಪ್ತ ಚಿತ್ರಣ ನಮ್ಮ ಮನಸ್ಸನ್ನು ತಟ್ಟುತ್ತದೆ. ಅವರ ಅಣ್ಣ ಜ್ಯೋತಿರಿಂದ್ರರು ಸ್ವತಃ ಒಳ್ಳೆಯ ಬರಹಗಾರರು, ತತ್ವ ಚಿಂತಕರು. ರವೀಂದ್ರರು ಶಾಲೆಯನ್ನು ಒಂದು 'ಸೆರೆ' ಎಂದು ಭಾವಿಸಿದ್ದರ ಪರಿಣಾಮವಾಗಿ, ಅದರ ಕಟ್ಟುನಿಟ್ಟುಗಳಿಗೆ ಬದ್ಧರಾಗಿ ಯಾವತ್ತೂ ನಡೆದುಕೊಳ್ಳಲಿಲ್ಲ. ಜಡ್ಜ್‌ಗಳಾಗಿದ್ದ ಇಬ್ಬರು ದೊಡ್ಡ ಮಕ್ಕಳ ಹಾಗೆ ಈ ಮಗನೂ ಬ್ಯಾರಿಸ್ಟರ್ ಆಗಬೇಕೆಂಬ ಪೋಷಕರ ಬಯಕೆ ಈಡೇರಿಸಲು ಎರಡೆರಡು ಸಲ ಲಂಡನ್‌ಗೆ ಹೋಗಿ ಲಂಡನ್ ವಿಶ್ವ ವಿದ್ಯಾಲಯದಲ್ಲೇ ಅಭ್ಯಾಸಕ್ಕೆ ತೊಡಗಿದರೂ ಅದನ್ನು ಕೊನೆ ಮುಟ್ಟಿಸಲಾಗದೆ, ಅರ್ಧಕ್ಕೇ ತಿಲಾಂಜಲಿ ಕೊಟ್ಟರು. ಆದರೆ ಅವರ ಕವಿ ವ್ಯಕ್ತಿತ್ವ ರೂಪುಗೊಳ್ಳಲನುವಾಗುವಂತೆ ಇಂಗ್ಲಿಷ್, ಸಂಸ್ಕೃತಗಳ ಕಲಿಕೆಗೆ ಮನೆಯಲ್ಲೇ ಅವಕಾಶ ಒದಗಿಸಿಕೊಡಲಾಗಿತ್ತು. ಅದಕ್ಕೆ ಚಾಲನೆ ನೀಡಿದವರು ಅವರ ದೊಡ್ಡಣ್ಣ ಹೇಮೇಂದ್ರನಾಥರು. ರವೀಂದ್ರರ ಮಾತಿನಲ್ಲೇ ಹೇಳಬೇಕೆಂದರೆ "ಬೆಳಿಗ್ಗೆಯಿಂದ ಸಂಜೆಯವರೆಗೂ ಓದು – ಬರಹದ ಕಾರ್ಖಾನೆಯ ಕೆಲಸ ನಡೆದಿತ್ತು". ಹೆಣ್ಣು ಮಕ್ಕಳು ಶಾಲೆಗೆ ಹೋಗುವ ಪದ್ಧತಿ ಆ ಕಾಲದಲ್ಲಿ ಇರಲಿಲ್ಲವೆಂದು ಹೇಳುತ್ತ "ಏನೇ ಆಗಲಿ, ಹೆಣ್ಣು ಜನ್ಮವೇ ಲೇಸೆಂದು ನನ್ನ ಮನಸ್ಸಿಗೆ ಆಗ ಅನ್ನಿಸುತ್ತಿತ್ತು" ಎಂದು ಹೇಳುತ್ತಾರೆ.

ಶಾಲಾ ನಿಯಮಕ್ಕೆ ಬದ್ಧರಾಗಿ ತಮ್ಮ ಕೆರಿಯರ್ ರೂಪಿಸಿಕೊಳ್ಳದಿದ್ದರೂ, "ಸ್ವಯಿಚ್ಛೆಯಿಂದ ನಾನೇನನ್ನು ಒಟ್ಟುಗೂಡಿಸಿಕೊಂಡು, ಜೋಳಿಗೆಗೆ ತುಂಬಿಕೊಂಡೆನೋ ಅದನ್ನು ಪಡೆದಿದ್ದೇನೆ" ಎಂಬುದು ರವೀಂದ್ರರ ಅಭಿಮಾನದ ಮಾತು. ಇಷ್ಟಾಗಿಯೂ ವಿದ್ಯಾಭ್ಯಾಸದ ಕಾರ್ಖಾನೆಯಲ್ಲಿ ಪೆಟ್ಟು ತಿಂದು ರೂಪುಗೊಂಡವರಲ್ಲ. ಆ ಕಾರ್ಖಾನೆಯ ಪ್ರತಿ ಹಂತವನ್ನೂ ತಪ್ಪಿಸಿಕೊಂಡೇ ಬಂದವರು. ಹೀಗೆ ಮನೆಯಲ್ಲೇ ಇಂಗ್ಲಿಷ್, ಸಂಸ್ಕೃತಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದರಿಂದ, ಪ್ರಾಥಮಿಕ ಶಾಲೆಯ ಕೊನೆಯ ವರ್ಷದಲ್ಲಿದ್ದಾಗಿನಿಂದಲೇ 9–10ನೇ ವಯಸ್ಸಿನಿಂದಲೇ ಛಂದೋಬದ್ಧವಾಗಿ ಕವನ ರಚಿಸುವ ಹವ್ಯಾಸಕ್ಕೆ ತೊಡಗಿದ್ದರು. ಹೂವಿನ ರಸದಿಂದಲೇ ಪದ್ಯ ಬರೆಯಲು ಯತ್ನಿಸಿದ ಅವರ ಮುಗ್ಧತೆ, ಅದನ್ನು ಗೇಲಿ ಮಾಡದೆ, ಅವಕಾಶವೊದಗಿಸಿದ ಅಣ್ಣ ಜ್ಯೋತಿರಿಂದ್ರರು – ಇದರ ಸಂಗತಿ ಬರುತ್ತದೆ. ಬಾಲ್ಯದಲ್ಲೇ ಸಂಗೀತದ ಪಾಠಕ್ಕೆ ತೊಡಗಿಸಿಕೊಂಡದ್ದು ಅದರ ಪರಿಣಾಮವಾಗಿ ರಾಗಕ್ಕೆ ಸಾಹಿತ್ಯ ಜೋಡಿಸುವುದನ್ನು

ಕಲಿತದ್ದು, ಪಿಯಾನೋ ಅಭ್ಯಾಸಕ್ಕೆ ತೊಡಗಿದ್ದು, ಒಟ್ಟಾರೆ ಸಂಗೀತದಲ್ಲಿ ಸಾಕಷ್ಟು ಪರಿಣತಿ ಪಡೆದ ವಿಷಯ ಇದೆಲ್ಲವನ್ನೂ ರವೀಂದ್ರರು ಹೇಳಿಕೊಂಡಿದ್ದಾರೆ. ಆಗಿನ ಕಾಲದಲ್ಲಿ ಕಲ್ಕತ್ತೆಯ ಕೇರಿಕೇರಿಗಳಲ್ಲಿ ಹವ್ಯಾಸಿ ರಂಗ ತಂಡಗಳಲ್ಲದೆ, ವೃತ್ತಿ ರಂಗ ತಂಡಗಳು ಇರುತ್ತಿದ್ದುದು, ಜಾತಿ, ವರ್ಗ, ಭೇದವಿಲ್ಲದೆ, ಅದರಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಅವಕಾಶವಿದ್ದುದು, ಶ್ರೀಮಂತರ ಮನೆಗಳಲ್ಲಿ ರಂಗತಂಡಗಳಿರುತ್ತಿದ್ದುದು, ಸ್ವತಃ ರವೀಂದ್ರರ ದೊಡ್ಡಪ್ಪ, ಅವರ ಮನೆಯಲ್ಲಿ ಇಂಥ ರಂಗ ತಂಡ ಕಟ್ಟಿದ್ದು ಈ ಎಲ್ಲ ವಿವರಗಳು ದಾಖಲಾಗಿವೆ. ಮಣ್ಣು, ನೀರು, ಗಿಡ, ಆಕಾಶ ಎಲ್ಲವೂ ತಮ್ಮೊಂದಿಗೆ ಮಾತನಾಡುತ್ತಿತ್ತು ಎಂಬಂಥ ರಮ್ಯ ಭಾವುಕ ಸಂಗತಿ ತಿಳಿಸುತ್ತಾರೆ. ಒಟ್ಟಾರೆ ಮೊದಲ ಭಾಗ, ಮುಂದೆ ಕವಿಯಾಗಿ, ನಾಟಕಕಾರರಾಗಿ, ಕತೆಗಾರರಾಗಿ, ರವೀಂದ್ರ ಸಂಗೀತ ಎಂಬ ವಿಶಿಷ್ಟ ಸಂಗೀತ ಪ್ರಕಾರಕ್ಕೆ ರೂಪುಕೊಡುವಂತಾದ ಬಹುಮುಖ ಪ್ರತಿಭೆಯ ವ್ಯಕ್ತಿತ್ವಕ್ಕೆ ಪ್ರೇರಕ, ಪೂರಕಗಳಾದ ಸಂಗತಿ, ಸನ್ನಿವೇಶಗಳ ಸುರಮ್ಯ ಚಿತ್ರಣವನ್ನು ನಮ್ಮ ಮುಂದಿಡುತ್ತದೆ.

ಎರಡನೆಯ ಭಾಗವಾದ ಜೀವನ ಸ್ಮೃತಿ ಕ್ರಮಬದ್ಧವಾದ ಆತ್ಮಚರಿತ್ರೆ ಅಲ್ಲ. ಅನೇಕ ಮುಖ್ಯ ಸಂಗತಿಗಳ ಸ್ಮೃತಿ ಚಿತ್ರಗಳು ದಾಖಲಾಗಿವೆ. ಅದರಲ್ಲಿ ಅವರ ರೋಗಿಷ್ಟ ತಾಯಿಯ ವಾತ್ಸಲ್ಯ, ಯಾವುದಕ್ಕೂ ಅಡ್ಡಿಪಡಿಸದೆ, ತಮ್ಮ ಬೆಳವಣಿಗೆ ರೂಪುಗೊಳ್ಳಲು ಕಾರಣವಾದ ತಂದೆಯ ವ್ಯಕ್ತಿತ್ವ, ಅಣ್ಣ ಜ್ಯೋತಿರಿಂದ್ರರು ತಮ್ಮನ್ನು ಬೆಳೆಸಿದ ಪರಿ,

ತಮಗೆ ಕಲಿಸುತ್ತಿದ್ದ ಗುರುಗಳ ಸಂಗತಿ, ಸ್ವತಃ ರವೀಂದ್ರರ ಭಾವುಕ, ಕಲ್ಪನಾಶೀಲ ವ್ಯಕ್ತಿತ್ವ, ಮನೆಯ ವಾತಾವರಣ, ಸಂಗೀತ ಸಾಹಿತ್ಯಗಳ ಕಲಿಕೆ, ಬಂಕಿಮ ಚಂದ್ರರನ್ನು ವಿದ್ಯಾಸಾಗರರನ್ನು ಭೇಟಿ ಮಾಡಿದ್ದು, ಕಾವ್ಯ ಚರ್ಚೆಗೆ ದೊರೆತ ವ್ಯಕ್ತಿಗಳು, ಹದಿನಾರನೇ ವಯಸ್ಸಿಗಾಗಲೇ ಕವನ ಸಂಕಲನ ಪ್ರಕಟಿಸಿದ್ದು, 'ಭಾರತಿ' ಎಂಬ ತಮ್ಮದೇ ಪತ್ರಿಕೆಯ ಸಂಪಾದಕರಾದದ್ದು, ಲಂಡನ್‌ಗೆ ಎರಡೆರಡು ಬಾರಿ ಹೋದದ್ದು ಇವೆಲ್ಲವನ್ನೂ ಕುತೂಹಲ ಹುಟ್ಟಿಸುವ ರೀತಿಯಲ್ಲಿ ಭಾವುಕವಾಗಿ ನಿರೂಪಿಸುತ್ತ ಹೋಗುತ್ತಾರೆ. ಕನ್ನಡಿಗರಾದ ನಮಗೆ ಕುತೂಹಲಕ್ಕೆ ಕಾರಣವಾದ ಎರಡು ಸಂಗತಿಗಳ ಪ್ರಸ್ತಾಪವೂ ಇಲ್ಲಿದೆ. ಮೊದಲನೆಯದು ನಮ್ಮ ಸುಂದರ ಕಾರವಾರಕ್ಕೆ ಬಂದು, ಅಲ್ಲಿ ಜಡ್ಜ್ ಆಗಿ ಕೆಲಸ ಮಾಡುತ್ತಿದ್ದ ಎರಡನೆಯ ಅಣ್ಣನ ಮನೆಯಲ್ಲಿ ತಂಗಿದ್ದು, ಪುಟ್ಟ ದೋಣಿ ಹತ್ತಿ ಕಾಳಿ ನದಿಯ ಉಬ್ಬರದ ಅಲೆಗಳ ಮೇಲೆ ತೇಲುತ್ತ, ಮತ್ತೊಂದು ದಡದಲ್ಲಿ ಇಳಿದದ್ದು, ಶಿವಾಜಿ ಬೆಟ್ಟದ ಮೇಲಿನ ಕೋಟೆ ನೋಡಿದ್ದು, ಅಷ್ಟೇ ಅಲ್ಲದೆ, ಅಲ್ಲಿದ್ದಾಗ ರಾತ್ರಿ ಕವಿತೆ ರಚಿಸಿದ್ದು, ಅದರ ಪೂರ್ಣ ಪಾಠ ಇದರಲ್ಲಿದೆ. ಕಾರವಾರದಲ್ಲಿದ್ದಾಗಲೇ 'ಪ್ರಕೃತಿಯ

ಪ್ರತಿರೋಧ' ಎನ್ನುವ ನಾಟ್ಯ ಕಾವ್ಯವನ್ನು ರಚಿಸಿದರಂತೆ. ಕಾರವಾರದ ಸಮುದ್ರ ತೀರದ ರಮ್ಯತೆಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾರೆ.

ಇನ್ನೊಂದು ಮುಖ್ಯ ಸಂಗತಿ ಎಂದರೆ, ಮಾತೃ ಭಾಷೆಯ ಕಲಿಕೆ, ಬಾಲ್ಯದಲ್ಲಿ ಎಷ್ಟು ಮುಖ್ಯ. ಮಾತೃಭಾಷೆಯಲ್ಲಿ ಆಲೋಚನೆಗಳು ರೂಪುಗೊಳ್ಳದೆ ಹೋದರೆ, ಮನಸ್ಸಿನ ಶಕ್ತಿಯೇ ಕುಂಠಿತಗೊಂಡು ಬಿಡುತ್ತದೆಂಬ ರವೀಂದ್ರರ ವಿಚಾರವನ್ನು ಅವರ ಮಾತುಗಳಲ್ಲೇ ನೋಡೋಣ. "ಬಂಗಾಲಿ ಕಲಿತಿದ್ದರಿಂದಲೇ ನಮ್ಮ ಮನಸ್ಸಿನ ಚಿಂತನೆಗಳು ಕಾರ್ಯೋನ್ಮುಖವಾಗಲು ಸಾಧ್ಯವಾಗಿರುವುದು. ಕಲಿಕೆ ಯಾವಾಗಲೂ ನಾವು ಮಾಡುವ ಊಟದಂತಿರಬೇಕು. ಊಟ ಮಾಡುವಾಗ ಬಾಯೊಳಗಿನ ತುತ್ತನ್ನು ಚೆನ್ನಾಗಿ ತಿಂದರೇ ರುಚಿ ತಿಳಿಯೋದು. ಇದರಿಂದ ಹೊಟ್ಟೆ ತುಂಬುವುದಷ್ಟೇ ಅಲ್ಲ, ಸಂತೋಷವೂ ಉಂಟಾಗುತ್ತದೆ. ಅದರಿಂದ ಬೀಜಶಕ್ತಿಯೂ ವೃದ್ಧಿಸುತ್ತದೆ. ಇಂಗ್ಲಿಷ್ ಕಲಿಕೆಯಲ್ಲಿ ಈ ರೀತಿ ಇರುವುದಿಲ್ಲ. ಅದರಲ್ಲಿ ಮೊದಲ ಸಲ ಜಗಿಯುವಷ್ಟರಲ್ಲೇ ಮುಂದಿನ ಎರಡು ಹಲ್ಲು ಅಲುಗಾಡಲಾರಂಭಿಸುತ್ತವೆ... ಅನಂತರವೇ ಅದು ಕಬ್ಬಿಣದ ಕಡಲೆಯಲ್ಲ ರಸಭರಿತ ಹಣ್ಣು ಎಂದು ತಿಳಿಯುತ್ತದೆ. ಅಷ್ಟು ಹೊತ್ತಿಗಾಗಲೇ ನಮ್ಮ ಅರ್ಧ ಆಯುಷ್ಯ ಕಳೆದಿರುತ್ತದೆ... ಮೊದಲಿನಿಂದಲೂ ಮಾತೃ ಭಾಷೆಯೊಳಗೆ ಆಲೋಚನೆಗಳು ಪ್ರಾರಂಭಗೊಳ್ಳದೆ ಹೋದರೆ, ಮನಸ್ಸಿನ ಶಕ್ತಿಯೇ ಕುಂಠಿತಗೊಂಡು ಬಿಡುತ್ತದೆ".

ರವೀಂದ್ರರ ಈ ಭಾಷಾ ವಿಚಾರಗಳು ಇಂಗ್ಲಿಷ್ ವ್ಯಾಮೋಹದಿಂದ ಕುರುಡಾದ ಕನ್ನಡದ ತಂದೆ – ತಾಯಂದಿರ, ಶಿಕ್ಷಣ ತಜ್ಞರ, ರಾಜಕಾರಣಿಗಳ ಕಣ್ಣು ತೆರೆಸಿಯಾವು.

ಇಂಗ್ಲಿಷ್ ವ್ಯಾಮೋಹ ಅಧಿಕವಾಗಿದ್ದ ಆ ಕಾಲದಲ್ಲಿ ತಮಗೆ ಧೈರ್ಯ ವಹಿಸಿ ದೀರ್ಘಕಾಲದವರೆಗೆ ಬಂಗಾಲಿ ಕಲಿಯುವ ವ್ಯವಸ್ಥೆ ಮಾಡಿಕೊಟ್ಟ ಅಣ್ಣನವರಿಗೆ ಕೃತಜ್ಞತೆ ಹೇಳುತ್ತಾರೆ. ಇದು 1912ರಷ್ಟು ಹಿಂದೆಯೇ ರವೀಂದ್ರರು ವ್ಯಕ್ತಪಡಿಸಿದ ಅಭಿಪ್ರಾಯ. ಹೀಗೆ ರವೀಂದ್ರರ ವಿಚಾರ, ಚಿಂತನೆಗಳನ್ನೊಳಗೊಂಡ ಈ ಆತ್ಮಕಥಾನಕದ ಓದು, ಅವರ ಬದುಕಿನ ಅನೇಕ ಕುತೂಹಲಕರ ಸಂಗತಿಗಳನ್ನೊಳಗೊಂಡಿರುವ ಕಾರಣ ಮುದ ನೀಡುತ್ತದೆ.

❖

15

ಜೀವಂತಿಕೆ ಜೊತೆ ತಳುಕು ಹಾಕಿಕೊಂಡ ಟಿಪ್ಪಣಿಗಳು

ಚಂದ್ರಮೋಹನ್ ಜೈನ್ ಎಂಬ ಹುಟ್ಟು ಹೆಸರಿನ ಆಚಾರ್ಯ ರಜನೀಶ್ 'ಓಶೋ' ಎಂದೇ ಖ್ಯಾತರಾದವರು. ಜ್ಞಾನೋದಯವಾದ 'ಅನುಭಾವಿ' ಎಂದು ಶಿಷ್ಯರಿಂದ ಶ್ಲಾಘಿಸಲ್ಪಟ್ಟ ಇವರು ತೀವ್ರ ಮೆಚ್ಚಿಕೆ ಮತ್ತು ತೀವ್ರ ಟೀಕೆಗೆ ಒಳಗಾದವರು. ಗಾಂಧಿ ಮತ್ತು ಅವರ ಸಮಾಜವಾದ ಕುರಿತ ಕಟು ಟೀಕೆ ಹಾಗೂ ಮುಕ್ತ ಲೈಂಗಿಕತೆಯ ಪುರಸ್ಕರ್ತರೆಂಬ ಕಾರಣಕ್ಕೆ ಅತ್ಯಂತ ವಿವಾದಕ್ಕೆ ಗುರಿಯಾದವರು. 'ಭಾರತ ಜನ್ಮ ನೀಡಿದ ಅತ್ಯಂತ ಸ್ವೋಪಜ್ಞ ಚಿಂತಕ, ಮುಕ್ತ ಚಿಂತನೆಯ ಅಜ್ಞೇಯತಾವಾದಿ'(ಖುಷ್ವಂತ್‌ಸಿಂಗ್) ಎಂಬುದರಿಂದ ಹಿಡಿದು, ಸ್ವಪ್ರಶಂಸೆಯ ಗುರು ಎಂಬ ಅತಿರೇಕದ ಅಭಿಪ್ರಾಯಗಳು ಅವರ ಬಗ್ಗೆ ಕೇಳಿ ಬಂದದ್ದುಂಟು.

ನಾನು ಮೆಚ್ಚಿದ ಪುಸ್ತಕಗಳು
ಮೂಲ : ಓಶೋ, ಅನುವಾದ : ಎಂ.ಎಸ್. ರುದ್ರೇಶ್ವರ ಸ್ವಾಮಿ
ಪುಟಗಳು : 349 ಬೆಲೆ : 180.00
ಸಪ್ನ ಬುಕ್ ಹೌಸ್, 3ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು – 560 009

ಆದರೆ ಅವರೊಬ್ಬ ಮಹಾನ್ ಜ್ಞಾನ ದೈತ್ಯ. ಓದಿನ ಎಲ್ಲ ಮಿತಿಗಳನ್ನೂ ಮೀರಿದ ರಾಕ್ಷಸ ಓದಿನ ಇಂಥ ಜ್ಞಾನೋಪಾಸಕರು, ಯಾವ ಕಾಲದಲ್ಲಾದರೂ ವಿರಳವೇ. ಸಾಹಿತ್ಯ, ವಿಜ್ಞಾನ, ಆಧ್ಯಾತ್ಮ, ತತ್ವಶಾಸ್ತ್ರ, ಕಲೆ, ಸಂಗೀತ ಹೀಗೆ ಯಾವುದೇ ವರ್ಗೀಕರಣ ಮಾಡದೆ, ಶ್ರೇಷ್ಠವಾದ ಗ್ರಂಥ ರಾಶಿ ಏನೆಲ್ಲ ಇದೆ, ಅದೆಲ್ಲವೂ ದೇಶ, ಧರ್ಮ, ಭಾಷೆಗಳ ಗಡಿಯನ್ನು ದಾಟಿ, ಓಶೋ ಅವರ ವ್ಯಾಸಂಗ ವಿಹಾರಕ್ಕೆ ಒಳಗಾಗಲೇಬೇಕು. ಓದುವುದೆಂದರೆ, ಹೃದಯ, ಮನಸ್ಸು, ಬುದ್ಧಿಗಳನ್ನು ತೆರೆದಿಟ್ಟು, ಪ್ರೀತಿಯಿಂದ ಒಳಕ್ಕೆ ಬರಮಾಡಿಕೊಳ್ಳುವುದೆಂದೇ. ತನಗೆ ಇಷ್ಟವಾದ, ಶ್ರೇಷ್ಠವೆಂದು ತೋರಿದ, ಪುಸ್ತಕಗಳನ್ನು ಗಾಢವಾದ ಒಲವಿನಿಂದ ಮತ್ತೆ ಮತ್ತೆ ಓದಿ ತನ್ನದಾಗಿ ಮಾಡಿಕೊಂಡು ಸಂತಸ ತಾಳಿ, ಒಳ ಅರಿವಿನ ಎಚ್ಚರದಿಂದ ಅವುಗಳನ್ನು ತನ್ನ ಶಿಷ್ಯರಿಗೆ ವ್ಯಾಖ್ಯಾನಿಸುತ್ತ, ತಾನು ಪಡೆದ ಸಂತಸವನ್ನು ಅವರಿಗೂ ಹಂಚುವುದು ಓಶೋ ಹವ್ಯಾಸ. ಅವರೊಬ್ಬ ಪ್ರಬಲವಾದ ಪ್ರೀತಿ, ಅಪ್ರೀತಿಗಳ ಮನುಷ್ಯ. ತಾವು ಮೆಚ್ಚಿದ ಪುಸ್ತಕವನ್ನು, ಅದರ ಕರ್ತೃವನ್ನು ಗಾಢವಾಗಿ ಪ್ರೀತಿಸಿ ಮುಕ್ತವಾಗಿ ಪ್ರಶಂಸಿಸುವಂತೆಯೇ, ಇಷ್ಟವಾಗದ ಗ್ರಂಥ, ವ್ಯಕ್ತಿಗಳನ್ನು ಅಷ್ಟೇ ಕಟುವಾಗಿ ಜರಿದೂ ಜರಿಯುತ್ತಾರೆ.

ಓಶೋ ತೋಂಡಿ ಸಂಪ್ರದಾಯಕ್ಕೆ (ಮೌಖಿಕ) ಸೇರಿದವರು. ಅವರ ಪುಸ್ತಕಗಳೆಲ್ಲವೂ ಅವರು ನೀಡಿದ ಅಸಂಖ್ಯಾತ ಉಪನ್ಯಾಸಗಳನ್ನು ಅವರ ಶಿಷ್ಯರು ರೆಕಾರ್ಡ್ ಮಾಡಿಟ್ಟುಕೊಂಡು, ಅನಂತರ ಅವುಗಳನ್ನು ಅಕ್ಷರ ರೂಪಕ್ಕಿಳಿಸಿ, ಪುಸ್ತಕ ರೂಪದಲ್ಲಿ ಪ್ರಕಟಿಸಿದವು. ಒಂದಿಷ್ಟು ಪತ್ರಗಳನ್ನು ಬಿಟ್ಟರೆ ಕೈಯ್ಯಾರೆ ಬರೆದದ್ದು ಯಾವುದೂ ಇಲ್ಲ. ಹೀಗಾಗಿ ಭಾಷಣಕಾರನ ಧೋರಣೆ ಈ ಟಿಪ್ಪಣಿಗಳಲ್ಲಿ ಢಾಳವಾಗಿ ಕಂಡುಬರುತ್ತದೆ. ಅವರ ಓದಿನ ವ್ಯಾಪ್ತಿ ಎಷ್ಟು ವಿಶಾಲವಾದದ್ದೋ ಅವರ ಉಪನ್ಯಾಸಗಳ ವ್ಯಾಪ್ತಿಯೂ ಅಷ್ಟೇ ಹರಹುಳ್ಳದ್ದು. ಗಂಟೆಗಟ್ಟಲೆ, ದಿನಗಟ್ಟಲೆ ಪುಸ್ತಕಗಳನ್ನು ಕುರಿತು ಅವರು ಮಾತನಾಡಬಲ್ಲರು. ಈ ಧೀಮಂತ ದೈತ್ಯನ ಹರಿತ ಬುದ್ಧಿಮತ್ತೆ, ಭಾಷೆಯ ಮೇಲಿನ ಅವರ ಪ್ರಭುತ್ವ ಬೆರಗುಗೊಳಿಸುವಂಥದು.

ಹದಿನಾರು ಸಭೆಗಳಲ್ಲಿ ಓಶೋ ತಾವು ಓದಿ ಮೆಚ್ಚಿದ 168 ಪುಸ್ತಕಗಳ ಬಗ್ಗೆ ಮಾಡಿದ ಟಿಪ್ಪಣೆಗಳನ್ನೊಳಗೊಂಡ ಪುಸ್ತಕವೇ ಪ್ರಸ್ತುತ "ನಾನು ಮೆಚ್ಚಿದ ಪುಸ್ತಕಗಳು". ಈ ಟಿಪ್ಪಣಿಗಳಲ್ಲಿ ಕಥನವಿದೆ, ವಿವರಣೆ ವ್ಯಾಖ್ಯಾನಗಳಿವೆ, ವಿಶ್ಲೇಷಣೆ ಇದೆ; ಅದಕ್ಕಿಂತ ಹೆಚ್ಚಾಗಿ ನಿರ್ಭಿಡೆಯ ಮಾತುಗಳು, ಬೀಸು ಹೇಳಿಕೆಗಳೂ ಸಾಕಷ್ಟಿವೆ. ಇದರಲ್ಲಿ ಪ್ರಸ್ತಾಪಿಸಲಾಗಿರುವ ಎಲ್ಲ ಪುಸ್ತಕಗಳ ಬಗ್ಗೆಯೂ ವಿವರಪೂರ್ಣ ವ್ಯಾಖ್ಯಾನಗಳಿಲ್ಲ. ಕೆಲವು ಪುಸ್ತಕಗಳ ಬಗ್ಗೆ ಒಂದೆರಡು ಸಾಲುಗಳಷ್ಟೇ ಇವೆ. ಕೆಲವು ಕಡೆ ಪುಸ್ತಕದ

ಕರ್ತೃ, ಪುಸ್ತಕದ, ಲೇಖಕನ ಬಗೆಗಿನ ಐತಿಹ್ಯ ವಿವರಗಳಷ್ಟೇ ಇರುತ್ತವೆ. ಆದರೆ ನಿಜವಾಗಿಯೂ ಶ್ರೇಷ್ಠವಾದ ಪ್ರಖ್ಯಾತ ಪುಸ್ತಕಗಳನ್ನು ಕುರಿತಂತೆ ಓಶೋ ಅದೆಂಥ ಅದ್ಭುತ ವ್ಯಾಖ್ಯಾನ ಮಾಡುತ್ತಾರೆಂದರೆ, ಓದುಗರಿಗೆ ವಿಸ್ಮಯ, ಸಂತಸ, ಬೆರಗಿನ ಹೊರತು, ಬೇರೆ ಭಾವ ಬರುವುದಿಲ್ಲ. ಅಷ್ಟೊಂದು ಒಳನೋಟದಿಂದ ಕೂಡಿದ್ದು, ಬರವಣಿಗೆ ಅತ್ಯಂತ ಆಪ್ಯಾಯಮಾನವಾಗಿದೆ.

ಓಶೋ ಪ್ರಸ್ತಾಪಿಸಿರುವ ಪುಸ್ತಕಗಳಲ್ಲಿ , ಜೆನ್ ಬುದ್ಧಿಸಂಗೆ ಸಂಬಂಧಪಟ್ಟ , ಒಟ್ಟಾರೆ ಧರ್ಮ, ತತ್ತ್ವಶಾಸ್ತ್ರಕ್ಕೆ ಸಂಬಂಧಪಟ್ಟ ಪುಸ್ತಕಗಳು, ಸಿಂಹಪಾಲು ಪಡೆದಿವೆ. ನಂತರದ ಸ್ಥಾನ ಸಾಹಿತ್ಯ ಪ್ರಪಂಚದ ಶ್ರೇಷ್ಠ ಪುಸ್ತಕಗಳಿಗೆ. ಜಗತ್ತಿನ ಯಾವ ಶ್ರೇಷ್ಠ ಚಿಂತಕನೂ, ಶ್ರೇಷ್ಠ ಪುಸ್ತಕವೂ ಓಶೋನ ಕಣ್ಣು ತಪ್ಪಿಸುವಂತೆಯೇ ಇಲ್ಲ.

ಅದು ಬಾದರಾಯಣನ ಬ್ರಹ್ಮಸೂತ್ರವಾಗಬಹುದು, ಶಂಕರಾಚಾರ್ಯರ ವಿವೇಕ ಚೂಡಾಮಣಿಯಾಗಬಹುದು, ಕಾರ್ಲ್‌ಮಾರ್ಕ್ಸ್‌ನ ದಾಸ್ ಕ್ಯಾಪಿಟಲ್ ಆಗಬಹುದು, ಟಾಲ್‌ಸ್ಟಾಯ್ ಅವರ ವಾರ್ ಅಂಡ್ ಪೀಸ್ ಆಗಬಹುದು, ಬರ್ಟ್ರಂಡ್ ರಸೆಲ್‌ನ ಪ್ರಿನ್ಸಿಪಿಯ ಮ್ಯಾಥಮ್ಯಾಟಿಕ್ ಆಗಬಹುದು, ರಮಣ ಮಹರ್ಷಿ, ಜೀಸಸ್, ಮೋಸೆಸ್ ಜರತುಷ್ಟ್ರ , ಪರಮಹಂಸರು, ಐನ್‌ಸ್ಟೀನ್, ಹಿಟ್ಲರ್, ಗಾಂಧಿ ಹೀಗೆ ಯಾವುದೇ ಪ್ರಸಿದ್ಧ ವ್ಯಕ್ತಿ ಆಗಬಹುದು. ಅವರ ಬಗ್ಗೆ ಓಶೋ ಪ್ರಸ್ತಾಪಿಸದೆ ಬಿಡುವುದಿಲ್ಲ. ಒಟ್ಟಾರೆ ಪೂರ್ವ – ಪಶ್ಚಿಮಗಳ ಹೆಸರಾಂತ ತತ್ತ್ವಶಾಸ್ತ್ರದ, ಧರ್ಮದ, ಸಾಹಿತ್ಯದ ಗ್ರಂಥಗಳು, ವ್ಯಕ್ತಿಗಳೆಲ್ಲರೂ ಅವರ ಓದಿನ, ಚಿಂತನೆಯ ಪರಿಧಿಯೊಳಗೆ ಬಂದೇ ಬರುತ್ತಾರೆ. ಓಶೋಗೆ ಅದು ಪ್ರಿಯವಾಗಲು ಬೇಕಾದ ಕಾರಣ ಒಂದೇ – ಅದು ನಿಜಕ್ಕೂ ಶ್ರೇಷ್ಠವಾಗಿರ ಬೇಕು, ಮನುಕುಲಕ್ಕೆ ಅದು ಉಪಯೋಗವಾಗು ವಂತಿರಬೇಕು, ಅರಿವಿನ ಬೆಳಕು ಚಿಮ್ಮುವಂತಿರಬೇಕು ಅಷ್ಟೆ. ಓಶೋದು ಅನಂತಮೂರ್ತಿಯವರು ಅಭಿಪ್ರಾಯಪಟ್ಟಿರುವಂತೆ ಕತೆ ಹೇಳಿಕೊಂಡು ಹಾಗೇ ಹರಿತ ವಿಶ್ಲೇಷಣೆ ವ್ಯಾಖ್ಯಾನ ಮಾಡಿಕೊಂಡು ಸಾಗುವ ರೀತಿ. ಕೆಲವೊಂದು ವ್ಯಕ್ತಿಗಳ ಬಗ್ಗೆ ಸ್ಫೋಟಕ ರೂಪದ ಮಾತುಗಳಿವೆ. ಅಡಾಲ್ಫ್ ಹಿಟ್ಲರ್ ಬಗ್ಗೆ – "ಅವನೊಬ್ಬ ಸಾಮಾನ್ಯ ಮಟ್ಟದ ಬಾಲಾಪರಾಧಿ. ಬೆಳವಣಿಗೆ ಹೊಂದದ ಮಗು ಬಲು. ಕುರುಪಿ ಹೆಣ್ಣಿನ ಗುಣದ ಒಂದಂಶವೂ ಇರಲೇ ಇಲ್ಲ. ತನ್ನೊಳಗಿನ ಹೆಣ್ಣನ್ನು ಕೊಂದಿದ್ದ ಅವನಿಗೆ ಹೊರಗಿನ ಹೆಣ್ಣಿನ ಜೊತೆ ಪ್ರೀತಿ ಹೇಗೆ ಸಾಧ್ಯ" ಎನ್ನುತ್ತಾರೆ.

ನೀಟ್ಷೆಯ 'ವಿಲ್ ಟು ಪವರ್' ಪುಸ್ತಕದ ಬಗ್ಗೆ ಹೇಳುತ್ತಾ – ಹಿಟ್ಲರ್ ತನ್ನೆಲ್ಲಾ ಜ್ಞಾನವನ್ನೂ ನೀಷೆಯಿಂದ ಕದ್ದಿದ್ದಾನೆ ಎನ್ನುತ್ತಾರೆ. ಹಾಗೆಯೇ ಪ್ರಸಿದ್ಧ ನಾಟಕಕಾರ

ಜಾರ್ಜ್‌ಬರ್ನಾಡ್ ಷಾ ತನ್ನ ಇಡೀ ತತ್ವಜ್ಞಾನ ಕದ್ದಿದ್ದು ನೀಷೆಯಿಂದ ಎನ್ನುತ್ತಾರೆ. ಅರವಿಂದರ ಬಗ್ಗೆ ಹೇಳುತ್ತಾ – ಅರವಿಂದ ತನ್ನ ಅತಿಮಾನುಷ ಕಲ್ಪನೆ ಕದ್ದಿದ್ದು ನೀಷೆಯ 'ವಿಲ್ ಟು ಪವರ್' ಮೂಲ ಪ್ರತಿಯಿಂದ ಎನ್ನುತ್ತಾರೆ. ಅವರೊಬ್ಬ ಮಧ್ಯಮ ಗುಣದ ವಿದ್ವಾಂಸರಾಗಿದ್ದರು, ಬಡಾಯಿ ಕೊಚ್ಚುವಂಥದ್ದೇನೂ ಇಲ್ಲ. ಅವರಲ್ಲಿ ಎಂದು ಮುಲಾಜಿಲ್ಲದೆ ಹೇಳುತ್ತಾರೆ. ನೀಷೆ ಕೂಡ ಜ್ಞಾನೋದಯವಾದವನಲ್ಲ ಎನ್ನುತ್ತಾರೆ.

ಕಮ್ಯುನಿಸಂ, ಕಮ್ಯುನಿಷ್ಟರು, ಅಸ್ತಿತ್ವವಾದ, ಸಾರ್ತ್ರೆ ಎಂದರೆ ಅವರಿಗೆ ಒಗ್ಗುವುದಿಲ್ಲ. ದಾಸ್ ಕ್ಯಾಪಿಟಲ್ ಕುರಿತು – "ಅದೊಂದು ರೀತಿಯಲ್ಲಿ ಶ್ರೇಷ್ಠ ಪುಸ್ತಕ, ಏಕೆಂದರೆ ಅದು ಲಕ್ಷಾಂತರ ಜನರ ಮೇಲೆ ಪ್ರಭಾವ ಬೀರುತ್ತಿರುವ ಪುಸ್ತಕ. ಆದರೆ ಅದೊಂದು ಯಾವತ್ತಿಗೂ ತುಂಬಾ ಕೆಟ್ಟದಾಗಿ ಬರೆದಿರುವ ಪುಸ್ತಕ. ಅದರಲ್ಲಿ ಅಂಥ ಒಳ್ಳೆಯದೇನೂ ಇಲ್ಲ. ಅವನು ಅರ್ಥಶಾಸ್ತ್ರಜ್ಞ ಅಲ್ಲವೇ ಅಲ್ಲ. ಒಳ್ಳೆ ಕನಸುಗಾರ ಮಾತ್ರ' ಎಂದು ಹೇಳಿ ತನ್ನ ಶಿಷ್ಯರಿಗೆ ಅದನ್ನು ಓದಬೇಡಿರೆಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತಾರೆ. ರಾಮಾನುಜರು ಸಂಪ್ರದಾಯವಾದಿ ಎಂಬ ಕಾರಣಕ್ಕೆ ತಮಗೆ ಇಷ್ಟವಾಗದಿದ್ದರೂ, ಬ್ರಹ್ಮಸೂತ್ರ ಕುರಿತ ಭಾಷ್ಯ 'ಶ್ರೀ ಭಾಷ್ಯ'ದ ಬಗ್ಗೆ ತುಂಬ ಮೆಚ್ಚಿಕೆ ಇದೆ. ಅದರ ಬಗ್ಗೆ ಅವರು ಹೇಳುವುದು – 'ಅದೊಂದು ಹೂದೋಟ – ರಾಮಾನುಜರು ಮರುಭೂಮಿಯನ್ನು ಹೂದೋಟವಾಗಿಸಿದ್ದಾರೆ' ಎಂದು.

ಅದೇ ರೀತಿ ಗಾಂಧಿಯ ರಾಜಕಾರಣ, ಸಮಾಜಶಾಸ್ತ್ರ , ಚರಕದಿಂದ ನೂಲು ತೆಗೆಯುವ ಬಗ್ಗೆ ತೀವ್ರ ವಿರೋಧವಿದ್ದರೂ ಅವರ ಆತ್ಮಕಥೆಯನ್ನು "ಅತ್ಯಂತ ಪ್ರಾಮಾಣಿಕವಾಗಿ ಬರೆದ, ಒಬ್ಬ ವಿಜ್ಞಾನಿಯ ಹಾಗೆ ವಾಸ್ತವಾಂಶಗಳನ್ನು ಹೇಳುತ್ತ, ಅದು ತನ್ನ ಆತ್ಮಚರಿತ್ರೆ ಎಂಬ ಎಳ್ಳಷ್ಟೂ ಕಾಳಜಿ ಇಲ್ಲದೆ, ಇನ್ನೊಬ್ಬರಿಂದ ಮುಚ್ಚಿಡುವ ಎಲ್ಲವನ್ನೂ ಬಯಲಿಗಿಟ್ಟರು" ಎಂದು ಮುಕ್ತ ಕಂಠದಿಂದ ಮೆಚ್ಚುತ್ತಾರೆ. ಆದರೆ ಅದರ ಶೀರ್ಷಿಕೆ ಸರಿಯಿಲ್ಲ ಎಂದು ಟೀಕಿಸುತ್ತಾರೆ. ಹೀಗೆ ವೈಯಕ್ತಿಕವಾಗಿ ತಮಗೆ ವ್ಯಕ್ತಿ ಕುರಿತು ತಿರಸ್ಕಾರ ವಿರೋಧಗಳಿದ್ದರೂ ಅವರ ಕೃತಿಯ ಬಗ್ಗೆ ನಿರ್ಲಿಪ್ತವಾಗಿ ವಿಶ್ಲೇಷಿಸಿ ವಿಮರ್ಶಿಸುವ ಅತ್ಯಂತ ಆರೋಗ್ಯಕರ ಮನಸ್ಸು , ನಿಜವಾದ ಒಬ್ಬ ವಿಮರ್ಶಕನಿಗಿರಬೇಕಾದ ಮನಸ್ಸು – ಓಶೋ ಅವರಿಗೆ ಇದೆ. ಇದೇ ಮನಸ್ಥಿತಿಯಿಂದ ಅರಿಸ್ಟಾಟಲ್‌ನ 'ಪೊಯಟಿಕ್ಸ್', ಟಾಲ್‌ಸ್ಟಾಯ್ ಅವರ ಮೂರು ಮಹಾ ಕಾದಂಬರಿಗಳಾದ ರಿಸರ್ರೆಕ್ಷನ್, ವಾರ್ ಅಂಡ್ ಪೀಸ್, ಅನ್ನಾಕರೆನಿನಾ, ಗೋರ್ಕಿಯ ಮದರ್, ಡಿ.ಎಚ್. ಲಾರೆನ್ಸ್‌ನ ಫೀನಿಕ್ಸ್, ಸೈಕೋ ಅನಾಲಿಸಿಸ್ ಅಂಡ್ ಅನ್‌ಕಾನ್ಷಿಯಸ್‌ನೆಸ್, ಖಲೀಲ್ ಗಿಬ್ರಾನ್‌ನ ಎಲ್ಲ ಗ್ರಂಥಗಳನ್ನು ಕುರಿತ ತುಂಬು ಪ್ರಶಂಸೆಯ, ಅತ್ಯಂತ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ.

ಓಶೋನ ಎಲ್ಲ ಅಭಿಪ್ರಾಯಗಳೊಂದಿಗೆ ನಾವು ಸಹಮತ ಹೊಂದಿರಲು ಸಾಧ್ಯವಿಲ್ಲ. ಕೆಲವು ಬೀಸು ಹೇಳಿಕೆಗಳು ಎಂದು ಕೂಡಾ ಅನ್ನಿಸಬಹುದು. ಆದರೆ ನಮ್ಮ ಅರಿವನ್ನು ವಿಸ್ತರಿಸುವ, ಜೀವನದಲ್ಲಿ ಓದಲೇ ಬೇಕಾದಂಥ ಗ್ರಂಥಗಳ ಬಗ್ಗೆ ದಿಗ್ದರ್ಶನ ಮಾಡಿಸುವ, ಸದಭಿರುಚಿಯೊಂದನ್ನೇ ಶ್ರೇಷ್ಠ ಮಾನದಂಡವನ್ನಾಗಿರಿಸಿ ಕೊಂಡ ಅನನ್ಯ ಪುಸ್ತಕ ಪ್ರೇಮಿಯೊಬ್ಬರ, ಅತ್ಯಂತ ಬೆಲೆ ಬಾಳುವ ಟಿಪ್ಪಣಿಗಳಾಗಿರುವ ಕಾರಣ ಎಲ್ಲರೂ ಓದಬೇಕಾದ ಗ್ರಂಥ ಇದು. ಇನ್ನು ರುದ್ರೇಶ್ವರಸ್ವಾಮಿಯವರ ಅನುವಾದದ ಬಗ್ಗೆ ಹೇಳಲೇ ಬೇಕಾದ್ದಿಲ್ಲ. ಇದಕ್ಕಿಂತ ಉತ್ಕೃಷ್ಟ ಅನುವಾದ ಸಾಧ್ಯವಿಲ್ಲವೆನಿಸುವಷ್ಟು ಸೊಗಸಾದ ಅನುವಾದ. ಅಲ್ಲೊಂದು ಇಲ್ಲೊಂದು ಸಣ್ಣ ಪುಟ್ಟ ತಪ್ಪುಗಳು ನುಸುಳಿವೆ. ಉದಾಹರಣೆಗೆ 'ಅಥಾತೋ ಜಿಜ್ಞಾಸಾ' ಎಂದಿರುವ ಬದಲು ಅಥತೊ... ಎಂದಿದೆ. ರಾಮಾನುಜರ ಪುಸ್ತಕದ ಹೆಸರು ಶ್ರೀಪಾಶ ಅಲ್ಲ, 'ಶ್ರೀಭಾಷ್ಯ'. ಸಾಂಗ್ಸ್ ಆಫ್ ಚಂಡೀದಾಸ್ – ಚಾಂದಿದಾಸರ ಹಾಡುಗಳು ಅಲ್ಲ – ಚಂಡೀದಾಸರ ಹಾಡು ಎಂದಿರಬೇಕು. ಚಂಡೀದಾಸ ಬಂಗಾಳ ಸಂತ. ಇವನ್ನು ಸರಿಪಡಿಸಿಕೊಂಡರೆ ಸಾಕು.

❖

16

ವರ್ಣ ವ್ಯವಸ್ಥೆಯ ವಾಸ್ತವವನ್ನು ಬಗೆವ ಪ್ರಯತ್ನ

ಭಾರತದ ಜಾತಿವ್ಯವಸ್ಥೆ ಎಲ್ಲ ಕಾಲದ ಪ್ರಜ್ಞಾವಂತರನ್ನು ಸಾವಿರಾರು ವರ್ಷಗಳಿಂದ ತೀವ್ರವಾಗಿ ಕಾಡುತ್ತಲೇ ಇದೆ. ಮೇಲು – ಕೀಳು ಎಂಬ ಅಸಮಾನತೆಯ ಆಧಾರದ ಮೇಲೆ ಸಮಾಜವನ್ನು ವಿಚ್ಛಿದ್ರಗೊಳಿಸಿ, ಜನರ ನಡುವೆ ಅಡ್ಡ ಗೋಡೆಗಳನ್ನು ನಿರ್ಮಿಸುವ ಮೂಲಕ ಒಂದು ಸಾಮಾಜಿಕ ಪಿಡುಗಾಗಿ ಪರಿಣಮಿಸಿರುವ ಜಾತಿ ವ್ಯವಸ್ಥೆಯನ್ನು ತೊಡೆದು ಹಾಕುವ ಪ್ರಯತ್ನವಾಗಿಯೇ ನೂತನ ಧರ್ಮಗಳು ಅಸ್ತಿತ್ವಕ್ಕೆ ಬಂದದ್ದೂ ಭಾರತದ ಇತಿಹಾಸದ ಅವಿಭಾಜ್ಯ ಅಂಗವೇ ಆಗಿದೆ. ಆದರೆ ಈಗ ಪಿಡುಗಾಗಿ ಕಾಣುತ್ತಿರುವ ಈ ಜಾತಿವ್ಯವಸ್ಥೆ ಮೂಲದಲ್ಲಿ ಹಾಗಿರಲಿಲ್ಲ. ಬುದ್ಧಿವಂತಿಕೆ ಅಥವಾ ಜ್ಞಾನ ಯಾವುದೇ ಒಂದು

ಐತರೇಯ ಮಹಾಪುತ್ರ, ಎಂ.ಎಸ್. ತಿಮ್ಮಪ್ಪ
ಪುಟಗಳು – 206, ಬೆಲೆ – ರೂ. 150/–,
ಅಂಕಿತ ಪುಸ್ತಕ, 53, ಶಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು – 560 004

ವರ್ಗದ ಸ್ವತ್ತಾಗಿರಲಿಲ್ಲ. ಸಮಾಜದ ಸುವ್ಯವಸ್ಥೆಯ ಸದುದ್ದೇಶದಿಂದಲೇ ಪ್ರಾರಂಭವಾದ ವರ್ಣ ವ್ಯವಸ್ಥೆಯು ಕಾಲಾಂತರದಲ್ಲಿ , ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಮೇಲ್ಮೈ ಉಳಿಸಿಕೊಳ್ಳುವ ಕೆಲವರ ಹುನ್ನಾರದ ಫಲವಾಗಿ ಮೇಲು – ಕೀಳುಗಳ ವಿಕೃತಾರ್ಥವನ್ನು ಪಡೆದುಕೊಂಡಿತು ಎಂಬ ವಾದವೂ ಇದೆ. ಅದಕ್ಕೆ ಕಾರಣ, ಮಂತ್ರದ್ರಷ್ಟಾರರು ಕೇವಲ ಬ್ರಾಹ್ಮಣರಾಗಿರಲಿಲ್ಲ. ಎಲ್ಲ ವರ್ಣದವರೂ, ಮಹಿಳೆಯರೂ ಇದ್ದರು. ವ್ಯಾಸ, ವಸಿಷ್ಠ, ವಿಶ್ವಾಮಿತ್ರರಂಥ ಮಂತ್ರದ್ರಷ್ಟಾರ ಋಷಿಗಳು ಕೂಡ ಹುಟ್ಟಿನಿಂದ ಬ್ರಾಹ್ಮಣರಾಗಿರಲಿಲ್ಲ. ತಮ್ಮ ಸಾಧನೆಯಿಂದ ಬ್ರಾಹ್ಮಣತ್ವವನ್ನು ಗಳಿಸಿಕೊಂಡವರು.

"ಜನ್ಮನಾ ಜಾಯತೇ ಶೂದ್ರ : ಸಂಸ್ಕಾರೇಣತು ದ್ವಿಜ" ಎಂಬ ಮಾತಿನಂತೆ, ಸಾಧನೆಯಿಂದ ನಿಜವಾದ ಅರ್ಥದಲ್ಲಿ ಬ್ರಾಹ್ಮಣರಾಗಬಹುದಿತ್ತು. ಋಗ್ವೇದದ ಪುರುಷ ಸೂಕ್ತದಲ್ಲಿ ವರ್ಣಗಳು ಸರ್ವಶಕ್ತನಾದ ಪುರುಷನಿಂದ ಹುಟ್ಟಿದವು ಎಂದು ಹೇಳುವ ಮಂತ್ರ ಒಂದು ರೂಪಕ. ಅದು ಮನುಷ್ಯನ ನಾಲ್ಕು ಸ್ವಭಾವಗಳನ್ನು ಸೂಚಿಸುತ್ತದೆ ಎಂದು ಕೆಲವರು ಅರ್ಥೈಸಿದರೆ, ಬಹಳಷ್ಟು ಜನರು, ಎಲ್ಲ ವರ್ಗದವರ ಮೇಲೆ ಮೇಲ್ಮೆ ಮತ್ತು ನಿಯಂತ್ರಣ ಸಾಧಿಸುವ ದೃಷ್ಟಿಯಿಂದ ಬ್ರಾಹ್ಮಣರು ಪುರುಷ ಸೂಕ್ತವನ್ನು ರಚಿಸಿದರು ಎಂದು ಅಭಿಪ್ರಾಯಿಸಿದ್ದಾರೆ. ಮೂಲತಃ ಆರ್ಯರಲ್ಲಿ ವರ್ಣ ವ್ಯವಸ್ಥೆ ಇರಲಿಲ್ಲ. ಅದು ಸಿಂಧು – ಸರಸ್ವತಿಯ ದ್ರಾವಿಡರ ಕೊಡುಗೆ ಎಂಬ ಮಾತೂ ಇದೆ. (ಹಿನ್ನುಡಿ – ಪುಟ 197). ಏನೇ ಆದರೂ ವೇದಗಳು ರಚನೆಯಾದ ಪ್ರಾರಂಭದಲ್ಲಿ ವರ್ಣ ವ್ಯವಸ್ಥೆಯಲ್ಲಿ ಮೇಲು ಕೀಳುಗಳ ಭೇದ ಇಲ್ಲದೆ ಹೋದರೂ ಕಾಲಾಂತರದಲ್ಲಿ ವರ್ಣವ್ಯವಸ್ಥೆಯಲ್ಲಿ ಬಿರುಕುಗಳು, ಶ್ರೇಷ್ಠ ಕನಿಷ್ಠಗಳೆಂಬ ಅಸಮಾನ ಭಾವಗಳು ಕಾಣಿಸಿಕೊಳ್ಳಲು ಹೆಚ್ಚು ಕಾಲ ಬೇಕಾಗಲಿಲ್ಲವೆನಿಸುತ್ತದೆ.

ವೇದಾಂತಗಳೆಂದು ಖ್ಯಾತವಾಗಿರುವ ಉಪನಿಷತ್ತುಗಳು, ಅರಣ್ಯಕಗಳು ಮತ್ತು ಬ್ರಾಹ್ಮಣಗಳು ವೇದಗಳು ರಚನೆಯಾದ ಎಷ್ಟೋ ಕಾಲದ ಅನಂತರದಲ್ಲಿ ಹುಟ್ಟಿದವು. ವಿಶಾಲವಾದ ಭಾರತದಲ್ಲಿ ಕೆಲವು ಭಾಗಗಳಲ್ಲಿ ವರ್ಣಗಳ ನಡುವೆ ಭೇದವಿಲ್ಲದೆ ಹೋದರೂ ಇನ್ನು ಕೆಲವು ಭಾಗಗಳಲ್ಲಿ ಶ್ರೇಷ್ಠ ಕನಿಷ್ಠಗಳ ಭೇದ ಸ್ಪಷ್ಟವಾಗಿ ಕಾಣಿಸಿಕೊಂಡಿತ್ತು. ಅದಕ್ಕೆ ನಿದರ್ಶನವಾಗಿ ಐತರೇಯನ ಕಥೆ ಇದೆ. ಐತರೇಯನು, ಐತರೇಯ ಉಪನಿಷತ್ತು , ಐತರೇಯ ಬ್ರಾಹ್ಮಣ ಮತ್ತು ಐತರೇಯ ಅರಣ್ಯಕಗಳನ್ನು ರಚಿಸಿದವನು ಎಂಬ ಪ್ರತೀತಿ ಇದೆ. ಭಾರತದ ವರ್ಣವ್ಯವಸ್ಥೆಯ ವಾಸ್ತವವನ್ನು ಬಗೆದು ನೋಡುವ ಪ್ರಯತ್ನದ ಅಂಗವಾಗಿ ಮಾನ್ಯ ಎಂ.ಎಸ್. ತಿಮ್ಮಪ್ಪನವರು ರಚಿಸಿರುವ ಪೌರಾಣಿಕ ಕಾದಂಬರಿ ಪ್ರಸ್ತುತ "ಐತರೇಯ ಮಹಾಪುತ್ರ". ವೇದಕಾಲೀನ ಇತಿಹಾಸವನ್ನು

ಸಮಾಜ ಜೀವನವನ್ನು ಪುನರ್‍ರೂಪಿಸುತ್ತ, ವರ್ಣವ್ಯವಸ್ಥೆಯ ತಳಬುಡವನ್ನು ಶೋಧಿಸುವುದರ ಜೊತೆಜೊತೆಗೇ ತಮ್ಮ ಕಾದಂಬರಿಯನ್ನು ಹಲವು ವಿಚಾರಗಳ ಚರ್ಚೆಯ ಒಡಲಾಗಿಸುವುದು ಕೂಡ ಲೇಖಕರ ಉದ್ದೇಶವಾಗಿದೆ. ತಮ್ಮ ಈ ಉದ್ದೇಶದಲ್ಲಿ ಅವರು ಬಹಳಷ್ಟು ಯಶಸ್ವಿಯೂ ಆಗಿದ್ದಾರೆ.

ಐತರೇಯ ಜೀವಿಸಿದ್ದೇ ವರ್ಣವ್ಯವಸ್ಥೆ ಅಸ್ತಿತ್ವಕ್ಕೆ ಬಂದು, ಭದ್ರವಾಗಿ ತಳ ಊರುತ್ತಿದ್ದ ಸಂದರ್ಭದಲ್ಲಿ. ಬ್ರಾಹ್ಮಣ ತಂದೆಗೆ ಬ್ರಾಹ್ಮಣೇತರ ಸ್ತ್ರೀಯಲ್ಲಿ ಜನಿಸಿದವನೆಂಬುದರ ದ್ಯೋತಕವೇ ಐತರೇಯನೆಂಬ ಹೆಸರು. ಅದರಿಂದಲೇ ಅವನು ತಂದೆಯ ಹೆಸರನ್ನು ಪಡೆಯದೆ ತಾಯಿಯ ಹೆಸರನ್ನು ಪಡೆದ. ಛಾಂದೋಗ್ಯೋಪನಿಷತ್ತಿನಲ್ಲಿ ಬರುವ ಸತ್ಯಕಾಮ ಜಾಬಾಲಿಯ ಕಥೆಯೂ ಇದನ್ನೇ ಸೂಚಿಸುತ್ತದೆ. ಬ್ರಾಹ್ಮಣೇತರ ಸ್ತ್ರೀಯಲ್ಲಿ ಹುಟ್ಟಿದವನೆಂಬ ಕಾರಣಕ್ಕೆ ತಂದೆ, ಮಗನಿಗೆ ಉಪನಯನವೇ ಮೊದಲಾದ ಯಾವುದೇ ಸಂಸ್ಕಾರವನ್ನು ನೀಡುವುದಿಲ್ಲ. ಆದರೆ ತಾಯಿಗೆ ಹೇಗಾದರೂ ಮಾಡಿ ಮಗನನ್ನು ಬ್ರಾಹ್ಮಣನನ್ನಾಗಿ, ವಿದ್ಯಾವಂತನನ್ನಾಗಿ ಮಾಡಬೇಕು, ಸಮಾಜದಲ್ಲಿ ಅವನು ಉನ್ನತಸ್ಥಾನ ಗಳಿಸಬೇಕು ಎಂಬ ಹಂಬಲವಿರುತ್ತದೆ. ಆದರೆ ಭಾರತದ ಆ ಭಾಗದ, ಅಂದಿನ ಸಮಾಜ ನಿಯಮಕ್ಕೆ ಅದು ವಿರುದ್ಧವಾಗಿತ್ತು. 'ಇತರಾ' ತಾನು ಪೂಜಿಸುತ್ತಿದ್ದ ಭೂದೇವಿಯನ್ನು ಪ್ರಾರ್ಥಿಸಿ, ಅವಳ ಅನುಗ್ರಹದಿಂದ ಮಗನಿಗೆ ಬ್ರಾಹ್ಮಣ ಸ್ಥಾನ ಕೊಡಿಸುತ್ತಾಳೆ. ಭೂದೇವಿಯ ಅನುಗ್ರಹ ಪಡೆದ ಇವನು ಐತರೇಯ ಮಹೀದಾಸನೆಂಬ ಹೆಸರು ಪಡೆದು ಋಗ್ವೇದಕ್ಕೆ ಸಂಬಂಧಿಸಿದ ಐತರೇಯ ಬ್ರಾಹ್ಮಣ, ಐತರೇಯ ಅರಣ್ಯಕ ಮತ್ತು ಐತರೇಯ ಉಪನಿಷತ್ತುಗಳನ್ನು ರಚಿಸಿದನು ಎಂಬ ಒಂದು ಕಥೆಯ ಎಳೆಯನ್ನು ಹಿಡಿದು, ಅದಕ್ಕೆ ಕಲ್ಪನೆಯ ರಕ್ತ ಮಾಂಸಗಳನ್ನು ತುಂಬಿ ಐತರೇಯ ಮಹಾಪುತ್ರ ಎಂಬ ಈ ಕಾದಂಬರಿಯನ್ನು ರಚಿಸಿದ್ದಾರೆ. ಒಂದು ರೀತಿಯಲ್ಲಿ ಸಾಮಾಜಿಕತೆ ಮತ್ತು ಚಾರಿತ್ರಿಕತೆಗಳಿಗೆ ದೂರವಾದ ವೈದಿಕ ಕಾಲದ ಜನ ಜೀವನದ ಚಿತ್ರಣ ನೀಡುವಾಗ ಹೀಗೆ ಕಲ್ಪನೆಗೆ ಶರಣಾಗುವುದು ಅನಿವಾರ್ಯ. ಆದರೆ ಸೋದ್ದಿಶ್ಯವಾದ ಈ ಕಾದಂಬರಿಯಲ್ಲಿ ಉದ್ದಕ್ಕೂ ಕಂಡುಬರುವುದು ಲೇಖಕರ ಅಪಾರವಾದ ವ್ಯುತ್ಪತ್ತಿ. ಹಾಗಾಗಿಯೇ ಕಾದಂಬರಿಯಲ್ಲಿ ವೈಚಾರಿಕತೆಗೆ ಸಾಕಷ್ಟು ಇಂಬು ದೊರಕಿಸಿಕೊಡಲು ಸಾಧ್ಯವಾಗಿದೆ.

ತನ್ನ ಗಂಡನ ಹಾಗೆ ಮಗನೂ ಬ್ರಾಹ್ಮಣನಾಗಿ ಸ್ಥಾನ ಮಾನಗಳನ್ನು ಪಡೆದು, ಯಜ್ಞಯಾಗಾದಿಗಳನ್ನು ನಡೆಸಿ, ಗೌರವ ಮರ್ಯಾದೆಗಳನ್ನು ಗಳಿಸಬೇಕೆಂಬ ತನ್ನ ತಾಯಿ 'ಇತರಾ'ಳ ಆಕಾಂಕ್ಷೆಯನ್ನು ಈಡೇರಿಸುವ ವ್ಯತಿಕರದಲ್ಲಿ ಐತರೇಯನು ವಾಯವ್ಯ

ಉತ್ತರ ಭಾರತವನ್ನು ಸುತ್ತುತ್ತಾ ಋಷಿಯೊಬ್ಬನಿಂದ ಶಕ್ತಿಪಾತವನ್ನು ಹೊಂದಿ ಬ್ರಹ್ಮಜ್ಞಾನಿಯಾಗುವ ಅರ್ಹತೆ ಸಂಪಾದಿಸುತ್ತಾನೆಂಬುದು ಅಂಥ ಒಂದು ಮಹತ್ವದ ಕಲ್ಪನೆ. ಯಜ್ಞಶಾಲೆಯಲ್ಲಿ ಅವನ ತಂದೆ ಯಾಜ್ಞವಲ್ಕ್ಯ ಅವನನ್ನು ಗುರುತಿಸಲು ಹಿಂಜರಿದಾಗ, ಯಜ್ಞಕುಂಡದಿಂದ ಮೂಡಿ ಬಂದ ಭೂದೇವಿ ಅವನನ್ನು ಸಿಂಹಾಸನದ ಮೇಲೆ ಕೂರಿಸಿ ಆತನು ಮಹಾಜ್ಞಾನಿ ಎಂಬುದನ್ನು ಘೋಷಿಸಿ ಎಲ್ಲರೂ ಅದನ್ನು ಮಾನ್ಯ ಮಾಡುತ್ತಾರೆಂಬುದು ಇನ್ನೊಂದು. ಸಾಯಣಾಚಾರ್ಯರ ಮೂಲಕಥೆಗೆ ವಿಭಿನ್ನವಾದ ಈ ಕಲ್ಪನೆಗಳನ್ನು ಸೃಷ್ಟಿಸುವ ಮೂಲಕ ಕಾದಂಬರಿಗೆ ಹೊಸ ತಿರುವು ನೀಡಿದ್ದಾರೆ. ಕನ್ನಡದಲ್ಲಿ ಈ ಹಿಂದೆ ದೇವುಡು ಅವರು ತಮ್ಮ 'ಮಹಾಬ್ರಾಹ್ಮಣ' ಮತ್ತು 'ಮಹಾಕ್ಷತ್ರಿಯ' ಕಾದಂಬರಿಗಳಲ್ಲಿ ಪೌರಾಣಿಕ ಜಗತ್ತಿನ ಚಿತ್ರಣ ನೀಡುವಲ್ಲಿ ತಮ್ಮ ಕಲ್ಪನೆ ಹಾಗೂ ವ್ಯುತ್ಪತ್ತಿಗಳ ಶ್ರೀಮಂತಿಕೆಯನ್ನು ಮೆರೆದಿದ್ದರು. ತಿಮ್ಮಪ್ಪನವರು ಈ ಕಾದಂಬರಿಯಲ್ಲಿ ಅಷ್ಟಲ್ಲದಿದ್ದರೂ ಅನೇಕ ವೈಚಾರಿಕ ಪ್ರಶ್ನೆಗಳನ್ನೆತ್ತುವುದರ ಮೂಲಕ ವರ್ತಮಾನಕ್ಕೆ ಪ್ರಸ್ತುತಗೊಳಿಸುವ ಪ್ರಯತ್ನ ಮಾಡಿದ್ದಾರೆ. 'ರಾಕ್ಷಸರೆಂದರೆ' ಪುರಾಣಗಳಲ್ಲಿ ಬರುವ ಕಪ್ಪುದೇಹದ, ಅಕರಾಳ ವಿಕರಾಳ ಆಕೃತಿಯವರಲ್ಲ. ಅವರು ರಾಕ್ಷಸ ಬುದ್ಧಿಯಿರುವ ಮನುಷ್ಯರೇ ಹೊರತು ಬೇರೆ ಅಲ್ಲ ; ಮನುಷ್ಯರೇ ತಮ್ಮ ಕ್ರಿಯೆಗಳಿಂದ ರಾಕ್ಷಸರಾಗುತ್ತಾರೆ ಎಂಬುದು ಅಂಥದೊಂದು ಮಾತು. ಹಾಗೆಯೇ ತಪಸ್ವಿಗಳೆಂದರೆ ಯಾವುದೋ ಒಂದು ಉದ್ದೇಶಕ್ಕಾಗಿ ಚಿಂತನೆ ಮಾಡುತ್ತ ಅಂತರಂಗದಲ್ಲಿ ಬೇಯುವವರು, ಕಷ್ಟಪಡುವವರು, ಹೆಚ್ಚಾಗಿ ಪರಮಾತ್ಮನನ್ನು ಕುರಿತು ಚಿಂತಿಸುವವರು (ಪುಟ 41) ಎಂಬ ವ್ಯಾಖ್ಯಾನ ಅರ್ಥಪೂರ್ಣವಾದ್ದು.

ಇನ್ನು ಸ್ತ್ರೀಯರನ್ನು ಕುರಿತಂತೆ ಅತ್ಯಂತ ಪ್ರಗತಿಪರವೂ, ಪ್ರಸ್ತುತವೂ ಆದ ವಿಚಾರಗಳಿವೆ. 'ಹೆಂಗಸರೂ ತಪಸ್ಸು ಮಾಡಬಹುದು. ಅದಕ್ಕೆ ಯಾರ ಅಪ್ಪಣೆಯೂ ಬೇಕಾಗಿಲ್ಲ. ಹೆಣ್ಣು – ಗಂಡು ಬೇರೆ ಬೇರೆ ಅಲ್ಲ, ದೇಹಗಳು ಬೇರೆ ಬೇರೆ ಅಷ್ಟೆ. ಅಲ್ಲದೆ ಹೆಣ್ಣಾದ್ದಕ್ಕೆ ಖೇದ ಪಡಬೇಕಾಗಿಲ್ಲ. ಹೆಣ್ಣು ಹಡೆಯಬಲ್ಲಳು, ಸಂತಾನವನ್ನು ರಕ್ಷಿಸಬಲ್ಲಳು, ಆದರೆ ಗಂಡಿಗಾದರೋ ಕಾಮ ಶಮನವಾದಾಗ ಸಂತೋಷ ಸುಖ ಸಿಗುತ್ತದೆ. ಅದು ಕ್ಷಣಿಕದ್ದು ಹೆಣ್ಣು ಗರ್ಭವತಿಯಾದಾಗ, ಮಗು ಅಮ್ಮಾ ಎಂದು ಕರೆದಾಗ – ಅದರ ಲಾಲನೆ ಪಾಲನೆಯಲ್ಲಿ ಹೆಣ್ಣಿನ ಸುಖ ಸಂತೋಷ ಅಡಗಿದೆ ಎಂಬಂಥ ವಿಚಾರಗಳು ಎಲ್ಲ ಕಾಲಕ್ಕೂ ಪ್ರಸುತ್ತವೇ.

ಆರ್ಯರ ಸಮಾಜ ಜೀವನ, ವರ್ಣ ವ್ಯವಸ್ಥೆಯ ಪ್ರಾರಂಭದಲ್ಲಿ ಯಾರು ಬೇಕಾದರೂ ಬ್ರಾಹ್ಮಣರಾಗಬಹುದು ಎಂದು ಇದ್ದ ಬಗ್ಗೆ , ಗೋತ್ರ ಪ್ರವರ್ತಕ ಋಷಿಗಳೆಲ್ಲಾ

ಬ್ರಾಹ್ಮಣರೇ ಆಗಿರಲಿಲ್ಲ ಎಂಬುದನ್ನು ಆ ನಂತರದಲ್ಲಿ ಆದ ಪ್ರತಿಗಾಮಿ ಮಾರ್ಪಾಟುಗಳು, ಬ್ರಾಹ್ಮಣರ ಸ್ವಾರ್ಥ ಇವನ್ನೆಲ್ಲಾ ಚರ್ಚಿಸಲಾಗಿದೆ. ಕುಂಬಾರನೊಬ್ಬ ಬ್ರಹ್ಮಜ್ಞಾನವನ್ನು ಲೇವಡಿ ಮಾಡುವ, "ಬರಿಯ ಋಕ್ಕುಗಳನ್ನು ರಚಿಸಿ, ಪ್ರಾರ್ಥನೆಗಳನ್ನು ಹಾಡುತ್ತಿದ್ದರೆ ಈ ಲೋಕದ ಸಮಸ್ಯೆಗಳು ಬಗೆಹರಿಯುವುದಿಲ್ಲ. ಪುರುಷ ಪ್ರಯತ್ನಗಳು ಮುಖ್ಯ" ಎಂಬ ಮಾತನ್ನೆತ್ತುತ್ತಾನೆ. ಇಂಥವನ್ನೆಲ್ಲಾ ಕಾದಂಬರಿಯ ಒಡಲಿಲ್ಲ ಅಳವಡಿಸುವ ಮೂಲಕ, ಪೌರಾಣಿಕ ಕಾದಂಬರಿಯನ್ನು ಈ ಕಾಲಕ್ಕೂ ಪ್ರಸ್ತುತಗೊಳಿಸುವ ಒಳ್ಳೆಯ ಪ್ರಯತ್ನವನ್ನೇನೋ ಲೇಖಕರು ಮಾಡಿದ್ದಾರೆ. ಇಷ್ಟಾದರೂ, ವರ್ಣ ವ್ಯವಸ್ಥೆಯ ಮೂಲದಲ್ಲಿ ಶ್ರೇಷ್ಠ , ಕನಿಷ್ಠ ಭೇದ ಭಾವಗಳಿರಲಿಲ್ಲ, ಯಾರು ಯಾವ ವೃತ್ತಿಯನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಬಹುದಿತ್ತು ಎಂಬ "ಪುರುಷ ಸೂಕ್ತದ ಆಶಯವು ದೈನಂದಿನ ಬದುಕಿನಲ್ಲಿ ಜಾರಿಗೆ ಬರಲೇ ಇಲ್ಲ ಎಂಬುದು ಕಟು ಸತ್ಯ" ಎಂಬ ಡಾ.ನಾ. ಸೋಮೇಶ್ವರ ಅವರ (ಹಿನ್ನುಡಿ : ಪು. 197) ಮಾತೇ ನಿಲ್ಲುತ್ತದೆ ಹಾಗೂ ಈ ಕಾದಂಬರಿಯು "ಶೂದ್ರರ ಆತ್ಮವಿಶ್ವಾಸವನ್ನು ವರ್ಧಿಸಲು ನೆರವಾದೀತೆಂಬುದು" ಕೇವಲ ಒಂದು ಸದಾಶಯವಾಗಿಯೇ ಉಳಿಯುತ್ತದೆ. ಕಾರಣ ಶೂದ್ರರಿಗೆ ಈಗ ಅಂಥ ಅವಲಂಬನೆಯ ಅಗತ್ಯವಿಲ್ಲವೆನಿಸುತ್ತದೆ. ಏನೇ ಆದರೂ ಒಂದು ಸಂದುಹೋದ ಕಾಲವನ್ನು ಕಟ್ಟಿ ಕೊಡುವಲ್ಲಿ ಹಾಗೂ ಈ ಕಾಲಕ್ಕೂ ಪ್ರಸ್ತುತವೆನಿಸಬಹುದಾದ ಕೆಲವು ವಿಚಾರಗಳನ್ನು ಕಾದಂಬರಿಯ ಒಡಲಲ್ಲಿ ಔಚಿತ್ಯಪೂರ್ಣವಾಗಿ ಅಳವಡಿಸುವಲ್ಲಿ ಕಾದಂಬರಿಕಾರರು ಯಶಸ್ವಿಯಾಗಿದ್ದಾರೆ.

❖

17

ವಿಚಾರ–ವಿವೇಕಗಳ ಅಪೂರ್ವ ಭಂಡಾರ

ವ್ಯಾವಹಾರಿಕ ಜಗತ್ತಿನಲ್ಲಿ ಯಶಸ್ಸನ್ನು ಗಳಿಸಿ ಬದುಕನ್ನು ಸುಖಮಯವಾಗಿ ಮಾಡಿಕೊಂಡು, ಸುಂದರಗೊಳಿಸಿ ಕೊಳ್ಳುವುದು ಹೇಗೆ ಎಂಬುದು ನಮ್ಮೆಲ್ಲರ ಮುಂದಿರುವ ಮಿಲಿಯನ್ ಡಾಲರ್ ಪ್ರಶ್ನೆ. ಉನ್ನತ ವಿದ್ಯಾರ್ಹತೆಯಿದ್ದು , ಪ್ರಾಮಾಣಿಕನಾಗಿದ್ದು ದುಡಿಮೆಯೇ ಧರ್ಮವೆಂದು ನಂಬಿ, ಕೆಲಸ ಮಾಡಿದರೂ ಅನೇಕ ಸಲ ಬದುಕಿನಲ್ಲಿ ಯಶಸ್ಸು ಗಳಿಸದೆ ಹೋಗಬಹುದು. ಬದಲಿಗೆ ತನ್ನ ಒಳ್ಳೆಯತನ, ಪ್ರಾಮಾಣಿಕತೆಗಳೇ ತನಗೆ ಮುಳುವಾಗಿಬಿಡಬಹುದು, ಅದೂ ಅಲ್ಲದೆ ಧೂರ್ತರೂ, ಕಪಟಿಗಳೂ ಆದ, ಅಷ್ಟೇನೂ ಅರ್ಹತೆ ಇಲ್ಲದವರೂ ಯಶೋಗೋಪುರದ ತುದಿಯನ್ನು ತಲುಪಿಬಿಡುವಂಥ ಚೋದ್ಯಗಳು ನಡೆದುಬಿಡಬಹುದು. ತಾನು ಮುನ್ನುಗ್ಗಿ ಯಶಸ್ಸು ಗಳಿಸುವುದು ಹಾಗಿರಲಿ, ಅದಕ್ಕಿಂತ

ನೀವು ಮುಳುಗುತ್ತಿದ್ದೀರಾ? ಹಾಗಾದರೆ ಸಬ್ ಮೆರಿನ್ ಆಗಿ
ಇಂಗ್ಲೀಷ್ ಮೂಲ : ಪವನ್ ಚೌದರಿ, ಅನುವಾದ : ಈಶ್ವರ ದೈತೋಟ
ಪು.198, ಮು. 2010, ಬೆಲೆ ರೂ. 125/–
ವಿಸ್ಡಮ್ ಪಬ್ಲಿಕೇಷನ್ಸ್, 649, 04ಯು, ಉದ್ಯೋಗ ವಿಹಾರ, 5ನೇ ಫೇಸ್, ಗುರುಗಾಂವ್, ಹರ್ಯಾಣ–122 001

ಬೇರೆಯವರಿಗೆ ಟಾಂಗ್‌ಕೊಟ್ಟು ಬೀಳಿಸಿ, ಅವರನ್ನು ದಾಟಿಕೊಂಡು ಮುಂದೋಡುವ ಧೂರ್ತರು ಕಾಣಬರುವುದೇ ಈಗಿನ ವಿದ್ಯಮಾನ.

ಬುದ್ಧಿವಂತರಾಗಿದ್ದರೂ ಸಫಲತೆ ಪಡೆಯಲಾಗದೆ, ಮುಳುಗಿಯೇ ಹೋಗುವ ಸಂದರ್ಭ ಎದುರಾಗಬಹುದು. ಕೇವಲ ಒಳ್ಳೆಯತನ, ಕೇವಲ ನೇರ ನಡೆನುಡಿ, ಯಶಸ್ಸಿನ ತುದಿಗೊಯ್ಯದೆ ಹೋಗಬಹುದು. ಕಾರಣ ಇದು ಸ್ಪರ್ಧಾತ್ಮಕ ಜಗತ್ತು ಹಾಗೂ ಅದಕ್ಕೆ ದಯೆ, ದಾಕ್ಷಿಣ್ಯಗಳು ಬಹುವೇಳೆ ಅಪರಿಚಿತ. ಅಂಥ ಸಂದರ್ಭದಲ್ಲಿ ಅನುಸರಿಸಬೇಕಾದ ಮಾರ್ಗ ಯಾವುದು ಎಂಬ ಪ್ರಶ್ನೆ ಏಳಬಹುದು. ಅಯೋಗ್ಯರೂ, ಧೂರ್ತರೂ, ಕಪಟಿಗಳೂ ಆದವರನ್ನು ನಿಭಾಯಿಸುವುದು ಸುಲಭವಲ್ಲ. ಅದಕ್ಕೆ ವಿಶೇಷವಾದ ಜಾಣ್ಮೆ, ಬುದ್ಧಿವಂತಿಕೆ, ತಿಳಿವು ಬೇಕಾಗುತ್ತದೆ. ಈಗಂತೂ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಪಟ್ಟ ಪುಸ್ತಕಗಳು, ಇಂಗ್ಲಿಷಿನಲ್ಲಿ ಮತ್ತು ಬೇರೆ ಭಾಷೆಗಳಲ್ಲಿ ಬೇಕಾದ ಹಾಗೆ ಬರುತ್ತಿವೆ. ಹಾಗೆಯೇ ಕಪಟಿಗಳ ಕೈಚಳಕದ ರೀತಿಗಳು, ವಿಧಾನಗಳನ್ನು ತಿಳಿಸಿಕೊಟ್ಟು ಹೇಗೆ ಯಶಸ್ಸಿನ ಮೆಟ್ಟಿಲುಗಳನ್ನು ಏರುತ್ತ ಹೋಗಬಹುದೆಂಬುದನ್ನು ತಿಳಿಸುವಂಥ ಪುಸ್ತಕಗಳಿವೆ. ಪ್ರಸ್ತುತ "ನೀವು ಮುಳುಗುತ್ತಿದ್ದೀರಾ..? ಹಾಗಿದ್ರೆ ಸಬ್‌ಮೆರೀನ್ ಆಗಿ" ಎಂಬುದು ಅಂಥದೊಂದು ಪುಸ್ತಕ, ಪವನ್ ಚೌದರಿಯವರ ಇಂಗ್ಲಿಷ್ ಮೂಲದ ಪುಸ್ತಕವನ್ನು ಖ್ಯಾತ ಪತ್ರಕರ್ತ ಈಶ್ವರ ದೈತೋಟ ಅವರು ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ.

ಇಟಲಿಯ ಮಾಕಿಯಾವೆಲ್ಲಿ , ಭಾರತದ ಕೌಟಿಲ್ಯ, ಗ್ರೀಕ್‌ನ ಅರಿಸ್ಟಾಟಲ್, ಫ್ರಾನ್ಸಿನ ವಾಲ್ಟೇರ್ ಮುಂತಾದವರು ತಮ್ಮ ಕಾರ್ಯಾಚರಣೆ ಮತ್ತು ಅನುಭವಗಳ ಬೆಳಕಿನಲ್ಲಿ ತಾವು ಗಳಿಸಿದ ತಿಳಿವನ್ನು ತಮ್ಮ ಗ್ರಂಥಗಳಲ್ಲಿ ದಾಖಲು ಮಾಡಿದ್ದಾರೆ. ಪವನ್ ಚೌದರಿಯವರು ಇವರುಗಳಿಂದ ಪ್ರೇರಣೆ ಹೊಂದಿ ಪ್ರಸ್ತುತ ಗ್ರಂಥ ರಚಿಸಿದ್ದಾರೆ.

ಈ ಗ್ರಂಥದಲ್ಲಿ ಮೂರು ಭಾಗಗಳಿವೆ. ಧೂರ್ತರು, ಕಪಟಿಗಳು, ಕುಟಿಲ ಕಾರಸ್ಥಾನಿಗಳು, ಬೇರೆಯವರನ್ನು ಮೋಸಗೊಳಿಸಲು ತಮ್ಮೆಲ್ಲ ಬುದ್ಧಿವಂತಿಕೆಯನ್ನು ಹೇಗೆಲ್ಲಾ ಬಳಸುತ್ತಾರೆ, ಅವರ ಒಳತಂತ್ರಗಳು ಎಂಥವು, ಅವರ ಕೈಚಳಕಗಳು ಯಾವ ರೀತಿಯವು, ಕಾರ್ಯಾಚರಣೆಯ ವಿಧಾನಗಳು ಎಂಥವು ಎಂಬುವನ್ನು 'ಕಪಟಿಯ ಧೂರ್ತ ಕಾರ್ಯಾಚರಣೆಗಳು' ಎಂಬ ಮೊದಲ ಭಾಗದ ಎಂಟು ಅಧ್ಯಾಯಗಳಲ್ಲಿ ವಿವರವಾಗಿ ತಿಳಿಸಿದ್ದಾರೆ. ಅವು ಕೇವಲ ವಿವರಗಳಾಗಿಲ್ಲ. ಪ್ರಸಿದ್ಧ ವ್ಯಕ್ತಿಗಳ, ವೈದ್ಯರ, ಆಡಳಿತಗಾರರ, ರಾಜಕಾರಣಿಗಳ ಜೀವನ ಸಂದರ್ಭಗಳಿಂದ ಆಯ್ದ ಪ್ರಸಂಗಗಳು, ಸನ್ನಿವೇಶಗಳು, ಸಂಗತಿಗಳ ಉದಾಹರಣೆಗಳ ಮೂಲಕ ಮಾಡಿದ ಆಕರ್ಷಕ ನಿರೂಪಣೆಗಳಾಗಿವೆ. ಮೂರನೇ ಅಧ್ಯಾಯದಲ್ಲಿ ಎಲ್ಲರಿಗೂ ಪರಿಚಿತವಾದ "ಒಡೆದು

ಆಳುವ ಮತ್ತು ಯಾರ ಹಿಡಿತಕ್ಕೂ ಸಿಕ್ಕದಿರುವ ಕಪಟಿಗಳ ಧೂರ್ತ ಕಾರ್ಯಾಚರಣೆ"ಯ ಬಗ್ಗೆ ವಿವರಿಸುವಾಗ, ಪಾಕಿಸ್ತಾನದ ಮಾಜಿ ಅಧ್ಯಕ್ಷ ಜಿಯಾವುಲ್ ಹಕ್‌ನ ಉದಾಹರಣೆ ನೀಡಿದ್ದಾರೆ. ಜಿಯಾವುಲ್ ಹಕ್ ಕ್ಷಿಪ್ರ ಕ್ರಾಂತಿಯಲ್ಲಿ ಜುಲ್ಫಿಕರ್ ಅಲಿ ಭುಟ್ಟೋನನ್ನು ಅಧಿಕಾರದಿಂದ ಕಿತ್ತೊಗೆದು ರಾಷ್ಟ್ರಾಧ್ಯಕ್ಷನಾದವನು. ಅವನು ವಹಿಸಿದ ಮುನ್ನೆಚ್ಚರಿಕೆ ಎಂದರೆ, ತನ್ನ ಕೆಳಗಣ ಮಿಲಿಟರಿ ಅಧಿಕಾರಿಗಳಲ್ಲಿ ಒಗ್ಗಟ್ಟು ಉಂಟಾಗದ ಹಾಗೆ ನೋಡಿಕೊಂಡಿದ್ದು ಮತ್ತು ತನ್ನ ಅಧೀನದಲ್ಲಿದ್ದ ಸೆಕೆಂಡ್ ರ‍್ಯಾಂಕ್ ಆಫೀಸರ್‌ಗಳಾರೂ ತನ್ನ ಅನುಪಸ್ಥಿತಿಯಲ್ಲಿ ಕ್ರಾಂತಿಗಿಳಿದು, ತನ್ನನ್ನು ಕಿತ್ತೊಗೆಯದಿರಲೆಂಬ ಉದ್ದೇಶದಿಂದ ತಾನು ವಿದೇಶಗಳಿಗೆ ತೆರಳುವಾಗ ಅವರನ್ನೂ ಜೊತೆಗೆ ಕರೆದೊಯ್ಯುವ ಪರಿಪಾಠವಿಟ್ಟುಕೊಂಡಿದ್ದನ್ನು ಉಲ್ಲೇಖಿಸಿದ್ದಾರೆ.

ಪ್ರತಿ ಅಧ್ಯಾಯದ ಕೊನೆಯಲ್ಲಿ ಕಪಟಿಗಳಿಗೆ, ನಿಷ್ಕಪಟಿಗಳಿಗೆ ಮತ್ತು ಒಡೆಯರಿಗೆ ಹೀಗೆ ಮೂರೂ ಬಗೆಯ ಜನರಿಗೆ ಬುದ್ಧಿವಾದಗಳಿವೆ. ಉದಾಹರಣೆಗೆ – "ಸುಳ್ಳು ಹೇಳುವುದು" ಎಂಬ ಅಧ್ಯಾಯದ ಕಡೆಯಲ್ಲಿ ನಿಷ್ಕಪಟಿಗಳಿಗೆ "ನೀವು ಕೇಳುವುದನ್ನು ನಂಬಬಾರದು, ಅದನ್ನು ಎರಡೆರಡು ಬಾರಿ ಕೇಳಿದಾಗ ಕೂಡ ನಂಬಕೂಡದು" ಎಂಬ ಬುದ್ಧಿವಾದವಿದ್ದರೆ, ಕಪಟಿಗೆ – "ಒಂದು ಸುಳ್ಳು ವರ್ತಮಾನಕ್ಕೇನೋ ಸರಿಯಾಗಬಹುದು. ಆದರೆ ಅದಕ್ಕೆ ಯಾವುದೇ ಭವಿಷ್ಯವಿಲ್ಲ ಹಾಗೂ ಸುಳ್ಳು ಪ್ರಾಮಾಣಿಕತೆ ತೋರಿಸಲು ಪ್ರಯತ್ನಿಸುವ ಬದಲಿಗೆ ಪ್ರಾಮಾಣಿಕವಾಗಿರಿ ಎಂಬ ಬುದ್ಧಿವಾದವಿದೆ. ಅದೇ ಒಡೆಯನಿಗೆ – "ಕಾಣಬಹುದಾದ್ದನ್ನೆಲ್ಲ ನೋಡಬೇಡಿ ಮತ್ತು ನೀವು ಕೇಳಿಸಿಕೊಳ್ಳುವುದನ್ನೆಲ್ಲ ಕೇಳಬೇಡಿ ಎಂಬ ಹಾಗೂ "ಯಾರಾದರೂ ನಿಮಗೆ ಸುಳ್ಳು ಹೇಳುತ್ತಿದ್ದಾರೆ ಎಂದು ಅನ್ನಿಸಿದರೆ ನೀವು ಅವನನ್ನು ನಂಬುವಂತೆಯೇ ತೋರಿಸಿಕೊಳ್ಳಿ. ಅದು ಅವರಿಗೆ ಇನ್ನಷ್ಟು ಮುಂದುವರಿಯುವಂತೆ ಪ್ರೋತ್ಸಾಹಿಸುತ್ತದೆ ಮತ್ತು ಅವರು ಸ್ವತಃ ಕೊನೆಯಲ್ಲಿ ವಿಶ್ವಾಸಘಾತ ಮಾಡಿಕೊಳ್ಳುತ್ತಾರೆ". 'ಹಣ ಮಾಡುವ ತಂತ್ರ' ಎಂಬ ಅಧ್ಯಾಯದಲ್ಲಿ ನಮ್ಮ ಅಧಿಕಾರಶಾಹಿಯ ಹಿಕ್ಮತ್ತುಗಳನ್ನು ಸರಿಯಾಗಿಯೇ ಬಯಲಿಗೆಳೆದಿದ್ದಾರೆ.

ಇನ್ನು ಈ ಗ್ರಂಥದ ಎರಡನೇ ಮತ್ತು ಮೂರನೇ ಭಾಗಗಳು ನಿಷ್ಕಪಟಿಯಾದ ವ್ಯಕ್ತಿಯು ಯಶಸ್ಸಿನ ಸೋಪಾನಗಳನ್ನು ಹೇಗೆ ಏರಲು ಸಾಧ್ಯ ಎಂಬುದನ್ನು ಕ್ರಮವಾಗಿ ಹದಿನೈದು ಮತ್ತು ಇಪ್ಪತ್ತೆರಡು ಅಧ್ಯಾಯಗಳಲ್ಲಿ ವಿಪುಲವಾದ ಉದಾಹರಣೆಗಳ ಮುಖಾಂತರ ಮನವರಿಕೆ ಮಾಡಿಕೊಡುವ ರೀತಿ ಅತ್ಯಂತ ಸೊಗಸಾಗಿದೆ. ಆ ಉದಾಹರಣೆಗಳಾದರೋ ದೇಶ – ವಿದೇಶಗಳ ಪ್ರಖ್ಯಾತ ವ್ಯಕ್ತಿಗಳ ಜೀವನಕ್ಕೆ

ಸಂಬಂಧಿಸಿದವು. ಕ್ರಿಸ್ತಪೂರ್ವದ ಸಾಕ್ರೆಟೀಸ್‌ನಿಂದ ಹಿಡಿದು ಇವತ್ತಿನ ವ್ಯಕ್ತಿಗಳವರೆಗೂ ಈ ಉದಾಹರಣೆಗಳ ವ್ಯಾಪ್ತಿ ಇದೆ. ಲೇಖಕರ ವಿವೇಕ ವಿಚಾರಗಳು ಅತ್ಯಂತ ಅಮೂಲ್ಯವಾದವು, ಅಷ್ಟೇ ಅಲ್ಲ ಪ್ರಸ್ತುತಕ್ಕೆ ಯುಕ್ತವಾಗಿ ಅನ್ವಯಿಸುವಂಥವು. ಕೆಲವು ಶೀರ್ಷಿಕೆಗಳನ್ನು ಗಮನಿಸಿದರೆ ಸಾಕು ಇದು ತಿಳಿಯುತ್ತದೆ. ಉದಾ: 'ಮತ್ಸರ ನಿರ್ವಹಣೆ', 'ಕೆಳಗಿನವರು ಕಾಸು ಮಾಡುವುದನ್ನು ತಡೆಯುವುದು', 'ಧೂರ್ತರನ್ನು ನಿಭಾಯಿಸುವುದು', 'ಯಾರಿಂದ ಸಲಹೆ ಪಡೆಯಬಾರದು', 'ಪ್ರತಿಭೆಗೇಕೆ ಸಗೌರವ' ಇತ್ಯಾದಿ. ಪ್ರತಿ ಅಧ್ಯಾಯದಲ್ಲೂ ಸಂಬಂಧಪಟ್ಟ ವಿಷಯದ ಕುರಿತಾಗಿ ಹಲವಾರು ಉದಾಹರಣೆಗಳನ್ನು ನೀಡುತ್ತ ವಿವರವಾಗಿ ಚರ್ಚಿಸುತ್ತಲೇ ಅತ್ಯುಪಯುಕ್ತ ಸಲಹೆಗಳನ್ನು ನೀಡುವುದಲ್ಲದೆ, ಪ್ರತಿ ಅಧ್ಯಾಯದ ಕೊನೆಯಲ್ಲಿ ನಿಷ್ಕಪಟಿಗಳಿಗೆ ಮತ್ತು ಕಪಟಿಗಳಿಗೆ ಪ್ರತ್ಯೇಕವಾಗಿ ಬುದ್ಧಿವಾದ, ಸಲಹೆಗಳನ್ನು ನೀಡುತ್ತಾರೆ.

'ಶತ್ರು ನಿಯಂತ್ರಣ' ಎಂಬ ಅಧ್ಯಾಯದಲ್ಲಿ ಅಬ್ರಹಾಂ ಲಿಂಕನ್‌ನ ಬದುಕಿಗೆ ಸಂಬಂಧಿಸಿದ ಉದಾಹರಣೆ ನೀಡಿದ್ದಾರೆ. ಅಮೆರಿಕಾದ ಅಂತರ್‌ಯುದ್ಧದ ಸಂದರ್ಭದಲ್ಲಿ ದಕ್ಷಿಣ ಅಮೆರಿಕನ್ನರನ್ನು ಸಹ ಬಾಂಧವರೆಂದು ಸಂಬೋಧಿಸುತ್ತಾರೆ. ಆಗ ಹಿರಿಯ ಮಹಿಳೆಯೊಬ್ಬಳು, ಅವರನ್ನು ನಾಶಮಾಡಬೇಕಾಗಿರುವ ಬದ್ಧವೈರಿಗಳೆಂದು ಕರೆಯದಿದ್ದಕ್ಕಾಗಿ ಲಿಂಕನ್‌ಗೆ ಛೀಮಾರಿ ಹಾಕಿದಳು. ಆಗ ಲಿಂಕನ್ "ಯಾಕೆ ಮೇಡಂ ವೈರಿಗಳನ್ನು ಮಿತ್ರರನ್ನಾಗಿ ಮಾಡಿಕೊಳ್ಳಲು ಸಾಧ್ಯವಿರುವಾಗ, ನಾಶ ಮಾಡುವ ಅಗತ್ಯವೇನಿದೆ..?" ಎಂದು ಪ್ರಶ್ನಿಸಿದರಂತೆ "ಧೂರ್ತರನ್ನು ನಿಭಾಯಿಸುವುದು ಹೇಗೆ..?" ಎಂಬ ಅಧ್ಯಾಯದ ಕೊನೆಯಲ್ಲಿ ನಿಷ್ಕಪಟಿಗಳಿಗೆ ನೀಡಿರುವ ಬುದ್ಧಿವಾದ "ನಿಮ್ಮನ್ನು ದ್ವೇಷಿಸುವರನ್ನು ನೀವು ದ್ವೇಷಿಸತೊಡಗುವವರೆಗೆ ಅವರು ನಿಮ್ಮನ್ನು ಸೋಲಿಸಲು ಸಾಧ್ಯವಿಲ್ಲ, ಹಾಗಾಯಿತೆಂದರೆ ನಿಮ್ಮ ನಶಿಸುವಿಕೆ ತೊಡಗಿತೆಂಬುದು ಖಂಡಿತ".

ಒಬ್ಬ ವೈರಿಯೊಂದಿಗೆ ನೀವು ಪದೇ ಪದೇ ಜಗಳಕ್ಕಿಳಿಯಬಾರದು. ಇಳಿದರೆ ನಿಮ್ಮ ಯುದ್ಧ ವಿದ್ಯೆಗಳನ್ನೆಲ್ಲಾ ಅವರಿಗೆ ತೋರಿಸಿಕೊಟ್ಟಂತಾಗುತ್ತದೆ ಎಂದಿದ್ದರೆ ಅದೇ ಒಡೆಯನಿಗೆ ನೀಡಿರುವ ಬುದ್ಧಿವಾದ – "ಅಧಿಕಾರದ ಹಕ್ಕು ಬರುವುದು ಯುದ್ಧೋಪಕರಣ ಗಳಿರುವುದರಿಂದ, ಜನತೆಯ ನಡುವೆ ಸಾಮರಸ್ಯವಿದೆಯೆಂಬ ಕಾರಣಕ್ಕಾಗಿ ಅಲ್ಲ, ಇದರಿಂದಾಗಿ ಜನ ಸಮುದಾಯದಲ್ಲಿ ಶಾಂತಿ ಸಮಾಧಾನಗಳಿಗಾಗಿ ಒಂದು ಬಲಿ ಅನಿವಾರ್ಯವಾದರೆ ಅದೂ ಸಲ್ಲುತ್ತದೆ".

ಇಪ್ಪತ್ತೆರಡು ಅಧ್ಯಾಯಗಳಿರುವ ಮೂರನೇ ಭಾಗ "ಶಕ್ತಿ ಮೂಲಗಳನ್ನು ಅನುಭವಿಸುವುದು" ಕೂಡ ಅತ್ಯಮೂಲ್ಯವಾದ ವಿವೇಕ – ವಿಚಾರಗಳಿಂದ ಕೂಡಿದೆ.

ಇಡೀ ಪುಸ್ತಕದ ತುಂಬ ಧನಾತ್ಮಕವಾದ ಚಿಂತನೆಗಳು ಇಡಿಕಿರಿದಿವೆ. 'ಒಳ್ಳೆ ಅದೃಷ್ಟ ಖುಲಾಯಿಸುವುದು ಹೇಗೆ..?, 'ಒಳ್ಳೆಯತನದ ಶಕ್ತಿ ಎಂಥದು', 'ಬದ್ಧತೆಯ ಶಕ್ತಿ', 'ಸ್ನೇಹದ ಶಕ್ತಿ', 'ಸಾಂಗತ್ಯ ಮತ್ತು ಮೌನದ ಶಕ್ತಿ' ಇವೇ ಮುಂತಾದ ಅಧ್ಯಾಯದ ಪುಟ ಪುಟಗಳೂ ಅತ್ಯಮೂಲ್ಯ ವಿಚಾರ – ಸಲಹೆಗಳಿಂದ ತುಂಬಿವೆ. ಹೀಗಾಗಿ ಇದು ವೃತ್ತಿನಿರತರು, ಆಡಳಿತಗಾರರು, ಯುವಕರು ಅಷ್ಟೇ ಅಲ್ಲ, ಬದುಕಿನಲ್ಲಿ ಯಶಸ್ಸು ಕಾಣಬೇಕೆಂದು ಬಯಸುವವರೆಲ್ಲರೂ ಒಮ್ಮೆ ಓದಿ, ಮನನ ಮಾಡಿಕೊಳ್ಳಲೇಬೇಕಾದ ಜ್ಞಾನ ಭಂಡಾರವಾಗಿದೆ.

ಇನ್ನು ಈಶ್ವರ ದೈತೋಟರ ಅನುವಾದ ಒಟ್ಟಾರೆ ಸಮರ್ಪಕವಾಗಿದೆ ಎನ್ನಬಹುದು. ಆದರೂ ಅವರು ಕಿಂಚಿತ್ ಎಚ್ಚರ ವಹಿಸಿದ್ದರೆ ಕನ್ನಡದ ಜಾಯಮಾನಕ್ಕೆ ಹೊಂದದ ಈ ಕೆಲವು ವಾಕ್ಯ ರಚನೆಗಳನ್ನು ನಿವಾರಿಸಬಹುದಿತ್ತು. ಉದಾಹರಣೆಗೆ ಪ್ರಸ್ತಾವನೆಯ ಭಾಗದಲ್ಲಿ ಬರುವ 'ಸಜ್ಜನರ ವ್ಯಕ್ತಿತ್ವ' ಎಂಬ ಬರಹದಲ್ಲಿ – ಬರುವ ಈ ವಾಕ್ಯ – 'ತನ್ನ ಮೇಲಧಿಕಾರಿಗಳಿಗೂ, ಕೈಕೆಳಗಿನವರಿಗೂ ಗೌರವಾದರಗಳನ್ನು ಹೊಂದಿರುವ ವ್ಯಕ್ತಿ, ತಾನು ಯಾವುದರ ಪರ ಎಂಬ ಸ್ಪಷ್ಟ ನಿಲುವುಳ್ಳವನು ಹಾಗೂ ಆತ್ಮಸಾಕ್ಷಿ ಹೇಳಿದರೆ ಯಾವುದನ್ನಾದರೂ ವಿರೋಧಿಸಲು ಕೂಡಾ ಸಿದ್ಧ". ಹಾಗೆಯೇ "ಅನೇಕಾರು ರೀತಿಗಳಲ್ಲಿ ಈ ಪುಸ್ತಕ ಸಾರ್ವತ್ರಿಕತೆಯನ್ನು ಹೊಂದಿದೆ ಹಾಗೂ ಬದುಕಿನ ಎಲ್ಲ ದಾರಿಗಳಲ್ಲೂ ಅರ್ಥಪೂರ್ಣ ಕೈಪಿಡಿ". (ಪು.್ಡ –್ಡಜಿ)

ಆದರೆ ಇಂಥ ವಾಕ್ಯಗಳು ತೀರ ಕಡಿಮೆ, ಒಟ್ಟಾರೆ ಸದಭಿರುಚಿ ಮತ್ತು ಜೀವನ ಪರವಾದ ನಿಲುವುಗಳಿಂದ ಕೂಡಿದ್ದು, ಸದ್‌ಮೌಲ್ಯದ ಬೀಜಗಳನ್ನು ಬಿತ್ತುವ ಮೂಲಕ, ನಿಜವಾದ ಮನುಷ್ಯರನ್ನು ರೂಪಿಸುವ ಇಂಥ ಗ್ರಂಥಗಳು ಅತ್ಯಂತ ಅಪೇಕ್ಷಣೀಯ.

ನೀವು ಮುಳುಗುತ್ತಿದ್ದೀರಾ..? ಹಾಗಿದ್ರೆ ಸಬ್‌ಮೆರೀನ್ ಆಗಿ

❖

18

ಗಾಂಧೀ ಬದುಕಿಗೊಡ್ಡಿದ ಅಗ್ನಿದಿವ್ಯ

ತಾನು ಜೀವಂತವಾಗಿದ್ದಾಗಲೇ ಯುಗಪುರುಷ, ಮಹಾತ್ಮಾ , ಮಹಾಮಾನವ ಎಂದೆಲ್ಲ ಕೀರ್ತಿತರಾಗಿ ಜನರ ಪ್ರೀತಿ ಗೌರವಗಳಿಗೆ ಅತ್ಯಂತ ಅರ್ಹವಾಗಿಯೇ ಪಾತ್ರರಾಗಿ, ದಂತ ಕತೆಯಾಗಿಬಿಟ್ಟಿದ್ದ ಗಾಂಧಿ, ಈ ಜಗತ್ತು ಕಂಡ ಒಬ್ಬ ಅತ್ಯಪೂರ್ವ ವ್ಯಕ್ತಿ. ತಾನು ಬದುಕಿದ್ದಷ್ಟು ಕಾಲವೂ, ಪ್ರತಿಕ್ಷಣ ತನ್ನನ್ನು ತಾನು ಪರೀಕ್ಷೆಗೊಳಪಡಿಸಿ ಕೊಳ್ಳುತ್ತಲೇ ತನ್ನನ್ನು ಸುತ್ತುವರಿದಿದ್ದ ಜನತೆಯ ಸಂಕಷ್ಟಗಳಿಗೆ, ಸಮಸ್ಯೆಗಳಿಗೆ ಅತ್ಯಂತ ತೀವ್ರವಾಗಿ ಸ್ಪಂದಿಸುತ್ತಿದ್ದ ಗಾಂಧಿಯವರ ವ್ಯಕ್ತಿತ್ವ ಮೇಲ್ನೋಟಕ್ಕೆ ತೋರುವಷ್ಟು ಸರಳವಲ್ಲ, ಬದಲಿಗೆ ಅತ್ಯಂತ ಸಂಕೀರ್ಣ. ಆಳವಾದ ಧಾರ್ಮಿಕ ಮನೋಭಾವ, ರಾಜಕೀಯ ಕೌಶಲ, ಕಟು ವ್ಯಾವಹಾರಿಕತೆ, ಸಾಮಾಜಿಕ ಸಮಸ್ಯೆಯ

ಅಂತಿಮ ದಿನಗಳು, ಡಾ. ರಾಜಶೇಖರ ಮಠಪತಿ (ರಾಗಂ)
ಪುಟಗಳು : 194, ಬೆಲೆ : 160,
ಕಣ್ವ ಪ್ರಕಾಶನ, ನಂ. 894,
1ನೇ ಮೇನ್, ನಿಸರ್ಗ ಬಡಾವಣೆ, ಚಂದ್ರಾ ಲೇಔಟ್, ಬೆಂಗಳೂರು – 560 072

ಒಳಹೊಕ್ಕು ಅದನ್ನು ವಿಶ್ಲೇಷಿಸಿ ನೋಡುವ ಸಮಾಜ ವಿಜ್ಞಾನಿಯ ಹರಿತ ಬುದ್ಧಿ, ವೃತ್ತಿನಿರತ ಪತ್ರಕರ್ತನ ನಯ ನಾಜೂಕುಗಳು, ಮಹಾನ್ ಜನ ಸಮುದಾಯವನ್ನು ಮುನ್ನಡೆಸುವ ನಾಯಕತ್ವದ ಕೆಚ್ಚು, ಎಂಥ ಸನ್ನಿವೇಶದಲ್ಲೂ ಮನಸ್ಸಿನ ಸಮತೂಕ ಕಳೆದುಕೊಳ್ಳದ ಸಂಯಮ – ಹೋರಾಟಗಾರನ ಅಸೀಮ ಧೈರ್ಯ, ಸಾಹಸ ಇವೆಲ್ಲವೂ ಮೇಳೈಸಿದ್ದ ಅಪ್ಪಟ ಮನುಷ್ಯ. ಮಗುವಿನ ಮುಗ್ಧತೆಯ ಜೊತೆ ಜೊತೆಗೇ, ತನ್ನ ತತ್ವ ಸಿದ್ಧಾಂತಗಳಿಗೆ, ಕಟ್ಟುಬೀಳುವ ಬದ್ಧತೆ, ಹಠಮಾರಿತನ ಅವರದಾಗಿತ್ತು. ಜನಸಮುದಾಯದ ನಾಡಿಯ ಮಿಡಿತವನ್ನು ಅವನಷ್ಟು ಚೆನ್ನಾಗಿ ತಿಳಿದಿದ್ದವರು ಹೆಚ್ಚಿರಲಿಲ್ಲ. ಅಪ್ಪಟ ಪ್ರೀತಿ ತುಂಬಿದ, ವಂಚನೆ, ಠಕ್ಕುತನ, ಕಾಪಟ್ಯಗಳಿಲ್ಲದ, ಪ್ರಾಮಾಣಿಕತೆಯ ಪ್ರತಿ ಮೂರ್ತಿ ಎನಿಸಿದ ಗಾಂಧಿ, ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ದಬ್ಬಾಳಿಕೆಯ ವಿರುದ್ಧದ ಹೋರಾಟದಲ್ಲಿ ಕಂಡುಕೊಂಡ ಸತ್ಯಾಗ್ರಹ ಮತ್ತು ಅಹಿಂಸಾತ್ಮಕ ಹೋರಾಟಗಳೆಂಬ ಎರಡು ದಿವ್ಯಾಸ್ತ್ರಗಳಿಗೆ, ಭಾರತದ ಸ್ವಾತಂತ್ರ್ಯ ಚಳುವಳಿಯ ಸುದೀರ್ಘ ಹೋರಾಟವನ್ನು ಪ್ರಯೋಗ ಭೂಮಿಯನ್ನಾಗಿ ಮಾಡಿಕೊಂಡು, ಈ ನಾಡಿನ ಮಣ್ಣಿನ ಮೂರ್ತಿಗಳಲ್ಲಿ ಜೀವಸಂಚಾರವಾಗುವಂತೆ ಮಾಡಿದ್ದು ಈಗ ಇತಿಹಾಸ.

ಇದುವರೆಗೆ ಗಾಂಧಿಯವರನ್ನು ಕುರಿತ ಸಾಹಿತ್ಯ ಬಹುಶಃ ಒಂದು ಭರ್ತಿ ಲಾರಿಗಿಂತಲೂ ಹೆಚ್ಚು ಬಂದಿದೆ. ಎರಿಕ್ ಫ್ರಾಮ್, ರೋಮನ್ ರೋಲಾ ಅವರಂಥ ಖ್ಯಾತಿನಂತರಿಂದ ಹಿಡಿದು ಸಾಮಾನ್ಯ ಲೇಖಕರವರೆಗೆ ಗಾಂಧಿಯವರ ಬದುಕನ್ನು ಅವರ ವ್ಯಕ್ತಿತ್ವವನ್ನು ಅರ್ಥೈಸುವ, ವಿಶ್ಲೇಷಿಸುವ, ಬೆಲೆಕಟ್ಟುವ ಪ್ರಯತ್ನಗಳು ನಡೆದಿವೆ; ಇಂದಿಗೂ ನಡೆಯುತ್ತಲೇ ಇವೆ. ಇಷ್ಟಾದರೂ ಗಾಂಧಿಯ ವ್ಯಕ್ತಿತ್ವ ಯಾರ ಅಳತೆಗೂ ಅಷ್ಟು ಸುಲಭವಾಗಿ ಸಿಕ್ಕಿಬಿಡುವಂಥದಲ್ಲವೇ ಅಲ್ಲ. ಇಂಥ ಕ್ರಿಯಾಶೀಲವೂ, ಸಂಕೀರ್ಣವೂ ಆದ ಗಾಂಧಿಯವರ ವ್ಯಕ್ತಿತ್ವವನ್ನು ಅದರ ಎಲ್ಲ ನಿಜದಲ್ಲಿ ಹಿಡಿಯಲು ಮಾಡಿದ ಒಂದು ಪ್ರಾಮಾಣಿಕ ಪ್ರಯತ್ನವೇ ಪ್ರಸ್ತುತ ನಮ್ಮ ಮುಂದಿರುವ ರಾಗಂ ಅವರ 'ಗಾಂಧಿ : ಅಂತಿಮ ದಿನಗಳು' ಎಂಬ ಈ ಪುಸ್ತಕ.

ಈ ಸೂರ್ಯ ಮಂಡಲದ ಕೆಳಗಿನ ಎಲ್ಲ ವಸ್ತು ವಿಚಾರಗಳ ಬಗೆಗೂ ತನ್ನ ಚಿಂತನೆಗಳನ್ನು ಮಾಡಿರುವ, ತನ್ನ ಬದುಕನ್ನೇ 'ಸತ್ಯ'ದ ಪ್ರಯೋಗ ಭೂಮಿ ಎಂದು ತಿಳಿದಿದ್ದ 'ಗಾಂಧಿ' ಎಂಬ ವ್ಯಕ್ತಿ ಭಾವುಕತೆಯ ಸೆಳೆತಕ್ಕೋ ಇಲ್ಲವೆ ಸಿನಿಕನ ವ್ಯಂಗ್ಯಕ್ಕೋ ಬಹು ಸುಲಭವಾಗಿ ಗುರಿಯಾಗಿಬಿಡಬಹುದಾದ ಸನ್ನಿವೇಶದಲ್ಲಿ ಅತ್ಯಂತ ಎಚ್ಚರಿಕೆಯಿಂದ ಆತನ ಕೊನೆಯ ದಿನಗಳ ಸಂದರ್ಭದ ಬದುಕಿನ ಸಂಕಥನದ ಮೂಲಕ, ರಾಜಶೇಖರ ಮಠಪತಿಯವರು ಗಾಂಧಿಯ ವ್ಯಕ್ತಿತ್ವವನ್ನು ಅಗ್ನಿದಿವ್ಯಕ್ಕೆ ಒಡ್ಡುವ ನಿಷ್ಠುರ ಕಾರ್ಯಕ್ಕೆ

ಮುಂದಾಗಿದ್ದಾರೆ. ಗಾಂಧಿಯವರ ವ್ಯಕ್ತಿತ್ವವನ್ನಳೆಯಲು ಅಗತ್ಯವಾದ 'ಕಾಲದ ದೂರ'ದ ಅನುಕೂಲ ಮಠಪತಿಯವರಿಗಿದೆ. ಪ್ರಶಂಸೆಗಳ ಮಹಾಪೂರ ಮತ್ತು ಟೀಕಾಸ್ತ್ರಗಳ ಜಡಿಮಳೆ ಎಂಬ ಎರಡು ಅಲೆಗಳಿಂದ ಪಾರಾಗಿರುವುದೇ ಮಠಪತಿಯವರ ಬರವಣಿಗೆಯ ವಿಶೇಷತೆ.

ದೇಶ ವಿಭಜನೆಯ ದುರಂತಗಾಥೆಯ ವರ್ಣ ಪಟ್ಟಿಕೆಯ ಮೂಲಕ ಗಾಂಧಿಯವರ ವ್ಯಕ್ತಿತ್ವವನ್ನು ಹಾಯಿಸಿ ನೋಡುವ ಅರ್ಥಪೂರ್ಣವಾದ ಕಾರ್ಯ ಮಠಪತಿಯವರದು. ನಲವತ್ತೇಳರ ಭಾರತ ವಿಭಜನೆಯ ಹಿಂಸಾಕಾಂಡ ಮಾನವ ಚರಿತ್ರೆಯಲ್ಲೇ ಒಂದು ಕರಾಳ ಅಧ್ಯಾಯ. ಮಾನವನ ಸದ್ ವೃತ್ತಿಗಳನ್ನೆಲ್ಲ ನುಂಗಿ ನೀರ್ಕುಡಿದು, ಅವನೊಳಗಿನ ರಾಕ್ಷಸೀ ಪ್ರವೃತ್ತಿ ಮತ್ತು ಮೃಗೀಯತೆಗಳು ತಮ್ಮೆಲ್ಲ ಅಕರಾಳ ವಿಕರಾಳ ರೂಪದಲ್ಲಿ ವಿಜೃಂಭಿಸಿ ನಿಂತ ಸಂದರ್ಭ ಅದು. ಬದುಕಿನದ್ದುಕ್ಕೂ ತಾನು ಪ್ರತಿಪಾದಿಸುತ್ತ ಬಂದ ಹಿಂದೂ – ಮುಸ್ಲಿಂ ಮತೀಯ ಸೌಹಾರ್ದ, ಅಹಿಂಸೆಗಳು, ತಾನು ನಂಬಿಕೊಂಡು ಬಂದ ಮಾನವೀಯ ಮೌಲ್ಯಗಳು, ನೈತಿಕತೆ, ಎಲ್ಲವೂ ನುಚ್ಚುನೂರಾಗಿ, ನಗೆಪಾಟಲಿಗೆ ಈಡಾಗಿ ಅತ್ಯಂತ ದುಃಖಿತ ವ್ಯಕ್ತಿಯಾಗಿ ಗಾಂಧಿ ನಿಂತ ಸಂದರ್ಭ ಅದು. ಅಂದು ಗಾಂಧಿ ಎದುರಿಸಿದ ಇಕ್ಕಟ್ಟುಗಳು, ಅನುಭವಿಸಿದ ನೋವು ನರಳಿಕೆಗಳು ಯಾರ ಊಹೆಗೂ ಮೀರಿದ್ದು. ಕೋಮು ದ್ವೇಷದ ದಳ್ಳುರಿಯನ್ನು ಹತ್ತಿಕ್ಕಲು, ತನ್ನ ಶಕ್ತಿ ಮೀರಿ ಜೀವವನ್ನೇ ಪಣವಿಟ್ಟು ಪ್ರಯತ್ನಿಸಿದಾಗ್ಯೂ ಹತೋಟಿಗೆ ಬರದಿದ್ದಾಗ, ಗಾಂಧಿಗೆ ತನ್ನ ಬದುಕು ಅರ್ಥಹೀನ ಎನ್ನಿಸಿದ ಗಳಿಗೆಗಳನ್ನೆಲ್ಲ ಕಟ್ಟಿಕೊಡುವ ಮೂಲಕ, ಗಾಂಧಿಯನ್ನು ಒಬ್ಬ ನಿಜವಾದ ಮನುಷ್ಯನನ್ನಾಗಿ ನೋಡುವ ಪ್ರಯತ್ನವನ್ನು ಇಲ್ಲಿಯ ಪುಟಪುಟದಲ್ಲೂ ಮಠಪತಿಯವರು ಮಾಡಿದ್ದಾರೆ. ``You should copy my virtues not my enorls'' ಎಂದು ಅನೇಕರಿಗೆ ಬರೆದ ಪತ್ರಗಳಲ್ಲಿ ಹೇಳಿದ್ದನ್ನು ದಾಖಲಿಸಿದ್ದಾರೆ. "ಮೂವತ್ತು ವರ್ಷಗಳಿಂದ ನಾವು ನಡೆಯಿಸಿಕೊಂಡು ಬಂದ, ಈ ಹಿಂಸೆಯ ವಿರುದ್ಧದ ಹೋರಾಟ ಹೆಸರಿಗೆ ಮಾತ್ರ ಅಹಿಂಸಾತ್ಮಕ ಚಳುವಳಿಯಾಗಿತ್ತು. ನಿಜವಾದ ಅರ್ಥದಲ್ಲಿ ಅದು ನಮ್ಮ ಎದೆಗಳನ್ನು ಕದಗಳನ್ನು ತೆರೆದೇ ಇಲ್ಲ. ಅಂತೆಯೇ ಅದು ದೇಶ ವಿಭಜನೆ, ಹಿಂದೂ – ಮುಸ್ಲಿಂ ಕೊಲೆಗಳಲ್ಲಿ ಅಭಿವ್ಯಕ್ತಗೊಂಡಿತು" ಎಂಬ ಅವರ ಪತ್ರದ ಸಾಲುಗಳು ಗಾಂಧಿಗೆ ಭ್ರಮನಿರಸನವಾಗಿರುವುದನ್ನು ಕಾಣಿಸುತ್ತದೆ. ಮಠಪತಿಯವರ ಈ ಟಿಪ್ಪಣಿ ಅದನ್ನು ಸರಿಯಾಗಿಯೇ ಬೆಲೆಕಟ್ಟಿದೆ. "ಬದುಕೆಲ್ಲವೂ ಮಹಾತ್ಮನಾಗಬೇಕೆನ್ನುವ ಮಹಾನ್ ಕನಸು ಕಂಡ ಗಾಂಧಿ, ಇತ್ತ ಸಾಮಾನ್ಯನಂತೆ ಸಂಕೀರ್ಣವೂ, ಅತ್ತ ಸಂತನಂತೆ ನಿರಾಳವೂ ಆಗದೆ ಒದ್ದಾಡುವುದನ್ನು ಕಾಣುತ್ತೇವೆ" (ಪುಟ – 27)

"ಗಾಂಧಿಯ ಕೊನೆಯ ದಿನಗಳ ಬದುಕು ಉರಿಯ ಚಪ್ಪರದ ಕನಸಷ್ಟೇ" ಎಂಬ ಅವರ ಮಾತು ಕೂಡ ಅವರ ಆಗಿನ ವಾಸ್ತವದ ಚಿತ್ರಣವೇ ಆಗಿದೆ. ಗಾಂಧಿಯ ದ್ವಂದ್ವಗಳನ್ನೆಲ್ಲಾ ಈ ಮಾತುಗಳಲ್ಲಿ ಹಿಡಿದಿಟ್ಟಿದ್ದಾರೆ – ಒಂದೆಡೆ ಆತ ಮತ್ತೊಂದೆಡೆ ಆತನ ಭಗವದ್ಗೀತೆ. ಒಂದೆಡೆ ಹಿಂದೂಗಳು, ಮತ್ತೊಂದೆಡೆ ಆತನನ್ನು ನಂಬದ ಮುಸ್ಲಿಮರು. ಒಂದೆಡೆ ತಾನೇ ಎಲ್ಲವನ್ನೂ ಬಗೆಹರಿಸಬೇಕೆಂಬ ಹಠ, ಮತ್ತೊಂದೆಡೆ ಕೈಚೆಲ್ಲಿ ದೇವರಿಗೋ ದೈವಕ್ಕೋ ಮೊರೆಹೋಗುವ ಸ್ಥಿತಿ. ಒಂದೆಡೆ ತಾನು ದೇವರನ್ನು ಕಂಡೇಬಿಟ್ಟ ಖುಷಿ, ಮತ್ತೊಂದೆಡೆ ದೇವರೇಕೆ ಹೀಗೆ ಎಂದು ಕೈಚೆಲ್ಲುವ ಗಾಂಧಿ" (ಪುಟ – 74). ಈ ಸಂದರ್ಭದಲ್ಲಿ ನೆಹರೂ, ಪಟೇಲ್ ಮುಂತಾದ ತನ್ನ ಶಿಷ್ಯರಿಂದಲೇ ಅವಜ್ಞೆಗೊಳಗಾದ ಭಾವವನ್ನೂ ಅನುಭವಿಸುತ್ತಾರೆ. ಇಷ್ಟಾಗಿಯೂ ಗಾಂಧಿಯ ಅಹಿಂಸಾತತ್ವದ ಪ್ರತೀಕವಾದ ಉಪವಾಸದಿಂದಲೇ ನೌಖಾಲಿ, ಕಲ್ಕತ್ತ , ದೆಹಲಿಗಳಲ್ಲಿ ಮಾರಣಹೋಮ ಹತೋಟಿಗೆ ಬಂದು ಶಾಂತಿ ನೆಲೆಸಲು ಸಾಧ್ಯವಾಗಿ ಮೌಂಟ್‌ಬ್ಯಾಟನ್‌ರಿಂದ `One man brigade' ಎಂಬ ಪ್ರಶಂಸೆಗೂ ಭಾಜನರಾದರು.

ದೇವರನ್ನು ಲೌಕಿಕ ಬದುಕಿನಿಂದ ಎಂದೂ ಬೇರೆ ಎಂದು ಭಾವಿಸದ ಗಾಂಧಿಯ ದೈವ ಶ್ರದ್ಧೆ, ಆಧ್ಯಾತ್ಮ ಮತ್ತು ಲೌಕಿಕತೆಗಳ ಮಧ್ಯೆ ವ್ಯತ್ಯಾಸದ ಗೆರೆ ಎಳೆದುಕೊಂಡ ನಮಗೆ ಒಂದು ಒಗಟಾಗಿ ಕಂಡರೆ ಆಶ್ಚರ್ಯವಿಲ್ಲ ಎಂಬುದನ್ನು ಮಠಪತಿಯವರು ಅವರ ಈ ಅಂತಿಮ ದಿನಗಳ ಗಾಥೆಯಲ್ಲಿ ಮನವರಿಕೆ ಮಾಡಿಕೊಟ್ಟಿದ್ದಾರೆ.

ಗಾಂಧಿಯವರ ವ್ಯಕ್ತಿತ್ವದ ರಂಧ್ರಗಳನ್ನು, ಬಿರುಕುಗಳನ್ನು ಕಾಣಿಸುವಲ್ಲಿ ಈ ಬರಹ ಹಿಂದೆ ಬಿದ್ದಿಲ್ಲ. ಆದರೆ ಅದೇ ಸಮಯಕ್ಕೆ ಮಹದೇವ ದೇಸಾಯಿ ಮತ್ತು ಕಸ್ತೂರಬಾ ಅವರ ಸಾವಿನ ಸಂದರ್ಭಗಳಲ್ಲಿ ಗಾಂಧಿಯವರ ನಡೆಯನ್ನು ದಾಖಲಿಸುವ ಮೂಲಕ ಮನುಷ್ಯ ಸಂಬಂಧಗಳ ಶೋಧದ ಅನಾವರಣ ಕೂಡ ಮಾಡುತ್ತಾರೆ. ಒಂದು ಅನುಮಾನದ ಎಳೆ ಇಟ್ಟುಕೊಂಡೇ ಗಾಂಧಿಯವರ ವ್ಯಕ್ತಿತ್ವದ ಶೋಧನೆಗೆ ತೊಡಗಿ ಕೊಂಡಿರುವ ರಾಜಶೇಖರ ಮಠಪತಿಯವರ ಈ ಬರಹ ಏಕಕಾಲಕ್ಕೆ ಗಾಂಧಿಯವರನ್ನು ಶೋಧಿಸುವುದು ಹಾಗೂ ಗಾಂಧಿ ತನ್ನನ್ನು ತಾನೆ ಶೋಧಿಸಿಕೊಳ್ಳುತ್ತ ಸಾಗುವುದೂ ಆಗಿರುವ ಕಾರಣದಿಂದಲೇ ಆಪ್ಯಾಯಮಾನವಾಗುತ್ತದೆ.

ಪುಸ್ತಕದ ವಿಷಯ ಗಾಂಧಿಯವರ ಬದುಕಿನ ಕೊನೆಯ ದಿನಗಳಿಗೆ ಸಂಬಂಧಿಸಿದ್ದೇ ಆದರೂ, ಗಾಂಧಿಯವರ ವ್ಯಕ್ತಿತ್ವವನ್ನು ಇಡಿಯಾಗಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ. ಸಂಕಷ್ಟಗಳು, ಸಮಸ್ಯೆಗಳ ಮಧ್ಯದಲ್ಲೇ ಬೇಯುತ್ತಿದ್ದರೂ ಗಾಂಧಿಯ ದಿನಚರಿಯಲ್ಲಿ 3.30ಕ್ಕೆ ಏಳುವುದು, ಚರಕದಿಂದ ನೂಲು ತೆಗೆಯುವುದು, ಬೆಳಗಿನ ವಾಕಿಂಗ್, ಪತ್ರಗಳಿಗೆ

ಉತ್ತರಿಸುವುದು, ಪ್ರಕೃತಿ ಚಿಕಿತ್ಸೆಯ ಭಾಗವಾಗಿ ಮಣ್ಣಿನ ಸ್ನಾನದಲ್ಲಿ ತೊಡಗಿಕೊಂಡಿದ್ದರೂ, ಅದರ ಮಧ್ಯದಲ್ಲೇ 'ಹರಿಜನ' ಪತ್ರಿಕೆಗೆ ಲೇಖನ ಹೇಳಿ ಬರೆಸುವುದು, ಮುಖಂಡರೊಂದಿಗೆ ಭೇಟಿ, ಸಂಜೆಯ ಪ್ರಾರ್ಥನಾ ಸಭೆ – ಇತ್ಯಾದಿಗಳಲ್ಲಿ ಯಾವುದೇ ಬದಲಾವಣೆಯಿಲ್ಲದೆ, ಎಂದಿನಂತೆ ನಡೆಯುತ್ತಿದ್ದುದು, ನಾವು ನಿರ್ಲಕ್ಷಿಸಬಹುದಾದ ಸಣ್ಣ ಸಂಗತಿಗಳ ಬಗೆಗೂ ಆತ ಅದೆಷ್ಟು ಸಂವೇದನಾಶೀಲರಾಗಿದ್ದರೆಂಬುದಕ್ಕೆ ತನ್ನ ಮೊಮ್ಮಗಳು ಸೀತಾಳಿಗೆ ಪತ್ರ ಬರೆಯುತ್ತಿದ್ದುದು – ತಾನು ಪಾಲಿಸದ, ಪ್ರಯೋಗಕ್ಕೊಳಗಾಗದ ಯಾವ ವಿಚಾರವನ್ನೂ ಇನ್ನೊಬ್ಬರ ಮೇಲೆ ಹೇರಲಿಲ್ಲ ಎಂಬುದನ್ನೆಲ್ಲ ದಾಖಲಿಸುವ ಮೂಲಕ ಗಾಂಧಿಯವರ ವ್ಯಕ್ತಿತ್ವದ ಮಹಾನತೆಯನ್ನು, ಸಮಗ್ರತೆಯನ್ನು ಮನವರಿಕೆ ಮಾಡಿಕೊಡುವಲ್ಲಿ ರಾಜಶೇಖರ ಮಠಪತಿಯವರ ಪರಿಶ್ರಮವಷ್ಟೇ ಅಲ್ಲ ಅವರ ಬರವಣಿಗೆಯ ಪರಿಣತಿಯೂ ವ್ಯಕ್ತವಾಗಿದೆ.

ಪುಸ್ತಕ ಓದಲು ಕೈಗೆತ್ತಿಕೊಂಡರೆ, ಕೆಳಗಿಡಲು ಮನಸ್ಸೇ ಬಾರದಂತೆ ರೋಚಕವಾಗಿ ಸಾಗುವ ಈ ಬರವಣಿಗೆ, ನಾಟಕದ ದೃಶ್ಯಗಳಂತೆ ಒಂದಾದ ಮೇಲೊಂದು ತೆರೆದುಕೊಳ್ಳುತ್ತಾ ಹೋಗಿ, ಭಾರತ ಇತಿಹಾಸದ ಆ ದುರಂತ ಅಧ್ಯಾಯದ ಜೊತೆಜೊತೆಯಲ್ಲೇ ಮಹಾ ಮಾನವನೊಬ್ಬನ ವ್ಯಕ್ತಿತ್ವದ ಪದರುಗಳನ್ನೂ ಅನಾವರಣಗೊಳಿಸುವಲ್ಲಿ ಸಾರ್ಥಕವಾಗಿದೆ.

❖

19

ಅಧ್ಯಯನ ಶೀಲ ಬರಹಗಳು

ಶರಣ ಧರ್ಮ, ಸಾಹಿತ್ಯ, ಸಂಸ್ಕೃತಿಗಳನ್ನು ಕೇಂದ್ರವಾಗಿಟ್ಟುಕೊಂಡಂತೆ ಡಾ. ವಿಜಯಕುಮಾರ ಮಹಾನುಭಾವಿಗಳು ನಡೆಸಿರುವ ವಿದ್ವತ್‌ಪೂರ್ಣ ಅನುಸಂಧಾನ ' "ಚೆಂದದ ಬದುಕಿಗೆ ಸುಂದರ ಮೌಲ್ಯಗಳು" 1. ಸಾಹಿತ್ಯ, ಸಂಸ್ಕೃತಿ, ಸಂಶೋಧನೆ, 2. ಅನುಭಾವ ಮತ್ತು 3. ವಿಮರ್ಶೆ, ಗ್ರಹಿಕೆ , ಪರಾಮರ್ಶೆ ಎಂಬ ಮೂರು ಶೀರ್ಷಿಕೆಗಳ ಅಡಿಯಲ್ಲಿ ಸಂಗ್ರಹಿತವಾಗಿರುವ ಇಲ್ಲಿಯ 46 ಬರಹಗಳು ಲೇಖಕರ ವ್ಯಾಪಕ ಅಧ್ಯಯನ ಮತ್ತು ನಿಶಿತ ವಿಚಾರ ವಿಮರ್ಶೆಗೆ ಖಚಿತವಾದ ಪುರಾವೆಗಳನ್ನೊದಗಿಸುತ್ತವೆ.

ಹನ್ನೆರಡನೇ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಕಾಣಿಸಿಕೊಂಡ ವೀರಶೈವ ಧರ್ಮ, ನಾಡು, ನುಡಿ,

---

'ಚೆಂದದ ಬದುಕಿಗೆ ಸುಂದರ ಮೌಲ್ಯಗಳು' ಡಾ. ವಿಜಯಕುಮಾರ ಮಹಾನುಭಾವಿಗಳು
ಪುಟಗಳು : 336, ಬೆಲೆ : ರೂ. 230
ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಮುಖ್ಯಬೀದಿ, ಗುಲಬರ್ಗಾ – 585101

ಜನ ಜೀವನ, ಸಂಸ್ಕೃತಿಗಳನ್ನೆಲ್ಲ ಗಾಢವಾಗಿ ಆವರಿಸಿ ಕೊಂಡು ಒಂದು ಉತ್ಕ್ರಾಂತಿಗೆ ಕಾರಣವಾದದ್ದು ಈಗ ಇತಿಹಾಸ. ಬಸವಣ್ಣನವರ ನೇತೃತ್ವದಲ್ಲಿ ಪ್ರಭುದೇವ, ಸಿದ್ಧರಾಮ, ಚನ್ನಬಸವಣ್ಣ , ಅಕ್ಕಮಹಾದೇವಿಯೇ ಮೊದಲಾದ ಅನುಭಾವಿಗಳು, ಸಾಧಕರು ತಮ್ಮ ನಿಷ್ಠಾವಂತ ಬದುಕು ಮತ್ತು ಮೌಲಿಕ ವಿಚಾರಗಳಿಂದ ಸಮಾಜದ ಎಲ್ಲ ಜನ ವರ್ಗಗಳ ಮೇಲೆ ಬೀರಿದ ಪ್ರಭಾವ, ಉಂಟು ಮಾಡಿದ ಪರಿವರ್ತನೆ ಅಸಾಮಾನ್ಯವಾದುದು. ಇನ್ನು ಅವರ ಅನುಭವದ ಸೂಳ್ನುಡಿಗಳೆನಿಸಿದ ವಚನಗಳಂತೂ ಮೊಗೆದಷ್ಟೂ ಅರ್ಥದ ಊಟೆಗಳನ್ನೇ ಚಿಮ್ಮಿಸುವ, ಅಕ್ಷಯ ಭಂಡಾರಗಳಂತಿದ್ದು ಎಲ್ಲ ಕಾಲಕ್ಕೂ ಪ್ರಸ್ತುತವಾಗಿವೆ.

ಡಾ. ವಿಜಯಕುಮಾರ ಮಹಾನುಭಾವಿಗಳು ಬಸವಣ್ಣ , ಪ್ರಭುದೇವ, ಸಿದ್ಧರಾಮ, ಅಕ್ಕ ಮುಂತಾದವರ ಕೆಲವು ವಚನಗಳಿಗೆ ಮಾಡಿರುವ ವ್ಯಾಖ್ಯಾನ, ವಿಶ್ಲೇಷಣೆಗಳಿಗೆ ಒತ್ತಾಸೆಯಾಗಿ ಆ ಕಾಲದ ಶಾಸನಗಳು ಮತ್ತು ಕಾವ್ಯಗಳನ್ನು ಕುರಿತ ಅಧ್ಯಯನದ ಫಲಿತಗಳನ್ನು ತಮ್ಮ ಚರ್ಚೆಗೆ ಬಳಸಿಕೊಳ್ಳುವ ಮೂಲಕ ಅವುಗಳ ಅರ್ಥ ವಲಯವನ್ನು ವಿಸ್ತರಿಸುವ ಪ್ರಯತ್ನವನ್ನು ಇಲ್ಲಿ ಮಾಡಿರುವುದರಿಂದ ಸಹಜವಾಗಿಯೇ ಇಲ್ಲಿಯ ಬರಹಗಳಿಗೆ ವಿಶೇಷ ಮೌಲ್ಯ ಪ್ರಾಪ್ತವಾಗಿದೆ. ಕೆಲವು ವಿವಾದಾಸ್ಪದ ಸಂಗತಿಗಳನ್ನೂ ಪ್ರಸ್ತಾಪಿಸಿದ್ದಾರೆ.

ಮುಖ್ಯವಾಗಿ ಬಸವಣ್ಣನವರ ವಚನಗಳನ್ನು ಪ್ರಸಕ್ತ ರಾಜಕೀಯ, ಸಾಮಾಜಿಕ, ಸಂದರ್ಭಗಳಿಗೆ ಪ್ರಸ್ತುತವೆನಿಸುವ ಹಾಗೆ ವ್ಯಾಖ್ಯಾನಿಸುವ ಕೌಶಲ ಇಲ್ಲಿನ ಬಹುಪಾಲು ಲೇಖನಗಳಲ್ಲಿ ಎದ್ದು ಕಾಣುವ ಸಂಗತಿ.

ಬಸವಣ್ಣನವರು ಹುಟ್ಟಿನಿಂದ ಬ್ರಾಹ್ಮಣರೇ ಹೊರತು, ದಲಿತ, ಕುರುಬ, ಕಮ್ಮಾರ ಇತ್ಯಾದಿ ಯಾವುದೂ ಅಲ್ಲವೆಂಬುದಕ್ಕೆ ಅವರ ವಚನಗಳಿಂದಲೇ ಸಾಕಷ್ಟು ಸಮರ್ಥನೆಗಳನ್ನು ಲೇಖಕರು ಒದಗಿಸಿದ್ದಾರೆ. ವಾಸ್ತವವಾಗಿ ಇದೊಂದು ವಿವಾದದ ವಿಷಯವೇ ಅಲ್ಲ. ಈ ಹಿಂದೆ ಅನಗತ್ಯವಾಗಿ ಅದನ್ನೊಂದು ವಿವಾದದ ಸಂಗತಿಯಾಗಿ ಮಾಡಲಾಗಿತ್ತು. ಇನ್ನು ಬಸವಣ್ಣನವರ ವಚನಗಳನ್ನು ಆಧರಿಸಿ ಅವರ ವ್ಯಕ್ತಿತ್ವದ ಎತ್ತರ ಬಿತ್ತರಗಳನ್ನು ಕಂಡುಕೊಳ್ಳಲು ಮಾಡಿರುವ ಪ್ರಯತ್ನ ಸಾರ್ಥಕವಾಗಿದೆ. ಆದರೆ ಅವರ ಆತ್ಮ ನಿರೀಕ್ಷಣೆಯ ವಚನಗಳನ್ನು ಬಸವಣ್ಣನವರಿಗೇ ಪೂರ್ತಿಯಾಗಿ ಅನ್ವಯಿಸಿ ವ್ಯಾಖ್ಯಾನಿಸುವ ಅಗತ್ಯವಿರಲಿಲ್ಲವೇನೋ ಎನಿಸುತ್ತದೆ. ಕಾವ್ಯ, ಕಥೆ, ಕಾದಂಬರಿಗಳಲ್ಲಿ ಉತ್ತಮ ಪುರುಷವಿರುವಲ್ಲೆಲ್ಲಾ ನಾವು ಅದನ್ನು ಬರೆದವನಿಗೇ ಸಂಬಂಧಿಸಿದ್ದೆಂದು ವ್ಯಾಖ್ಯಾನಿಸದೆ, ಅವುಗಳ ನಾಯಕ ಎನ್ನುತ್ತೇವಲ್ಲಾ ಹಾಗೆ ಇಂಥ ಆತ್ಮ ನಿರೀಕ್ಷಣೆ ಎಲ್ಲರಿಗೂ ಅಗತ್ಯ ಎಂಬ ಪರೋಕ್ಷ ಸೂಚನೆಯೂ ಆ ವಚನಗಳಿಂದ ಹೊಮ್ಮಲು ಸಾಧ್ಯವಿದೆಯಷ್ಟೆ

ಕಲ್ಯಾಣದ ಕ್ರಾಂತಿಗೆ ಕಾರಣವಾದ ಹರಳಯ್ಯ – ಮಧುವರಸರ ಮಕ್ಕಳ ಕೊಳು – ಕೊಡೆಯನ್ನು ಕುರಿತಂತೆ, ಲೇಖಕರು ತಳೆಯುವ ನಿಲುವು ತುಂಬ ವಿಚಿತ್ರವಾಗಿದೆ. ಬಸವಣ್ಣನವರು ಬ್ರಾಹ್ಮಣನ ಮಗಳ ಮದುವೆಯನ್ನು ಅಂತ್ಯಜನೊಂದಿಗೆ ಮಾಡಿಸಿದರು ಎಂಬುದು ಸತ್ಯ ದೂರವಾದ ಮಾತು, ಅವರಿಬ್ಬರೂ ಲಿಂಗಾಯಿತರಾಗಿದ್ದವರು, ತಮ್ಮೊಳಗೆ ಲಗ್ನ ಮಾಡಿಕೊಂಡರು' ಎಂದು ವ್ಯಾಖ್ಯಾನಿಸಿರುವುದು ವಕೀಲರೊಬ್ಬರ ಜಾಣ 'ವಾದ'ದಂತಿದೆಯೇ ಹೊರತು ಬೇರೇನಲ್ಲ. ಶರಣ ಧರ್ಮಕ್ಕೆ ಬಂದ ಹರಳಯ್ಯ , ಮಧುವರಸರು ತಾವು ಹುಟ್ಟಿಬಂದ ಜಾತಿಯ ಸಂಬಂಧವನ್ನು ಕಡಿದು ಕೊಂಡಿರಬಹುದಾದರೂ, ಶರಣೇತರರು ಅವರನ್ನು ಹುಟ್ಟಿ ಬಂದ ಜಾತಿಯಿಂದ ಗುರುತಿಸುತ್ತಿದ್ದರೆಂಬುದೇ ವಿವಾದಕ್ಕೆ ಕಾರಣವಾದ ಅಂಶ. ಬಸವಣ್ಣನವರ ಉದ್ದೇಶವೇನೋ ಈ ಕುಲಗಳನ್ನೆಲ್ಲಾ ಅಳಿಸಿ, ಶಿವಕುಲವನ್ನು ಸ್ಥಾಪಿಸುವುದೇ ಆಗಿದ್ದರೂ ಅದನ್ನು ಆಗಿನ ಸಮಾಜ ಅಷ್ಟು ಸುಲಭದಲ್ಲಿ ಅರಗಿಸಿಕೊಳ್ಳದೆ ಇದ್ದುದೇ ವಿವಾದಕ್ಕೆ ಕಾರಣವಾಯಿತೆಂಬ ವಾಸ್ತವವನ್ನು ಅಲ್ಲಗಳೆಯಲಾಗುವುದಿಲ್ಲ.

"ನಾನೊಮ್ಮೆ ಬೇಂಟೆಯ ಹೋದಡೆ.... ದೇವತ್ವ ಕೆಟ್ಟಿತ್ತು" ಎಂಬ ವಚನವನ್ನು ಬಸವಣ್ಣನವರೇ ಬರೆದರೋ ಅಥವಾ ಯಾರಾದರೂ ಬರೆದು ಅವರ ಹೆಸರಿಗೆ ಸೇರಿಸಿದರೋ ತಿಳಿಯದು ಎಂದು ಹೇಳುತ್ತ – "ಆದರೆ ವಚನದಲ್ಲಿ ಪ್ರಸ್ತಾಪಿತವಾಗಿರುವ ವಿಷಯ ಸತ್ಯಘಟನೆಯನ್ನು ಹೇಳುವಂತೆ ರಚನೆಯಾಗಿದೆ" ಎಂದು ಹೇಳಿ ಅದರಲ್ಲಿ ಬಂದಿರುವ 'ಸಾಸಿರದೇಳು ನೂರು ವರುಷ ಒಬ್ಬ ರಾಜನ ಕೊಂದೆನು' ಎಂಬ ಮಾತಿನಲ್ಲಿಯ ಸಾಸಿರದೇಳುನೂರನ್ನು ಶಕ ವರ್ಷ 1107 ಅಂದರೆ ಕ್ರಿ.ಶ. 1185 ಎಂದು ಅರ್ಥೈಸಿ, ಅದು ಬಿಜ್ಜಳನ ಕೊಲೆಯಾದ ವರ್ಷ. ಆದರೆ 'ನಾನು ಕೊಂದೆ ಎಂಬುದು ಸರಿಯಲ್ಲ' ಎಂದೆಲ್ಲ ಹೇಳ ಹೊರಟಿರುವುದು ತಮಾಷೆಯಾಗಿದೆ. ಇಡೀ ವಚನವನ್ನು ಅರ್ಥೈಸಿರುವ ರೀತಿಯೇ ಸರಿಯಲ್ಲ; ಪರಸ್ಪರ ವಿರೋಧಗಳಿಂದ ಕೂಡಿದೆ.

'ಶರಣರ ಆಂದೋಲನ – ಪ್ರೇರಣೆಗಳು, ಪ್ರಭಾವ' ಎಂಬ ಲೇಖನದಲ್ಲಿ ಹೆಣ್ಣನ್ನು ಮಾಯೆ ಎಂದು ಬಿಂಬಿಸುವ ವಚನಗಳಿಗೆ, ವೈದಿಕ ಚಿಂತನೆಯ ಪ್ರಭಾವವೇ ಕಾರಣ ಎಂದು ಹೇಳಿರುವುದು ಸರಿ ಎನಿಸುತ್ತದೆ. ಅದೇ ರೀತಿ ಕೊಂಡಗುಳಿಕೇಶಿರಾಜ, ದೇವರ ದಾಸಿಮಯ್ಯನ ವಚನಗಳ ಪ್ರಭಾವವನ್ನು ಗುರುತಿಸಿರುವುದೂ ಸರಿಯಾಗಿಯೇ ಇದೆ. ಅದೇ ರೀತಿ ಕುಮಾರವ್ಯಾಸನ ಕೆಲವೊಂದು ರೂಪಕಗಳ ಮೇಲೆ ಬಸವಣ್ಣನವರ ವಚನಗಳ ನೇರ ಪ್ರಭಾವ ಆಗಿರುವುದನ್ನು ಉಲ್ಲೇಖಿಸಲಾಗಿದೆ. ಆದರೆ ಬಹಳ ಹಿಂದೆಯೇ ಇದನ್ನು ಸುಜನಾ ಅವರು ತಮ್ಮ 'ಹೃದಯ ಸಂವಾದ' ಗ್ರಂಥದಲ್ಲಿ ತೋರಿಸಿಕೊಟ್ಟಿದ್ದಾರೆ.

ಆದರೆ ಕುಮಾರವ್ಯಾಸ ಭಾರತದಲ್ಲಿ ..... ವಿದುರನ ಮನೆಯಲ್ಲಿ ಶ್ರೀಕೃಷ್ಣನು ಹಾಲು ಕುಡಿದ ಸಂದರ್ಭದಲ್ಲಿ ಬರುವ "ಹಾಲಿನ ಶರಧಿ ಮೇರೆಯನೊಡೆದುದು" ಎಂಬ ಮಾತು ಹರಿಹರನ ಬಸವರಾಜ ದೇವರಗಳೆಯಲ್ಲಿಯ "ಪಾಲೊರತೆ ಸುರಿ ತಪ್ಪಂತೆ ಹಾಲಹಳ್ಳ ಓಲಗದ ನಡುವೆ ಮಡುಗಟ್ಟಿ ಹರಿದು ಹೊರಸೂಸೆ" ಎಂಬ ಮಾತಿನ ಪ್ರಭಾವದಿಂದ ರಚಿತವಾದದ್ದು ಎಂದು ಹೇಳುವುದು ದೂರಾನ್ವಯ. ಇನ್ನು ಅಕ್ಕನ ವಚನಗಳ ಪ್ರಭಾವ ಬಸವಣ್ಣನವರ ಕೆಲವೊಂದು ವಚನಗಳ ಮೇಲಾಗಿದೆ ಎಂದು ಹೇಳುವುದೂ ಸಮರ್ಥನೀಯವಲ್ಲ. ಇಬ್ಬರೂ ಸಮಕಾಲೀನರು. ಯಾರಿಂದ ಯಾರು ಪ್ರಭಾವಿತರಾದರೆಂದು ಖಚಿತವಾಗಿ ಹೇಳಲಾಗುವುದಿಲ್ಲ. ಒಂದೇ ರೀತಿಯ ಆಲೋಚನೆಗಳು ಇಬ್ಬರಿಗೂ ಬಂದಿರಲು ಸಾಕು. ಹೀಗೆ ಸಾಮ್ಯ ಕಂಡಲ್ಲೆಲ್ಲ ಸ್ವಾಮ್ಯವನ್ನು ಶಂಕಿಸುವುದು ಸರಿಯಲ್ಲ.

ಕುಲದ ಪ್ರಸ್ತಾಪದ ಸಂದರ್ಭದಲ್ಲಿ ವೈದಿಕ ಧರ್ಮದಿಂದ ಬಂದ ಪಂಪ ಮತ್ತು ಬಸವಣ್ಣ ಇಬ್ಬರೂ ಹುಟ್ಟಿನಿಂದ ಕುಲದ ಶ್ರೇಷ್ಠತೆಯನ್ನು ಸಾಧಿಸುವುದನ್ನು ತಿರಸ್ಕರಿಸಿರುವುದನ್ನು ತೋರಿಸಿಕೊಟ್ಟಿರುವುದು ಒಳ್ಳೆಯ ಗಮನಿಕೆ. ಪಂಪನು ಛಲ, ಅಣ್ಮು, ಗುಣ ಇವುಗಳು ನಿಜವಾದ ಕುಲದ ಲಕ್ಷಣವೆಂದು ಹೇಳಿ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ವಿಶಾಲ ತತ್ವದ ಅಡಿಯಲ್ಲಿ ಕುಲವನ್ನು ಅರ್ಥೈಸಿದರೆ 'ಶಿವ ಭಕ್ತರನೆಲ್ಲ ಒಂದೇ ಎಂಬೆ' ಎಂದು ಭಕ್ತಿ ಪಕ್ಷಪಾತದ ಅಡಿಯಲ್ಲಿ ಬಸವಣ್ಣನವರು ಅರ್ಥೈಸುತ್ತಾರೆ.

ಮಾತಿನಲ್ಲಿ ಮಿಂಚಿನ ಕಾಂತಿ ಮತ್ತು ಸಿಡಿಲಿನ ಶಕ್ತಿಯನ್ನು ತುಂಬಿ ಒಗಟಿನಲ್ಲೆಂಬಂತೆ ನುಡಿಯುವುದು ಪ್ರಭುದೇವರ ರೀತಿ. ಅವನ ಹಲವಾರು ಬೆಡಗಿನ ವಚನಗಳನ್ನು ವ್ಯಾಖ್ಯಾನಿಸುವ ಪ್ರಾಮಾಣಿಕವಾದ ಪ್ರಯತ್ನ "ನಿಶ್ಯಬ್ದದ ಸುಳುಹು ಜಗಕ್ಕೆ ಪಾವನ" ಎಂಬ ಲೇಖನದಲ್ಲಿದೆ. ಕನ್ನಡದ ನವ್ಯ ಕವಿಗಳು, ವಚನಕಾರರ ಭಾಷಾ ಬಳಕೆಯಿಂದ, ಪ್ರಭಾವಿತಗೊಂಡಿದ್ದಾರೆಂಬುದು ನಿಜ. ಕಾವ್ಯವನ್ನು ಧ್ವನಿಪೂರ್ಣವಾಗಿ ರಚಿಸಬೇಕೆಂಬ ವಿಚಾರದಲ್ಲೂ ಅಡಿಗರು ಪ್ರಭುದೇವನಿಂದ ಪ್ರೇರಣೆ ಪಡೆದಿರಬಹುದು. ಈ ಬಗ್ಗೆ ಲೇಖಕರು ಮಾಡಿರುವ ಊಹೆ ಸಕಾರಣವಾಗಿಯೇ ಇದೆ. ಶಿಶುನಾಳ ಶರೀಫರು ಪ್ರಭಾವಿತರಾಗಿರುವ ಬಗ್ಗೆ ಹೇಳಿರುವುದೂ ಸರಿಯಾಗಿಯೇ ಇದೆ. ಆದರೆ ಯಾವುದೇ ಒಂದು ಗೊತ್ತಾದ ವಚನದ ಪ್ರಭಾವ, ಒಂದು ಗೊತ್ತಾದ ಕವನದ ಮೇಲಾಗಿದೆ ಎಂದು (ಅಡಿಗರ ವಿಷಯಕ್ಕೆ) ಹೇಳುವಂತಿಲ್ಲ. ಪ್ರಭುದೇವರ ವಚನಗಳನ್ನು ಅವರವರ ಅನುಭವದ ಆಳ ಮತ್ತು ವಿದ್ವತ್ತಿನ ವ್ಯಾಪ್ತಿಗೆ ತಕ್ಕಂತೆ ಅರ್ಥೈಸಬಹುದು. ಇವುಗಳ

ಬಗ್ಗೆ, ಇದಮಿತ್ಥಂ ಎಂಬ ಮಾತೇ ಇಲ್ಲ, ಕಾವ್ಯಾರ್ಥೋ ನವಿರಾಮೋಸ್ತಿ' ಎಂಬ ಆನಂದವರ್ಧನನ ಮಾತು ಪ್ರಭುದೇವರ ವಚನಗಳಿಗೆ ಸಾರ್ಥಕವಾಗಿ ಅನ್ವಯಿಸುತ್ತದೆ.

ಗ್ರಂಥದ ಕೊನೆಯ ಭಾಗವಾದ 'ವಿಮರ್ಶೆ, ಗ್ರಹಿಕೆ, ಪರಾಮರ್ಶೆ'ಯಲ್ಲಿ ಬದುಕಿಗೆ ಪ್ರಸ್ತುತವೆನಿಸುವ ಹಲವಾರು ಸಂಗತಿಗಳಿಗೆ ಸಂಬಂಧಿಸಿದ ವಿಚಾರಪೂರ್ಣ ಬರಹಗಳ ಜೊತೆಗೆ ಕೆಲವು ಸಾಹಿತ್ಯ ಕೃತಿಗಳನ್ನು ಕುರಿತ ವಿಮರ್ಶೆ ವಿಶ್ಲೇಷಣೆಗಳಿವೆ. ಅವುಗಳಲ್ಲಿ ಮುಖ್ಯವಾದ್ದು ಕುವೆಂಪು ಅವರ 'ಕಾನೂರು ಹೆಗ್ಗಡಿತಿ' ಮತ್ತು ಟಾಲ್‌ಸ್ಟಾಯ್ ಅವರ 'ಅನ್ನಾಕರೇನಿನ' ಕಾದಂಬರಿಗಳನ್ನು ಕುರಿತ ತೌಲನಿಕ ವಿಮರ್ಶೆ. ಆದರೆ ಟಾಲ್‌ಸ್ಟಾಯ್ ಅವರ ಕಾದಂಬರಿ ಪ್ರತಿಯೊಂದು ಪಾತ್ರವೂ ಹೆಗ್ಗಡಿತಿ ಕಾದಂಬರಿಯ ಪ್ರತಿಯೊಂದು ಪಾತ್ರಕ್ಕೆ ಸಮನಾಗಿದೆ ಎಂದು ಸಾಧಿಸಹೊರಟಿರುವುದು ತೀರ ವಿಚಿತ್ರವಾಗಿದೆ. ಅಲ್ಲದೆ ಒಂದು ಕೃತಿ ರಚಿತವಾಗಿ ನಮ್ಮ ಕಣ್ಣೆದುರು ಇರುವಾಗ ಅದು ಸದ್ಯ ಇರುವ ರೀತಿಯಲ್ಲಿ ಹೇಗಿದೆ, ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಅಥವಾ ಇಲ್ಲ ಎಂದು ಹೇಳುವುದು ವಿಮರ್ಶಕನ ಕೆಲಸವೇ ಹೊರತು, ಅದು ಹೀಗಿರಬೇಕಿತ್ತು , ಅಲ್ಲಿಯ ಪಾತ್ರ ಈ ರೀತಿ ಚಿತ್ರಿತವಾಗಬೇಕಾಗಿತ್ತು ಅಥವಾ ಆಗಬಾರದಿತ್ತು ಎಂದು ಹೇಳುವುದರಲ್ಲಿ ಅರ್ಥವೇ ಇಲ್ಲ. ಅದು ವಿಮರ್ಶೆಯ ರೀತಿ ಅಲ್ಲವೇ ಅಲ್ಲ. ಕುವೆಂಪು ಅನ್ನಾಕರೇನಿನದಿಂದ ಪ್ರೇರಣೆ ಪಡೆದಿರಬಹುದು. ಹಾಗೆಂದಾಕ್ಷಣ ಅದರ ಯಥಾವತ್ ಆಗಿ ಹೆಗ್ಗಡಿತಿ ಇರಬೇಕೆಂದು ನಿರೀಕ್ಷಿಸುವುದು ಸರಿಯೇ ಅಲ್ಲ. ಕನ್ನಡದಲ್ಲಿ ಮೈತಾಳಿದ ಮಹಾನ್ ವಾಸ್ತವವಾದಿ ಕಾದಂಬರಿ ಎಂದು, ಮಲೆನಾಡಿನ ಸಮಗ್ರ ಜನಜೀವನವನ್ನು ಅದರ ಎಲ್ಲ ಸಂಕೀರ್ಣತೆಯೊಂದಿಗೆ ಮೊದಲಿಗೆ ಅನಾವರಣಗೊಳಿಸಿದ ಮೊದಲ ಗದ್ಯ ಮಹಾಕಾವ್ಯವೆಂದು ಈಗಾಗಲೇ ಸಹೃದಯರ ಮತ್ತು ವಿಮರ್ಶಕರ ಆದರಕ್ಕೆ ಪಾತ್ರವಾಗಿರುವ ಈ ಕೃತಿಯನ್ನು ಬೇರೆಯದೇ ಆದ ರೀತಿಯಲ್ಲಿ ವಿಶ್ಲೇಷಿಸುವ ಅಗತ್ಯವಿದೆ.

ಸೂರ್ಯ ಶಿಕಾರಿ ಮತ್ತು ಕಂಬಾರರ ಶಿಖರ ಸೂರ್ಯ ಕೃತಿಗಳನ್ನು ಪರಿಚಯ ಮಾಡಿಕೊಡುತ್ತಲೇ ಅವುಗಳನ್ನು ವ್ಯಾಖ್ಯಾನಿಸಿರುವ ರೀತಿ ಅರ್ಥಪೂರ್ಣವಾಗಿದೆ.

ಒಟ್ಟಾರೆ, ಈ ಬರಹಗಳು ಓದುಗರ ಅನುಭವ ವಲಯವನ್ನು ವಿಸ್ತರಿಸುವ ಹಾಗೂ ಅವರ ಬುದ್ಧಿಗೆ ನೂತನ ಚಿಂತನೆಗಳ ಬೆಳಕನ್ನು ಹೊಳೆಯಿಸುವ ಅಧ್ಯಯನ ಪೂರ್ಣ ಬರಹಗಳಾಗಿವೆ ಎಂಬುದು ಸಂತಸದ ವಿಷಯ.

❖

20
ಮೌಲ್ಯಗಳ ಕುರಿತ ತೀವ್ರ ಕಾಳಜಿ

'ಅಂಕಣ ಬರಹಗಳು' ಈಚಿನ ವರ್ಷಗಳಲ್ಲಿ ಸರ್ವೇ ಸಾಮಾನ್ಯವಾಗಿಬಿಟ್ಟಿವೆ. ಯಾವ ಪತ್ರಿಕೆಯ ಪುಟ ತಿರುವಿದರೂ ಅದರಲ್ಲಿ ಹತ್ತು ಹಲವು ವಿಷಯಗಳಿಗೆ ಸಂಬಂಧಿಸಿದ ಅಂಕಣಗಳು ರಾರಾಜಿಸುತ್ತಿರುತ್ತವೆ. ಸಾಹಿತಿಗಳು, ರಾಜಕೀಯ ಚಿಂತಕರು, ಕ್ರೀಡಾ ಕ್ಷೇತ್ರಜ್ಞರು, ವೈದ್ಯರು, ವಿಜ್ಞಾನ ಲೇಖಕರು ಹೀಗೆ ಹಲವು ರಂಗದ ಪರಿಣತರು ತಮ್ಮ ಚಿಂತನಾ ಲಹರಿಗಳನ್ನು ಹರಿಯಬಿಡುತ್ತಿರುತ್ತಾರೆ. ಸಾರ್ವಜನಿಕರಲ್ಲಿ ಅರಿವಿನ ಜಾಗೃತಿಯನ್ನುಂಟು ಮಾಡುವ ದೃಷ್ಟಿಯಿಂದ, ಪ್ರಜಾಪ್ರಭುತ್ವದ ನಮ್ಮ ನಾಡಿನಲ್ಲಿ ಇವೆಲ್ಲ ತೀರ ಅಗತ್ಯವಾದವೇ. ಅಷ್ಟರಮಟ್ಟಿಗೆ ಅವಕ್ಕೆ ಮಹತ್ವದ ಸ್ಥಾನವಿದ್ದೇ ಇದೆ.

ನಮ್ಮ ಕಾಲ ನಮ್ಮ ಜನ– ಜಾಣಗೆರೆ ವೆಂಕಟರಾಮಯ್ಯ
ಪು.148, ಮು. 2010, ಬೆಲೆ ರೂ.80/–
ಜಾಣಗೆರೆ ಪ್ರಕಾಶನ
ನಂ. 256, 60 ಅಡಿ ರಸ್ತೆ, ಶಿವನಗರ, ರಾಜಾಜಿನಗರ ಬೆಂಗಳೂರು–560 010

ಪತ್ರಿಕಾ ರಂಗದಲ್ಲೇ ಇದ್ದುಕೊಂಡು, ದಿನನಿತ್ಯವೂ ಲೇಖನ ವ್ಯವಸಾಯವನ್ನೇ ವೃತ್ತಿಯಾಗಿಟ್ಟುಕೊಂಡಿರುವವರಿಗಂತೂ ವಿಷಯದ ಕೊರತೆಯೂ ಇಲ್ಲ, ಬರಹಕ್ಕಾಗಿ ಅವರು ತಡಕಾಡಬೇಕಾದ್ದೂ ಇಲ್ಲ. ಕಾರಣ, ಬರವಣಿಗೆ ಅಂಥವರಿಗೆ ತೀರ ಸಲೀಸು. ಹಾಗಾಗಿ ಅನೇಕ ವೇಳೆ ಅವು ಸವೆದ ಜಾಡಿಗೆ ಬಿದ್ದು ತಮ್ಮ ಮೊನಚನ್ನು ಕಳೆದುಕೊಂಡಿರುವ ಸಾಧ್ಯತೆಯೂ ಇರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಜಾಣಗೆರೆ ವೆಂಕಟರಾಮಯ್ಯನವರ "ನಮ್ಮ ಕಾಲ, ನಮ್ಮ ಜನ" ಅಂಕಣ ಬರಹಗಳ ಸಂಕಲನವನ್ನು ಪರಿಶೀಲಿಸಿದಾಗ, ಅವು ಮಾಮೂಲಿ ಅಂಕಣ ಬರಹಗಳಿಗಿಂತ ಭಿನ್ನವೂ ವಿಶಿಷ್ಟವೂ ಆಗಿ ಕಂಡುಬರುತ್ತವೆ. ಇದಕ್ಕೆ ಕಾರಣ, ಜಾಣಗೆರೆಯವರು ಕೇವಲ ವೃತ್ತಿನಿರತ ಪತ್ರಕರ್ತರಷ್ಟೇ ಅಲ್ಲ, ಒಬ್ಬ ಸೃಜನಶೀಲ ಲೇಖಕರೂ ಹೌದೆಂಬುದು. ಹಾಗಾಗಿ ಅವರಿಗೆ ಸಮಸ್ಯೆಯ ಬೇರು, ವಿಷಯದ ಅಂತರಂಗ ಥಟ್ಟನೆ ಗೋಚರಿಸುತ್ತದೆ. ಅದರಿಂದ ಅವರ ವಿಷಯದ ಪೂರ್ವಾಪರ ವಿಶ್ಲೇಷಣೆಗೆ ಎಲ್ಲಿಲ್ಲದ ಮೊನಚು ಪ್ರಾಪ್ತವಾಗಿ ಬಿಡುತ್ತದೆ. ಅದರ ಎಲ್ಲ ಮಗ್ಗುಲುಗಳನ್ನೂ ವಿಜ್ಞಾನಿಯ ಕುತೂಹಲದಿಂದ ಕೆದಕುತ್ತ ಹೋಗುತ್ತಾರೆ. ಬರಿ ಇಷ್ಟೇ ಆಗಿದ್ದರೆ, ಅದೂ ಒಂದು ಸಮರ್ಥ ವಿಶ್ಲೇಷಣೆ ಎಂದು ಮೆಚ್ಚಿಕೆಯ ಉದ್ಗಾರ ತೆಗೆದು ಸುಮ್ಮನಾಗಿ ಬಿಡಬಹುದಿತ್ತು. ಆದರೆ ಅದು ವಿಶ್ಲೇಷಣೆಯಷ್ಟಕ್ಕೇ ನಿಲ್ಲದೆ, ಅದರಲ್ಲಿ ಒಂದು ತೀವ್ರ ತಹತಹ, ತುಡಿತ, ಆರ್ದ್ರತೆ ಕಂಡುಬರುತ್ತದೆ. ಹಾಗಾಗಿ ನಮ್ಮ ಸಾಮಾಜಿಕ ಬದುಕಿನಲ್ಲಿಯ ಬಿರುಕುಗಳನ್ನು ಕುರಿತಂತೆ, ರಾಜಕೀಯದಲ್ಲಿ ಮೌಲ್ಯಗಳು ಕುಸಿಯುತ್ತಿರುವುದರ ಬಗ್ಗೆ ಅವರು ತೀವ್ರ ವ್ಯಗ್ರರಾಗುತ್ತಾರೆ, ಸಿಟ್ಟುಗೊಳ್ಳುತ್ತಾರೆ. ಈ ಎಲ್ಲ ನೋವು, ವ್ಯಗ್ರತೆ, ಸಿಟ್ಟುಗಳು ಒಂದು ಋಜು ಮನಸ್ಸಿಗೆ ಮಾತ್ರ ಇರಲು ಸಾಧ್ಯ. ಎಲ್ಲರೊಂದಿಗೆ, ಎಲ್ಲದರೊಂದಿಗೆ ರಾಜಿ ಮಾಡಿಕೊಂಡುಬಿಡುವ, ಸೋಗಲಾಡಿ, ಆಷಾಢಭೂತಿ ಮನಸ್ಸುಗಳಿಗೆ ಇದು ಸಾಧ್ಯವಿಲ್ಲದ್ದು. ಇಂಥ ಮನಸ್ಸು ಮಾತ್ರವೇ 'ಸೇನೆ'ಯ ಹೆಸರಿನಲ್ಲಿ ಮೂಲಭೂತ ವಾದವನ್ನು ಮೆರೆಸುವವರನ್ನು ಕುರಿತು "ಕನ್ನಡ, ದಲಿತ, ರೈತರ ಹೆಸರಿನಲ್ಲಿ ಒಬ್ಬೊಬ್ಬ ನಾಯಕಮಣಿಯ ಆಧಿಪತ್ಯದಲ್ಲಿ ಆ ಸೇನೆಗಳು ವಿಜೃಂಭಿಸುತ್ತಿರುವುದರಿಂದ ಸಮಸ್ಯೆಗಳು ಬಗೆಹರಿಯುವುದು ಹಾಗಿರಲಿ ಉಲ್ಬಣಗೊಳ್ಳುತ್ತಿವೆ ಎಂದು ವ್ಯಗ್ರವಾಗಬಲ್ಲುದು, ಸಮರ್ಪಕ ವಿದ್ಯುತ್ ಪೂರೈಕೆ ಮಾಡಲಾರದೆ ರೈತರ ನಡ ಮುರಿಯುತ್ತಿರುವ, ಭೂಮಿಯನ್ನು ಬಂಡವಾಳಶಾಹಿ ಉದ್ಯಮಪತಿಗಳಿಗೆ ಧಾರೆಯೆರೆಯುತ್ತಿರುವ ಆಸೆಬುರುಕ ರೈತ ವಿರೋಧಿ ಸರ್ಕಾರದ

ವಿರುದ್ಧ ಕುದಿಯಬಲ್ಲದು. ಈ ಲೇಖನಗಳಲ್ಲಿ ಅವರ ರೈತಪರ ಕಾಳಜಿ ಮತ್ತು ಸಮಯ ಸಾಧಕ ರಾಜಕಾರಣದ ಬಗೆಗಿನ ಉಗ್ರ ಕೋಪ ಸಮರ್ಥ ಅಭಿವ್ಯಕ್ತಿಯನ್ನು ಕಂಡುಕೊಂಡಿದೆ.

ಸಾಮಾನ್ಯ ಜನರ ಭಕ್ತಿ, ನಂಬಿಕೆಗಳನ್ನೇ ಮೂಲ ಬಂಡವಾಳ ಮಾಡಿಕೊಂಡು, ಸಮಾಜಬಾಹಿರ ಕೃತ್ಯಗಳನ್ನು ಎಸಗುತ್ತಿರುವ ಕಪಟ ಕಾಷಾಯಧಾರಿಗಳನ್ನು ಕುರಿತ ಲೇಖನದಲ್ಲಿರುವುದು ಕೂಡ ಇದೇ ಬಗೆಯ ಜನಪರ ಕಾಳಜಿ. ಬಡ ಜನರಿಗೆ ಖಾತರಿಯಾದ ಉದ್ಯೋಗ ಕೊಟ್ಟು ಪ್ರತಿಯೊಬ್ಬರನ್ನೂ ದುಡಿಮೆಗೆ ಹಚ್ಚುವ, ಅದಕ್ಕಾಗಿ ಸೂಕ್ತ ಕೂಲಿ ನೀಡುವ ಘನವಂತಿಕೆ ಮಾತ್ರ ಯಾವುದೇ ಸರ್ಕಾರಕ್ಕೆ ಘನತೆ ತಂದು ಕೊಡುತ್ತದೆಯೇ ಹೊರತು, ಅಗ್ಗದ ಜನಪ್ರಿಯತೆಗಾಗಿ, ಅಕ್ಕಿ – ಸೀರೆ, ಪಂಚೆ, ಬಣ್ಣದ ಟಿ.ವಿ. ಇತ್ಯಾದಿಗಳನ್ನು ಕೊಡುವುದು ಅಲ್ಲ ಎಂಬುದು ಯಾವುದೇ ಸರ್ಕಾರಕ್ಕೆ, ರಾಜಕೀಯ ಪಕ್ಷಕ್ಕೆ ಅತ್ಯಂತ ಸೂಕ್ತವಾದ ಮಾರ್ಗದರ್ಶನ. ಅವರಿಗೆ ಯಾರ ಮುಲಾಜೂ ಇಲ್ಲ, ಹೆದರಿಕೆಯೂ ಇಲ್ಲ. ರಾಜಕಾರಣಿಯ ಭಂಡತನವನ್ನು, ಕಾವೀಧಾರಿಯ ಸೋಗಲಾಡಿತನವನ್ನು, ಸಂಬಂಧಿಸಿದ ವ್ಯಕ್ತಿಗಳ ಹೆಸರು ಹೇಳಿಯೇ ಉಗ್ರವಾಗಿ ಟೀಕಿಸುತ್ತ ಮಂಗಳಾರತಿ ಎತ್ತುತ್ತಾರೆ. ಭಾರತೀಯ ರಾಜಕಾರಣ ಎಂಥ ಅಧಃಪಾತಾಳವನ್ನು ಮುಟ್ಟಿದೆ ಎಂಬುದನ್ನು, ಅದರ ದುಷ್ಟತನವನ್ನು ಇಲ್ಲಿರುವ ಹಲವಾರು ಲೇಖನಗಳಲ್ಲಿ ಅತ್ಯಂತ ವಿಶದವಾಗಿ ವಿಶ್ಲೇಷಿಸಿ, ಇದನ್ನು ಸರಿಪಡಿಸದೆ, ಅದೇ ಹಾದಿಯಲ್ಲಿ ಸಾಗಲುಬಿಟ್ಟರೆ, ಮುಂದಿನ ದಿನಗಳು ಭಾರೀ ಆಪತ್ತಿನ ದಿನಗಳಾಗಬಲ್ಲವು ಎಂದು ಎಚ್ಚರಿಸುತ್ತಾರೆ ರಾಜಕೀಯಾಧಿಕಾರ ವಿಕೇಂದ್ರೀಕರಣದ ಉದ್ದೇಶದಿಂದ ಹುಟ್ಟುಹಾಕಿದ ಕರ್ನಾಟಕ ಪಂಚಾಯತ್ ರಾಜ್ 'ಅವ್ಯವಸ್ಥೆ' ಕುರಿತ – 'ಭ್ರಷ್ಟಾಚಾರ ವಿಕೇಂದ್ರೀಕರಣ' ಎಂಬ ಜಾಣಗೆರೆಯವರ ಲೇಖನ ಎಷ್ಟೊಂದು ಸಾಮಯಿಕವಾಗಿದೆ ಎಂಬುದನ್ನು ಮೊನ್ನೆ ಮೊನ್ನೆ ತಾನೆ ಪಂಚಾಯತ್ ಸದಸ್ಯರ ಹಾವಳೀ ತಾಳದೆ ಪಿ.ಡಿ.ಓ. ಒಬ್ಬರು ಆತ್ಮಹತ್ಯೆ ಮಾಡಿಕೊಂಡ ಮತ್ತು ನೂರಾರು ಪಿ.ಡಿ.ಓ.ಗಳು ಸಾಮೂಹಿಕ ರಾಜೀನಾಮೆಗೆ ಮುಂದಾಗಿರುವ ಘಟನೆ ಎತ್ತಿ ತೋರುತ್ತದೆ.

ಒಟ್ಟಾರೆ ಜಾಣಗೆರೆಯವರ ಈ ಲೇಖನಗಳಲ್ಲಿ ಕ್ರಾಂತದರ್ಶಿತ್ವವಿದೆ. ಮೌಲ್ಯಗಳ ಬಗೆಗಿನ ತೀವ್ರ ತುಡಿತ ಕಾಳಜಿಗಳಿವೆ. ಎಲ್ಲಕ್ಕಿಂತ ಹೆಚ್ಚಾಗಿ ಅಧಃಪತನದತ್ತ ಮುನ್ನುಗ್ಗುತ್ತಿರುವ ಭಾರತೀಯ ರಾಜಕಾರಣ ಹಾಗೂ ಕಲುಷಿತಗೊಳ್ಳುತ್ತಿರುವ ಸಾಮಾಜಿಕ ಬದುಕಿನ ಬಗೆಗಿನ ತೀವ್ರ ತಹತಹ ಮತ್ತು ಕುದಿತಗಳಿಂದಾಗಿ ಇವು ಓದುಗರ ಅರಿವನ್ನು

ಹೆಚ್ಚಿಸುವ ಸಾಮರ್ಥ್ಯ ಹೊಂದಿರುವುದಷ್ಟೇ ಅಲ್ಲದೆ, ರಾಜಕೀಯಸ್ಥರ ಹಾಗೂ ಸಮಾಜ ಧುರೀಣರೆನಿಸಿಕೊಂಡವರ ಕಣ್ತೆರೆಸಬಲ್ಲಂಥವೂ ಆಗಿವೆ. ಮಹದೇವ ಪ್ರಕಾಶ್ ಅವರು, ಬೆನ್ನುಡಿಯಲ್ಲಿ ಹೇಳಿರುವಂತೆ "ಪೂರ್ವಗ್ರಹ ಪೀಡಿತವಲ್ಲದ ಮುಕ್ತ ಮನಸ್ಸು" ಇಲ್ಲಿನ ಎಲ್ಲ ಲೇಖನಗಳ ಹಿಂದೆಯೂ ಕಾರ್ಯಪ್ರವೃತ್ತವಾಗಿದೆ.

❖

21

ಉಪಯುಕ್ತ ಆಕರ ಗ್ರಂಥ

ಭೂಮಿ ಹುಟ್ಟಿದ್ದು ಎಷ್ಟು ವರ್ಷಗಳ ಹಿಂದೆ?

ಭೂಮಿಯ ಗಾತ್ರ ಎಷ್ಟು ?

ಭೂಮಿಯ ಮೇಲೆ ಮನುಷ್ಯ ಕಾಣಿಸಿಕೊಂಡಿದ್ದು ಯಾವಾಗ ?

ಫೆಸಿಫಿಕ್ ಸಾಗರದ ವಿಸ್ತಾರ ಎಷ್ಟು ?

ಕಪ್ಪು ಸಮುದ್ರದ ಆಳ ಎಷ್ಟು ?

`Rh' ಅಂಶ ಎಂದರೇನು ?

ವಸ್ತುಗಳ ಕಾಲ ನಿರ್ಣಯುವನ್ನು ಹೇಗೆ ಮಾಡಲಾಗುತ್ತದೆ ?

ಇಂಥ ಹತ್ತು ಹಲವು ಕುತೂಹಲಭರಿತ ಪ್ರಶ್ನೆಗಳಿಗೆ ಉತ್ತರಗಳೂ, ಅದರಲ್ಲೂ ವಿವರವಾದ ಉತ್ತರಗಳು ಬೇಕೆ – ಹಾಗಿದ್ದರೆ ಅವಶ್ಯಕವಾಗಿ ನೀವು ಜಿ.ಆರ್. ಸತ್ಯಲಿಂಗರಾಜು ಅವರ ನಭೋಮಂಡಲ ಟು ಭೂ

ನಭೋಮಂಡಲ ಟು ಭೂಮಂಟಲ– ಜಿ.ಆರ್. ಸತ್ಯಲಿಂಗರಾಜು,
ಜಿ.ಆರ್. ಸತ್ಯಲಿಂಗರಾಜು, ನಂ. 1210, 4ನೇ ತಿರುವು, ಕೇಂದ್ರೀಯ ವಿದ್ಯಾಲಯ ಹಿಂಭಾಗ, ರಾಘವೇಂದ್ರ ನಗರ, ಮೈಸೂರು. ಬೆಲೆ : ರೂ. 300

ಮಂಡಲ ಎಂಬ ಗ್ರಂಥವನ್ನು ಅವಲೋಕಿಸಬೇಕು. ಈ ಸೂರ್ಯಮಂಡಲದ ಕೆಳಗೆ ಏನೆಲ್ಲ ವಸ್ತು, ವಿಷಯ, ವಿಚಾರ, ಮಾಹಿತಿ, ಜ್ಞಾನ ಇದೆ, ಅವೆಲ್ಲವುಗಳ ಬಹುಮುಖ್ಯ ಮಾಹಿತಿಗಳು ಕ್ರೋಢೀಕೃತಗೊಂಡಿರುವ ಗ್ರಂಥ ಎಲ್ಲಿಯಾದರೂ ಇದೆಯಾ ಎಂದರೆ ಇದೆ, ಅದೇ ಜಿ. ಆರ್. ಸತ್ಯಲಿಂಗರಾಜು ಅವರ 'ನಭೋಮಂಡಲ ಟು ಭೂ ಮಂಡಲ' ಎಂಬ ಈ ಅಪೂರ್ವ ಗ್ರಂಥ. ಇದರಲ್ಲಿ ಭೌತಶಾಸ್ತ್ರ , ರಸಾಯನ ಶಾಸ್ತ್ರ , ಜೀವಶಾಸ್ತ್ರ , ಪ್ರಾಣಿಶಾಸ್ತ್ರ , ಸಸ್ಯಶಾಸ್ತ್ರ, ಭೂಗರ್ಭ ಶಾಸ್ತ್ರ , ಖಗೋಳ ಶಾಸ್ತ್ರ , ಪುರಾಣ, ಇತಿಹಾಸ, ಮಾನವಶಾಸ್ತ್ರ , ಸಮಾಜಶಾಸ್ತ್ರ , ಭೂಗೋಳ, ರಾಜ್ಯಶಾಸ್ತ್ರ , ಅರ್ಥಶಾಸ್ತ್ರ, ವೈದ್ಯಶಾಸ್ತ್ರ , ಮನಶಾಸ್ತ್ರ , ಶರೀರ ರಚನಾಶಾಸ್ತ್ರ, , ಅಪರಾಧ ವಿಜ್ಞಾನ, ಲೈಂಗಿಕ ವಿಜ್ಞಾನ ಹೀಗೆ ಏನುಂಟು ಏನಿಲ್ಲ ಅನ್ನುವ ಹಾಗೆ ವಿವಿಧ ಅಧ್ಯಯನ ಶಿಸ್ತುಗಳಿಗೆ ಸಂಬಂಧಿಸಿದ ವಿಚಾರಗಳ ಬೆಲೆಯುಳ್ಳ ಮಾಹಿತಿಗಳು ಅತ್ಯಾಕರ್ಷಕ ಶೀರ್ಷಿಕೆಗಳೊಂದಿಗೆ ತಿಳಿಗನ್ನಡದಲ್ಲಿ ಇಲ್ಲಿ ನಿರೂಪಿತಗೊಂಡಿವೆ. ವಿಸ್ಮಯಕರವಾದ ಅಸಂಖ್ಯಾತ ಮಾಹಿತಿಗಳನ್ನು ಹಲವಾರು ಮೂಲಗಳಿಂದ ಸಂಗ್ರಹಿಸಿ ಹೀಗೆ ಒಂದೆಡೆ ನೀಡಬೇಕೆಂಬ ಆಲೋಚನೆ ಹೊಳೆದದ್ದೇ ನಿಜಕ್ಕೂ ಶ್ಲಾಘನೀಯ.

ಇವೆಲ್ಲ ಪತ್ರಿಕೆಗಳಲ್ಲಿ ಅಂಕಣಗಳಾಗಿ ಪ್ರಕಟಗೊಂಡ ಲೇಖನಗಳು. ಇದು ಒಂದು ರೀತಿಯಲ್ಲಿ ಎಲ್ಲವೂ ಸ್ವಲ್ಪ ಸ್ವಲ್ಪ ಗೊತ್ತು ಆದರೆ ಯಾವುದೂ ಪೂರ್ತಿ ಗೊತ್ತಿಲ್ಲ Jack of all but master of none ಎನ್ನುವ ಹಾಗೆ ಎಂದು ಕೆಲವರು ಆಕ್ಷೇಪಿಸಬಹುದಾದರೂ ಇಂಥ ಗ್ರಂಥಗಳಿಗೆ ಅವುಗಳದ್ದೇ ಆದ ಪ್ರಯೋಜನವಿದೆ. ಈ ದಿನ ಅಂತರ್ಜಾಲ ತಡಕಾಡಿದರೆ ಬೇಕಾದ ಮಾಹಿತಿ ಕಣ್ಮುಂದೆ ಪ್ರತ್ಯಕ್ಷವಾಗುವ ಅನುಕೂಲವಿದ್ದಾಗ್ಯೂ, ಇಂಥ ಗ್ರಂಥಕ್ಕೆ ತನ್ನದೇ ಆದ ಮಹತ್ವವಿದ್ದೇ ಇದೆ. ಒಂದೊಂದು ಶಾಸ್ತ್ರಕ್ಕೆ ನಮ್ಮ ಇಡೀ ಆಯುಷ್ಯವನ್ನೇ ಮೀಸಲಾಗಿಟ್ಟರೂ, ತಿಳಿದುಕೊಳ್ಳುವುದು ಇನ್ನೂ ಅಪಾರವಾಗಿದೆ ಎನ್ನುವ ರೀತಿಯಲ್ಲಿ ಎಲ್ಲ ಶಾಸ್ತ್ರಗಳು ಬೆಳೆದು ನಿಂತಿರುವಾಗ, ಯಾವುದನ್ನೇ ಆದರೂ ಅದರ ಎಲ್ಲಾ ವಿಸ್ತಾರದಲ್ಲಿ ಇಂಥ ಕಡೆ ನೀಡಲಾಗುವುದಿಲ್ಲ. ಆದರೆ ತಿಳಿವಿನ ಕುತೂಹಲ ಮತ್ತು ಹಸಿವು ಇರುವ ಎಲ್ಲರೂ ತಿಳಿದುಕೊಳ್ಳಲೇ ಬೇಕಾಗಿರುವ ಹತ್ತು ಹಲವು ಬಹುಮುಖ್ಯ ಸಂಗತಿಗಳ ಪ್ರಸ್ತಾಪ ಇಲ್ಲಿ ಆಗಿದೆ. ಇಲ್ಲಿರುವ ವಿಚಾರಗಳನ್ನೆಲ್ಲಾ ಒಮ್ಮೆ ಬಿಡುವು ಮಾಡಿಕೊಂಡು ತಿರುವಿ ಹಾಕಬಹುದು. ಯಾವುದಾದರೂ ಮಾಹಿತಿ ಬೇಕೆನಿಸಿದಾಗಲಂತೂ, ಪರಾಮರ್ಶನ ಮಾಡಲು ಈ ಗ್ರಂಥದ ಅವಶ್ಯಕತೆ ಖಂಡಿತ ಉಂಟಾಗುತ್ತದೆ. ಶಾಸ್ತ್ರ, ವಿಜ್ಞಾನಗಳನ್ನು ಭಾರವೆನಿಸದ ಹಾಗೆ ಹಗುರವಾಗಿ, ಆಕರ್ಷಕವಾಗಿ

ಜನಸಾಮಾನ್ಯರಿಗೆ ತಿಳಿಸುವ ಅಗತ್ಯವಂತೂ ಎಲ್ಲ ಕಾಲದಲ್ಲಿ ಇದ್ದೇ ಇರುತ್ತದೆ. ಡಾ. ಕೆ. ಶಿವರಾಮ ಕಾರಂತರು ತಮ್ಮ ವಿಜ್ಞಾನ ಪ್ರಪಂಚ, ಕಲಾ ಪ್ರಪಂಚಗಳ ಮೂಲಕ, ಮೈಸೂರು ವಿಶ್ವ ವಿದ್ಯಾನಿಲಯ ತನ್ನ ಕನ್ನಡ ವಿಶ್ವಕೋಶ ಸಂಪುಟಗಳ ಮೂಲಕ, ನವಕರ್ನಾಟಕ ಸಂಸ್ಥೆ ಶ್ರೀ ನಿರಂಜನರ ಸಂಪಾದಕತ್ವ ದಲ್ಲಿ ಹೊರತಂದ ಜ್ಞಾನ ಗಂಗೋತ್ರಿಯ ಸಂಪುಟಗಳ ಮೂಲಕ ಪೂರ್ಣಚಂದ್ರ ತೇಜಸ್ವಿಯವರು ಮಿಲೇನಿಯಂ ಸರಣಿ ಮಾಲಿಕೆಯ ಮೂಲಕ ಜನಸಾಮಾನ್ಯರಿಗೆ ಆಕರ್ಷಕವೆನಿಸುವ ರೀತಿಯಲ್ಲಿ ಲೇಖನ, ಬರಹಗಳ ಮೂಲಕ ಈಗಾಗಲೇ ಮಾಡಿರುವ ಮಹತ್ವದ ಕೆಲಸ ನಮ್ಮ ಕಣ್ಣ ಮುಂದಿದೆ. ಆದರೆ ಇಲ್ಲಿನದು ಆ ರೀತಿಯ ವಿಸ್ತಾರ ವಿವರಗಳಿಗೆ ಹೋಗದೆ ಬಹುಮುಖ್ಯ ಸಂಗತಿಗಳನ್ನು ಸಂಕ್ಷಿಪ್ತವಾಗಿ ಜನತೆಗೆ ಮುಟ್ಟಿಸುವ ಕೆಲಸವನ್ನು ಸಾರ್ಥಕವಾಗಿ ಮಾಡುವುದಾಗಿದೆ. ಆ ದೃಷ್ಟಿಯಿಂದ ಈ ಗ್ರಂಥ ಬಹಳಷ್ಟು ಯಶಸ್ಸನ್ನು ಸಾಧಿಸಿದೆ. ಒಂದು ರೀತಿಯಲ್ಲಿ ಇದು ಕರಿಯನ್ನು ಕನ್ನಡಿಯಲ್ಲಿ ಕಾಣಿಸುವ ಸಾಹಸ.

ನಾಗರಿಕತೆಗಳ ಉದಯ, ಭೂಮಿಯ ಹುಟ್ಟು , ಜೀವಿಗಳ ಹುಟ್ಟು ಇತ್ಯಾದಿಯನ್ನು ಕುರಿತ ಈ ಕೆಲವು ಶೀರ್ಷಿಕೆಗಳೇ ಫಕ್ಕನೆ ನಮ್ಮ ಗಮನ ಸೆಳೆದು ಬಿಡುವಷ್ಟು ಆಕರ್ಷಕವಾಗಿವೆ. ಉದಾಹರಣೆಗೆ "ಬ್ರಹ್ಮಾಂಡದ ಬಯೋಡೇಟಾ', 'ವ್ಹಾ – ಸುಂದರೆಯ ವಯಸ್ಸೆಷ್ಟು ?', 'ಜೀವಿ ಏಕೆ ಭೂಮಿ ಮೇಲಿದೆ?', 'ಜೀವಿಗಳ ಜನ್ಮ ದಿನಾಂಕ', 'ಬೆಳ್ಳಿ ರಥದ ಸೂರ್ಯ ತಂದ ನೀಲಾತೀತ ಕಿರಣ', 'ಲೈಂಗಿಕ ಸಮತಾವಾದ', 'ಗೋಡೆಗಳಿದ್ದುವು, ಉಡುಪು ಬಂದವು', 'ಎಲ್ಲಿದ್ದೆ ಅಲ್ಲೀತನಕ, ಹ್ಯಾಂಗ್ ಬಂದೆ ಇಲ್ಲೀತನಕಾ', 'ದುಂಡು ಮಲ್ಲಿಗೆ ಮಾತಾಡೆಯಾ', 'ಅಪರಾಧ ಲೋಕದಲ್ಲಿ ಮಾನವ', 'ಇಂಥವರು ಕಾಳಿಟ್ಟರೆ ಆಕಾರವೇ ಬೇರೆ?', 'ಉಸಿರೇ ನೀ ನಿಂತದ್ದೇಗೆ?' ಇತ್ಯಾದಿ.

ಲಾಲ್‌ಬಾಗ್‌ನ ಕೆಂಪೇಗೌಡ ಗೋಪುರವಿರುವ ಬಂಡೆಗೆ 2,950000000 ವರ್ಷ.

ಚಾಮುಂಡಿ ಬೆಟ್ಟಕ್ಕೆ 7,90000000 ವರ್ಷಗಳು ಇಂಥ ನೂರಾರು ಮಾಹಿತಿಗಳು ಇಲ್ಲಿವೆ.

ಹೀಗೆ ಮಾಹಿತಿಗಳ ಮಹಾಪೂರವನ್ನೇ ಹರಿಸುವ ಈ ಗ್ರಂಥದ ಭಾಷೆ ಕೆಲವು ಕಡೆ ಇನ್ನಷ್ಟು ಸುಧಾರಿಸಬೇಕಿತ್ತೆನಿಸುತ್ತದೆ. ಉದಾಹರಣೆಗೆ ಈ ಕೆಲವು ವಾಕ್ಯಗಳು :

1. "ಮಹಾ ಹಿಮ ಹರವು ಸೇರಿದಂತೆ, ಹಿಮ ಪ್ರವಾಹಗಳು ವಿಸ್ತೃತವಾದ್ದರಿಂದ, ಪ್ಲೆಸ್ಟಸಿನ್ ಯುಗದಲ್ಲಿ ವಾತಾವರಣ ಏರಿಳಿತವಾಯಿತು. ಇದರಿಂದಾಗಿ ಕಲ್ಲು ಬಂಡೆಗಳ ಸವೆತ ಮತ್ತು ಹಿಮ ನದಿಗಳು ಹರಿದು ಬರುವಾಗ ಸಂಗ್ರಹಿತವಾಗಿದ್ದವುಗಳು ಅನೇಕಾನೇಕ ರೀತಿಯಲ್ಲಿ ಮಾರ್ಪಾಟು ಹೊಂದಿದವು' (ಪುಟ 24)

2. ಭೂಮಿ ಯೊಳಗಿನ ಉಷ್ಣತೆಗೆ ಸಂಬಂಧಿಸಿದ (ಜಿಯೋಥರ್ಮಲ್) ಶಕ್ತಿ , ಭೂಮಿಯೊಳಗಿನ ಬಿಸಿ, ಭೂಮಿಯೊಳಗಿನ ಜಾರುಗಳ ನಡುವೆ ತಿಕ್ಕಾಟವಾಗುವುದರ ಪರಿಣಾಮವಾಗಿ ನೈಸರ್ಗಿಕ ಬಿಸಿ ಬರುತ್ತದೆ. (ಪುಟ 26)

3. 'ಜ್ವಾಲಾಮುಖಿ ಜತೆಗೂ ಸಂಬಂಧಿಸಿದ ಭೂಮಿಯೊಳಗಿನ ಉಷ್ಣತೆ ಅಂತರ್ಜಲವನ್ನು ಬಿಸಿಯಾಗಿಸುತ್ತದೆ' ಎಂದರೇನು? (ಪುಟ 26)

4. ಇಂಥದ್ದೇ ದುಷ್ಪರಿಣಾಮುಗಳನ್ನು ಜಲಮಾಲಿನ್ಯವೂ ನೀಡುತ್ತದೆ, ವಾಯುಮಾಲಿನ್ಯವೂ ನೀಡುತ್ತದೆ. ಭೂ ಮಾಲಿನ್ಯವೂ ನೀಡುತ್ತದೆ. (ಪುಟ 28)

ಇಂಥ ವಾಕ್ಯಗಳು ಹಲವಾರಿವೆ. ಇವು ಉದ್ದಿಷ್ಟ ಅರ್ಥವನ್ನು ಓದುಗನಿಗೆ ತಲುಪಿಸುವಲ್ಲಿ ಸೋಲುತ್ತವೆ. ಇನ್ನು 'ಹ'ಕಾರ ಸಂಯುಕ್ತವಾಗಿ ಬಂದಾಗ, ಅದರ ಉಚ್ಚಾರಣೆಯನ್ನು ಉದ್ದೇಶಪೂರ್ವಕವಾಗಿಯೇ ನಿವಾರಿಸಲಾಗಿದೆಯೆನಿಸುತ್ತದೆ.

ಉದಾಹರಣೆಗೆ

1. ಪೃಥ್ವಿ ಹುಟ್ಟಿದ್ದೇಗೆ, ಬೆಳೆದಿದ್ದೇಗೆ
2. ನೀರನ್ನು ಸಾರ್ವತ್ರಿಕವಾಗಿ ಕರಗಿಸುವುದು ಎಂದೇಳಲಾಗುತ್ತದೆ
3. ಸಮುದ್ರ ಮಟ್ಟವನ್ನೆಚ್ಚಿಸುತ್ತದೆ
4. ಪ್ರೊಪ್ಲಿಯೋಪಿತಿಸಿಟ್ಸ್ ಎಂದೆಸರಿಡಲಾಗಿದೆ
5. ಅವನಿಗೆ.... ಎಂದೆಸರು
6. ಕ್ರೋಮೋಸೋಮುಗಳನ್ನೊಂದಿರುತ್ತದೆ. ಇಂಥವು ಬೇಕಾದಷ್ಟಿವೆ.

ಅಲ್ಲದೆ ಸೃಷ್ಠಿ , ವಯಸ್ಕತೆ, ವ್ಯವಸ್ಥಿತತೆ, ಚಟುವಟಿಕಾತ್ಮಕ ಎಂಬಂಥ ಪದ ರೂಪಗಳು ಸರಿಯಾದವಲ್ಲ. ಇಂಥ ಗ್ರಂಥದಲ್ಲಿ ಈ ರೀತಿಯ ಭಾಷೆಯ ದೋಷಗಳು ಎದುರಾದರೆ ಅನ್ನದಲ್ಲಿ ಕಲ್ಲು ಸಿಕ್ಕಿದಂತಾಗುತ್ತದೆ. ಇವನ್ನು ಲೇಖಕರು ನಿವಾರಿಸಬಹುದಿತ್ತು. ಒಟ್ಟಾರೆ ಇದೊಂದು ಅತ್ಯಂತ ಉಪಯುಕ್ತ ಮಾಹಿತಿ ಕೋಶವೆಂದು ಧಾರಾಳವಾಗಿ ಹೇಳಬಹುದು. ಲೇಖಕರ ಪರಿಶ್ರಮ ಎದ್ದು ಕಾಣುತ್ತದೆ.

❖

22

ಆನುಭಾವಿಕ ವಚನಗಳ ವ್ಯಾಖ್ಯಾನ

ವಚನ ಸಾಹಿತ್ಯ ಕನ್ನಡದ ಅಕ್ಷಯ ಭಂಡಾರ. ಈ ಮಾತು ಈಗಾಗಲೇ ಬಳಸಿ ಬಳಸಿ ಕ್ಲೀಷೆಯಾಗಿದೆಯೆನಿಸಿದರೂ ಅರಿವು, ವಿವೇಕ ಮತ್ತು ಸೌಂದರ್ಯಗಳ ಮುಪ್ಪುರಿಯದ ಈ ಅಮೂಲ್ಯ ಸಾರಸ್ವತ ನಿಧಿಯನ್ನು ವರ್ಣಿಸಲು ಇದಕ್ಕಿಂತ ಸರಿಯಾದ ಮಾತುಗಳಿಲ್ಲ. ಬಸವಣ್ಣನವರ ನೇತೃತ್ವದಲ್ಲಿ ಶರಣರು ನಡೆಸಿದ ಸಮಾಜೋಧಾರ್ಮಿಕ ಆಂದೋಲನದ ಪ್ರಭಾವ ಪರಿಣಾಮಗಳನ್ನು ಕುರಿತಂತೆ ಕನ್ನಡದಲ್ಲಿ ಬೇಕಾದ ಹಾಗೆ ವಿಚಾರ ಮಂಥನ ನಡೆದಿದೆ. ಇನ್ನು ಶರಣರ ಜೀವನ ಯಾತ್ರೆಯ ಸಾಧನಾ ಪಥದಲ್ಲಿ ಹೊಮ್ಮಿದ ಸೂಳ್ನುಡಿಗಳಾದ ವಚನಗಳು ಎಲ್ಲ ಕಾಲದ

ಬಯಲ ಬೀಜಗಳು- ಬಸವರಾಜ ಸ್ವಾಮಿ
ಪು.214, ಮೊ.ಮು. 2012, ಬೆಲೆ ರೂ. 200/-
ಶ್ರೀ ಬಸವ ಸೇವಾ ಪ್ರತಿಷ್ಠಾನ, ಸುದ್ದಿಮೂಲ ಕಾರ್ಯಾಲಯ, ಸಿಯಾತಲಾಬ್,
ರಾಯಚೂರು - 584102

ಮಾನವರಿಗೂ ದಾರಿ ತೋರುವ ಜ್ಞಾನದ ಕೈಗಂಬಗಳಾಗಿರುವುದನ್ನು ಕೂಡ ಈಗಾಗಲೇ ಜನತೆ ಕಂಡುಕೊಂಡಿದೆ.

ವಚನ ಸಾಹಿತ್ಯ ಹುಟ್ಟಿದಾಗಿನಿಂದ ಇಂದಿನವರೆಗೆ ಅದನ್ನು ಅರ್ಥೈಸುವ ನಿಟ್ಟಿನಲ್ಲಿ ಹಲವು ಬಗೆಯ ಟೀಕೆ, ವ್ಯಾಖ್ಯಾನ, ಟಿಪ್ಪಣಿ, ವಿವರಣೆಗಳು ಬೇಕಾದ ಹಾಗೆ ಬಂದಿವೆ. ಬಹುಪಾಲು ವಚನಗಳು ಜನರಿಗೆ ಅರ್ಥವಾಗುವ ಸರಳ ನುಡಿಯಲ್ಲಿದ್ದು ವ್ಯಾಖ್ಯಾನ ನಿರಪೇಕ್ಷಕವಾಗಿದೆ. ಶರಣರು ತಮ್ಮ ಅಂತರಂಗದ ಭಕ್ತಿ ನಿವೇದಿಸಲು ಬದುಕಿನ ತಮ್ಮ ಅಮೂಲ್ಯ ಅನುಭವಗಳಿಗೆ ಅಭಿವ್ಯಕ್ತಿ ನೀಡಲು ಹಾಗೂ ಸಮಾಜದಲ್ಲಿ ನೀತಿಯ ನೆಲೆಗಟ್ಟನ್ನು ಸದೃಢವಾಗಿ ನಿರ್ಮಿಸಲು ತಮ್ಮ ಆಧ್ಯಾತ್ಮಿಕ ಅನುಭವ ಅರ್ಥಾತ್ ಅನುಭಾವಕ್ಕೆ ಮಾತಿನ ರೂಪುಕೊಡಲು ವಚನಗಳನ್ನು ರಚಿಸಿದ್ದಾರೆನ್ನುವುದು ತಿಳಿದೇ ಇದೆ. ಇದರ ಜೊತೆಗೆ ವೀರಶೈವ ಧರ್ಮದ ಅಂಗವಾಗಿ ವಚನ ಸಾಹಿತ್ಯ ಹುಟ್ಟಿದ್ದರಿಂದ ಸಹಜವಾಗಿಯೇ ಅದಕ್ಕೆ ಸಂಬಂಧಿಸಿದ ಆಚರಣೆ ಶಾಸ್ತ್ರಗಳನ್ನು ಹೇಳುವ ವಚನಗಳು ಇವೆ. ಶರಣರ ಲೋಕದೃಷ್ಟಿಯನ್ನು ಬಿಂಬಿಸುವ ವಚನಗಳು ಸಾಹಿತ್ಯ ಸೌಂದರ್ಯ ಸಮನ್ವಿತವಾಗಿಯೇ ಒಡಮೂಡಿದ್ದು ಕನ್ನಡದ ಅದೃಷ್ಟ. ಇಂಥ ವಚನಗಳ ಜೊತೆ ಜೊತೆಯಲ್ಲೇ ಶರಣರ ಗಾಢ ಚಿಂತನ ಮಂಥನಗಳಿಂದ ಹೊರಹೊಮ್ಮಿದ, ಬೆಡಗಿನ ವಚನಗಳೆಂಬ, ಒಗಟಿನಂಥ ಜಟಿಲ ರಚನೆಗಳೂ ಇವೆ. ಪ್ರಭುದೇವರ ಬೆಡಗಿನ ವಚನಗಳಂತೂ ತಮ್ಮ ಅನುಭಾವದ ಶ್ರೀಮಂತಿಕೆಯಿಂದ, ಅರ್ಥ ಸಂಪತ್ತಿನಿಂದ ನಮ್ಮನ್ನು ಬೆರಗುಗೊಳಿಸುತ್ತವೆ. ಶಿವಯೋಗಿ ಸಿದ್ಧರಾಮ, ಚನ್ನಬಸವಣ್ಣ, ಮುಂತಾದವರದೇ ಅಲ್ಲದೆ ಅನೇಕ ಕೆಳವರ್ಗದ ವಚನಕಾರರು ಬರೆದಿರುವ ಬಹಳಷ್ಟು ವಚನಗಳು ಈ ಬೆಡಗಿನ ವಚನಗಳೆಂಬಂಥವು. ಬಹಳಷ್ಟು ಇಂಥ ಜಟಿಲ ವಚನಗಳು ಬಹು ಪಾಲು ಜನಕ್ಕೆ ಅಷ್ಟು ಸುಲಭವಾಗಿ ತಮ್ಮ ಅರ್ಥಬಿಟ್ಟು ಕೊಡುವಂಥವಲ್ಲ. ಇಂಥ ಅನೇಕ ವಚನಗಳಿಗೆ ಟೀಕೆ, ಟಿಪ್ಪಣಿ ವ್ಯಾಖ್ಯಾನಗಳು ಬೇಕಾಗುತ್ತವೆ. ಅನೇಕ ಅನುಭಾವಿಗಳೆನಿಸಿಕೊಂಡವರು, ಶರಣರು, ಕಾಲಕಾಲಕ್ಕೆ ತಮಗೆ ದಕ್ಕಿದಷ್ಟು, ತಮಗೆ ತೋಚಿದಷ್ಟು ವ್ಯಾಖ್ಯಾನ ಮಾಡಿಕೊಂಡು ಬಂದಿದ್ದಾರೆ.

ಇಪ್ಪತ್ತನೆ ಶತಮಾನದಲ್ಲಿ ವಚನಗಳನ್ನು ಸಾಹಿತ್ಯಿಕ ದೃಷ್ಟಿಯಿಂದ ಸಾಂಸ್ಕೃತಿಕ ದೃಷ್ಟಿಯಿಂದ, ಜಾತ್ಯತೀತವಾಗಿ ಅಧ್ಯಯನ ಮಡುವುದು ಪ್ರಾರಂಭವಾದ ಮೇಲಂತೂ, ವಚನಗಳನ್ನು ಹೊಸ ರೀತಿಯಲ್ಲಿ ವಿಶ್ಲೇಷಿಸುವುದು, ವಿವರಿಸುವುದು, ವ್ಯಾಖ್ಯಾನಿಸುವುದು ಶುರುವಾಯಿತು. ಪ್ರಸ್ತುತ 'ಬಯಲ ಬೀಜಗಳು' ಈ ನಿಟ್ಟಿನಲ್ಲಿ ಒಂದು ಶ್ಲಾಘ್ಯ ಪ್ರಯತ್ನ.

ಇದರಲ್ಲಿ 75 ಶರಣರ 120 ವಚನಗಳನ್ನು ಆಯ್ದು ವ್ಯಾಖ್ಯಾನಿಸಲಾಗಿದೆ. ಬಸವರಾಜಸ್ವಾಮಿಯವರು ವಚನಗಳನ್ನು ವ್ಯಾಖ್ಯಾನಿಸಿರುವ ಕ್ರಮದಲ್ಲಿ ವಚನಗಳ ಅಂತರಂಗವನ್ನು ತೆರೆದುತೋರುವ ಕಳಕಳಿ ಇದೆ. ಆದರೆ ಆವ್ಯತಿಕರದಲ್ಲಿ ಶಬ್ದಾಡಂಬರ ಮೆರೆಸಲಾಗಲಿ, ಪಾಂಡಿತ್ಯ ಮೆರೆಸಲಾಗಲಿ ಯತ್ನಿಸದೆ, ಸರಳವಾದ ಮಾತುಗಳಲ್ಲಿ ವಚನಗಳ ಹೂರಣವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಪ್ರಭುದೇವ, ಚೆನ್ನಬಸವಣ್ಣ, ಸಿದ್ಧರಾಮ ಶಿವಯೋಗಿಗಳಂಥ ಪ್ರಸಿದ್ಧ ಹಾಗೂ ಪ್ರಮುಖ ವಚನಕಾರರಿಂದ ಹಿಡಿದು ಅಷ್ಟೇನು ಪ್ರಸಿದ್ಧರಲ್ಲದ ತುರುಗಾಹಿ ರಾಮಣ್ಣ, ಬಿಬ್ಬಿ ಬಾಚಯ್ಯ, ಮೇದರಕೇತಯ್ಯ, ಡೋಹರ ಕಕ್ಕಯ್ಯ, ಡಕ್ಕೆಯ ಬೊಮ್ಮಣ್ಣ ಮುಂತಾದ ಕೆಳವರ್ಗದ ವಚನಕಾರರ ವಚನಗಳಿಗೆ ವ್ಯಾಖ್ಯಾನ ಮಾಡಲಾಗಿದೆ. ಆ ದೃಷ್ಟಿಯಿಂದ ಇಲ್ಲಿ ಸೇರಿರುವ ಅನೇಕ ವಚನಕಾರರು ಸಮಾಜದ ತೀರ ಅಪ್ರತಿಷ್ಠಿತ ವರ್ಗದಿಂದ ಬಂದವರಾಗಿದ್ದು, ವೀರಶೈವ ಧರ್ಮದ ಕ್ರಾಂತಿಯಿಂದಾಗಿ ಅಂಥವರ ಆಲೋಚನಾ ಕ್ರಮ, ವಿಚಾರಗಳು ಸಮಾಜದ ಪ್ರತಿಷ್ಠಿತ ಜನ ಸಮುದಾಯಕ್ಕೆ ಮೊದಲ ಬಾರಿಗೆ ಕೇಳಿಸುವಂತಾದದ್ದು, ಮಾನವ ಚರಿತ್ರೆಯಲ್ಲಿ ನಿಜಕ್ಕೂ ಒಂದು ಮೈಲಿಗಲ್ಲು. ಇಲ್ಲಿ ವ್ಯಾಖ್ಯಾನಕ್ಕೆ ಆಯ್ದುಕೊಂಡಿರುವ ವಚನಗಳೆಲ್ಲವೂ ಅನುಭಾವಿಕ ವಚನಗಳೆಂಬುದನ್ನು ನೆನೆದಾಗ ಈ ಮಾತಿಗೆ ಹೆಚ್ಚಿನ ಮಹತ್ವ ಬರುತ್ತದೆ.

ಅನೇಕ ವಚನಗಳು ವ್ಯಾಖ್ಯಾನ ನಿರಪೇಕ್ಷಕ. ಆದರೆ ವ್ಯಾಖ್ಯಾನಕಾರರು ಎಷ್ಟೋ ಸಂದರ್ಭಗಳಲ್ಲಿ ವಚನದ ಬಂಧದಲ್ಲಿ ಇಲ್ಲದೆ ಇರುವುದನ್ನು, ಅಪ್ರಸ್ತುತವೆನ್ನಿಸುವಂಥದನ್ನು ಎಳೆದು ತಂದು ಅಗತ್ಯವಿಲ್ಲದಿದ್ದರೂ ಲಗತ್ತಿಸಿ ಬಿಡುವುದುಂಟು. ಪ್ರಸ್ತುತ 'ಬಯಲ ಬೀಜಗಳು' ಪುಸ್ತಕದಲ್ಲಿ ಹಲವು ಕಡೆಗಳಲ್ಲಿ ಇಂಥದು ನಡೆದಿದೆ. ಉದಾಹರಣೆಗೆ ಸಿದ್ಧರಾಮ ಶಿವಯೋಗಿಗಳ 'ವಸ್ತು ಒಂದರಲ್ಲಿ ಕಲ್ಪಿತ ದ್ವಯವಾದವು ನೋಡಾ' ಎಂದು ಪ್ರಾರಂಭವಾಗುವ ವಚನದಲ್ಲಿ ವಾಸ್ತವ ಮತ್ತು ಮಾಯೆ ಅಥವಾ ಸತ್ಯ ಮತ್ತು ಕಲ್ಪಿತಗಳ ಭೇದವನ್ನು 'ಸರ್ಪರಜ್ಜು' ನ್ಯಾಯದ ಉದಾಹರಣೆ ಮೂಲಕ ಶರಣರು ಸ್ಪಷ್ಟವಾಗಿ ನಿರೂಪಿಸುತ್ತಾರೆ. ಆದರೆ ಬಸವರಾಜ ಸ್ವಾಮಿಯವರಿಗೆ ಈ ವಚನದ ಅರ್ಥ ಸ್ಪಷ್ಟವಾಗಿ ಆಗಿದ್ದರೂ, ಅವರು ಲೋಹದ ಹಾಗೂ ಕಲ್ಲಿನ ಉದಾಹರಣೆ ನೀಡಿ, ಪ್ರಸ್ತುತ ವಚನವನ್ನು ಅರ್ಥೈಸಲು ಹೊರಟಿರುವುದು ಅಷ್ಟು ಸೂಕ್ತವೆನಿಸುವುದಿಲ್ಲ. ವಿದ್ಯೆ-ಅವಿದ್ಯೆ, ವಾಸ್ತವ-ಮಾಯೆ, ಸತ್ಯ-ಮಿಥ್ಯೆಗಳ ದ್ವಂದ್ವವನ್ನು ವಚನದಲ್ಲಿ ಪ್ರಸ್ತಾಪಿಸಿದ್ದಾರೆ ವ್ಯಾಖ್ಯಾನದ ಹಂಗೇ ಇಲ್ಲದೆ ಈ ಅರ್ಥ ಸ್ಫುರಿಸುತ್ತದೆ.

ಅದೇ ರೀತಿ 'ಕಂಡುದ ಹಿಡಿಯಲೊಲ್ಲದೆ' ಎಂದು ಪ್ರಾರಂಭವಾಗುವ ವಚನದಲ್ಲಿ 'ಕಂಡುದನೆ ಕಂಡು ಗುರುಪಾದ ಹಿಡಿದಲ್ಲಿ' ಎಂಬ ಸಾಲನ್ನು ವ್ಯಾಖ್ಯಾನಿಸುವಾಗ ವೇಷದ ಗುರುವಿನ ಉದಾಹರಣೆ ನೀಡಿರುವುದು ಅನಗತ್ಯವೆಂದೇ ತೋರುತ್ತದೆ. ಇಂಥ ಕೆಲವೊಂದು ಸಂದರ್ಭಗಳನ್ನು ಹೊರತುಪಡಿಸಿದರೆ, ಒಟ್ಟಾರೆ ಇಲ್ಲಿಯ ವಚನ ವ್ಯಾಖ್ಯಾನಗಳು ಒಳ್ಳೆಯ ಪ್ರಯತ್ನವೆಂದು ಹೇಳಬಹುದು. ನಾನಾ ಬಗೆಯ ದೃಷ್ಟಾಂತಗಳು, ಸಾಮತಿಗಳು, ಇವುಗಳ ಮೂಲಕ ವಚನಗಳನ್ನು ಅರ್ಥಪೂರ್ಣವಾಗಿ ವ್ಯಾಖ್ಯಾನಿಸಬೇಕೆಂಬ ತುಡಿತವಿರುವುದು ಕಂಡು ಬರುತ್ತದೆ. ಆದರೆ ಆ ಪ್ರಯತ್ನದಲ್ಲೇ ಅಪ್ರಸ್ತುತವೆನಿಸುವಂಥ ಸಂಗತಿಗಳನ್ನು, ಅನಗತ್ಯವಾಗಿ ಸೇರಿಸುವುದನ್ನು ಕೈಬಿಟ್ಟು ವಚನದ ಬಂಧದಲ್ಲಿ ಇರುವ ವಿಚಾರಗಳಿಗೆ ತಮ್ಮನ್ನು ಮಿತಿಗೊಳಿಸಿಕೊಂಡರೆ, ಆಗ ಅವುಗಳ ವ್ಯಾಖ್ಯಾನ ಇನ್ನಷ್ಟು ಅರ್ಥಪೂರ್ಣವೆನಿಸುತ್ತದೆ.

❖

23

ವೇದಾಂತವನ್ನು ಪ್ರಸ್ತುತಕ್ಕೆ ಅನ್ವಯಿಸುವ ಪ್ರಯತ್ನ

ಭಾರತೀಯ ತತ್ವ ಶಾಸ್ತ್ರದ ಪರಂಪರೆಯಲ್ಲಿ ಉಪನಿಷತ್ತುಗಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಮತ್ತು ಭಗವದ್ಗೀತೆ ಇವು ಮೂರೂ ಪ್ರಸ್ಥಾನ ತ್ರಯಿಯೆಂದೇ ಖ್ಯಾತವಾಗಿವೆ. ಇವುಗಳಲ್ಲಿ ಅತ್ಯಂತ ಪ್ರಮಾಣಬದ್ಧವಾದವು ಎಂದರೆ ಉಪನಿಷತ್ತುಗಳೇ. ಕಾರಣ, ಬ್ರಹ್ಮಸೂತ್ರ ಉಪನಿಷದ್ ವಾಕ್ಯಗಳನ್ನು ವಿಚಾರ ಶಾಸ್ತ್ರದಿಂದ ಪೋಣಿಸಿರುವ ಶಾಸ್ತ್ರ' ಭಗವದ್ಗೀತೆಯಂತೂ ಉಪನಿಷತ್ತುಗಳ ಸಾರವೆಂದೇ ಹೆಸರಾಗಿದೆ. 'ಉಪನಿಷತ್' ಎಂಬ ಪದದ ಮೂಲಾರ್ಥ : ಉಪ ಎಂದರೆ ಹತ್ತಿರ, ನಿ(ಶ್ರದ್ಧೆಯಿಂದ) 'ಸತ್' ಎಂದರೆ ಕುಳಿತು ಎಂದು. ಏಕಾಂತದಲ್ಲಿ ನೀಡಿದ ರಹಸ್ಯವಾದ ಉಪದೇಶ ಎಂಬ ಅರ್ಥವನ್ನು

ಮುಂಡಕೋಪನಿಷದ್ವಿಜ್ಞಾನ, ಪದ್ಮನಾಭ ಭಟ್,
ಪು.160, ಮೊ.ಮು. 2011, ಬೆಲೆ ರೂ. 105/-,
ಐಬಿಎಚ್ ಪ್ರಕಾಶನ
ನಂ. 97, ಪ್ರಧಾನ್ ರೆಸಿಡೆನ್ಸಿ, 24ನೇ ಕ್ರಾಸ್, ಜಯನಗರ 3ನೇ ಬ್ಲಾಕ್ ಪೂರ್ವ, ಬೆಂಗಳೂರು-560 011

ಕಾಲಾಂತರದಲ್ಲಿ ಅದು ಪಡೆದುಕೊಂಡಿತು. ಉಪನಿಷತ್ತು ಗಳನ್ನು 'ವೇದಾಂತ' ವೆಂದು ಕರೆಯುವುದು ರೂಢಿ. ಉಪನಿಷತ್ತುಗಳು ವೇದದ ಕೊನೆಯ ಭಾಗವಾದ್ದರಿಂದ, 'ವೇದಾಂತ ಎಂದು ಅದಕ್ಕೆ ಹೆಸರಾಯಿತು. ಉಪನಿಷತ್ತುಗಳ ಬೋಧನೆಯ ಉದ್ದೇಶವೇನಿದ್ದರೂ ಬ್ರಹ್ಮ ಸಾಕ್ಷಾತ್ಕಾರವನ್ನು ದೊರಕಿಸುವುದು. ಜೀವ – ಬ್ರಹ್ಮ – ಆತ್ಮ – ಪರಮಾತ್ಮ ಇವುಗಳ ಸ್ವರೂಪ ಮತ್ತು ಪರಸ್ಪರ ಸಂಬಂಧಗಳ ಜಿಜ್ಞಾಸೆ ಉಪನಿಷತ್ತುಗಳ ಚರ್ಚೆಯ ವಿಷಯ. ನೂರಾರು ಉಪನಿಷತ್ತುಗಳಿದ್ದರೂ, ಪ್ರಖ್ಯಾತವಾದವು ದಶೋಪನಿಷತ್ತುಗಳೆನಿಸಿದ, ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ಛಾಂದೋಗ್ಯ, ಐತರೇಯ, ತೈತ್ತರೀಯ ಮತ್ತು ಬೃಹದಾರಣ್ಯಕ ಇವುಗಳು. ಆಚಾರ್ಯತ್ರಯರೆಂದೇ ಖ್ಯಾತರಾದ ಶಂಕರ, ರಾಮಾನುಜ ಮತ್ತು ಮಧ್ವರು ತಮ್ಮ ತಮ್ಮ ಸಿದ್ಧಾಂತಕ್ಕನುಗುಣವಾಗಿ ಪ್ರಮುಖ ಉಪನಿಷತ್ತುಗಳಿಗೆ ಭಾಷ್ಯಗಳನ್ನು ರಚಿಸಿದ್ದಾರೆ. ಹಾಗೆ ಉಪನಿಷತ್ತುಗಳಿಗೆ ಭಾಷ್ಯ ರಚಿಸುವುದು ಪ್ರತಿಷ್ಠೆಯ ವಿಷಯವೂ ಆಗಿತ್ತು. ಅಲ್ಲಿಂದ ಇಲ್ಲಿಯವರೆಗೆ, ಅನೇಕ ವಿದ್ವಾಂಸರು, ಆಚಾರ್ಯರು, ಸ್ವಾಮಿಗಳು, ಕನ್ನಡವನ್ನೂ ಒಳಗೊಂಡಂತೆ ವಿವಿಧ ಭಾಷೆಗಳಲ್ಲಿ ಕಾಲಕಾಲಕ್ಕೆ ತಮ್ಮ ತಮ್ಮ ಅನುಭವ ಮತ್ತು ಪಾಂಡಿತ್ಯಗಳ ಹಿನ್ನೆಲೆಯಲ್ಲಿ ಉಪನಿಷತ್ತುಗಳಿಗೆ ವ್ಯಾಖ್ಯಾನ ಮಾಡಿಕೊಂಡು ಬರುತ್ತಲೇ ಇದ್ದಾರೆ. ಪ್ರಸ್ತುತ 'ಮುಂಡಕೊಪನಿಷದ್ವಿಜ್ಞಾನ' ಖ್ಯಾತ ವಿದ್ವಾಂಸರಾದ ಯು. ಪದ್ಮನಾಭ ಭಟ್ಟರು ಮುಂಡಕೋಪನಿಷತ್ತನ್ನು ಕುರಿತಂತೆ ಕನ್ನಡದಲ್ಲಿ ಮಾಡಿದ ತಿಳಿಯಾದ ವ್ಯಾಖ್ಯಾನವಾಗಿದೆ.

'ಮುಂಡಕೋಪನಿಷತ್' ಅಥರ್ವಣ ವೇದಕ್ಕೆ ಸಂಬಂಧಿಸಿದ ಉಪನಿಷತ್ತು. ಯಾವ ಒಂದನ್ನು ತಿಳಿದರೆ, ಎಲ್ಲವನ್ನೂ ತಿಳಿದಂತೆ ಆಗುವುದು...? ಎಂಬ ಪ್ರಶ್ನೆಗೆ ಉತ್ತರ ರೂಪದಲ್ಲಿ ಹುಟ್ಟಿದ್ದೇ ಮುಂಡಕೋಪನಿಷತ್. 'ಮುಂಡಕ' ಎಂದರೆ ರೆಂಬೆ ಕೊಂಬೆಗಳನ್ನೆಲ್ಲ ಕತ್ತರಿಸಿ ಹಾಕಿದ ಬೋಳುಮರ. ಅದು ಚಿಗುರುವ, ಹೂ ಹಣ್ಣುಗಳನ್ನು ಬಿಡುವ ಕಾಲವೆಲ್ಲ ಕಳೆದು, ಇನ್ನೇನಿದ್ದರೂ ನಿಸರ್ಗದಲ್ಲಿ ಲಯವಾಗುವ ಕಾಲದ ನಿರೀಕ್ಷೆಯಲ್ಲಿರುವ ಮರ. ಈ ಸ್ಥಿತಿಯನ್ನು ತಲುಪಿರುವ, ಅಂದರೆ ಬೋಳುಮರದಂತಿರುವ ಸಾಧಕನಿಗೆ ಮುಂದಿನ ಸಾಧನಾ ಮಾರ್ಗವನ್ನು ತೋರಿಸಿಕೊಡುವುದೇ ಮುಂಡಕೋಪನಿಷತ್ತಿನ ಗುರಿ. ಇದನ್ನು ಇಲ್ಲಿ 'ಶಿರೋವ್ರತ' ಎಂದು ಕರೆಯಲಾಗಿದೆ. ಅಂಥ ಶಿರೋವ್ರತವನ್ನು ಆಚರಿಸುವವನು 'ಮುಂಡಕ' ಯತಿ.

ಮುಂಡಕೋಪನಿಷತ್ತು ಎಲ್ಲ ರೀತಿಯ ಜ್ಞಾನವನ್ನು, ಉನ್ನತ ಜ್ಞಾನ (ಪರಾ ವಿದ್ಯಾ) ಮತ್ತು ಅನುನ್ನತ ಜ್ಞಾನ (ಅಪರಾವಿದ್ಯಾ) ಎಂದು ಎರಡು ಬಗೆಯಾಗಿ ವಿಂಗಡಿಸುತ್ತದೆ. 'ಪರಾವಿದ್ಯೆಯೇ 'ಬ್ರಹ್ಮಜ್ಞಾನ', 'ಅಪರಾವಿದ್ಯೆ' ಎಂಬುದು ಲೌಕಿಕ ವಸ್ತುಗಳ ಜ್ಞಾನ. 'ಪರಾವಿದ್ಯೆ' ಯಾವುದೇ ನಿರ್ದಿಷ್ಟ ವಸ್ತುಗಳ ಬಗ್ಗೆ ವಿವರಗಳನ್ನು ನೀಡದಿದ್ದರೂ ಅವುಗಳ ಇರವಿನ ತತ್ವದ ಬಗ್ಗೆ ಒಳ ಅರಿವನ್ನು ನೀಡುತ್ತದೆ. ಈ ಅರ್ಥದಲ್ಲಿ ಅದನ್ನು ಪೂರ್ಣಜ್ಞಾನ ಎನ್ನಬಹುದು. ಹಾಗಾಗಿ ಅದು ಅಪರಾ ವಿದ್ಯೆಗಿಂತ ಬೇರೆಯಾದದ್ದು. ಅಪರಾ ವಿದ್ಯೆಯೆಂಬುದು ಅದರ ಅತ್ಯುತ್ತಮ ಸ್ಥಿತಿಯಲ್ಲೂ ಖಂಡ ಸ್ವರೂಪದ್ದು. ಆದರೂ ಅವರೆಡರ ನಡುವೆ ವಿರೋಧವಿಲ್ಲ. ಆದರೆ ಇದು ಬ್ರಹ್ಮದ ವಿಶ್ವಾತ್ಮಕ ಪರಿಕಲ್ಪನೆಯ ದೃಷ್ಟಿಯಿಂದ. ಅದು ವಿಶ್ವಾತೀತ ಪರಿಕಲ್ಪನೆಯೊಂದಿಗೆ ಸಮನ್ವಯಗೊಳ್ಳುತ್ತದೆ. ಅವರ ಪ್ರಕಾರ ಬ್ರಹ್ಮವು ಜ್ಞಾನಕ್ಕೆ ಸಾಧಕವಾದ ಸ್ಥಿತಿಗಳನ್ನೇ ಮುಂದಿಡುತ್ತದೆ.

ಮುಂಡಕೋಪನಿಷತ್ತಿನಲ್ಲಿ 'ಹೃದಯ ಗ್ರಂಥಿಗಳು', 'ಶಿರೋವ್ರತ' ಮತ್ತು 'ಏಕರ್ಷಿಹೋಮ' ಎಂಬ ಶೀರ್ಷಿಕೆಯ ಮೂರು ಅಧ್ಯಾಯಗಳಿವೆ. ಇವುಗಳನ್ನು ಒಂದನೇ ಮುಂಡಕ, ಎರಡನೇ ಮುಂಡಕ ಮತ್ತು ಮೂರನೇ ಮುಂಡಕ ಎಂದು ಹೆಸರಿಸಲಾಗಿದೆ. ಪ್ರತಿಯೊಂದು ಮುಂಡಕದಲ್ಲೂ ಎರಡೆರಡು ಖಂಡಗಳಿವೆ. ಮೊದಲನೇ ಮುಂಡಕದ ಮೊದಲನೇ ಖಂಡದಲ್ಲಿ ಒಂಬತ್ತು ಮಂತ್ರಗಳಲ್ಲಿ ಪರಾಮತ್ತು ಅಪರಾ ಎಂಬ ಎರಡು ವಿದ್ಯೆಗಳ ವಿಷಯವನ್ನು ಪ್ರಸ್ತಾಪಿಸಲಾಗಿದ್ದರೆ, ಎರಡನೇ ಖಂಡದಲ್ಲಿನ ಹದಿಮೂರು ಮಂತ್ರಗಳು ಯಜ್ಞಗಳ ಕರ್ಮಕಾಂಡವನ್ನು ಚರ್ಚಿಸುತ್ತವೆ. ಎರಡನೇ ಮುಂಡಕದ ಎರಡು ಖಂಡಗಳಲ್ಲಿನ ಇಪ್ಪತ್ತೆರಡು ಮಂತ್ರಗಳಲ್ಲಿ ಹೊಸ ಸೃಷ್ಟಿಯಾದ ಓಂಕಾರ, ಅದರ ಅರ್ಥ, ಓಂಕಾರೋಪಾಸನೆಯ ಸಾಧನೆ, ಸಾಧಕನ ಲಕ್ಷಣ ಇತ್ಯಾದಿಗಳನ್ನೆಲ್ಲ ವಿವರಿಸಲಾಗಿದೆ. ಕೊನೆಯ ಅಧ್ಯಾಯವಾದ ಮೂರನೇ ಮುಂಡಕದಲ್ಲಿ 22 ಮಂತ್ರಗಳಲ್ಲಿ ಬ್ರಹ್ಮ ಸಾಕ್ಷಾತ್ಕಾರ, ದ್ವಾಸುಪರ್ಣಾ ಕಥೆಯ ಸಾಮತಿಯ ಮೂಲಕ ಜೀವಾತ್ಮ ಅಂತರಾತ್ಮಗಳ ಪ್ರಸ್ತಾಪ, ಆತ್ಮಸಿದ್ಧಿ , ಜೀವನ್ಮುಕ್ತರ ಸ್ಥಿತಿ, ಏಕರ್ಷ ಹೋಮದ ಸಾಧನೆ ಪೂರ್ಣಾಹುತಿ, ಮುಕ್ತಿ ಮತ್ತು ಬ್ರಹ್ಮಾನಂದ ಇವೆಲ್ಲವುಗಳ ವಿಚಾರವನ್ನು ಚರ್ಚಿಸಲಾಗಿದೆ.

ವೇದಾಂತ ಸೂತ್ರಗಳು, ಕ್ಲಿಷ್ಟ ಮತ್ತು ಜಟಿಲ. ಅಷ್ಟು ಸುಲಭವಾಗಿ ಅರ್ಥಗ್ರಹಣೆಗೆ ನಿಲುಕದವು. ಅಲ್ಲದೆ ಅವುಗಳಲ್ಲಿ ಒಂದಕ್ಕೊಂದು ಗೊಂದಲವಾಗುವುದೇ ಹೆಚ್ಚು. ಅವುಗಳನ್ನು ಗೊಂದಲಕ್ಕೆಡೆಗೊಡದಂತೆ, ಅಕ್ಲಿಷ್ಟವಾಗಿ, ಸರಳವಾಗಿ ಸ್ಪಷ್ಟವಾಗಿ ನಿರೂಪಿಸುವುದು ಅತಿಮುಖ್ಯ. ಈ ವಿಷಯದಲ್ಲಿ ಪದ್ಮನಾಭಭಟ್ಟರು ಅಪೂರ್ವವಾದ ಯಶಸ್ಸನ್ನು ಸಾಧಿಸಿದ್ದಾರೆಂದು ಹೇಳಬಹುದು, ಪ್ರತಿಯೊಂದು ಮಂತ್ರದ ಅರ್ಥವನ್ನು 'ಸಾರಾಂಶ'ವೆಂಬ ಭಾಗದಲ್ಲಿ ನಿಷ್ಕೃಷ್ಟವಾಗಿ ನಿರೂಪಿಸಿ, 'ಮನನ'ವೆಂಬ ಭಾಗದಲ್ಲಿ ಅದನ್ನು ವಿಸ್ತಾರವಾದ ಚರ್ಚೆಗೆ ಒಳಪಡಿಸಿ ವ್ಯಾಖ್ಯಾನಿಸುತ್ತಾರೆ. 'ಅವತಾರಿಕೆ' ಎಂಬ ಭಾಗದಲ್ಲಿ ಕೂಡ ಮಂತ್ರದ ಅರ್ಥವನ್ನು ಇನ್ನಷ್ಟು ಮನದಟ್ಟು ಮಾಡಿಕೊಟ್ಟು ಮುಂದಿನ ಮಂತ್ರದೊಂದಿಗೆ ಅದರ ಸಂಬಂಧ ಸ್ಥಾಪಿಸುತ್ತಾರೆ. ಉದಾ: "ದ್ವಾಸುಪರ್ಣಾ ಸಯುಜಾಸುಖಾಯ। ಸಮಾನಂ ವೃಕ್ಷಂ. ಪರಿಷಸ್ವಜಾತೇ ಪಿ ಪ್ಪಲಂ ಸ್ವಾದ್ವತ್ತ್ಯ ನ್ನಶ್ನನ್ನನೋ ಅಭಿಜಾಕಶೀತೀ॥ ಎಂಬ ಮಂತ್ರದ ಸಾರಾಂಶ ಹೀಗಿದೆ– "ಅನ್ಯೋನ್ಯ ಸ್ನೇಹವುಳ್ಳ ಎರಡು ಹಕ್ಕಿಗಳು ಒಟ್ಟೊಟ್ಟಿಗೆ ಒಂದೇ ಮರವನ್ನು ಅದರಲ್ಲೇ ಬೆರೆತು ಆಲಂಗಿಸಿಕೊಂಡಿವೆ. ಅವುಗಳಲ್ಲಿ ಒಂದು ಹಕ್ಕಿ ಆ ಮರದ ಹಣ್ಣನ್ನು ಸೇವಿ ಸುತ್ತಲೇ ಇದೆ. ಇನ್ನೊಂದು ಏನನ್ನೂ ತಿನ್ನದೆ ಸಂತೃಪ್ತಿಯಿಂದಿದೆ" ಹೀಗೆ ಸರಳವಾದ ತಿಳಿಗನ್ನಡದಲ್ಲಿ ವಿವರಿಸುವ ಪ್ರಕ್ರಿಯೆ ಸಾಮಾನ್ಯವಾಗಿ ಗ್ರಂಥದುದ್ದಕ್ಕೂ ಇದೆ.

ಭಾರತದ ಸಂದರ್ಭದಲ್ಲಿ ಈ ಉಪನಿಷತ್ತುಗಳು ಸೃಷ್ಟಿಯಾದ ಕಾಲವನ್ನೂ ಒಳಗೊಂಡಂತೆ, ಇಂದಿನವರೆಗೂ ವೇದಗಳು ಮತ್ತು ವೇದಾಂತಗಳೆನಿಸಿದ ಉಪನಿಷತ್ತುಗಳ ಅಧ್ಯಯನದ ಅಧಿಕಾರವನ್ನು, ಅಲ್ಪಸಂಖ್ಯಾತರಾದ ಬ್ರಾಹ್ಮಣರನ್ನು ಹೊರತುಪಡಿಸಿ ಬಹುಸಂಖ್ಯಾತ ಜನಸಮುದಾಯಕ್ಕೆ ನಿರಾಕರಿಸಲಾಗಿತ್ತೆಂಬ ಹಿನ್ನೆಲೆಯಲ್ಲಿ ಇವುಗಳ ಅಧ್ಯಯನ ಎಷ್ಟು ಪ್ರಸ್ತುತ ಎಂಬ ಪ್ರಶ್ನೆಯನ್ನು ಮತ್ತು ಪ್ರಸ್ತುತ ಸಂದರ್ಭಕ್ಕೆ ತಕ್ಕಂತೆ ಇವುಗಳನ್ನು ವ್ಯಾಖ್ಯಾನಿಸಬೇಕಾದ ಅಗತ್ಯವನ್ನು ಕಡೆಗಣಿಸುವಂತೆಯೇ ಇಲ್ಲ. ಆ ದೃಷ್ಟಿಯಿಂದ ನೋಡಿದಾಗ, ಪದ್ಮನಾಭ ಭಟ್ಟರು ಅತ್ಯಂತ ಕುಶಲಪೂರ್ವಕವಾಗಿ ಈ ಮಂತ್ರಗಳನ್ನು ಪ್ರಸ್ತುತ ಸಂದರ್ಭಕ್ಕೆ ಅನ್ವಯಿಸಿ ವ್ಯಾಖ್ಯಾನಿಸಿರುವುದು ಕಂಡುಬರುತ್ತದೆ. ಉದಾ "ಯದಾ ಲೇಲಾಯತೇ ಹ್ಯರ್ಚಿ ಸಮಿದ್ಧೇ ಹವ್ಯವಾಹನೇ। ತದಾಜ್ಯ ಭಾಗಾವಂತರೇಣಾಹುತೀ: ಪ್ರತಿಪಾದಯೇತ್॥" ಎಂಬ ಮಂತ್ರವನ್ನು ಅವರು ವ್ಯಾಖ್ಯಾನಿಸಿರುವ ರೀತಿಯನ್ನು ನೋಡಬಹುದು.

"ಹವ್ಯವಾಹನನಾದ ಅಗ್ನಿಯು ಚೆನ್ನಾಗಿ ಉರಿಯುತ್ತಿರುವಾಗಲೇ ಅಲ್ಲಿಗೆ ಸಂಬಂಧಪಟ್ಟ ಆಜ್ಯ ಭಾಗದ ಆಹುತಿಗಳನ್ನು ನೀಡಿ ವ್ಯವಹರಿಸಬೇಕು" ಎಂದು ಸಾರಾಂಶದಲ್ಲಿ ಹೇಳಿ 'ಮನನ' ಭಾಗದಲ್ಲಿ "ಗಾರ್ಹಪತ್ಯಾಗ್ನಿಯನ್ನು ಇರಿಸಿಕೊಂಡು ಅದನ್ನು ನಂದಿ ಹೋಗದಂತೆ ಕಾಪಾಡಿಕೊಂಡು ಬರಬೇಕಾಗಿದ್ದ ಅನಿವಾರ್ಯತೆಯಿದ್ದ ಕಾಲದಲ್ಲಿ ಈ ಮಂತ್ರದ ವಾಚ್ಯಾರ್ಥವು ಸರಿ ಹೊಂದುತ್ತದೆ. ಆದರೆ ಅಂತಹ ಅಗ್ನಿಯ ಅಗತ್ಯವಿಲ್ಲದ ಇಂದಿನ ಸಮಾಜಕ್ಕೆ ಈ ಮಂತ್ರದ ವಾಚ್ಯಾರ್ಥವು

ಸರಿಹೊಂದುವುದಿಲ್ಲ. ಆಗ ಯಜ್ಞ, ಅಗ್ನಿ, ಆಹುತಿ ಎಂಬ ಪದಗಳ ವಿಶಾಲ ಅರ್ಥದ ಹಿನ್ನೆಲೆಯಲ್ಲಿ ಈ ಮಂತ್ರದ ಧ್ವನ್ಯಾರ್ಥವನ್ನು ಮಾತ್ರ ಸ್ವೀಕರಿಸಬೇಕು....

ಬಾಯಾರಿದವನಿಗೆ ಮಾತ್ರ ನೀರು ಕೊಡಬೇಕು, ಎಲ್ಲ ಮನುಷ್ಯರ ಶರೀರಗಳೂ ಅಗ್ನಿಯಷ್ಟೆ. ಅವರಿಗೆ ಅಗತ್ಯವಾದ ಅನ್ನ, ನೀರು, ವಸ್ತ್ರ, ವಸತಿ, ಸೇವೆಗಳೆಂಬ ಆಹುತಿಯನ್ನು ಸಲ್ಲಿಸಿದರೆ, ಅದು ಅಗ್ನಿಗೆ ಆಹುತಿ ನೀಡಿದಂತೆಯೇ ಆಗುತ್ತದೆಯಷ್ಟೆ, ಆದರೆ ಅವುಗಳ ಅಗತ್ಯವಿಲ್ಲದವರಿಗೆ ಅದನ್ನು ನೀಡಿದರೆ ವ್ಯರ್ಥ. ಅದರಿಂದ ಯಾವ ಪುಣ್ಯವೂ ಸಿಗುವುದಿಲ್ಲ ಎಂದು ಈ ಮಂತ್ರದ ಅಭಿಪ್ರಾಯ. ದವಸ ಧಾನ್ಯಗಳನ್ನು ಬೆಳೆಯಬೇಕಾದ ಸೂಕ್ತ ಕಾಲದಲ್ಲೇ ಭೂಮಿ ಎಂಬ ಅಗ್ನಿಯಲ್ಲಿ ನಮ್ಮ ಶಕ್ತಿ ಎಂಬ ಆಹುತಿ ಕೊಟ್ಟು ಬೆಳೆ ಬೆಳೆಯಬೇಕು. ಇದು ಕೃಷಿಯಜ್ಞ. ಅಗ್ನಿಯ ವಿವಿಧ ರೂಪಗಳಾದ ಘನ ವಸ್ತುಗಳು, ನಮ್ಮ ಶರೀರವೂ

ಇಂಧನವೇ. ಭೂಮಿಯ ಎಲ್ಲ ವಸ್ತುಗಳೂ ಇಂಧನ".

ಅದೇ ರೀತಿ "ಅಗ್ನಿಹೋತ್ರ" ಎಂಬ ಮಾತಿಗೆ ಆಹಾರ ಸೇವನೆಯೇ ಅಗ್ನಿಹೋತ್ರ ಎಂದು ಅರ್ಥೈಸುತ್ತಾರೆ. ದರ್ಶ, ಪೌರ್ಣಮಾಸ, ಚಾತುರ್ಮಾಸ, ಅಗ್ರಮಣ ಅತಿಥಿ ಸತ್ಕಾರ, ಹುತವಾಗುವ ಆಹುತಿ, ವೈಶ್ವದೇವವೇ ಮೊದಲಾದ ಏಳು ವಿಧಿಗಳನ್ನು ಆಚರಿಸದೆ, ಅಗ್ನಿಹೋತ್ರ ಮಾಡಬಾರದು ಎಂಬುದನ್ನು ಪ್ರಸ್ತುತ ಬದುಕಿನ ಸಂದರ್ಭಕ್ಕೆ ಅನ್ವಯಿಸಿ ವ್ಯಾಖ್ಯಾನಿಸಿರುವುದು ಅತ್ಯಂತ ಸಾರ್ಥಕವಾಗಿದೆ. (ಪುಟ : 26–29). ಹಾಗೆಯೇ 'ಲೌಕಿಕ ಸಮೃದ್ಧಿಯನ್ನೂ ಬಯಸದೆ, ತನ್ನ

ಶರೀರಕ್ಕಾಗುವ ಕಷ್ಟವನ್ನೂ ಲೆಕ್ಕಿಸದೆ ಉತ್ತಮ ಮೌಲ್ಯಗಳಿಗಾಗಿ ಬಾಳುವುದೇ ತಪಸ್ಸು" ಎಂಬ ತಪಸ್ಸನ್ನು ಕುರಿತ ವ್ಯಾಖ್ಯಾನ ಕೂಡ ಅರ್ಥಪೂರ್ಣವೂ ಅತ್ಯಂತ ಪ್ರಸ್ತುತವೂ

ಆಗಿದೆ.

ಭಾರತದ ಬಹುಸಂಖ್ಯಾತ ಜನ ಸಮುದಾಯಕ್ಕೆ

ಬಹುಕಾಲ ಮುಚ್ಚಿದ ಪುಟಗಳೇ ಆಗಿಹೋಗಿದ್ದ, ಭಾರತೀಯ ತತ್ವ ಚಿಂತನೆಯ ಗಾಢತೆ ಮತ್ತು ಮಂಥನದ ವೈಶಾಲ್ಯವನ್ನೊಳಗೊಂಡ ಇಂಥ ಗ್ರಂಥವೊಂದನ್ನು ಪ್ರಸ್ತುತಕ್ಕೆ

ಅನ್ವಯವಾಗುವಂತೆ ವ್ಯಾಖ್ಯಾನಕ್ಕೊಳಪಡಿಸುವ ಮೂಲಕ, ವಿದ್ವಾನ್ ಪದ್ಮನಾಭಭಟ್ಟರು, ಅದನ್ನು ತೆರೆದು ನೋಡಬೇಕೆಂಬ ಪ್ರೇರಣೆಯನ್ನೊದಗಿಸಿದ್ದಾರೆ. ಆ ಕಾರಣಕ್ಕಾಗಿ ಅವರು ಅಭಿನಂದನೀಯರು. ಒಂದೂ ಮುದ್ರಣದೋಷವಿಲ್ಲದೆ, ಹಾಲುಬಿಳುಪಿನ ಕಾಗದದಲ್ಲಿ ಸುಂದರವಾಗಿ ಅಚ್ಚಾಗಿರುವ ಈ ಪುಸ್ತಕದ ಬೆಲೆಯೂ ಓದುಗರ ಕೈಗೆಟುಕುವಂತಿದೆ.

❖

24

ಆರೋಗ್ಯಪೂರ್ಣ ಬದುಕಿಗೊಂದು ಕೈಪಿಡಿ

ಆರೋಗ್ಯಕೆಡಲು ಕಾರಣಗಳನ್ನು ಹುಡುಕಬೇಕೆ..? ನಮ್ಮ ಇಂದಿನ ವೇಗದ ಜೀವನ ಶೈಲಿಯ ಪರಿಣಾಮವಾಗಿ ನಾವು ರೂಢಿಸಿಕೊಂಡಿರುವ ಆಹಾರಾಭ್ಯಾಸಗಳು ಎಂಥ ಆರೋಗ್ಯವಂತ ಮನುಷ್ಯನನ್ನೂ ಬಹುಬೇಗ ನಾನಾ ತೆರನ ರೋಗಗಳಿಗೆ ಈಡು ಮಾಡುವಂಥವಾಗಿವೆ. ಅದರ ಜೊತೆ ನಮ್ಮ ದೇಶದಲ್ಲಿ, ಅದರಲ್ಲೂ ನಗರ ಪರಿಸರದಲ್ಲಿ ಬದುಕುತ್ತಿರುವವರಿಗಂತೂ ಕುಡಿಯಲು ಶುದ್ಧ ನೀರು, ಉಸಿರಾಡಲು ಶುದ್ಧವಾದ ಗಾಳಿಗೇ ತತ್ವಾರವಾಗಿದೆ. ನಗರದಲ್ಲಿರುವವರಿಗೆ ಎಂಥದೋ ಒಂದಿಷ್ಟು ನೀರಾದರೂ ಸಿಕ್ಕಿದರೆ, ಎಷ್ಟೋ ಗ್ರಾಮಗಳಲ್ಲಿ ಶುದ್ಧವಾದ ಗಾಳಿ ಧಾರಾಳವಾಗಿ ಸಿಕ್ಕಿದರೂ ಶುದ್ಧವಾದ ಕುಡಿಯುವ ನೀರು ತೀರಾ ಅಪರೂಪ ಎನ್ನುವಂಥ ಪರಿಸ್ಥಿತಿ ಇದೆ. ಇನ್ನು ಈ ಅವಸರದ ಜೀವನ ಶೈಲಿಯ ಜೊತೆಗೆ ನೂರಾರು ವರ್ಷಗಳಿಂದ ಶರ್ಕರ

'ರೋಗ ನಿವಾರಕ ಜೀವನಶೈಲಿ'– ಡಾ. ಎ.ಎನ್. ನಾಗರಾಜ್
ಪುಟಗಳು : 200, ಬೆಲೆ : 150/–
ಅಂಕಿತ ಪ್ರಕಾಶನ, 53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು – 560 004

ಪಿಷ್ಠಾದಿಗಳನ್ನೇ (ಕಾರ್ಬೋಹೈಡ್ರೇಟ್ಸ್) ಹೆಚ್ಚಾಗಿ ಬಳಸುತ್ತ, ಚಹಾ – ಕಾಫಿಗಳು ಅತ್ಯನಿವಾರ್ಯ ಚಟಗಳೆಂಬಂತಾಗಿ ಬಿಟ್ಟಿರುವುದಲ್ಲದೆ, ಬಹುಸಂಖ್ಯಾತ ಜನರು ಯಾವುದೇ ಶಾರೀರಿಕ ವ್ಯಾಯಾಮವನ್ನು ಮಾಡದೆ ಇರುವಂಥ ನಮ್ಮ ಸಂದರ್ಭದಲ್ಲಿ ಅಸ್ತಮಾ, ಆರ್ಥರೈಟಿಸ್, ಮಧುಮೇಹ, ಅಧಿಕ ರಕ್ತದೊತ್ತಡ, ಅಧಿಕಾಮ್ಲ ಪಿತ್ತ, ಹೃದಯದ ಕಾಯಿಲೆ ಮೊದಲಾದ ಸಮಸ್ಯೆಗಳಿಂದ ಬಳಲುತ್ತಿರುವವರ ಸಂಖ್ಯೆ ಏರುಗತಿಯಲ್ಲಿ ಸಾಗುತ್ತಿರುವುದು ಆಶ್ಚರ್ಯವೇ ಅಲ್ಲ. ಇನ್ನು ಈ ತೆರನ ರೋಗಗಳು ಬಂದಾಗ ತಗಲುವ ವೈದ್ಯಕೀಯ ವೆಚ್ಚಗಳಂತೂ ಎಂಥವರನ್ನೂ ಬೆಚ್ಚಿ ಬೀಳಿಸುತ್ತವೆ. ದುಬಾರಿ ನರ್ಸಿಂಗ್ ಹೋಂಗಳು, ದುಬಾರಿ ವೈದ್ಯಕೀಯ ಪರೀಕ್ಷೆಗಳು ಎಂಥವರನ್ನೂ ಕಂಗೆಡಿಸುತ್ತಿವೆ. ಇನ್ನು ಪ್ರಲೋಭನಕಾರಿ ಜಾಹೀರಾತುಗಳ ಮೂಲಕ ದೇಹದ ತೂಕ ಕಡಿಮೆ ಮಾಡುವುದು, ಬೊಜ್ಜು ಇಳಿಸುವುದು, ಯೋಗ, ಧ್ಯಾನ ಇತ್ಯಾದಿಗಳನ್ನೆಲ್ಲ ಹೇಳಿಕೊಡುತ್ತೇವೆಂದು ಜನರನ್ನು ಮೋಸದ ಬಲೆಯಲ್ಲಿ ಸಿಲುಕಿಸುತ್ತಿರುವ ಧೂರ್ತರು ಹೆಚ್ಚಾಗುತ್ತಿದ್ದಾರೆ ಹಾಗೂ ತಮ್ಮ ಸಮಸ್ಯೆಗಳಿಗೆ, ಶೀಘ್ರ ಪರಿಹಾರಗಳನ್ನು ಕಂಡುಕೊಳ್ಳಬೇಕೆಂಬ ಧಾವಂತದಲ್ಲಿ ಮೋಸಹೋಗುವ ಜನರು ಹೆಚ್ಚಾಗಿದ್ದಾರೆ. ಮಾನಸಿಕ ಸಮಸ್ಯೆಗಳಿಗೆ ಸಿಕ್ಕಿ ಬಳಲುತ್ತಿರುವವರ ಸಂಖ್ಯೆ ಕೂಡಾ ನಗರಗಳಲ್ಲಿ ಹೆಚ್ಚುತ್ತಿದೆ.

ಈ ಹಿನ್ನೆಲೆಯಲ್ಲಿ ಜನರ ಆರೋಗ್ಯ ಹಾಗೂ ಜೀವನ ಶೈಲಿ ಕುರಿತಂತೆ ಸರಿಯಾಗಿ ಮಾರ್ಗದರ್ಶನ ಮಾಡುವ ನಿಜವಾದ ತಜ್ಞರ ಬರಹಗಳು ಎಷ್ಟು ಬಂದರೂ ಸ್ವಾಗತಾರ್ಹ. ಪ್ರಸ್ತುತ "ರೋಗ ನಿವಾರಕ ಜೀವನ ಶೈಲಿ" ಎಂಬುದು ಈ ದಿಸೆಯಲ್ಲಿ ಅತ್ಯಂತ ಉಪಯುಕ್ತವೂ, ಮಾರ್ಗದರ್ಶಕವೂ ಆಗಿರುವ ಒಂದು ಕೈಪಿಡಿ. ನಾವು ಆಹಾರವನ್ನು ತೆಗೆದುಕೊಳ್ಳುವ ಕ್ರಮವೇ, ನಮ್ಮ ಜೀವನ ಶೈಲಿಯೇ, ರೋಗಗಳನ್ನು ನಿವಾರಿಸಿಕೊಳ್ಳುವ ಅತ್ಯುತ್ತಮ ವಿಧಾನವಾಗಬಲ್ಲುದು ಎಂಬುದನ್ನು, ಅವುಗಳ ನಿವಾರಣೆಗಾಗಿ ಯಾವುದೇ ವೈದ್ಯರ ಹಿಂದೆ ನಾವು ಓಡಬೇಕಾದ್ದಿಲ್ಲ ಹಾಗೂ ದುಬಾರಿ ನರ್ಸಿಂಗ್ ಹೋಮ್‌ಗಳಿಗೆ ಎಡತಾಕಬೇಕಾದ್ದಿಲ್ಲ ಎಂಬುದನ್ನು ನಿಶ್ಚಿತವಾಗಿ ಮನವರಿಕೆ ಮಾಡಿಕೊಡುವ ಪುಸ್ತಕ ಇದು.

ಈ ಗ್ರಂಥದ ಲೇಖಕ ಡಾ. ನಾಗರಾಜ್ ಅವರು ಖ್ಯಾತ ಜೀವವಿಜ್ಞಾನಿ. ಅಮೆರಿಕ, ಫಿಲಿಫೈನ್ಸ್ ಮತ್ತು ಭಾರತಗಳಲ್ಲಿ ವೈರಸ್ ಕಾಯಿಲೆಗಳ ಬಗ್ಗೆ ವ್ಯಾಪಕವಾಗಿ ಸಂಶೋಧನೆ ನಡೆಸಿದವರು. ತಾವು ಕಾರ್ಯ ನಿರ್ವಹಿಸುತ್ತಿದ್ದ ವಿಶ್ವದ ಆಹಾರ ಮತ್ತು ಕೃಷಿ ಸಂಸ್ಥೆಗೆ ವಿದಾಯ ಹೇಳಿ, ರಾಸಾಯನಿಕ ಕೀಟಾಣು ರಹಿತ, ಆಹಾರೋತ್ಪಾದನೆಯ ಅಂಗವಾಗಿ, ಸ್ವತಃ ಸಾವಯವ ಕೃಷಿಯಲ್ಲಿ ತೊಡಗಿಸಿಕೊಂಡಿದ್ದವರು. ಇವೆಲ್ಲಕ್ಕಿಂತ ಹೆಚ್ಚಾಗಿ, ರೋಗ

ನಿವಾರಕ ಆಹಾರಾಭ್ಯಾಸ ಮತ್ತು ಜೀವನ ಕ್ರಮಗಳ ಅಳವಡಿಕೆಯ ಮೂಲಕ, ತಮ್ಮನ್ನು ಬಹುವಾಗಿ ಕಾಡುತ್ತಿದ್ದ ಅಸ್ತಮಾ, ಸಂಧಿವಾತ, ಮಧುಮೇಹ, ಅಧಿಕ ಜಠರಾಮ್ಲವೇ ಮೊದಲಾದ ಬಾಧೆಗಳಿಂದ ಪೂರ್ತಿ ಬಿಡುಗಡೆ ಪಡೆದುಕೊಂಡವರು.

ಪ್ರಸ್ತುತ ಗ್ರಂಥದ ಹಿಂದೆ ಕೆಲಸ ಮಾಡುತ್ತಿರುವುದು ಅವರ ಸ್ವಾನುಭವ ಮತ್ತು ವಿಪುಲ ಸಂಶೋಧನಾನುಭವ ಹಾಗೂ ಜನರ ಬದುಕು ಹಸನಾಗಬೇಕೆಂಬ ಕಾಳಜಿ.

ಪುಸ್ತಕದಲ್ಲಿ ಒಟ್ಟು ಆರು ಅಧ್ಯಾಯಗಳಿವೆ. ಮೊದಲ ಅಧ್ಯಾಯ ಈ ಗ್ರಂಥಕ್ಕೆ ಅಗತ್ಯವಾದ ಪ್ರವೇಶವನ್ನು ದೊರಕಿಸಿಕೊಡುವ ಅಧ್ಯಾಯ. ಕಾಯಿಲೆಗಳು, ಅವುಗಳಿಗೆ ಕಾರಣಗಳು , ತಪ್ಪು ಜೀವನ ಶೈಲಿ ಮತ್ತು ವಿಷಪೂರಿತ ಆಹಾರಗಳೆಂಬುದನ್ನು ವಿವರಿಸಲಾಗಿದೆ. ನಾಗರಿಕತೆಯಲ್ಲಿ ಬಹಳ ಮುಂದುವರಿದಿರುವ ನಮ್ಮನ್ನು ಸಾಮಾನ್ಯವಾಗಿ ಕಾಡುವ ಅಸ್ತಮಾ, ಮೈಗ್ರೇನ್, ತಲೆನೋವು, ಅಧಿಕ ಆಮ್ಲತೆ, ಏರಿದ ರಕ್ತದೊತ್ತಡ ಮುಂತಾದವುಗಳು, ಹಿಮಾಲಯದ ಕಣಿವೆಯ ನಿವಾಸಿಗಳು, ರಷ್ಯಾದ ಅಬ್ಬಾಸಿಯನ್ ಜನರು ಹಾಗೂ ದಕ್ಷಿಣ ಅಮೆರಿಕಾದ ಎಕ್ವಿಡಾರ್‌ಗಳಲ್ಲಿನ ಜನರನ್ನು ಸೋಕದೆ ಇರುವುದಕ್ಕೆ ಕಾರಣ, ಅವರುಗಳು ಸೇವಿಸುವ ಉತ್ತಮ ಆಹಾರ, ವ್ಯಾಯಾಮ ಮತ್ತು ಒತ್ತಡರಹಿತ ಜೀವನವೇ ಕಾರಣ ಎಂಬುದು ರುಜುವಾತಾಗಿರುವುದನ್ನು ತಿಳಿಸಿ, ನಮ್ಮ ದೇಹವೇ ಎಲ್ಲ ಕಾಯಿಲೆಗಳನ್ನು, ಸಮರ್ಥವಾಗಿ ನಿರೋಧಿಸುವ ಶಕ್ತಿಯುಳ್ಳ ಎಂಥ ಅದ್ಭುತ ಬಳುವಳಿ ಎಂಬುದನ್ನು ವಿವರಿಸಿದ್ದಾರೆ. ಇಂಥ ಅದ್ಭುತ ಯಂತ್ರ ಕೆಲಸ ಮಾಡಲು ಸಮತೋಲನ ಆಹಾರಗಳು ಎಷ್ಟು ಮುಖ್ಯ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ.

ಈ ಗ್ರಂಥದ ಬಹುಮುಖ್ಯವಾದ ಅಧ್ಯಾಯವೆಂದರೆ, "ರೋಗ ನಿವಾರಕ ಆಹಾರಗಳು" ಎಂಬ ಎರಡನೇ ಅಧ್ಯಾಯ. ಇದರಲ್ಲಿ ಕಾಯಿಲೆಗಳ ಹತೋಟಿಗೆ ಮತ್ತು ನಿರೋಧಕ್ಕೆ ಪ್ರಾಣಿ ಮೂಲದ ಆಹಾರಗಳಿಗಿಂತ ಸಮತೋಲನ ಸಸ್ಯಾಹಾರವೇ ಅತ್ಯುತ್ತಮವಾದದ್ದು ಎಂಬುದನ್ನು ಮನವರಿಕೆ ಮಾಡಿಕೊಟ್ಟು ನಮ್ಮ ದೇಹಕ್ಕೆ ಬೇಕಾಗಿರುವ ಆಹಾರಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಹಾಲು, ಮಾಂಸ ಇತ್ಯಾದಿ ಕೆಲವು ಆಹಾರಗಳ ಬಗೆಗಿನ ನಮ್ಮ ಮಿಥ್ಯಾ ಕಲ್ಪನೆಗಳನ್ನು ವಿಶದಪಡಿಸಿದ್ದಾರೆ. ಇನ್ನು ನಮಗೆ ಬೇಕಾಗಿರುವ ಆಹಾರಾಂಶಗಳಾದ ಕಾರ್ಬೋಹೈಡ್ರೇಟುಗಳು, ಪ್ರೋಟೀನುಗಳು, ಕೊಬ್ಬುಗಳು ಇವುಗಳ ಬಗ್ಗೆ ವಿವರವಾಗಿ ತಿಳಿಸಿ, ಇವು ಯಾವ ಯಾವ ಸಸ್ಯ, ಧಾನ್ಯ, ತರಕಾರಿಗಳಲ್ಲಿದೆ ಎಂಬುದರ ಉಪಯುಕ್ತ ಮಾಹಿತಿ ನೀಡಿದ್ದಾರೆ.

ಇನ್ನು ನಮ್ಮ ದೇಹಕ್ಕೆ ಬೇಕಾದ ನಾನಾ ಬಗೆಯ ವಿಟಮಿನ್‌ಗಳು ಅವುಗಳಿಂದ ಒದಗುವ ಪೋಷಣೆ ಅವು ಲಭ್ಯವಿರುವ ತರಕಾರಿ, ಧಾನ್ಯ, ಹಣ್ಣುಗಳು, ಖಾದ್ಯ ಎಣ್ಣೆ

ಬೀಜಗಳು, ಖನಿಜಾಂಶಗಳು, ಅವುಗಳು ಎಷ್ಟು ಪ್ರಮಾಣದಲ್ಲಿ ದೇಹಕ್ಕೆ ಅಗತ್ಯವಿದೆ ಮತ್ತು ಅವುಗಳನ್ನು ಒದಗಿಸುವ ಸಸ್ಯಮೂಲ ಆಹಾರಗಳು, ಹಣ್ಣುಗಳು, ಯಾವುವು ಎಂದು ತಿಳಿಸಿದ್ದಾರೆ. ಆಂತೋಸಯನಿನ್, ಆಂಟಿ ಆಕ್ಸಿಡೆಂಟ್, ನಾರು, ಗಾಳಿ, ನೀರು ಇವುಗಳನ್ನು ಹೇಗೆ ಪಡೆದುಕೊಳ್ಳಬಹುದೆಂಬುದನ್ನು ತುಂಬ ಉಪಯುಕ್ತವಾಗಿ ತಿಳಿಸಿಕೊಟ್ಟಿದ್ದಾರೆ. ದೇಹಕ್ಕೆ ಅಗತ್ಯವಿಲ್ಲದ, ಆದರೆ ಚಟವಾಗಿ ಬಿಟ್ಟಿರುವ ಕಾಫಿ, ಟೀ, ಮದ್ಯ ಇತ್ಯಾದಿಗಳನ್ನು ಹೇಗೆ ಕ್ರಮಕ್ರಮವಾಗಿ ಬಿಡಬಹುದೆಂದು ತಿಳಿಸಿಕೊಟ್ಟಿದ್ದಾರೆ.

ಇದರ ನಂತರದಲ್ಲಿ ನಾವು ಸೇವಿಸಬೇಕಾಗಿರುವ ಆಹಾರ ಪದಾರ್ಥಗಳನ್ನು, 1. ಪ್ರಾಕೃತಿಕವಾದ ಹಸಿ ಆಹಾರಗಳು, 2. ಬೇಯಿಸಿದ ಆಹಾರಗಳು – ಕಾಳು, ಬೇಳೆ, ಬೀಜಗಳು, 3ನೇ ಗುಂಪಿನ ನಮ್ಮ ಬಹುಮುಖ್ಯ ಆಹಾರ ಪದಾರ್ಥಗಳಾದ ಅಕ್ಕಿ, ಗೋಧಿ, ರಾಗಿ ಇತ್ಯಾದಿ ಬೇಯಿಸಿ ತಿನ್ನುವಂಥವು, 4ನೆಯ ಗುಂಪಿನ ಇಂದಿನ ಜೀವನ ಶೈಲಿಯ ಆಹಾರ ಪದಾರ್ಥಗಳು ಹಾಗೂ ಕೊನೆಯದಾಗಿ ಕೇವಲ ಬಾಯಿ ರುಚಿಗಾಗಿ ಬಳಸಬೇಕಾಗಿರುವ ಉಪ್ಪು , ಕಾಫಿ, ಟೀ ಇತ್ಯಾದಿಗಳು ಮತ್ತು ಅವುಗಳಿಂದಾಗುವ ಹಾನಿಗಳನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಜೊತೆಗೆ ಹಣ್ಣುಗಳು, ಶೇಂಗಾಬೀಜ, ಬಾದಾಮಿ ಮುಂತಾದ ಖಾದ್ಯ ಎಣ್ಣೆ ಬೀಜಗಳು, ಹಸಿರು ತರಕಾರಿಗಳು, ಕಾಳುಗಳು ಮುಂತಾದ ಮೊದಲನೆಯ ಗುಂಪಿನ ಆಹಾರಗಳನ್ನು ನಮ್ಮ ಆಹಾರ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡರೆ, ಅವು ಅವಶ್ಯಕ ಆಹಾರಾಂಶಗಳನ್ನು ಒದಗಿಸುವುದರ ಜೊತೆಗೆ, ಅತ್ಯುತ್ತಮ ರೋಗ ನಿವಾರಕಗಳಾಗಿಯೂ ಕೆಲಸ ಮಾಡುತ್ತವೆಂದು ಸೂಚಿಸಿ, ಅವನ್ನು ತೆಗೆದುಕೊಳ್ಳಬೇಕಾದ ಪ್ರಮಾಣಗಳನ್ನು ಸೂಚಿಸಿದ್ದಾರೆ. ಅದಕ್ಕಿಂತ ಮುಖ್ಯವಾಗಿ, ನಮ್ಮ ಈಗಿನ ಆಹಾರ ವ್ಯವಸ್ಥೆಯನ್ನು ಒಮ್ಮೆಗೇ ವರ್ಜಿಸದೆ, ಹಂತ ಹಂತವಾಗಿ ಬಿಡುತ್ತ, ಹೊಸ ಆಹಾರ ವ್ಯವಸ್ಥೆಯನ್ನು ರೂಢಿಸಿಕೊಳ್ಳುವ ಬಗ್ಗೆ ತಿಳಿಸಿರುವುದು ಅತ್ಯಂತ ಉಚಿತವಾಗಿದೆ.

ಮೂರನೇ ಅಧ್ಯಾಯದಲ್ಲಿ ನಾವು ಅಳವಡಿಸಿ ಕೊಳ್ಳಬಹುದಾದ ಮತ್ತು ಅಳವಡಿಸಿಕೊಳ್ಳಲೇಬೇಕದ ಕೆಲವು ಸರಳ ವ್ಯಾಯಾಮಗಳು ಮತ್ತು ಯೋಗಾಸನಗಳ ಬಗ್ಗೆ ಸಚಿತ್ರವಾಗಿ ವಿವರಿಸಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ಮಾನಸಿಕ ಒತ್ತಡಗಳಿಗೆ ಕಾರಣಗಳು ಮತ್ತು ಅವುಗಳನ್ನು ಹೇಗೆ ನಿರ್ವಹಿಸಬಹುದೆಂಬ ಬಗ್ಗೆ, ನಕಾರಾತ್ಮಕ ಜೀವನ ಧೋರಣೆಗಳು ಅವುಗಳಿಂದುಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಿ, ಸಕಾರಾತ್ಮಕ ಧೋರಣೆಗಳನ್ನು ರೂಢಿಸಿಕೊಳ್ಳುವ ಬಗ್ಗೆ ಉಪಯುಕ್ತ ಸಲಹೆಗಳನ್ನು

ನೀಡಲಾಗಿದೆ. ಒಬ್ಬ ನುರಿತ ಮಾನಸಿಕ ತಜ್ಞನೊಬ್ಬನು, ಆಪ್ತ ಸಲಹೆ ನೀಡುವ ರೀತಿಯಲ್ಲಿ ಇವೆಲ್ಲವನ್ನೂ ನೀಡಿರುವುದರಿಂದ, ಅವು ಮನಸ್ಸನ್ನು ಹೊಗುತ್ತವೆ.

ಐದನೆಯ ಅಧ್ಯಾಯದಲ್ಲಿ ಪ್ರಾಣಾಯಾಮ ಮತ್ತು ಧ್ಯಾನಗಳನ್ನು ಮಾಡುವ ವಿಧಾನಗಳನ್ನು ಸಚಿತ್ರವಾಗಿ ವಿವರಿಸಲಾಗಿದೆ. ಆರನೇ ಅಧ್ಯಾಯದಲ್ಲಿ ವಿಟಮಿನ್ ಕೊರತೆಗಳನ್ನು ತುಂಬಲು, ಮಾತ್ರೆಗಳನ್ನು ಬಳಸುವ ಬದಲು, ಆಹಾರಗಳನ್ನೇ ಯುಕ್ತ ಪ್ರಮಾಣದಲ್ಲಿ ತೆಗೆದುಕೊಂಡರೆ, ಆಯಾ ವಿಟಮಿನ್‌ಗಳ ಕೊರತೆ ಪೂರೈಕೆಯಾಗುವ ಬಗ್ಗೆ ತಿಳಿಸಿದ್ದಾರೆ. ನಮ್ಮನ್ನು ಸಾಮಾನ್ಯವಾಗಿ ಕಾಡುವ ಕೆಲವು ಸಾಮಾನ್ಯ ರೋಗಗಳಾದ ಮಲಬದ್ಧತೆ, ಅಸ್ತಮಾ, ನೆಗಡಿ, ಕೆಮ್ಮುಗಳಿಂದ ಹಿಡಿದು, ಸಿಹಿಮೂತ್ರ, ಏರಿದ ರಕ್ತದ ಒತ್ತಡ, ಸಂಧಿವಾತ, ಬೆನ್ನುನೋವು, ಚರ್ಮರೋಗಗಳು ಹೀಗೆ ಹಲವು ಹತ್ತು ರೋಗಗಳ ಕಾರಣಗಳು ಮತ್ತು ಹಸಿ ತರಕಾರಿಗಳು, ಹಣ್ಣುಗಳು ಆಹಾರ ಧಾನ್ಯಗಳ ಯುಕ್ತ ಪ್ರಮಾಣದ ಬಳಕೆಯಿಂದ ಪರಿಹಾರ ಮಾಡಿಕೊಳ್ಳುವ ಬಗೆಗಳನ್ನು ತಿಳಿಸಿಕೊಟ್ಟಿರುವುದು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದೆ.

ಪುಸ್ತಕದ ಉದ್ದಕ್ಕೂ ಲೇಖಕರ ಕಾಳಜಿ ಮತ್ತು ಪ್ರಾಮಾಣಿಕತೆಗಳು ಎದ್ದು ಕಾಣುತ್ತವೆ. ನಾಲ್ಕು, ಐದು ಮತ್ತು ಆರನೇ ಅಧ್ಯಾಯಗಳ ಆರಂಭದಲ್ಲಿಯೇ, ಆಯಾ ಅಧ್ಯಾಯಗಳಲ್ಲಿ ಪ್ರಸ್ತಾಪಿಸಲಾಗಿರುವ ವಿಚಾರಗಳಿಗೆ, ಯಾವ ಯಾವ ಗ್ರಂಥಗಳಿಂದ ವಿವರಗಳನ್ನು ಸಂಗ್ರಹಿಸಲಾಗಿದೆ ಎಂಬುದನ್ನು ತಿಳಿಸಿರುವುದೇ ಇದಕ್ಕೆ ಸಾಕ್ಷಿ.

ತಪ್ಪು ಆಹಾರಾಭ್ಯಾಸ, ವಿಪರೀತ ಜೀವನ ಶೈಲಿಗಳಿಂದ ನಾನಾ ಕಾಯಿಲೆಗಳನ್ನು ತಂದುಕೊಂಡು ಕಂಗಾಲಾಗಿರುವವರಿಗೆ ಇದೊಂದು ರೀತಿಯಲ್ಲಿ ಮನೆಯಲ್ಲಿ ನಮ್ಮ ಕೈ ಎಟುಕಿನಲ್ಲಿರುವ ಆಪ್ತ ವೈದ್ಯ ಹಾಗೂ ಆಪ್ತ ಸಲಹೆಗಾರನಾಗಿ ಒದಗಿಬರುವ ಗ್ರಂಥವಾಗಿರುವ ಕಾರಣ ಇದೊಂದು ಅಮೂಲ್ಯ ಕೈಪಿಡಿ. ಅಂದವಾಗಿ ಹಾಲು ಬಿಳುಪಿನ ಕಾಗದದಲ್ಲಿ ಅಚ್ಚಾಗಿರುವ ಇದು ಗ್ರಾಹಕರ ಕೈಗೆಟಕುವ ಬೆಲೆಯಲ್ಲಿರುವ ಪುಸ್ತಕವೂ ಹೌದು.

❖

25

ಯುವಕರ ಅತ್ಯಮೂಲ್ಯ ಮಾರ್ಗದರ್ಶಿ

ಇನ್ನು ಕೆಲವು ವರ್ಷಗಳಲ್ಲಿ ಜಗತ್ತಿನ ಬಹು ಪ್ರಮುಖ ದೇಶಗಳಲ್ಲಿ ವೃದ್ಧರ ಸಂಖ್ಯೆ ಯುವಕರ ಸಂಖ್ಯೆಯನ್ನು ಮೀರಿಸುತ್ತದೆನ್ನುವುದು ಆ ದೇಶಗಳನ್ನು ಕಾಡುತ್ತಿರುವ ಚಿಂತೆ. ಏಕೆಂದರೆ, ಯಾವುದೇ ದೇಶದ ಪ್ರಗತಿ ಆ ದೇಶದ ಯುವಕರನ್ನವಲಂಬಿಸಿರುತ್ತದೆ. ಕಾರಣ ಅವರು ಮಾತ್ರ ದೊಡ್ಡ ದೊಡ್ಡ ಕನಸುಗಳನ್ನು ಕಾಣಬಲ್ಲರು. ಅವರು ಮಾತ್ರ ಸಾಹಸಿಗಳಾಗಿರಬಲ್ಲರು. ಜಗತ್ತು ವಿಜ್ಞಾನ, ಸಾಹಿತ್ಯ, ಕಲೆ ಇತ್ಯಾದಿ ರಂಗಗಳಲ್ಲಿ ಇಷ್ಟೆಲ್ಲ ಮುಂದುವರಿಯಲು ಕಾರಣರಾದವರು ದೊಡ್ಡ ದೊಡ್ಡ ಕನಸು ಕಾಣಬಲ್ಲ ಸಾಹಸೀ ಯುವಕರು. ಐನ್‌ಸ್ಟೀನ್ ಪ್ರಕಾರ ಜ್ಞಾನಕ್ಕಿಂತ ಕಲ್ಪನಾ ಶಕ್ತಿಯೇ ಮುಖ್ಯ. ಕಲ್ಪನೆ ಎಂದರೆ ಕನಸು. ದೇಹ ಮತ್ತು ಮನಸ್ಸಿನ ಶಕ್ತಿ ಕುಗ್ಗಿರುವ

ಡ್ರೀಮ್‌ಬಿಗ್ (ಅದ್ಭುತವಾದ ಕನಸು ಕಾಣಿ) ಮೂಲ : ಎ.ಜಿ. ಕೃಷ್ಣಮೂರ್ತಿ, ಕನ್ನಡಕ್ಕೆ : ಪರ್ವತಶೆಟ್ಟಿ
ಪುಟಗಳು :132, ಬೆಲೆ : ರೂ. 85,
ವಾಸನ್ ಪಬ್ಲಿಕೇಷನ್ಸ್ , ಡಾ. ಟಿ.ಎಂ.ಸಿ. ರಾಯನ್ ರಸ್ತೆ , ಬೆಂಗಳೂರು – 560 053

ಮುದುಕರೇನಿದ್ದರೂ ಉಳಿದಿರುವ ಜೀವನವನ್ನು ಸಮಸ್ಯೆಗಳಿಂದ ಮುಕ್ತರಾಗಿ ನೆಮ್ಮದಿಯಿಂದ ಕಳೆಯುವುದಾಗಿರುತ್ತದೆ. ದೊಡ್ಡ ದೊಡ್ಡ ಕನಸುಗಳನ್ನು ಕಾಣುವ, ಅವುಗಳನ್ನು ನನಸು ಮಾಡುವ ಉತ್ಸಾಹ ಮತ್ತು ಸಾಮರ್ಥ್ಯ, ಸವಾಲುಗಳನ್ನು ಎದುರಿಸುವ ಕೆಚ್ಚು ಯುವಕರಿಗೆ ಮಾತ್ರ ಸಾಧ್ಯ.

ಸುದೈವದಿಂದ ಭಾರತದ ಅಪಾರ ಜನಸಂಖ್ಯೆಯ ಕಾರಣದಿಂದಲೋ ಏನೋ, ಮುಂದುವರಿದ ಅನೇಕ ದೇಶಗಳಿಗೆ ಹೋಲಿಸಿದಾಗ ಭಾರತದಲ್ಲಿ ವೃದ್ಧರಿಗಿಂತ ಯುವಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಅವರಿಗೆ ಕನಸು ಕಾಣಲು ಪ್ರೇರೇಪಿಸುವ, ಹೊಸ ಹೊಸ ಉದ್ಯಮಗಳನ್ನು ಕೈಗೊಳ್ಳುವಂತೆ ಉತ್ಸಾಹ ತುಂಬುವ ಕೆಲಸವನ್ನು ನುರಿತವರು ಮತ್ತು ಹಿರಿಯರು ಮಾಡಬೇಕಾದ ಅಗತ್ಯವಿದೆ. ಯುವಕರಲ್ಲಿ ಇರಬಹುದಾದ ಆತಂಕ, ನಿರಾಶೆ, ಋಣಾತ್ಮಕ ಮನೋಭಾವಗಳನ್ನು ತೊಲಗಿಸಿ, ಭರವಸೆ, ಆಶೆ ಮತ್ತು ಧನಾತ್ಮಕ ಚಿಂತನೆಗಳನ್ನು ಮೂಡಿಸುವುದು, ಸಿನಿಕ ಮನೋವೃತ್ತಿಯನ್ನು ತೊಡೆದುಹಾಕುವುದು ಅತಿಮುಖ್ಯ. ಹದಿವಯಸ್ಸಿನ ಹುಡುಗರಲ್ಲಿ ಕನಸು ಕಾಣುವ ಪ್ರವೃತ್ತಿಯನ್ನು ಬೆಳೆಸುವುದಲ್ಲದೆ, ಭಾರಿ ಭಾರಿ ಉದ್ಯಮಗಳಲ್ಲಿ ಯಶಸ್ಸು ಕಂಡ ಹಲವರ ಉದಾಹರಣೆಗಳನ್ನು ಮುಂದಿಡುವ ಮೂಲಕ ಅವರನ್ನು ಹುರಿದುಂಬಿಸುವ, ಮುನ್ನುಗ್ಗುವ ಮನೋಭಾವ ಬೆಳೆಸುವ ಪುಸ್ತಕಗಳ ಅಗತ್ಯವಿದೆ. ಅದರಲ್ಲೂ ಆಯಾ ಕ್ಷೇತ್ರಗಳಲ್ಲಿ ಸ್ವತಃ ಅನುಭವವುಳ್ಳ ಉದ್ಯಮಶೀಲರು ತಮ್ಮ ವಾಸ್ತವ ಅನುಭವಗಳನ್ನು ಹಾಗೆ ಹಾಗೆಯೇ ನಿರೂಪಿಸಿದರೂ ಅದು ಯುವಕರಿಗೆ ಮಾರ್ಗದರ್ಶಕವಾಗಬಲ್ಲದು, ದೇಶ ಕಟ್ಟುವ ಕೆಲಸದಲ್ಲಿ ಯುವಕರನ್ನು ಸಾರ್ಥಕವಾಗಿ ತೊಡಗಿಸಬಲ್ಲದು.

ನಮ್ಮದು ಬಡ ದೇಶ. ಭ್ರಷ್ಟ ರಾಜಕಾರಣಿಗಳು ಭ್ರಷ್ಟ ಅಧಿಕಾರಿಗಳಿಂದ ತುಂಬಿ ತುಳುಕುತ್ತಿದೆ. ಎಲ್ಲೆಲ್ಲೂ ಕಾಲೆಳೆಯುವವರು, ಅಡೆತಡೆಗಳೇ ಜಾಸ್ತಿ. ಆದರೆ ಇಂಥ ಪ್ರತಿಕೂಲ ಪರಿಸ್ಥಿತಿಗಳ ಮಧ್ಯದಲ್ಲೂ, ಸಾಹಸಶೀಲರಾಗಿ ಮುನ್ನುಗ್ಗಿ ಕಾರ್ಪೊರೇಟ್ ಜಗತ್ತನ್ನು ಕಟ್ಟಿ ನಿಲ್ಲಿಸಿದ ಉದಾಹರಣೆಗಳಿಗೇನೂ ಬರವಿಲ್ಲ. ಟಾಟಾ ಬಿರ್ಲಾಗಳು ಹಳೆಯವಾದರೆ, ಅಂಬಾನಿಗಳು, ನಾರಾಯಣ ಮೂರ್ತಿ, ಮಹೀಂದ್ರ ಪೈ ಮೊದಲಾದವರು ನಮ್ಮ ಕಣ್ಣೆದುರೇ ಇದ್ದಾರಲ್ಲ.

ಪ್ರಸ್ತುತ 'ಡ್ರೀಮ್‌ಬಿಗ್'ನಲ್ಲಿ ಅಡ್ವರ್ಟೈಸಿಂಗ್ ಏಜೆನ್ಸಿಗಳಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮೂರನೆಯ ಸ್ಥಾನವನ್ನು , ಭಾರತದಲ್ಲಿ ಮೊದಲ ಸ್ಥಾನವನ್ನು ಗಳಿಸಿರುವ ಮುದ್ರಾ ಕಮ್ಯುನಿಕೇಷನ್ಸ್ ಲಿಮಿಟೆಡ್‌ನ ಛೇರ್ಮನ್, ಮ್ಯಾನೇಜಿಂಗ್ ಡೈರೆಕ್ಟರ್ ಆದ ಎ.ಜಿ.

ಕೃಷ್ಣಮೂರ್ತಿಯವರು ತಮ್ಮದೇ ಆದ ಅಮೂಲ್ಯ ಅನುಭವವನ್ನು ತುಂಬಿ ಸೊಗಸಾಗಿ, ಉದ್ಬೋಧಕವಾಗಿ, ಮಾರ್ಗದರ್ಶನ ನೀಡುವ ರೀತಿಯಲ್ಲಿ ನಿರೂಪಿಸಿದ್ದಾರೆ. ಹತ್ತಾರು ನಿದರ್ಶನಗಳನ್ನು ನೀಡುತ್ತ, ಧನಾತ್ಮಕ ಚಿಂತನೆಗಳನ್ನು ಪ್ರಸ್ತುತಪಡಿಸುವ ಇದು, ಈ ಕಾಲದ ಯುವ ಜನರ ಸಕಾಲಿಕ ಅಗತ್ಯವೊಂದನ್ನು ಪೂರೈಸುವ ದಿಕ್ಕಿನಲ್ಲಿ ಒಂದು ಅರ್ಥಪೂರ್ಣವಾದ ನಡೆ. ಭಾರತದಲ್ಲಿ ಹಸಿವು, ಬಡತನ, ಅನಕ್ಷರತೆ, ಲಂಚಗುಳಿತನ, ನಿರುದ್ಯೋಗ ಇವೆಲ್ಲ ಇದ್ದರೂ, ಎಂಥ ಬಡವರ ಗುಡಿಸಲಲ್ಲೂ ಟಿ.ವಿ, ಕುಕ್ಕರ್, ಮೊಬೈಲ್ ಫೋನ್ ಹೊಂದಿರುವವರು ಎಲ್ಲೆಡೆ ಕಂಡುಬರುತ್ತಾರೆ. ನಗರಗಳಲ್ಲಿ ಮಲ್ಟಿಪ್ಲೆಕ್ಸ್ , ಮಾಲ್‌ಗಳು, ಬ್ರಾಂಡೆಡ್ ವಸ್ತುಗಳು ಕೂಡ ಕಡಿಮೆಯೇನಿಲ್ಲ. ಈ ಫೀಲ್‌ಗುಡ್ ಫ್ಯಾಕ್ಟರ್ ಎತ್ತಿ ಹೇಳುತ್ತಾರೆ. ಅನೇಕ ಶೀರ್ಷಿಕೆಗಳಲ್ಲಿ ಅತ್ಯಮೂಲ್ಯವಾದ ಸಲಹೆ, ಮಾರ್ಗದರ್ಶನಗಳನ್ನು ನೀಡಿದ್ದಾರೆ. ಕೆಲವನ್ನು ಹೆಸರಿಸುವುದಾದರೆ (1) ಆರಿಸಿಕೊಂಡ ವೃತ್ತಿಯನ್ನು ಅಮಿತವಾಗಿ ಪ್ರೀತಿಸುವುದು. (2) ನಿರಂತರ ಶ್ರಮದ ದುಡಿಮೆ. (3) ನಮ್ಮ 'ವಿಷಯ'ದಲ್ಲಿ ಯವಾಗಲೂ ಮುಂದಿರುವುದು. (4) ಆಶಾವಾದಿತನ (5) ಆಕಾಶದಲ್ಲಿರುವ ನಕ್ಷತ್ರಗಳಿಗೆ ಪ್ರಯತ್ನಿಸಿದರೆ ಧೂಳಾದರೂ ಸಿಗುತ್ತದೆ. (6) ದೃಢವಾದ ವಿಶ್ವಾಸ (7) ಅಹಂಕಾರ ಬೆಂಕಿಯ ಹಾಗೆ, ಉದ್ದಕ್ಕೂ ಸುಟ್ಟು ಹಾಕುತ್ತದೆ. (8) ಭವಿಷ್ಯದಲ್ಲಿ ಭರವಸೆ (9) ಎಲ್ಲರೊಂದಿಗೆ ಉತ್ತಮ ಸಂಬಂಧ (10) ಜೀವನ ಎನ್ನುವುದು ಕೇವಲ ಕೊಟ್ಟು ತೆಗೆದುಕೊಳ್ಳುವುದಲ್ಲದೆ ಬೇರೆಯಲ್ಲ ಎಂಬ ಮನೋಭಾವ ಇಂಥವು ಇನ್ನೂ ಸಾಕಷ್ಟಿವೆ.

ಹೀಗೆ ಉಪಯುಕ್ತವೂ, ಉದ್ಬೋಧಕವೂ ಆದ ಸಲಹೆಗಳಿಂದ ಕೂಡಿರುವ ಈ ಕೈಪಿಡಿಯನ್ನು ಯುವಕರು ಒಮ್ಮೆ ಖಂಡಿತವಾಗಿಯೂ ಓದಬೇಕು. ಪರ್ವತಶೆಟ್ಟಿಯವರ ಅನುವಾದ ಅತ್ಯಂತ ಸರಾಗವಾಗಿ, ಸುಲಲಿತವಾಗಿ ಓದಿಸಿಕೊಂಡು ಹೋಗುತ್ತದೆ.

❖

26
ರೋಚಕ ಸಾಹಿತ್ಯಕ ಜೈತ್ರಯಾತ್ರೆ

ಪ್ರವಾಸ ಕಥನಗಳಿಗೆ ತಮ್ಮದೇ ಆದ ಆಕರ್ಷಣೆ ಇರುತ್ತದೆ. ನಮಗೆ ಗೊತ್ತಿಲ್ಲದ ದೇಶದ ವಿವರಗಳು, ಜನರ ಬದುಕಿನ ರೀತಿ – ನೀತಿಗಳು ಜೊತೆಗೆ ಪ್ರವಾಸಿಯ ವೈಯಕ್ತಿಕ ವಿಶಿಷ್ಟ ಅನುಭವಗಳು, ನಿರೂಪಣೆಯ ಸೊಗಸು ಇವುಗಳಿಂದಾಗಿ ಅವುಗಳ ಓದು ಸ್ವಾರಸ್ಯಕರ. ಜಗತ್ತು ಕಿರಿದಾಗಿ ಬಿಟ್ಟಿರುವ ಈಗಂತೂ, ಅಧ್ಯಯನ, ಪ್ರವಾಸ ಹಾಗೂ ಉದ್ಯೋಗ ನಿಮಿತ್ತ ವಿದೇಶಗಳಿಗೆ ತೆರಳುತ್ತಿರುವ ಭಾರತೀಯರ ಸಂಖ್ಯೆ ಅಸಂಖ್ಯಾತ ವಾಗಿಬಿಟ್ಟು ವಿದೇಶಗಳು ಈಗ ಮೊದಲಿನಷ್ಟು ಅಪರಿಚಿತವಾಗುಳಿದಿಲ್ಲ. ಆದರೂ ಯಾವುದೇ ಪ್ರವಾಸ ಕಥನವನ್ನು ಓದುಗರು ಆ ಪುಸ್ತಕವನ್ನು ಕೆಳಗಿಡಲವಕಾಶ ಕೊಡದಷ್ಟು ಮಟ್ಟಿಗೆ, ಕುತೂಹಲ ಕೆರಳಿಸುವ ರೀತಿಯಲ್ಲಿ

ಪಾಟೀಲನ ಲಂಡನ್ ಸವಾರಿ (ಪ್ರವಾಸ ಕಥನ)
ಮೂಲ ಮರಾಠಿ : ಎ.ಬಿ. ಪಾಟೀಲ, ಕನ್ನಡಾನುವಾದ : ಪ್ರಭಾಕರ ಸಾತಖೇಡ
ಪು : 256, ಬೆಲೆ : 180.00
ರಂಗ ಪ್ರೀತಿ ಪ್ರಕಾಶನ, 'ರಂಗಪ್ರೇಮ', ಬನಶಂಕರಿ ಬಡಾವಣೆ, ಬ್ರಹ್ಮಪುರ, ಗುಲಬರ್ಗಾ–585103

ವಿನೋದ ಭರಿತವಾಗಿ, ಸ್ವಾರಸ್ಯಕರವಾಗಿ ನಿರೂಪಿಸುವುದು ಒಂದು ಕಲೆಯೇ ಸರಿ. ಕನ್ನಡದಲ್ಲಿ ಕೃಷ್ಣಾನಂದ ಕಾಮತರ 'ನಾನೂ ಅಮೆರಿಕೆಗೆ ಹೋಗಿದ್ದೆ', ಬಿ.ಜಿ.ಎಲ್. ಸ್ವಾಮಿಯವರ 'ಅಮೆರಿಕೆಯಲ್ಲಿ ನಾನು' ಹಾಗೂ ಗೊರೂರರ 'ಅಮೆರಿಕದಲ್ಲಿ ಗೊರೂರು' ಈ ಗ್ರಂಥಗಳು ತಮ್ಮ ಸ್ವಾರಸ್ಯಕರ ನಿರೂಪಣೆ ಹಾಗೂ ವಿಶಿಷ್ಟ ಅನುಭವ ಕಥನದಿಂದಾಗಿ ಎಲ್ಲ ಕಾಲದ ಓದುಗರನ್ನು ಸೆರೆ ಹಿಡಿದಿಟ್ಟು ಓದಿಸಿಕೊಳ್ಳುವ ಪ್ರವಾಸ ಕಥನಗಳಾಗಿವೆ.

ಇನ್ನೊಂದು ರೀತಿಯ ಪ್ರವಾಸ ಕಥನಗಳಿರುತ್ತವೆ. ಅವು ನಿರೂಪಣಾ ಸ್ವಾರಸ್ಯದ ಕಡೆಗೆ ಕೊಡುವ ಗಮನ ನಗಣ್ಯವೆಂದೇ ಹೇಳಬೇಕು. ಆದರೆ, ಓದುಗರ ಅರಿವಿನ ದಿಗಂತಗಳನ್ನು ವಿಸ್ತರಿಸುವ ರೀತಿಯಲ್ಲಿ ತಾವು ಕಂಡ ಪ್ರದೇಶದ, ಜನಜೀವನ, ವಾತಾವರಣ, ಕಲೆ, ಆಚರಣೆ, ಶಿಲ್ಪ , ಸಾಹಿತ್ಯ, ಮ್ಯೂಸಿಯಂಗಳು ಅಲ್ಲಿಯ ಪ್ರಗತಿ ಇವೆಲ್ಲವುಗಳನ್ನು ವಿವರ ವಿವರವಾಗಿ ವರ್ಣಿಸುತ್ತ ಆ ದೇಶಗಳ ಸಂಸ್ಕೃತಿ ಕಥನವಾಗಿಬಿಡುವಂಥ ಪ್ರವಾಸ ಕಥನಗಳು. ಶಿವರಾಮ ಕಾರಂತರ 'ಅಪೂರ್ವ ಪಶ್ಚಿಮ', 'ಅಬೂವಿಂದ ಬರಾಮಕ್ಕೆ' ಹಾಗೂ ಎ.ಎನ್. ಮೂರ್ತಿರಾಯರ 'ಅಪರ ವಯಸ್ಕನ ಅಮೆರಿಕಾ ಯಾತ್ರೆ' ಮುಂತಾದವು ಈ ಬಗೆಯ ಗ್ರಂಥಗಳು.

ಪ್ರಸ್ತುತ 'ಪಾಟೀಲನ ಲಂಡನ್ ಸವಾರಿ' ಕೂಡ ಮೇಲೆ ಹೇಳಿದ ವರ್ಗಕ್ಕೆ ಸೇರುವ ಪ್ರವಾಸ ಕಥನ. ಇಂಗ್ಲಿಷ್ ಸಾಹಿತ್ಯದ ಅಧ್ಯಯನ, ಅಧ್ಯಾಪನಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡ ಕಾಲೇಜು ಪ್ರಾಧ್ಯಾಪಕ ಆನಂದ ಪಾಟೀಲರು, ಜಗತ್ಪ್ರಸಿದ್ಧ ನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್ ಕುರಿತು ಬರ್ಲಿನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಸಂಶೋಧನ ಪ್ರಬಂಧ ಮಂಡಿಸುವ ಹಾಗೂ ವೆಸ್ಟರ್ನ್ ಇನ್‌ಫ್ಲುಯನ್ಸ್ ಆನ್ ಮರಾಠಿ ಡ್ರಾಮಾ ಎಂಬ ತಮ್ಮ ಪಿ.ಎಚ್.ಡಿ. ವಿಷಯಕ್ಕೆ ಸಂಬಂಧಿಸಿದಂತೆ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂ ಮತ್ತು ಗ್ರಂಥಾಲಯಗಳಲ್ಲಿ ಮಾಹಿತಿ ಸಂಗ್ರಹಣೆ ಮಾಡುವ ಉದ್ದೇಶದಿಂದ ಕೈಗೊಂಡ ಯೂರೋಪ್ ಪ್ರವಾಸದ ಸಂಕಥನ. ಇಷ್ಟನ್ನು ಹೇಳಿದರೆ ಏನೂ ಹೇಳಿದಂತೆ ಅಲ್ಲ. ಇಲ್ಲಿನ ಪುಟ ಪುಟವೂ, ಈ ಪ್ರವಾಸ ಸಂದರ್ಭದಲ್ಲಿ ತಾವು ಭೇಟಿ ಮಾಡಿದ ಸ್ಥಳಗಳು, ವ್ಯಕ್ತಿಗಳು, ಸನ್ನಿವೇಶಗಳು ಇವುಗಳ ಯಥಾವತ್ತಾದ ಸ್ವಾರಸ್ಯಕರ ನಿರೂಪಣೆಯಿಂದ ಕೂಡಿ ಎಲ್ಲಿಯೂ ಬೋರ್ ಆಗದಂತೆ ಓದಿಸಿಕೊಂಡು ಹೋಗುವ ಕಥನ. ತಮ್ಮ ವೈಯಕ್ತಿಕ ದೌರ್ಬಲ್ಯಗಳು, ತಾಂತ್ರಿಕ ಜ್ಞಾನ ಕಿಂಚಿತ್ತೂ ಇಲ್ಲದ ತಮ್ಮ ದಡ್ಡತನದಿಂದಾಗಿ ಎದುರಿಸಬೇಕಾಗಿ ಬಂದ ಪೇಚಿನ ಪ್ರಸಂಗಗಳು, ಎಲ್ಲಕ್ಕಿಂತ ಹೆಚ್ಚಾಗಿ, ಸಂದರ್ಭ ಬಂದಾಗಲೆಲ್ಲ ಇಂಗ್ಲಿಷ್ ಸಾಹಿತ್ಯದ ಖ್ಯಾತನಾಮರೆಲ್ಲರ

ಬರಹಗಳಿಂದ ಉದ್ಧರಿಸುವ ಸಾಲುಗಳು, ಅನೇಕ್‌ಡೋಟ್ಸ್‌ಗಳು, ಆತ್ಮಾವಲೋಕನ, ಬ್ರಿಟಿಷರಿಂದ ನಾವು ಬಳುವಳಿಯಾಗಿ ಪಡೆದ ವಸಾಹತು ಶಾಹಿ ಪ್ರಜ್ಞೆಗೂ, ಅದೇ ಬ್ರಿಟೀಷರು ರೂಢಿಸಿಕೊಂಡಿರುವ ಪ್ರಜಾಪ್ರಭುತ್ವದ ಸಮಾನತೆಯ ಮನೋಧರ್ಮಕ್ಕೂ ತುಲನೆ ಮಾಡುವುದು ಇದೆಲ್ಲವೂ ಈ ಪ್ರವಾಸ ಕಥನದ ಓದನ್ನು ಸ್ವಾರಸ್ಯಕರವಾಗಿಸಿದೆ.

ಈ ಇಡೀ ಪ್ರವಾಸ ಕಥನವನ್ನು ಮುಖ್ಯವಾಗಿ ಮೂರು ಭಾಗಗಳಾಗಿ ನೋಡಬಹುದು. ಎಂಬತ್ತರ ದಶಕದಲ್ಲಿ ಮೊದಲ ಬಾರಿಗೆ ವಿದೇಶ ಪ್ರಯಾಣ ಕೈಗೊಳ್ಳಬೇಕಾಗಿ ಬಂದ ತೀರಾ ಸಾಮಾನ್ಯರಲ್ಲಿ ಸಾಮಾನ್ಯರಾದ ಆನಂದ ಪಾಟೀಲರು ವಿದೇಶ ಯಾತ್ರೆಗೆ ಬೇಕಾದ ಹಣ ಹೊಂದಿಸಲು ಪಡಬೇಕಾಗಿ ಬಂದ ಪಾಡುಗಳ ವಿವರ, ಎರಡನೆಯದಾಗಿ ಬರ್ಲಿನ್‌ನಲ್ಲಿ ಷೇಕ್ಸ್‌ಪಿಯರ್ ಕುರಿತ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಸಂಶೋಧನ ಪ್ರಬಂಧ ಮಂಡಿಸಿದ್ದ ವಿವರ ಮತ್ತು ಅನಂತರದಲ್ಲಿ ಆಸ್ಟ್ರಿಯಾ, ಡೆನ್ಮಾರ್ಕ್, ಸ್ವೀಡನ್, ಇಟಲಿ, ಫ್ರಾನ್ಸ್, ಗ್ರೀಸ್, ಬೆಲ್ಜಿಯಂ, ನೆದರ್‌ಲ್ಯಾಂಡ್ಸ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್‌ಗಳಲ್ಲಿ ಸುತ್ತಾಡಿದ ವಿವರಗಳು, ಆನಂತರದಲ್ಲಿ ಇಂಗ್ಲೆಂಡಿನಲ್ಲಿ ಅದರಲ್ಲೂ ಮುಖ್ಯವಾಗಿ ಲಂಡನ್‌ನಲ್ಲಿ ಒಂದು ತಿಂಗಳು ಬ್ರಿಟಿಷ್ ಮ್ಯೂಸಿಯಂ ಮತ್ತು ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ನಡೆಸಿದ ಅಧ್ಯಯನ ಪ್ರವಾಸ.

ಕೆಳ ಮಧ್ಯಮವೆನ್ನುವಂಥ ಹಳ್ಳಿಗಾಡಿನ, ಕೃಷಿ ಕುಟುಂಬದಿಂದ ಬಂದು ಬಡತನವನ್ನೇ ಹಾಸಿಹೊದ್ದ ಕಾರಣ ಪಾಟೀಲರು, ಕಾಲೇಜು ಅಧ್ಯಾಪಕರೇ ಆದರೂ ವಿದೇಶ ಪ್ರವಾಸದ ಖರ್ಚು ಭರಿಸುವ ಸಾಮರ್ಥ್ಯ ಹೊಂದಿರುವುದಿಲ್ಲ. ಹಾಗಾಗಿ ಕಂಡ ಕಂಡ ಸಂಸ್ಥೆ, ಸರ್ಕಾರೀ ಇಲಾಖೆಗೆಲ್ಲಾ ಕೈ ಚಾಚಿ ತೀರಾ ಕನಿಷ್ಠತಮವೆನ್ನಬಹುದಾದಷ್ಟು ಹಣ ಹೊಂಚಿಕೊಂಡು ಪ್ರವಾಸ ಹೊರಟ ಈ 'ಪುರಂದರ ದಾಸ' ಸ್ಥಿತಿ ಹೆಜ್ಜೆ ಹೆಜ್ಜೆಗೆ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಎಲ್ಲ ಕಡೆಯೂ ಹಣವನ್ನು ಹೇಗೆ ಉಳಿಸಿ ಪ್ರವಾಸ ಯಶಸ್ವಿಗೊಳಿಸಿಕೊಳ್ಳುವುದು ಎನ್ನುವುದೇ ಒಂದು ಸವಾಲು. ಇದಕ್ಕಾಗಿ ಉಪವಾಸ ಮಾಡುವುದೇನು, ತೀರಾ ಕಡಿಮೆ ದರ್ಜೆಯ ವಸತಿಯಲ್ಲಿ, ಯೂತ್ ಹಾಸ್ಟೆಲ್, ವೈ.ಎಂ.ಸಿ.ಎ.ಗಳಲ್ಲಿ ತಂಗುವುದೇನು, ಕೊನೆಗೆ ವಿಧಿಯಿಲ್ಲದೆ ತಮ್ಮ ಕೊಡೆ, ಕೊಲ್ಲಾಪುರ ಚಪ್ಪಲಿ, ಸೂಟ್‌ಕೇಸ್ (ಹೆಚ್ಚಿನದು) ಕೂಡ ಮಾರಾಟಕ್ಕಿಡುವುದೇನು ಇದೆಲ್ಲ ನಿಜಕ್ಕೂ ಕಂಗೆಡಿಸುವಂಥ ಸ್ಥಿತಿ. ಕೆಲವೊಮ್ಮೆ ರೈಲು ಪ್ರಯಾಣಕ್ಕೂ ಕಾಸಿಲ್ಲವೆಂಬಂಥ ಸ್ಥಿತಿ. ಸಂಶೋಧನ ಪ್ರಬಂಧ ಮಂಡಿಸಲು ಅರ್ಜಿ ಸಲ್ಲಿಸಿದಾಗಿನಿಂದ ಪ್ರವಾಸ ಮುಗಿಯುವವರೆಗೆ ನಡೆದ ಸಂಗತಿಗಳನ್ನು ದಿನಾಂಕ ನಮೂದಿಸಿ ಡೈರಿ ಬರೆದ ಹಾಗೆ ಬರೆದಿದ್ದಾರೆ. ತಮ್ಮ

ಬದುಕಿನ ಹಿಂದಿನ ಸಂಗತಿಗಳನ್ನು ಈಗಿನ ಸನ್ನಿವೇಶಗಳೊಂದಿಗೆ ಹೋಲಿಕೆಗಾಗಿ ಅಲ್ಲಲ್ಲಿ ತಂದಿರುವುದು ಕೂಡಾ ಅರ್ಥಪೂರ್ಣವೇ ಆಗಿದೆ. ಎರಡನೇ ಬಿ.ಎ. ಓದುವುದಕ್ಕೋಸ್ಕರ ಊರಿನಿಂದ ಸಾತಾರಕ್ಕೆ ತಲುಪಲು ಬಸ್ ಛಾರ್ಜ್ ಹೊಂದಿಸುವ ಸಲುವಾಗಿ ತಾಯಿ ತನ್ನ ಮಂಗಳ ಸೂತ್ರವನ್ನೇ ಹತ್ತು ರೂಪಾಯಿಗೆ ಗಿರವಿ ಇಟ್ಟ ಪ್ರಸಂಗ ಕಣ್ಣಲ್ಲಿ ನೀರು ತರಿಸುವಂಥದ್ದು. ಅದೇ ರೀತಿ ರಾಟರ್ ಡಾಮ್‌ನಲ್ಲಿ ದುಬಾರಿ ಬಾಡಿಗೆ ತೆತ್ತು ಹೋಟೆಲ್‌ನಲ್ಲಿ ರಾತ್ರಿ ಕಳೆಯುವ ಆರ್ಥಿಕ ಸಾಮರ್ಥ್ಯವಿಲ್ಲದ್ದಕ್ಕೆ ರೈಲ್ವೆ ಸ್ಟೇಷನ್‌ನಲ್ಲೇ ಕಳೆಯುವುದೆಂದು ತೀರ್ಮಾನಿಸಿ ಅಲ್ಲೇ ಇರುತ್ತಾರೆ. ನಡುರಾತ್ರಿ 2 ರಿಂದ 4 ಗಂಟೆಯವರೆಗೆ ಸ್ಟೇಷನ್ ಸ್ವಚ್ಛಗೊಳಿಸುವ ಸಿಬ್ಬಂದಿ ಬಂದು, ಎಷ್ಟೇ ದಯನೀಯವಾಗಿ ಕೇಳಿಕೊಂಡರೂ ಆ ವೇಳೆಯಲ್ಲಿ ಅಲ್ಲಿ ಇರಲು ಅವಕಾಶವಿಲ್ಲವೆಂದು ಕಳಿಸಿಬಿಟ್ಟಾಗ, ವಸ್ತುತಃ ಬೀದಿಯಲ್ಲಿ ಕಂಬದ ಬದಿಯಲ್ಲಿ ಕುಳಿತು ಮಂಜುಗಡ್ಡೆಯಂತಾಗಿಬಿಟ್ಟಾಗ ಸಾವನ್ನು ಸಮೀಪಿಸಿದ ಅನುಭವವಾಯಿತೆಂದು ಹೇಳಿದಾಗ ಮತ್ತೆ ನಮ್ಮ ಮನ ಕರಗುತ್ತದೆ.

ಲೇಖಕರು ಹಳ್ಳಿಗಾಡಿನ ಕೆಳಮಧ್ಯಮ ವರ್ಗದಿಂದ ಬಂದವರು. ಪಿಎಚ್‌ಡಿ ಆದರೂ ಅಗತ್ಯವಾದ "ಸಾಂಸ್ಕೃತಿಕ ಸಾಕ್ಷರತೆ"ಯಿಂದ ವಂಚಿತರಾದವರು. ಸಣ್ಣ ಪುಟ್ಟ ತಾಂತ್ರಿಕ ವಿಷಯಗಳ ಜ್ಞಾನವೂ ಇಲ್ಲದ ಕಾರಣ, ಎದುರಿಸಬೇಕಾಗಿ ಬಂದ ಪೇಚಿನ ಪ್ರಸಂಗಗಳ ಒಂದು ದೊಡ್ಡ ಯಾದಿಯೇ ಇದೆ.

ಸಾಮಾನ್ಯ ಲಿಫ್ಟನ್ನೂ ಸಹ ಚಾಲು ಮಾಡುವುದರ ಜ್ಞಾನ ಇಲ್ಲದೆ ಅನೇಕ ಸಲ ಪೇಚಿಗೆ ಸಿಲುಕುತ್ತಾರೆ. ಬರ್ಲಿನ್‌ನಲ್ಲಿ ಕ್ಯಾಮರಾ ಕೊಂಡು ಅದನ್ನು ಬಳಸಲು ಅಂದರೆ ಫ್ಲಾಷ್ ಹೊಮ್ಮಿಸಲು ಗೊತ್ತಿಲ್ಲದೆ ಪಡುವ ಪಾಡು ಹೇಳುವಾಗ 'ನೇಗಿಲು ಹೊಡೆಯುವ ಪಟೇಲನಿಗೆ ಅದು ಅಷ್ಟು ಸರಳವಾಗಿರಲಿಲ್ಲ' ಎಂಬ ಮಾತು ಹೇಳುತ್ತಾರೆ. ಮುಂದೆಯೂ ದುಬಾರಿ ಹೋಟೆಲ್‌ಗಳನೆಲ್ಲಾ ತಪ್ಪಿಸಿ, ಇನ್ನೊಬ್ಬರೊಂದಿಗೆ ಹಂಚಿಕೊಂಡು, ಅಗ್ಗದ ವಸತಿ ಗೃಹಗಳಲ್ಲೇ ತಂಗುತ್ತಾರೆ. ಇದರಲ್ಲಿ ಅನೇಕ ತಮಾಷೆಯ ಪ್ರಸಂಗಗಳೂ ಬರುತ್ತವೆ. ಹ್ಯಾಂಬರ್ಗ್ ಸ್ಟೇಷನ್‌ನಲ್ಲಿ ಕಿವಿ, ತಲೆ ಮುಚ್ಚಿಕೊಳ್ಳಲು ಮಫ್ಲರ್ ಇಲ್ಲದ ಕಾರಣ, ತಮ್ಮ ಹಸಿರು ಶಾಲನ್ನು ತಲೆಯಿಂದ ಪ್ರಾರಂಭಿಸಿ ಮೈ ತುಂಬ ಹೊದ್ದು ಕುಳಿತಿದ್ದಾಗ, ಪಕ್ಕದಲ್ಲಿ ಬಂದು ಕುಳಿತ ಜರ್ಮನ್ ಮಧ್ಯವಯಸ್ಕನೊಬ್ಬ ಇವರನ್ನು ಏಷಿಯನ್ ಇಲ್ಲವೆ ಆಫ್ರಿಕನ್ ವಾರಾಂಗನೆ ಎಂದು ಭಾವಿಸಿದ ಪ್ರಸಂಗ ಬಹಳ ಹಾಸ್ಯ ಪೂರ್ಣವಾಗಿದೆ. ಪೊಲೀಸರು ಕೂಡ ಹಾಗೆಯೇ ಭಾವಿಸಿ, ಅರೆಸ್ಟ್ ಮಾಡಲು ಬಂದಾಗ, ತಾವು ಇಂಡಿಯನ್ ಸ್ಕಾಲರ್, ಪ್ರೊಫೆಸರ್ ಎಂದು ಚೀರಿ ಬಚಾಯಿಸಿಕೊಳ್ಳುತ್ತಾರೆ.

ಹಾಗೆಯೇ ಕಳುವು ಮಾಡಲು ಬಂದ ದರೋಡೆಕೋರರರ ಕೈಗೆ ಸಿಕ್ಕು "ಐ ಆಮ್ ಎ ಪೂರ್ ಟೀಚರ್ ಸ್ಟೇಯಿಂಗ್ ಇನ್ ಯೂತ್ ಹಾಸ್ಟಲ್" ಎಂದು ಹೇಳಿ ಪಾರಾದ ಭಯಾನಕ ಸಂದರ್ಭವೂ ಇದೆ. ಅವರು 'ಟೀಚರ್ ಯೂಸ್‌ಲೆಸ್" ಎಂದು ಹೀಯಾಳಿಸಿ ಬಿಟ್ಟುಬಿಡುತ್ತಾರೆ. ರೋಮಾನ್ಸ್ ಪ್ರಸಂಗಗಳೂ ಇವೆ. ಪೋಲೆಂಡ್ ಜೋಡಿಯೊಂದು 'ಮೈ ಪಾರ್ಟ್‌ನರ್ ವಾಂಟ್ಸ್ ಟು ಸ್ಟೇ ಹಿಯರ್' ಎಂದು ಹೇಳಿ ಇವರ ಅನುಮತಿ ಪಡೆದು ಇವರನ್ನು ಹೊರಗೆ ಕಳಿಸಿ ಕೊಠಡಿಯಲ್ಲಿ ಮೈಥುನ ನಡೆಸಿದ್ದು, ಲೇಖಕರಿಗೇ ಫ್ರಾಂಕ್‌ಫರ್ಟ್‌ನಲ್ಲಿ ಬ್ಲೂಫಿಲ್ಮ್ ನೋಡಬೇಕೆಂಬ ಅದಮ್ಯ ಬಯಕೆಯುಂಟಾಗಿ ಅದನ್ನು ಈಡೇರಿಸಿಕೊಂಡದ್ದು, ಅಲ್ಲಿ ಲೈಂಗಿಕ ಸಾಮಗ್ರಿ ಮಳಿಗೆ ನೋಡ ಹೋದಾಗ ಅರೆನಗ್ನ ಯುವತಿಯರ ದರ್ಶನವಾದ್ದು ಇವನ್ನೆಲ್ಲ ಹಿಂಜರಿಕೆಯಿಲ್ಲದೆ ದಾಖಲು ಮಾಡಿದ್ದಾರೆ. ವಿದೇಶಕ್ಕೆ ಹೋಗುವ ಮುನ್ನ ಯಾವುದೇ ದುರಭ್ಯಾಸವಿಲ್ಲದಿದ್ದರೂ ಪ್ರವಾಸ ಸಂದರ್ಭದಲ್ಲಿ ಮದ್ಯಪಾನ ಬೇಕಾದ ಹಾಗೆ ಮಾಡಿದ್ದು, ಗೋಮಾಂಸ ತಿನ್ನಲೇ ಬೇಕಾಗಿ ಬಂದಾಗ ಏನೋ ಒಂದು ರೀತಿ ಕಳವಳಪಟ್ಟದ್ದು, ವಿಶ್ವಾಮಿತ್ರ ನಾಯಿ ಮಾಂಸ ತಿನ್ನಬೇಕಾಗಿ ಬಂದ ನಿದರ್ಶನದಿಂದ ಅದನ್ನು ಸಮರ್ಥಿಸಿಕೊಳ್ಳುವುದು ಇವೆಲ್ಲವುಗಳ ಪ್ರಾಂಜಲ ನಿರೂಪಣೆಯಿದೆ.

ಹೇಳಿ ಕೇಳಿ ಇದೊಂದು ಶೈಕ್ಷಣಿಕ ಉದ್ದೇಶದ ಪ್ರವಾಸ ಕಥನ. ಸಂಶೋಧನ ಪ್ರಬಂಧ ಮಂಡಿಸುವ ಮತ್ತು ತಮ್ಮ ಪಿಎಚ್‌ಡಿ ವಿಷಯಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹದ ಉದ್ದೇಶದ ಈ ಸಾಹಿತ್ಯಕ ಜೈತ್ರಯಾತ್ರೆಯನ್ನು ನಿರೂಪಿಸುವ ಈ ಗ್ರಂಥದ ಪುಟಪುಟದಲ್ಲಿ ತಮಗೆ ಎದುರಾದ ಸಂದರ್ಭಗಳಲ್ಲಿ ಹೆಜ್ಜೆ ಹೆಜ್ಜೆಗೆ ಇಂಗ್ಲಿಷ್ ಸಾಹಿತ್ಯದ ಖ್ಯಾತನಾಮರ ಕೃತಿಗಳ ಸಾಲು ಸಾಲುಗಳನ್ನು ಸಂದರ್ಭಗಳನ್ನು ನೆನೆಸಿಕೊಂಡು ಉಲ್ಲೇಖಿಸುವ ಕಾರಣದಿಂದ ಸಾಹಿತ್ಯಾಸಕ್ತರಿಗೆ ಈ ಬರಹ ಒಮ್ಮೆಗೇ ಪ್ರಿಯವಾಗಿ ಬಿಡುತ್ತದೆ. ಇನ್ನೊಂದು ಕಾರಣಕ್ಕೂ ಈ ಗ್ರಂಥ ಮಹತ್ವಪೂರ್ಣ ಯಾಕೆಂದರೆ, ಉನ್ನತ ಶಿಕ್ಷಣ ಸಂದರ್ಭಗಳಲ್ಲಿ ಭಾರತದ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಲ್ಲಿರುವ ಪರಿಸ್ಥಿತಿಯೊಂದಿಗೆ ಬ್ರಿಟನ್ನಿನಂಥ ದೇಶಗಳಲ್ಲಿರುವ ಅನುಕೂಲ ಮತ್ತು ದೃಷ್ಟಿಕೋನಗಳ ತುಲನೆ ಹಾಗೂ ಬ್ರಿಟೀಷರು ಭಾರತ ಬಿಟ್ಟು ಹೋಗಿದ್ದರೂ ಭಾರತೀಯ ಮನೋಭಾವದಲ್ಲಿ ರೂಢ ಮೂಲವಾಗಿರುವ ವಹಾಸತುಶಾಹಿ ಮನೋವೃತ್ತಿಯನ್ನು ಕುರಿತ ಪ್ರಸ್ತಾಪ ಒಂದೆರಡನ್ನು ಉಲ್ಲೇಖಿಸಬಹುದು.

ಸ್ವಯಂಚಾಲಿತ ಯಂತ್ರದಲ್ಲಿ ಟಿಕೆಟ್ಟು ಸೇರಿಸಿದ ತಕ್ಷಣ ಸರಳು ಬದಿಗೆ ಸರಿದು ದಾರಿಯಾಗುವ ಬಗ್ಗೆ ಹೇಳುತ್ತ – ಫಾಲೋ ಸಾಫ್ಟ್ ಸೈನ್ಸ್ ಟೆನಿಸನ್ ಕವಿಯ

ಯುಲಿಸಿಸ್ ಕವಿತೆಯ 'ಫಾಲೋ ನಾಲೆಡ್ಜ್ ಲೈಕ್ ಎ ಸಿಂಕಿಂಗ್ ಸ್ಟಾರ್ ಬಿಯಾಂಡ್ ಅಟ್ ಮೋಸ್ಟ್ ಬೌಂಡ್ಸ್ ಆಫ್ ಹ್ಯೂಮನ್ ಥಾಟ್" ಎಂಬ ಸಾಲುಗಳನ್ನು ನೆನಪಿಸಿಕೊಳ್ಳುತ್ತಾರೆ.

ವೆನಿಸ್‌ಗೆ ಪಯಣಿಸುವಾಗ ಮರ್ಚೆಂಟ್ ಆಫ್ ವೆನಿಸ್ ನಾಟಕ ಪಾಠ ಮಾಡುತ್ತಿದ್ದ ಸಂದರ್ಭ ನೆನಪಿಸಿಕೊಳ್ಳುತ್ತಾರೆ. ಅದರಲ್ಲಿ ಬೆಸಾನಿಯೋ ಲಾಯರ್ ವೇಷದಲ್ಲಿದ್ದ ಪೋರ್ಷಿಯಾಳಿಗೆ ಗುರುತಿಗಾಗಿ ಉಂಗುರ ನೀಡಿರುತ್ತಾನೆ. ಆಮೇಲೆ ಪೋರ್ಷಿಯಾ ತನ್ನ ಗಂಡ ಬೆಸಾನಿಯೋ ಜೊತೆ ಮಾತಾಡುವಾಗ ಕಿರಿಕಿರಿ ಪಟ್ಟುಕೊಂಡು "ಯಾವ ರಂಭೆಗೆ ಇಲ್ಲ ಮೇನಕೆಗೆ ನೀಡಿರುವಿ ನೀನು ಆ ಉಂಗುರವನ್ನು ಮರಳಿ ತಾರದೆ ಇದ್ದಲ್ಲಿ ನಾನು ನಿನ್ನೊಂದಿಗೆ ಹಾಸಿಗೆ ಹಂಚಿಕೊಳ್ಳಲಾರೆ" ಎಂದು ಕೂಗಾಡುತ್ತಾಳೆ ಈ ಮಾತು ಬಂದಾಗ. ಪಾಠ ಕೇಳುತ್ತಿದ್ದ ಹುಡುಗಿ "ಸರ್ ಈ ಸಾಲು ನಮ್ಮ ಟೆಕ್ಸ್ಟ ಬುಕ್‌ನಲ್ಲಿಲ್ಲ" ಎಂದರೆ ಇನ್ನೊಂದು ಹುಡುಗ – "ನನ್ನ ಪುಸ್ತಕದಲ್ಲಿದೆ" ಎಂದ. ಹೀಗೆ ಷೇಕ್ಸ್‌ಪಿಯರ್ ನಾಟಕವಫನ್ನು ಮುರಿದು ಕಟ್ಟುವ ಪರಿ ಯಾವಾಗ ಶುರವಾಯಿತೋ ಎನ್ನುತ್ತಾರೆ.

❖

27

ತಂತ್ರಶಾಸ್ತ್ರ ಕುರಿತ ಮಾರ್ಗದರ್ಶಕ ಕೃತಿಗಳು

ವಿಶ್ವ ಸಂಸ್ಕೃತಿಯ ಪ್ರಮುಖ ಭಾಗವೇ ಆದ "ತಂತ್ರವು ಭಾರತೀಯ ತತ್ತ್ವಶಾಸ್ತ್ರದ ಒಂದು ಪ್ರಧಾನ ಅಂಗ. ಹಾಗೆ ನೋಡಿದರೆ, ಮಂತ್ರಗಳು, ದೇವತೆಗಳು, ತೀರ್ಥಗಳು, ಆಶ್ರಮ ಧರ್ಮಗಳು, ಯೋಗ, ಸಸ್ಯ ಸಂಪತ್ತಿನ ಲಕ್ಷಣಗಳು, ಜ್ಯೋತಿಷ್ಯಸಾರ, ಪ್ರಾಚೀನ ಇತಿಹಾಸ, ರಾಜನೀತಿ, ಶಬ್ದನಿಷ್ಪತ್ತಿ, ವ್ಯವಹಾರ ಜ್ಞಾನ, ಆಧ್ಯಾತ್ಮ ವಿದ್ಯೆ ಹೀಗೆ ಬದುಕಿಗೆ ಸಂಬಂಧಿಸಿದ್ದೆಲ್ಲವನ್ನೂ ತಿಳಿಸುವ ಜೀವನ ತಂತ್ರವನ್ನು ತಂತ್ರಶಾಸ್ತ್ರ ಎಂದು ತಿಳಿಯಲಾಗಿದೆ. ಭಾರತದ ಧಾರ್ಮಿಕ ಚರಿತ್ರೆಯಲ್ಲಿ ತಂತ್ರವು ಅತ್ಯಂತ ಪ್ರಭಾವಿಯಾದ ಪಂಥವೆನಿಸಿದೆ.

* ತಂತ್ರದರ್ಶನ, ಡಾ. ಜಿ.ಬಿ. ಹರೀಶ್
ಪುಟಗಳು : 352, ಬೆಲೆ : ರೂ.275

* ತಂತ್ರಶಾಸ್ತ್ರ ಪ್ರವೇಶ
ಇಂಗ್ಲಿಷ್ ಮೂಲ: ಸರ್ ಜಾನ್ ವುಡ್ರೋಫ್, ಅನುವಾದ : ಡಾ. ಜಿ.ಬಿ. ಹರೀಶ್
ಪುಟಗಳು : 144, ಬೆಲೆ : ರೂ.120
ಅಂಕಿತ ಪುಸ್ತಕ
ನಂ. 53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್, ಬಸವನಗುಡಿ, ಬೆಂಗಳೂರು

ಭಾರತದ ಯಾವ ಧರ್ಮವೂ ತಂತ್ರದ ಹಿಡಿತದಿಂದ ಬಿಡಿಸಿಕೊಳ್ಳಲಾಗಿಲ್ಲ. ಅಲ್ಲದೆ ತಂತ್ರಗಳು ಸೆಕ್ಯುಲರ್ ಆದವೆಂದು ಹೇಳಬಹುದು. ಕಾರಣ ಬೌದ್ಧ, ಜೈನ, ಯಹೂದಿ, ಕ್ರಿಶ್ಚಿಯನ್ ಈ ಎಲ್ಲ ಪಂಥಗಳಲ್ಲಿ ತಂತ್ರ ಒಂದಲ್ಲ ಒಂದು ರೂಪದಲ್ಲಿ ಅಸ್ತಿತ್ವದಲ್ಲಿದೆ. ಇಷ್ಟೆಲ್ಲ ಪ್ರಭಾವಿಯಾಗಿದ್ದರೂ, ಬಹುದೇಶ, ಬಹುಧರ್ಮ, ಬಹುಪಂಥ ವ್ಯಾಪಿಯಾಗಿದ್ದ ಗೌರವಕ್ಕೆ ಭಾಜನವಾಗಿದ್ದರೂ ಭಾರತೀಯ ದರ್ಶನದ ಯಾವ ಸಂಗ್ರಹದಲ್ಲೂ ಮಾಧವಾಚಾರ್ಯರ ಸರ್ವದರ್ಶನವೂ ಸೇರಿದಂತೆ ಎಡೆ ಪಡೆದಿಲ್ಲ" ಎಂಬ ಅಸಮಾಧಾನಕ್ಕೆ ಅವಕಾಶವಾಗಿದೆ. ಬಹುಶಃ ಇದಕ್ಕೆ ಕಾರಣ, ತಂತ್ರದ ಬಗ್ಗೆ ಹಬ್ಬಿರುವ ಒಂದು ಅಪಪ್ರಥೆ. "ತಂತ್ರವೆಂದರೆ ಹೆಣ್ಣು, ಹೆಂಡ, ಬೀಭತ್ಸಕರವಾದ, ಭಯವುಂಟು ಮಾಡುವ ಸ್ಮಶಾನ ಸಾಧನೆಗಳನ್ನೊಳಗೊಂಡ ವಾಮಾಚಾರದ ಆರಾಧನಾ ಮಾರ್ಗ" ಎಂಬುದೇ ಆ ಅಪಪ್ರಥೆ.

ಆದರೆ ಇದು ಕೇವಲ ಅಪಪ್ರಥೆ. ವಾಸ್ತವ ಬೇರೆಯೇ ಇದೆ. ತಂತ್ರದಲ್ಲಿ ಪಂಚ'ಮ'ಗಳ ಸಾಧನೆ ಒಂದು ಗಣ್ಯ ಸಾಧನೆ ನಿಜ. ಕಾಪಾಲಿಕರು, ಕೌಳರು ಅದನ್ನೊಂದು ಅತಿಗೆ ಕೊಂಡೊಯ್ದದ್ದೂ ಇದೆ ಆದರೆ ಅದಷ್ಟೇ ತಂತ್ರವಲ್ಲ, ತಂತ್ರಸಾಧನೆ ಮೂಲದಲ್ಲಿ ಅಶ್ಲೀಲವಲ್ಲ. ಇದರ ಹಿಂದಿರುವುದು ಕಾಮದಿಂದಲೇ ಕಾಮವನ್ನು ಗೆಲ್ಲಬೇಕೆಂಬ ತತ್ತ್ವವೇ ಹೊರತು ಮೃಗೀಯ ಕಾಮ ತೃಪ್ತಿ ಇದರ ಉದ್ದೇಶವಲ್ಲ. "ಯೋಗ ಸಾಧನೆಯಿಂದ ಮೂಲಾಧಾರದಲ್ಲಿ ನಿದ್ರಿಸುತ್ತಿರುವ ಆದಿಶಕ್ತಿ ಸ್ವರೂಪಿ ಕುಂಡಲಿನಿಯನ್ನು ಜಾಗ್ರತಗೊಳಿಸಿ ಸ್ವಾಧಿಷ್ಠಾನ, ಮಣಿಪುರ, ವಿಶುದ್ಧಗಳ ಮಾರ್ಗವಾಗಿ ಆಜ್ಞಾ ಸ್ಥಾನ ಮುಟ್ಟಿಸಿ ಸಹಸ್ರಾರದಲ್ಲಿ ಸಂಧಿಸಿ ಪಡೆಯುವ ಷಡೈಶ್ವರ್ಯ ಸಿದ್ಧಿ ತಂತ್ರದ ಗುರಿ". ಶಂಕರ, ರಾಮಾನುಜ, ಮಧ್ವರೇ ಮೊದಲಾದ ಆಚಾರ್ಯತ್ರಯರಿಂದ ಹಿಡಿದು, ಅಭಿನವ ಗುಪ್ತ, ಆಚಾರ್ಯ ರಜನೀಶರಂಥ ಮಹಾನ್ ಭಾರತೀಯ ತತ್ತ್ವವೇತ್ತರಷ್ಟೇ ಅಲ್ಲದೆ, ಸರ್ ಜಾನ್ ವುಡ್ರೋಫ್, ಟೊರೆಲ್ಲಾಸ ಫೀಲೆಯಂಥ ಪಾಶ್ಚಾತ್ಯ ವಿದ್ವಾಂಸರು ಮತ್ತು ಸಾಧಕರು ಇದರ ಬಗ್ಗೆ ವಿಪುಲವಾಗಿ ಬರೆದಿದ್ದಾರೆ. ಅನೇಕ ಮೋಕ್ಷಾಕಾಂಕ್ಷಿಗಳು, ಆತ್ಮಸಾಧಕರು, ಈ ತಂತ್ರದ ಮಾರ್ಗ ಹಿಡಿದು ಸಿದ್ಧಿಯನ್ನು ಪಡೆದುಕೊಂಡಿದ್ದಾರೆ. ಅಲ್ಲಮ, ಅಕ್ಕ, ಅಭಿನವಗುಪ್ತರಂಥ ಪ್ರಾಚೀನರು ಹಾಗಿರಲಿ, ಇಪ್ಪತ್ತನೇ ಶತಮಾನದಲ್ಲಿ ತಂತ್ರವನ್ನು ಉನ್ನತ ನೆಲೆಗೆ ಕೊಂಡೊಯ್ದಂಥ ರಾಮಕೃಷ್ಣರು, ಅರವಿಂದರು, ಓಶೋ ರಜನೀಶರಂಥ ಮಹಾನ್ ಸಾಧಕರಿದ್ದಾರೆ. ರಾಮಕೃಷ್ಣರಂತೂ ತಾಂತ್ರಿಕ ಸಾಧನೆಯ ಮೂಲಕವೇ ನಿರ್ವಿಕಲ್ಪ ಸಮಾಧಿಯನ್ನು ಸಿದ್ಧಿಸಿಕೊಂಡಿದ್ದರು. ಅಷ್ಟೇ ಅಲ್ಲ, ಕೇವಲ

ಸ್ಪರ್ಶ ಮಾತ್ರದಿಂದಲೇ ಅದನ್ನು ಬೇರೆಯವರಿಗೆ ದಾಟಿಸಬಲ್ಲ ಅಪೂರ್ವ ಸಾಮರ್ಥ್ಯ ಹೊಂದಿದ್ದರು. ಅರವಿಂದ ದರ್ಶನ ಕೂಡ ವೇದ ತಂತ್ರಗಳ ಸಮನ್ವಯ.

ತಂತ್ರದ ಬಗೆಗಿನ ಮಿಥ್ಯಾಕಲ್ಪನೆಗಳು, ಅತಿರಂಜಿತ ಕಲ್ಪನೆಗಳು, ಮತ್ತು ಅಪಪ್ರಥೆಗಳನ್ನು ಹೋಗಲಾಡಿಸಿ ಅದರ ಕುರಿತಾಗಿ ಮೇಲೆ ಉಲ್ಲೇಖಿಸಿರುವಂಥ ವಾಸ್ತವಾಂಶಗಳನ್ನು ತಿಳಿಸಿ ಸರಿಯಾದ ಮಾರ್ಗದರ್ಶನ ಮಾಡುವುದೇ ಪ್ರಸ್ತುತ ಗ್ರಂಥಗಳ ಮಹದುದ್ದೇಶ.

"ತಂತ್ರವನ್ನು ಆಧ್ಯಾತ್ಮ ಸಾಧನೆಯ ಶಾಸ್ತ್ರವಾಗಿ, ಮಾನವ ಶಾಸ್ತ್ರದ ಒಂದು ವಿದ್ಯಮಾನವಾಗಿ, ಪ್ರಾಚೀನ ಮತ್ತು ಮಧ್ಯಕಾಲೀನ ವಿಶಅವ ನಾಗರಿಕತೆಗಳ ಅಂಗವಾಗಿ ಅಧ್ಯಯನ ಮಾಡಲು ಸಾಧ್ಯವಾಗುವಂತೆ " (ಪೀಠಿಕೆ ಪು. 10) ಸ್ವತಂತ್ರ, ಅನುವಾದ ಎಲ್ಲ ಸೇರಿ ಬೇರೆ ಬೇರೆ ಲೇಖಕರ ಹದಿನೆಂಟು ಲೇಖನಗಳನ್ನು ತಂತ್ರದರ್ಶನದಲ್ಲಿ ಸಂಕಲಿಸಿಕೊಡಲಾಗಿದೆ. ಪ್ರತಿ ಲೇಖನದ ಪ್ರಾರಂಭದಲ್ಲಿ ಆ ಲೇಖನಕ್ಕೆ ಸಂಬಂಧಿಸಿದಂತೆ ನೀಡಲಾಗಿರುವ ಸಂಪಾದಕೀಯ ಟಿಪ್ಪಣಿಗಳು ಆ ಲೇಖನಗಳನ್ನು ಗ್ರಹಿಸಲು ಓದುಗರಿಗೆ ನೆರವಾಗುತ್ತವೆ. ಲೇಖನಗಳ ಆಯ್ಕೆಯಲ್ಲೂ ಸಂಪಾದಕರ ಕೌಶಲ ಎದ್ದು ಕಾಣುತ್ತದೆ. ಇಂಗ್ಲಿಷ್, ಹಿಂದಿ, ಸಂಸ್ಕೃತದಲ್ಲಿರುವ ತಂತ್ರ ಸಂಬಂಧಿ ಆಧಾರ ಭೂತ ಗ್ರಂಥಗಳನ್ನು ಕುರಿತ ಮೌಲಿಕ ಲೇಖನಗಳಲ್ಲದೆ, ತಂತ್ರದರ್ಶನಕ್ಕೆ ಸಂಬಂಧಿಸಿದ ಕನ್ನಡ, ಇಂಗ್ಲಿಷ್, ಹಿಂದೀ ಭಾಷೆಗಳ ಮೌಲಿಕ ಮತ್ತು ಅನುವಾದಿತ ಲೇಖನಗಳು ಸೇರಿರುವುದು ಗ್ರಂಥದ ಮೌಲ್ಯವನ್ನು ಹೆಚ್ಚಿಸಿವೆ. ಲೇಖಕರೆಲ್ಲ ಈಗಾಗಲೇ ಈ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿದವರು.

'ತಂತ್ರದರ್ಶನ ಮತ್ತು ತಂತ್ರ ಸಂಸ್ಕೃತಿ ಸಂಪ್ರದಾಯಗಳು' ಎಂಬ ಮೊದಲ ಭಾಗದಲ್ಲಿ ತಾಂತ್ರಿಕ ಪಂಥಗಳು ಆರಂಭವಾದ ಬಗೆ, ಅದರಲ್ಲಿರುವ ಬುಡಕಟ್ಟಿನ ಗುಪ್ತ ಸಮಾಜಗಳು, ವೇದ ವಿರೋಧಿ ಗುಪ್ತ ಸಮಾಜಗಳು ಮತ್ತು ವೇದಪರವಾದ ಗುಪ್ತ ಸಮಾಜಗಳು ಎಂಬ ವಿವಿಧ ಧಾರೆಗಳ ವಿಚಾರ, ಭಾರತದ ಬೇರೆ ಬೇರೆ ಬುಡಕಟ್ಟುಗಳಲ್ಲಿ ಅನಾದಿಕಾಲದಿಂದ ಇದ್ದ ಹಾಗೂ ಭಾರತಕ್ಕೆ ಹೊರಗಿನಿಂದ ಬಂದು ಸೇರಿದ ಅನೇಕ ಮಾತೃ ದೇವತೆಗಳನ್ನು ಸಂಸ್ಕೃತದ ಸ್ಮೃತಿ–ಪುರಾಣ–ಆಗಮಗಳಲ್ಲಿ ಶೈವ, ವೈಷ್ಣವ, ಶಾಕ್ತ ದರ್ಶನಗಳ ಚೌಕಟ್ಟಿನೊಳಗೆ ತಂದುಕೊಂಡು ಅವೆಲ್ಲವನ್ನೂ ಒಂದೇ ಶಕ್ತಿಯಾದ ಜಗನ್ಮಾತೆಯ ಗುಣರೂಪಾತ್ಮಕವಾದ ಪ್ರಭೇದಗಳ ರೂಪದಲ್ಲಿ ಕಲ್ಪಿಸಿಕೊಂಡು, ಬಲಿ, ಹೋಮ, ಉತ್ಸವಗಳ ರೂಪ ದಲ್ಲಿ ಪೂಜೆಗೊಳ್ಳುತ್ತ ಬಂದದ್ದು, ರಹಸ್ಯ ತಾಂತ್ರಿಕ ಪಂಥಗಳ ಸಾಧನಾ ವಿಧಾನ ಗಳು, ಕಾಪಾಲಿಕ ಮತ್ತು ನಾಥ ಪಂಥಗಳ ವಿವರಗಳು,

ಶಾಕ್ತ, ತಾಂತ್ರಿಕ ಪಂಥದ ವಿಭಿನ್ನ ಪಂಥಗಳು, ಅದರ ತಾತ್ವಿಕತೆಯ ವಿಸ್ತಾರವಾದ ವಿವೇಚನೆ, ಯೋನಿಪೂಜೆಗೆ ಮೂಲವಾದ 'ಲಜ್ಜಾಗೌರಿ' ಸಂಪ್ರದಾಯದ ವಿವರಗಳು ಇವನ್ನೆಲ್ಲ ಈ ಭಾಗದಲ್ಲಿ ವ್ಯಾಪಕವಾಗಿ ಚರ್ಚಿಸಲಾಗಿದೆ.

ಶೂದ್ರರಿಗೆ ಮತ್ತು ಕೆಳವರ್ಗದವರಿಗೆ ಊರ್ಧ್ವ ಮುಖಚಲನೆಗೆ ಅವಕಾಶ ಮಾಡಿಕೊಟ್ಟ ರೋಚಕ ವಿಚಾರವನ್ನು ಪ್ರೊ. ಕೆ.ಜಿ. ನಾಗರಾಜಪ್ಪನವರ ಲೇಖನ ತಿಳಿಸುತ್ತದೆ. ದೀಕ್ಷೆ ಪಡೆದ ಚಂಡಾಲನು ಗುರುವಾಗಿ ಬ್ರಾಹ್ಮಣನಿಗೆ ದೀಕ್ಷೆ ಕೊಡುವ, ದ್ವಿಜನಿಗಿಂತ ಮುಂಚೆ ದೀಕ್ಷೆ ಪಡೆದ ಅಂತ್ಯಜ ದ್ವಿಜನಿಗಿಂತ ಶ್ರೇಷ್ಠನಾಗಿ, ದ್ವಿಜ ಕನಿಷ್ಠನೆಂದು ಪರಿಗಣಿತವಾಗುವ ಅವಕಾಶ ಒದಗಿಸಿದ ತಾಂತ್ರಿಕ ಪಂಥ ಕ್ರಾಂತಿ ಬೀಜಗಳನ್ನು ಬಿತ್ತಿದ್ದೇ ಅಲ್ಲದೆ, ಸರಳ ತಾಂತ್ರಿಕ ಪೂಜೆ, ಶೂದ್ರರ ಸಂಘಟನೆಗೆ ಸಾಧನವಾಗಿ, ಊಳಿಗ ಮಾನ್ಯ ವ್ಯವಸ್ಥೆ ತಲೆಕೆಳಗಾಗುವ ಭಯ ಹುಟ್ಟಿಸಿದ ರೋಚಕ ಸಂಗತಿಯನ್ನು ಪ್ರೊ. ನಾಗರಾಜಪ್ಪನವರ 'ರಹಸ್ಯ ಪಂಥಗಳು' ಎಂಬ ಅದ್ಭುತ ಲೇಖನ ಬಯಲು ಮಾಡುತ್ತದೆ.

'ತಂತ್ರದ ಆಚಾರ್ಯರು, ಅನುಭಾವಿಗಳು' ಎಂಬ ಎರಡನೇ ಭಾಗದಲ್ಲಿ ಅಭಿನವಗುಪ್ತ ಪಾದರ ಜೀವನ ಮತ್ತು ಕೃತಿಗಳು, ಅಲ್ಲಮ, ಅಕ್ಕರ ತಾಂತ್ರಿಕ ವಚನಗಳು, ಬೌದ್ಧ ಮಹಾಯಾನ ಪಂಥದ ತಾತ್ವಿಕತೆ ಕುರಿತ ಓಶೋ, ಸತ್ಯಕಾಮರ ಬರಹಗಳು ಇವುಗಳನ್ನೊಳಗೊಂಡಿವೆ.

ಮೂರನೇ ಭಾಗವು ಬನ್ನಂಜೆ ಗೋವಿಂದಾಚಾರ್ಯರ ಮಧ್ವರ 'ತಂತ್ರ ಸಾರಸಂಗ್ರಹ'ದ ಅನುವಾದಿತ ಭಾಗ, ಶ್ರೀ ಚಕ್ರ ತಂತ್ರ ಕುರಿತ ಪ್ರೊ. ಎಸ್.ಕೆ. ರಾಮಚಂದ್ರರಾಯರ ಲೇಖನ, ತಂತ್ರದ – ದಕ್ಷಿಣ, ವಾಮ, ಶುದ್ಧವೇ ಮೊದಲಾದ ಕೆಲವು ಪರಿಕಲ್ಪನೆಗಳಿಗೂ ಮನಶ್ಶಾಸ್ತ್ರದ ಸತ್ವ, ರಜಸ್, ತಮೋಗುಣಗಳಿಗೂ ಇರುವ ಸಂಬಂಧಾಂತರಗಳನ್ನು ಶೋಧಿಸಿ ನೋಡುವ ಮೀರಾಚಕ್ರವರ್ತಿಯವರ ಲೇಖನ, 'ಸ್ವಚ್ಛಂದ ತಂತ್ರ'ವೆಂಬ ಗ್ರಂಥಕ್ಕೆ ಪೀಠಿಕಾ ರೂಪದಲ್ಲಿ ಪ್ರೊ. ಮಲ್ಲೇಪುರಂ ವೆಂಕಟೇಶ್ ಅವರು ಬರೆದ ಲೇಖನ ಹಾಗೂ 'ದೇಹವೇ ದೇವಾಲಯವೆಂಬ' ವಚನಕಾರರ ಪರಿಕಲ್ಪನೆಗೆ ಸಿದ್ಧರ ತಂತ್ರವೇ ಮೂಲವೆಂದು ಚರ್ಚಿಸುವ ಡಾ. ಬಸವರಾಜ ಕಲ್ಗುಡಿಯವರ ಲೇಖನಗಳನ್ನೊಳಗೊಂಡಿದೆ.

ತಂತ್ರ ದರ್ಶನಕ್ಕೆ ಸಂಬಂಧಿಸಿದ ವಿವಿಧ ವಿಚಾರಗಳನ್ನು ಒಂದೆಡೆ ಸಂಕಲಿಸಿಕೊಟ್ಟು, ಅವುಗಳ ಗ್ರಹಿಕೆಗೆ ಅಗತ್ಯವೆನಿಸಿದ ಉದ್ಬೋಧಕವಾದ ಪೀಠಿಕೆ, ಪರಾಮರ್ಶನ ಗ್ರಂಥಗಳನ್ನೊಳಗೊಂಡ ಅನುಬಂಧಗಳ ಜೊತೆಗೆ ತಂತ್ರ ದರ್ಶನಕ್ಕೆ ಸಂಬಂಧಿಸಿದ

ಅಪೂರ್ವವೂ ಸುಂದರವೂ ಆದ ಚಿತ್ರ ಸಂಪುಟಗಳಿಂದ ಕೂಡಿರುವ ಕಾರಣದಿಂದಾಗಿ ಇಡೀ ಗ್ರಂಥ ತಂತ್ರ ಸಾಹಿತ್ಯದ ಕುತೂಹಲಿಗಳಿಗೂ ಅಧ್ಯಯನಾಕಾಂಕ್ಷಿಗಳಿಗೂ ಉಪಯುಕ್ತ ಗ್ರಂಥವೆನಿಸಿದೆ.

ತಂತ್ರ ಶಾಸ್ತ್ರದಲ್ಲಿ ಅಪಾರವಾದ ಆಸಕ್ತಿ ತಾಳಿ, ಶ್ರದ್ಧೆಯಿಂದ ಅಧ್ಯಯನ ಮಾಡಿ ಹಲವಾರು ತಂತ್ರ ಗ್ರಂಥಗಳನ್ನು ಇಂಗ್ಲೀಷಿನಲ್ಲಿ ರಚಿಸಿದ ಮಹಾನ್ ಆಂಗ್ಲ ವಿದ್ವಾಂಸ ಜಾನ್‌ವುಡ್ರೋಫ್‌ರ 'ಇಂಟ್ರೊಡಕ್ಷನ್ ಟು ತಂತ್ರ ಶಾಸ್ತ್ರ' ಗ್ರಂಥದ ಅನುವಾದವೇ 'ತಂತ್ರಶಾಸ್ತ್ರ ಪ್ರವೇಶ'. ಪಾಶ್ಚಾತ್ಯರಾಗಿದ್ದು ಇಂಥ ವಿಷಯದ ಗ್ರಂಥ ರಚಿಸುವಲ್ಲಿ ಅವರಿಗಿದ್ದ ಅಗಾಧ ಆಸಕ್ತಿ, ಪರಿಶ್ರಮಗಳನ್ನು ನೆನೆದರೇ ಆಶ್ಚರ್ಯ, ಆನಂದಗಳ ಜೊತೆಗೆ ಕೃತಜ್ಞತೆ ಉಂಟಾಗುತ್ತದೆ.

ವಿಷಯವೇ ಅತ್ಯಂತ ಜಟಿಲವೂ ಸಂಕೀರ್ಣವೂ ಆದದ್ದು. ಅಂಥದ್ದರಲ್ಲಿ ಆಂಗ್ಲ ಭಾಷೆಯಿಂದ ಅನುವಾದಿಸುವುದು ತೀರ ಶ್ರಮಸಾಧ್ಯವಾದದ್ದು. ಆದರೆ ಪ್ರಸ್ತುತ ಕೃತಿ, ಮೂಲ ಲೇಖಕರೇ ಕನ್ನಡದಲ್ಲಿ ಬರೆದಿದ್ದರೆ ಹೇಗೆ ಬರೆಯಬಹುದಿತ್ತೋ ಅಷ್ಟರಮಟ್ಟಿಗೆ ಅತ್ಯಂತ ಸಹಜವಾಗಿ, ಸರಳವಾಗಿ, ಆಪ್ತವಾಗಿ ಕನ್ನಡದಲ್ಲಿ ಆಕಾರ ತಾಳಿಬಂದಿದೆ. ತಂತ್ರಕ್ಕೆ ಸಂಬಂಧಿಸಿದ ಪ್ರಮುಖ ವಿಚಾರಗಳನ್ನೆಲ್ಲ ಆಧಾರಪೂರ್ವಕವಾಗಿ 21 ಶೀರ್ಷಿಕೆಗಳಲ್ಲಿ ಮಂಡಿಸಿರುವ ರೀತಿ ಮೆಚ್ಚುವಂಥದ್ದಾಗಿದೆ. ಅನುವಾದಕರು ಆಶಿಸಿದಂತೆ ವುಡ್ರೋಫ್ ಅವರ ಈ ಅನುವಾದಿತ ಕೃತಿ, "ನಾವು ಕಳೆದುಕೊಂಡಿರುವ ಸಾಂಸ್ಕೃತಿಕತೆ ಬೆರೆತ ಆಧ್ಯಾತ್ಮಿಕ ಆಯಾಮವನ್ನು ತೆರೆದಿಡುವಲ್ಲಿ" ಒಂದು ಯಶಸ್ವೀ ಉಪಕ್ರಮ ವಾದೀತೆಂದು ನಿರೀಕ್ಷಿಸಬಹುದಾಗಿದೆ.

ಒಟ್ಟಾರೆ ಹೇಳಬೇಕೆಂದರೆ, ತಂತ್ರಶಾಸ್ತ್ರದ ಅಭ್ಯಾಸಿಗಳಿಗೆ ಸಮರ್ಥ ರೀತಿಯಲ್ಲಿ ಮಾರ್ಗದರ್ಶನ ಮಾಡುವಂಥ ಈ ಸಂಪಾದಿತ ಹಾಗೂ ಅನುವಾದಿತ ಕೃತಿಗಳನ್ನು ನೀಡಿದ ಲೇಖಕರು ಹಾಗೂ ಪ್ರಕಾಶಕರು ಅಭಿನಂದನಾರ್ಹರು.

❖

28

ವಿಡಂಬನ ಬರಹಗಳು – ಕಥೆಗಳು

ನುವಾದ ಇಂದು ಬರಹದ ಅತ್ಯಂತ ಅನಿವಾರ್ಯ ಅಗತ್ಯವಾಗಿದೆ. Nothing moves without translation (ಅನುವಾದ ಹೊರತು ಮುಂದೆ ಮಾತೇ ಇಲ್ಲ) ಎಂಬುದು ಇಂದಿನ ಮಂತ್ರವಾಗಿದೆ. ವಿಶ್ವದ ಬೇರೆ ಬೇರೆ ದೇಶದ ಬೇರೆ ಬೇರೆ ಭಾಷೆಗಳ ಸಾಹಿತ್ಯದ ಪರಿಚಯ ನಮಗೆ ಅನುವಾದದ ಮುಖಾಂತರವೇ ಆಗಬೇಕು. ಅನುವಾದದಿಂದಾಗಿಯೇ ಒಂದು ಭಾಷೆಯಲ್ಲಿ ಅದುವರೆಗೆ ಇರದೇ ಇದ್ದ ಸಾಹಿತ್ಯದ ಹೊಸ ಪ್ರಕಾರ ಪ್ರಾರಂಭವಾಗಬಹುದು. ಹೊಸ ರಕ್ತ ಬರಬಹುದು. ಇದಕ್ಕೆಲ್ಲಾ ಬೇಕಾದಷ್ಟು ಉದಾಹರಣೆ

* ಚರ್ಚಿತ ವ್ಯಂಗ್ಯಕಥೆಗಳು
ಮೂಲ ಹಿಂದಿ ಲೇಖಕರು : ಜ್ಞಾನ್ ಚತುರ್ವೇದಿ
ಪುಟಗಳು: 184 ಬೆಲೆ : 170
* ಒಂದಿಷ್ಟು ಭಾರತೀಯ ಕಥೆಗಳು
ಮೂಲ : ವಿವಿಧ ಭಾಷಾ ಲೇಖಕರು
ಪುಟಗಳು : 208 ಬೆಲೆ : 185 ರೂ.
ಡಿ.ಎನ್.ಶ್ರೀನಾಥ್, ಪ್ರಿಸಂ ಬುಕ್ಸ್ ಪ್ರೈ.ಲಿ.
ನಂ.1865, 32ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 70.

ಗಳಿವೆ. ಇನ್ನು ಬಹುಭಾಷೆ, ಬಹು ಸಂಸ್ಕೃತಿಗಳಿಂದ ಕೂಡಿರುವ ಭಾರತದ ಪರಿಸರದಲ್ಲಿ ನಾವು ನಮ್ಮ ನೆರೆಹೊರೆಯ ಭಾಷಾ ಸಾಹಿತ್ಯದ ಪರಿಚಯವನ್ನು, ಅಲ್ಲಿಯ ಬದಲಾವಣೆಗಳನ್ನು ಅನುವಾದದ ಮೂಲಕವೇ ಮಾಡಿಕೊಳ್ಳಬೇಕಾಗಿದೆ.

ಕಳೆದ ನಾಲ್ಕು ದಶಕಗಳಿಂದ ಹಿಂದಿಯಿಂದ ನಿರಂತರವಾಗಿ ವಿಪುಲವಾಗಿ ಅನುವಾದ ಮಾಡುತ್ತ ಬಂದಿರುವ ಬರಹಗಾರ ಶ್ರೀ ಡಿ.ಎನ್.ಶ್ರೀನಾಥ್. ಅವರ ಅನುವಾದಗಳಲ್ಲಿ ಕಥೆ, ಕಾದಂಬರಿ, ನಾಟಕ ಮತ್ತು ವಿಡಂಬನ ಬರಹಗಳೇ ಹೆಚ್ಚಾಗಿದ್ದರೂ, ವಿರಳವಾಗಿಯಾದರೂ ಕವನಗಳನ್ನು ಅನುವಾದಿಸಿ ದ್ದಾರೆ. ಪ್ರಸ್ತುತ 4 ಎರಡು ಪುಸ್ತಕಗಳು ಕ್ರಮವಾಗಿ ವಿಡಂಬನ ಬರಹಗಳು ಮತ್ತು ಭಾರತೀಯ ಕಥೆಗಳನ್ನು ಒಳಗೊಂಡಿವೆ.

ಚರ್ಚಿತ ವ್ಯಂಗ್ಯ ಕಥೆಗಳು– ಖ್ಯಾತ ಹಿಂದೀ ವ್ಯಂಗ್ಯ ಬರಹಗಾರ ಜ್ಞಾನ್ ಚತುರ್ವೇದಿಯವರ ಐವತ್ತು ವ್ಯಂಗ್ಯ ಬರಹಗಳ ಕನ್ನಡ ರೂಪಗಳು. ಚತುರ್ವೇದಿ ಅವರ ವ್ಯಂಗ್ಯ ಬರಹಗಳು ನಗೆಯನ್ನು ಚಿಮ್ಮಿಸುವುದಷ್ಟಕ್ಕೇ ವಿರಮಿಸದೆ, ಚಿಂತನೆಗೂ ಹಹಚ್ಚುವಂಥವಾಗಿರುವುದೇ ಅವುಗಳ ವೈಶಿಷ್ಟ್ಯ. ಇಲ್ಲಿಯ ಬರಹಗಳು ಮುಖ್ಯವಾಗಿ ರಾಜಕೀಯಕ್ಕೆ ಸಂಬಂಧಿಸಿದವಾದರೂ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಸಂಗತಿಗಳಿಗೆ ಸಂಬಂಧಿಸಿದ ಲೇಖನಗಳನ್ನು ಒಳಗೊಂಡಿವೆ. ಇಲ್ಲಿಯ ವ್ಯಂಗ್ಯ ರಚನೆಗಳು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ, ಅಂಕುಡೊಂಕುಗಳಿಗೆ ಕನ್ನಡಿ ಹಿಡಿಯುವ ಪ್ರಯತ್ನ ಮಾಡುತ್ತಲೇ ಅವುಗಳಲ್ಲಿರುವ ವಿಸಂಗತಿಗಳು, ವಕ್ರತೆಗಳನ್ನು ಹರಿತವಾದ ಮಾತಿನ ಮುಖಾಂತರ ಢಾಳವಾಗಿ ಚಿತ್ರಿಸುತ್ತ ಹೋಗುತ್ತದೆ. ನಮ್ಮ ದೇಶದ ದುರಂತವೆಂದರೆ, ನಮ್ಮಲ್ಲಿರುವ ವಾಸ್ತವ ಸಂಗತಿಗಳನ್ನು ಅವು ಇರುವಂತೆಯೇ ಮುಂದಿಟ್ಟು ಬಿಟ್ಟರೂ, ಅದೇ ವ್ಯಂಗ್ಯವಾಗಿಬಿಡುವುದು. ಅಂದರೆ ವ್ಯಂಗ್ಯವಾಗಬೇಕಾದದ್ದೇ ವಾಸ್ತವವಾಗಿ ಬಿಟ್ಟಿರುವುದು. ಲೇಖಕನ ಕೆಲಸವೇನಿದ್ದರೂ ಅದನ್ನು ಹರಿತವಾದ ರೀತಿಯಲ್ಲಿ ವಕ್ರಭಾಷೆಯಲ್ಲಿ ಪ್ರಸ್ತುತಪಡಿಸುವುದು.

ಇಲ್ಲಿಯ ಬರಹಗಳಲ್ಲಿ ಬಹಳ ತೀವ್ರವಾಗಿ ಮತ್ತೆ ಮತ್ತೆ ವ್ಯಂಗ್ಯಕ್ಕೆ ಗುರಿಯಾಗಿರುವ ವಿಷಯಗಳು ಭಾರತದಲ್ಲಿ ತೀರ ಕೆಳಹಂತದಿಂದ ಅತ್ಯುನ್ನತ ಹಂತದವರೆಗೂ ಅಧಿಕಾರಿಗಳು, ರಾಜಕೀಯಸ್ಥರ ಹಂತಗಳಲ್ಲಿ ತಾನೇತಾನಾಗಿ ತಾಂಡವವಾಡುತ್ತಿರುವ ಭ್ರಷ್ಟಾಚಾರ, ಲಂಚಗುಳಿತನ; ಭಾರತದ ಅಧಿಕಾರಶಾಹಿಯ ಭಾನಸ, ಬೇಜವಾಬ್ದಾರಿ, ಸ್ವಾರ್ಥ ಬಡಕ ಪ್ರವೃತ್ತಿ, ಭಾರತದಲ್ಲಿ ಪ್ರಜಾಪ್ರಭುತ್ವ ಹಿಡಿದಿರುವ ಅಡ್ಡದಾರಿ, ಅವಕಾಶವಾದಿ, ಪಕ್ಷ ರಾಜಕೀಯದ ದುಃಸ್ಥಿತಿ, ಸಂವಿಧಾನದಲ್ಲಿ ಉಕ್ತವಾಗಿರುವ ಜಾತ್ಯತೀತತೆ, ಧಾರ್ಮಿಕರೆನಿಸಿಕೊಂಡವರಿಂದ, ರಾಜಕೀಯಸ್ಥರಿಂದ ಲೇವಡಿಗೀಡಾಗುತ್ತಿರುವ ಸಂಗತಿ,

ಕಾನೂನುಗಳ ಜಟಿಲತೆ, ಸಾಹಿತಿಗಳೆನಿಸಿಕೊಂಡವರ ಹಿಪಾಕ್ರಸಿ, ನಗರ ಜೀವನದ ಟ್ರಾಫಿಕ್ ವ್ಯವಸ್ಥೆ, ತೆಳುವಾಗುತ್ತಿರುವ ಮನುಷ್ಯ ಸಂಬಂಧಗಳು, ಮಾನವ ಸಂವೇದನೆಗಳನ್ನೇ ನೀಗಿಕೊಂಡ ನಾಗರಿಕ ಜನ ಸಮುದಾಯ, ಕ್ರಾಂತಿಯ ಮಂತ್ರ ಜಪಿಸುವ ಮಿಥ್ಯಾಕ್ರಾಂತಿಕಾರಿಗಳು ಇವುಗಳು. ಇದರ ಜೊತೆ ಜೊತೆಗೇ ಸಂದರ್ಭ ಸಿಕ್ಕಿದಾಗಲೆಲ್ಲ, ಸಾಮಾಜಿಕ ಅನ್ಯಾಯಗಳು, ವಿಷಮತೆಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತಾರೆ.

ಭ್ರಷ್ಟಾಚಾರದ ತೀವ್ರತೆ ಭಾರತೀಯ ಸಮಾಜವನ್ನು, ಅಧಿಕಾರಶಾಹಿಯನ್ನು ಎಷ್ಟು ವ್ಯಾಪಿಸಿದೆಯೆಂದರೆ, ಅಣ್ಣಾ ಹಜಾರೆ ಭ್ರಷ್ಟಾಚಾರ ವಿರೋಧಿ ಆಂದೋಳನದ ಪರಿಣಾಮವಾಗಿ ಹತ್ತು ಸಾವಿರ ಲಂಚ ತೆಗೆದುಕೊಳ್ಳುತ್ತಿದ್ದ ಅಧಿಕಾರಿ ತನ್ನ ರೇಟು ಇಳಿಸಿದ ಪ್ರಯುಕ್ತ ಎರಡು ಸಾವಿರ ವಾಪಸ್ ಕೊಡುತ್ತಾನೆ. ಕೊಡೋದನ್ನು ನೀವಾಗೇ ಕೊಟ್ಟು ಹೋಗಿ ಎಂದು ಹೇಳುತ್ತಾನೆ. ಜನವೂ ಎಂಥ ಒಳ್ಳೆ ಅಧಿಕಾರಿ ಎಂದು ಸಂತೋಷವಾಗಿ, ಲಂಚ ಕೊಡುವುದನ್ನು ಕರ್ತವ್ಯ ಎಂದು ತಿಳಿದು ಕೊಟ್ಟುಹೋಗುತ್ತಾರೆ. ಅಣ್ಣಾ ಚಳವಳಿಯಲ್ಲಿ ಪಾಲ್ಗೊಂಡಿದ್ದ ಅಧಿಕಾರಿ ಹಾಕಿಕೊಂಡ ಬ್ಯಾಡ್ಜ್‌ನ ಪಿನ್ ತೆಗೆಯುವಾಗ ಜೇಬಿನಲ್ಲಿದ್ದ ಲಂಚದ ನೋಟುಗಳು ಹರಿದು ಹೋಗುತ್ತವೆ! (ಭ್ರಷ್ಟಾಚಾರದ ಮೂರು ಮುಖಗಳು) ಹಾಗೆಯೇ 'ದಯವಿಟ್ಟು ನಂಬಿಕೆಯನ್ನೇ ಕಾಯ್ದುಕೊಳ್ಳಿ' ಎಂಬ ಲೇಖನದಲ್ಲಿ ಕೆಳಗಿನ ನೌಕರರು, ಅಧಿಕಾರಿ, ಪೊಲೀಸರು ಜಡ್ಜಿಗಳು ಎಲ್ಲರೂ ಲಂಚದ ಆಕ್ಟೋಪಸ್ ಹಿಡಿತದಲ್ಲಿ ಸಿಕ್ಕಿರುವವರೇ. ಅಧಿಕಾರಿಯ ಬಳಿಗೆ ಹೋಗಬೇಕೆಂದರೆ ಲಂಚದೊಂದಿಗೇ ಹೋಗಬೇಕೆಂಬುದು ಅಲಿಖಿತ ನಿಯಮ.

'ಶಿಫಾರಸ್ ಮಹಿಮೆ', 'ಶಿಫಾರಸ್ ಪ್ರೇಮಪತ್ರಗಳು', 'ಶ್ರದ್ಧಾಂಜಲಿ ಪ್ರೇಮಿಗಳು', ಇವು ತುಂಬ ನಗೆಯುಕ್ಕಿಸುವ ಬರಹಗಳು. ಆದರೆ ಕಟು ವಾಸ್ತವದ ಬರಹಗಳು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧಿ, ಚರಖಾ ಇವೆಲ್ಲ ತೀರಾ ಅಪರಿಚಿತ ಸಂಗತಿಗಳು. ಸ್ವತಃ

ಗಾಂಧಿಯೇ ಜೀವಂತವಾಗಿ ಬಂದರೂ ಅವರು ಅನಪೇಕ್ಷಿತ ವ್ಯಕ್ತಿ ಅಷ್ಟೇ ಅಲ್ಲ ನಿವಾರಿಸಬೇಕಾದ ವ್ಯಕ್ತಿ ಪರಿಹಾರಕ್ಕೆ ಮೊದಲು 'ಬಿದ್ದಿದ್ದರೆ ಏಳ್ತಾನೆ ' ಈ ಬರಹಗಳಲ್ಲಿ ಸ್ವಾರ್ಥಿ ಅಧಿಕಾರಿಗಳ ಹಾಗೂ ಒಟ್ಟಾರೆ ಜನರ ಮಿತಿಮೀರಿದ ಸ್ವಾರ್ಥ, ಸಂವೇದನಾರಾಹಿತ್ಯ, ಜನರ ಜೀವಕ್ಕೆ ಸಂಕಷ್ಟಗಳಿಗೆ ಕವಡೆ ಕಿಮ್ಮತ್ತೂ ಕೊಡದ, ಯಾರೂ ಸತ್ತರೂ ಅದರ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದೆ, ಮನುಷ್ಯನ ಸಾವನ್ನು ನಗೆಚಾಟಿಕೆಯಲ್ಲೇ ತೇಲಿಸಿಬಿಡುವ ಪ್ರವೃತ್ತಿಯನ್ನು ವಿಡಂಬಿಸಲಾಗಿದೆ. 'ಮುಳುಗುವ ದೋಣಿಯಲ್ಲಿ ಅಧಿಕಾರಿ'ಯಲ್ಲೂ, ಅಧಿಕಾರಶಾಹಿಯ ಜಡತ್ವ, ಮೂರ್ಖತನ, ಷಠತನ,

ವಾಸ್ತವಕ್ಕೆ ಕುರುಡಾಗಿದ್ದು ಹೇಗೆ ಅಧಿಕಾರ ಗ್ರಹಗ್ರಸ್ತವಾಗಿರುತ್ತದೆಂಬುದರ ವಿಡಂಬನಾತ್ಮಕ ಚಿತ್ರವಿದೆ (ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸ್ವಾಮಿನಿಷ್ಠೆ, ಶ್ವಾನ ನಿಷ್ಠೆಯಾಗಿಬಿಟ್ಟಿರುವ ತಮ್ಮ ಪಕ್ಷದ ವರಿಷ್ಠರಿಗೆ ಬಾಲವಲ್ಲಾಡಿಸುತ್ತ, ವಿರೋಧಿ ನಾಯಕರುಗಳ ವಿರುದ್ಧ ಬೊಗಳುವ, ಪ್ರಾಮಾಣಿಕತೆಯನ್ನು ಮರೆತು ರಾಜಕೀಯ ಮಾಡಬೇಕೆಂಬುದನ್ನೇ ಮಂತ್ರವಾಗಿ ಮಾಡಿಕೊಂಡಿರುವ ಭಾರತೀಯ ಪ್ರಜಾಪ್ರಭುತ್ವದ ಪಕ್ಷ ರಾಜಕಾರಣವನ್ನು ಕಟು ವಿಡಂಬನೆಗೆ ಗುರಿ ಮಾಡಲಾಗಿದೆ. ರಾಜಕೀಯ, ನಾಯಿಗಳು, ಚುನಾವಣೆ ಮತ್ತು ಮುಖ್ಯಮಂತ್ರಿಗಳು, ಪ್ರಜಾಪ್ರಭುತ್ವದಲ್ಲಿ ದಾಳಿ, ನಾನು ಮತ್ತು ಮೇಕೆ ಕೆಲವು ಕುರಿ ಕಥೆಗಳೂ– ಹೀಗೆ ಈ ವಿಡಂಬನ ಬರಹಗಳು ನಗೆ ಉಕ್ಕಿಸುತ್ತಲೇ, ನಮ್ಮ ರೋಗಗ್ರಸ್ತ ಸಮಾಜಕ್ಕೆ ಭೇಷಜವೂ ಆಗುವ ಸತ್ವ ಹೊಂದಿರುವ ಯಶಸ್ವೀ ವಿಡಂಬನ ಬರಹಗಳಾಗಿವೆ.

'ಒಂದಿಷ್ಟು ಭಾರತೀಯ ಕಥೆಗಳು' ಭಾರತದ ಇಪ್ಪತ್ತೆರಡು ಭಾಷೆಗಳ ಇಪ್ಪತ್ತನಾಲ್ಕು ಕಥೆಗಳ ಸಂಕಲನ. ಭಾರತದಷ್ಟು ವಿಪುಲ ಸಂಖ್ಯೆಯ ಭಾಷೆಗಳಿಂದ ಹೂಡಿದ ದೇಶ ಬಹುಶಃ ಜಗತ್ತಿನಲ್ಲಿ ಇನ್ನೊಂದು ಇಲ್ಲವೇನೋ ಎನಿಸುತ್ತದೆ (ರಷ್ಯಾ ವಿಘಟನೆಯ ನಂತರ). ಇನ್ನು ಸಂಸ್ಕೃತಿ, ಜೀವನದ ರೀತಿಗಳಿಂದಂತೂ ಅತ್ಯಂತ ವೈವಿಧ್ಯಮಯವಾದ ದೇಶ. ಆದರೆ ವಿಚಿತ್ರವೆಂದರೆ, ನಮ್ಮ ನೆರೆಯ ಪ್ರಾಂತ್ಯಗಳ ಭಾಷಾ ಸಾಹಿತ್ಯಗಳಲ್ಲಾಗುತ್ತಿರುವ ಬದಲಾವಣೆಗಳಾಗಲಿ, ಅಲ್ಲಿಯ ವೈಶಿಷ್ಟ್ಯಗಳಾಗಲಿ ನಮಗೆ ಅಪರಿಚಿತವಾಗಿಯೇ ಉಳಿದುಬಿಡುತ್ತವೆ. ಹಿಂದಿ, ತಮಿಳು, ತೆಲುಗು, ಮರಾಠಿ, ಮಲಯಾಳ ಮುಂತಾದ ಭಾಷೆಗಳಲ್ಲಿಯ ಸಾಹಿತ್ಯದ ಯಾವುದೋ ಒಂದೆರಡು ಪ್ರಕಾರಗಳು ಆಯಾ ಭಾಷೆಗಳಿಂದ ನೇರವಾಗಿ ಕನ್ನಡಕ್ಕೆ ಅನುವಾದಿತವಾಗಿ ಬರಬಹುದೇನೋ. ಇನ್ನುಳಿದ ಅಸ್ಸಾಮಿ, ಒರಿಯ, ಬಂಗಾಳಿ, ಕಾಶ್ಮೀರಿ, ಪಂಜಾಬಿ, ಸಿಂಧಿ, ಡೋಗ್ರಿ, ಬೋಡೋ ಮುಂತಾದ ಭಾಷೆಗಳ ಸಾಹಿತ್ಯ ನಮಗೆ ಇಂಗ್ಲಿಷಿನ ಮೂಲಕವಾಗಿಯೇ ಬರಬೇಕು ಎನ್ನುವಂತಾಗಿದೆ.

ಇಂಥ ಪರಿಸ್ಥಿತಿಯಲ್ಲಿ 22 ಭಾಷೆಗಳಿಂದ ಆಯ್ದ 24 ಕತೆಗಳನ್ನು ಹಿಂದಿ ಮಾಧ್ಯಮದಿಂದ ಶ್ರೀನಾಥ್ ಅವರು ಅನುವಾದಿಸಿಕೊಡುತ್ತಿರುವುದು ಸ್ವಾಗತಾರ್ಹ. ಅನುವಾದದ ಅನುವಾದವೆನಿಸಿದರೂ, ಇಂಗ್ಲಿಷಿನಿಂದ ಅನುವಾದಿತವಾದಾಗಿಗಿಂತ ಭಾರತೀಯ ಪರಿಸರದ ಭಾಷೆಯಿಂದ, ಭಾರತೀಯ ಪರಿಸರದ ಭಾಷೆಯಾದ ಹಿಂದಿಗೆ ಅನುವಾದಿತಗೊಂಡ ಕಥೆ ಕನ್ನಡಕ್ಕಿಳಿದು ಬಂದಾಗ, ತನ್ನ ಮೂಲ ಸತ್ವವನ್ನು ಅಷ್ಟೇನೂ ಕಳೆದುಕೊಂಡಿರುವುದಿಲ್ಲವೆಂದು ನಂಬಬಹುದು. ಆ ದೃಷ್ಟಿಯಿಂದ ಇದು ಸ್ವಾಗತಾರ್ಹ. ಬಹಳ ವರ್ಷಗಳ ಹಿಂದೆ, ಹ.ಕಾ.ರಾಜೇಗೌಡರು, 'ಕಥಾ ಭಾರತೀ' ಎಂಬ ಸಂಕಲನದಲ್ಲಿ

ಇಂಥದೊಂದು ಪ್ರಯತ್ನ ನಡೆಸಿದ್ದರು. ಈ ಮಧ್ಯೆಯೂ ಇನ್ನೂ ಕೆಲವು ಸಂಕಲನಗಳು ಬಂದಿವೆಯಾದರೂ, ಇಷ್ಟೊಂದು ಹೆಚ್ಚಿನ ಸಂಖ್ಯೆಯ ಭಾರತೀಯ ಭಾಷೆಗಳಿಂದ ಅನುವಾದಗಳು ಬಂದಿರಲಿಲ್ಲ.

ಕಥೆಗಳನ್ನು ಓದಿದಾಗ ಡಾ.ರಾಧಾಕೃಷ್ಣನ್ ಅವರು ಬಹಳ ಹಿಂದೆಯೇ ಹೇಳಿದ `Indian literature is one written in many languages' ಎಂಬ ಮಾತು ನೆನಪಾಗುತ್ತದೆ. ಭಾರತದ ಜನವರ್ಗದ ಮೂಲಭೂತ ಸಮಸ್ಯೆಗಳು ದೃಷ್ಟಿಕೋನಗಳು, ಆಶೋತ್ತರಗಳು, ನಂಬಿಕೆಗಳು, ಬದುಕಿನ ರೀತಿಗಳು, ಜೀವನ ಶೈಲಿಗಳು ಎಷ್ಟೆಲ್ಲ ನಿಕಟವಾಗಿವೆ ಎಂಬುದರ ಜೊತೆ ಜೊತೆಗೇ ಅದರ ವೈವಿಧ್ಯತೆ ಸಂಕೀರ್ಣತೆಗಳ ಚಿತ್ರಗಳನ್ನು ಇಲ್ಲಿಯ ಕಥೆಗಳಲ್ಲಿ ನಾವು ಕಂಡುಕೊಳ್ಳಬಹುದು.

ವಿಕ್ಷಿಪ್ತ ಮನಸ್ಸಿನ ಇಬ್ಬರು ಕಲಾಕಾರರ– ಒಬ್ಬ ಚಿತ್ರಕಾರ ಇನ್ನೊಬ್ಬ ಛಾಯಾಗ್ರಾಹಕ– ಬದುಕಿನ ವೈಚಿತ್ರ್ಯಗಳನ್ನು ದಾಖಲಿಸುವ ಅಸ್ಸಾಮೀ ಕತೆ– 'ಪಾಚೂಗೋಪಾಲ ಜೀವ ಬಿಟ್ಟದ್ದು ಹೀಗೆ'ಯಲ್ಲಿ ತನ್ನ ಹೊಟ್ಟೆ ಪಾಡಿನ ಉದ್ಯೋಗ ಉಳಿಸಿಕೊಳ್ಳುವುದರ ಎದುರು ಮಿತ್ರನ ಬದುಕು ಹೇಗೆ ನಗಣ್ಯವಾಗುತ್ತದೆ ಎಂಬುದರ ಚಿತ್ರವಿದ್ದರೆ, ಅದೇ ಸಂತಾಲೀಕತೆ 'ಗೋಧಿನಾಗರ'ದಲ್ಲಿ ರಾಜಕೀಯ ಪ್ರಾಬಲ್ಯ ಇರುವ ಮನುಷ್ಯ, ಸ್ನೇಹ, ವಿಶ್ವಾಸ, ಅಂತಃಕರಣ ಎಲ್ಲ ಬದಿಗೊತ್ತಿ, ತನ್ನ ಸ್ವಾರ್ಥಕ್ಕೋಸ್ಕರ ತಾನು ಹೂಡಿದ ಕೊಲೆ ಸಂಚಿನ ಆಪಾದನೆ ಹೊತ್ತು ಜೈಲು ಸೇರುವಂತೆ ಮಾಡಿ, ತಾನು ಮಾತ್ರ ನಿರಾಳವಾಗಿದ್ದು ಬಿಡುವ ಚಿತ್ರವಿದೆ.

ಕಾಲ ಸರಿದಂತೆ, ಮನುಷ್ಯ ಸಂಬಂಧಗಳು, ತೀರಾ ಯಾಂತ್ರೀಕೃತವಾಗುತ್ತಿರುವುದರ ತಲ್ಲಣದ ಚಿತ್ರವನ್ನು ವಿಸ್ಮಯದ ರೂಪಕದ ಮೂಲಕ ನೀಡುವ ಬಂಗಾಳಿಕತೆ– "ಜಾಗರೂಕತೆಯ ರೂಪಕದಲ್ಲಿ. ಮಕ್ಕಳನ್ನು ಗಂಡು ಹೆಣ್ಣಿನ ಸಹಜ ಸಂಪರ್ಕದಿಂದ ಪಡೆಯುವುದಾಗಲಿ, ಮಗುವನ್ನು ನವಮಾಸ ಗರ್ಭದಲ್ಲಿ ಧರಿಸುವ ಗೊಡವೆಗೆ ಹೋಗದೆ ಹೋಪ್ ಮೆಷಿನ್– ಅಂದರೆ ಇನ್‌ಕ್ಯುಬೇಟರ್‌ನಲ್ಲಿಟ್ಟು ಹೊರಗಿನಿಂದ ಕಾವು ಕೊಟ್ಟು ಮಗುವನ್ನು ಪಡೆಯುವ ವಿನೂತನ ವಸ್ತುವಿದೆ. ಫ್ಯಾಂಟಸಿ ಎಂದು ಹೇಳಬಹುದಾದ ಚಿನು ಮೋದಿಯವರ ಗುಜರಾತಿ ಕಥೆ 'ಆಬ್ ಶಂಕರನ ಕಥೆ' ಒಂದು ಸಾಂಕೇತಿಕ ಕಥೆ. 'ಆಬ್ ಶಂಕರನು ಧರಿಸಿದ ವಿಚಿತ್ರ ಕನ್ನಡಕದ ಮೂಲಕ ಜನರನ್ನು ನೋಡಿದಾಗ ಅವರುಗಳ ಮುಂಡದ ಮೇಲೆ ಕುಂಡದ ಜಾಗದಲ್ಲಿ ಅವರ ಸ್ವಭಾವವನ್ನು ಬಿಂಬಿಸುವ ಸಿಂಹ, ಗೂಳಿ, ಆನೆ ಹೀಗೆ ಪ್ರಾಣಿಗಳ ಶಿರಸ್ಸು ಕಂಡು ಬರುತ್ತದೆ. ಆದರೆ ತನ್ನದೇ ಮುಂಡದ ಮೇಲೆ ಏನಿದೆ ಎಂದು ನೋಡಿಕೊಂಡಾಗ ತನ್ನದೇ ಶಿರಸ್ಸು ಕಂಡು

ಬಂದು, ನಾವು ಸರಿಯಾಗಿ ನಾವಾಗಿಯೇ (ಮನುಷ್ಯರೇ) ಆಗಿದ್ದರೆ ಮಾತ್ರ ಬೇರೆಯವರು ನಿಜರೂಪಿನಲ್ಲಿ ಕಂಡು ಬರುತ್ತಾರೆಂಬ ಸತ್ಯವನ್ನು ಹಾಗೂ ನಾವು ಯಥಾವತ್ತಾಗಿದ್ದರೆ ಮಾತ್ರ ಬೇರೆಯವರನ್ನು ಪರೀಕ್ಷಿಸಲು ಸಾಧ್ಯ ಎಂಬ ಸತ್ಯವನ್ನು ಕಂಡುಕೊಳ್ಳುತ್ತಾನೆ.

ಹಾಗೆಯೇ ಮೈಥಿಲೀ ಭಾಷೆಯ ಕಥೆ 'ವೇದನೆಯ ಸಂಬಂಧ' ನಮ್ಮ ಹೃದಯದ ಮರ್ಮಸ್ಥಾನವನ್ನು ಸ್ಪರ್ಶಿಸುವ ಕಥೆ. ಇದರ ಹಾಗೆಯೇ ದಾಂಪತ್ಯದಲ್ಲಿನ ವಿರಸಗಳನ್ನು ಹೇಳುವ ವಸ್ತುವನ್ನಾಧರಿಸಿದ ಮಾಧವಿ ಕುಟ್ಟಿ ಅವರ ಮಲಯಾಳಿ ಕಥೆ ಹುಚ್ಚುತನ. ಸರ್ವ ಜನಾಂಗದ ಶಾಂತಿಯ ತೋಟವಾಗಿರಬೇಕಾದ ನಾಡಿನಲ್ಲಿ ಜಾತಿಯ ಭೂತ ಹಿಡಿದವರು ಇನ್ನೊಂದು ಕೋಮಿಗೆ ಸೇರಿದವರನ್ನು ಹಿಡಿದು ಕೊಲ್ಲುವ ಬರ್ಬರ ರೀತಿಯನ್ನು ಚಿತ್ರಿಸುವ ಒರಿಯನ್ ಕತೆ 'ಗಲಭೆ' ಬಹುಶಃ ಅಲ್ಲಿಯ ವಾಸ್ತವದ ಚಿತ್ರ. ಹೀಗೆ ಕಥೆಯ ವಸ್ತುಗಳು ಹೆಚ್ಚು ಕಡಿಮೆ ನಮಗೆ ಪರಿಚಿತವೇ ಎನ್ನುವಂತಾದರೂ ಭಾರತದ ಬೇರೆ ಬೇರೆ ಸೃಜನಶೀಲ ಮನಸ್ಸುಗಳು ಅದಕ್ಕೆ ಕೊಡುವ ಆಕಾರ ಬೇರೆಯೇ ಆಗುವ ಕಾರಣ, ಇಂಥ ಅನ್ಯಭಾಷಾ ಸಾಹಿತ್ಯದ ಪರಿಚಯ ನಮಗೆ ಅಗತ್ಯ. ಇದನ್ನು ತಮ್ಮ ಅಕ್ಲಿಷ್ಟವೂ ಪ್ರಸನ್ನವೂ ಆದ ಅನುವಾದದ ಮೂಲಕ ಆಗುಮಾಡಿಕೊಟ್ಟಿರುವ ಲೇಖಕರು ಮತ್ತು ಸುಂದರವಾಗಿ ಹೊರ ತಂದಿರುವ ಪ್ರಕಾಶಕರಿಬ್ಬರೂ ಅಭಿನಂದನಾರ್ಹರು.

❖

29

ಸರಳತೆಯಲ್ಲಿ ಅರಳಿದ ಆಧ್ಯಾತ್ಮ ಗೀತೆಗಳು

ಕಾವ್ಯದ ಆಕರ್ಷಣೆ ಯಾರನ್ನು ತಾನೆ ಬಿಟ್ಟಿದೆ? ಕಾದಂಬರಿ ಮತ್ತು ವಿಚಾರ ಸಾಹಿತ್ಯದ ಗದ್ಯ ಮಹಾಸಾಗರದಲ್ಲಿ ಮಹಾ ತಿಮಿಂಗಿಲದಂತೆ ಈಸಿದ ಮತ್ತು ಚೇಷ್ಟೆಗಾಗಿ ತಮ್ಮನ್ನು 'ಕವಿಕುಲ ಕುಠಾರ' ಎಂದು ಕರೆದುಕೊಂಡ ಕಾರಂತರಂಥವರು ಕೊನೆಯಲ್ಲಿ ಕಾವ್ಯದ ದಡದಲ್ಲಿ ಕೊಂಚ ಕಾಲ ವಿಹರಿಸಲೋ ಎಂಬಂತೆ "ಸೀಳ್ಗವನಗಳು" ಎಂಬ ಕವನ ಸಂಕಲನ ಪ್ರಕಟಿಸಿದರು. ಸಂಶೋಧನೆ ಮತ್ತು ಗ್ರಂಥ ಸಂಪಾದನೆಗಳ ಗೊಂಡಾರಣ್ಯದಲ್ಲಿ ಮದಗಜದಂತೆ ಸಂಚರಿಸಿದ ಡಾ.ಎಲ್. ಬಸವರಾಜು ಕೊನೆ ಕೊನೆಯಲ್ಲಿ ಕಾವ್ಯಾರಾಮದಲ್ಲಿ ವಿಹರಿಸಲು ಬಯಸಿ ಕೆಲವಾರು ಕವನ ಸಂಕಲನಗಳನ್ನು ಪ್ರಕಟಿಸಿದರು. ಇಂಥವರೆಲ್ಲ ತಮ್ಮ ಬಾಳಸಂಧ್ಯೆಯಲ್ಲಿ ಕಾವ್ಯದ ಆಕರ್ಷಣೆಯಿಂದ

ಕೊನೆಯ ಸಾಲುಗಳು (ಕವನ ಸಂಕಲನ)–ಕೋ.ಚೆನ್ನಬಸಪ್ಪ ಕೋಚೆ
ಪುಟ: 76, ಬೆಲೆ: 45/– ರೂ., ಮೊದಲ ಮುದ್ರಣ: 2014
ಅರವಿಂದ ಪ್ರಕಾಶನ, 127, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು– 560 086

ತಪ್ಪಿಸಿಕೊಳ್ಳಲಿಲ್ಲವೆಂದ ಮೇಲೆ ಇನ್ನು ಕೋಚೆ. ಹೇಗೆ ತಾನೆ ಅಪವಾದವಾದರು? ಕಥೆ, ಕಾದಂಬರಿ, ವಿಚಾರ, ವಿಮರ್ಶೆ, ಅರವಿಂದ, ರಾಮಕೃಷ್ಣರ ತತ್ವಲೋಕದಲ್ಲೇ ಮುಳುಗಿದ್ದ ಕೋಚೆ ಆಗೀಗ ಕಾವ್ಯ ಕನ್ನಿಕೆಯತ್ತ ಕಣ್ಣು ಹಾಯಿಸಿದರೂ ಅಲ್ಲಿ ನಿಲ್ಲದೆ ಮುಂದೆ ಸಾಗಿ ಇದೀಗ ಜೀವನ ಸಂಧ್ಯೆಯಲ್ಲಿ ಕಾವ್ಯ ದೇವಿಯ ಮಡಿಲಿಗೆ ಬಂದಿದ್ದಾರೆ.

ಬಹುಶಃ ಹೃದಯದ ಆರ್ದ್ರ ಮತ್ತು ಆಪ್ತ ಭಾವಗಳ ಅಭಿವ್ಯಕ್ತಿಗೆ ಕಾವ್ಯವೇ ಸರಿಯಾದ ಮಾಧ್ಯಮ. ಹಾಗೆ ನೋಡಿದರೆ ಪ್ರತಿಯೊಬ್ಬ ಬರಹಗಾರನೂ ತನ್ನ ಬರವಣಿಗೆ ಪ್ರಾರಂಭಿಸುವುದೇ. ಕಾವ್ಯ (ಪದ್ಯ)ದಿಂದ ಎನಿಸುತ್ತದೆ. ತಮ್ಮ ನುಡಿಯಲ್ಲಿ ತಿಳಿಸಿದಂತೆ ಕೋಚೆಯವರು ಸಾಹಿತ್ಯಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದೇ ಅವರಿನ್ನೂ 9ನೇ ತರಗತಿಯಲ್ಲಿದ್ದಾಗ ರಚಿಸಿದ 'ವೀರ ಸಾವರ್‌ಕರ್‌ಗೆ' ಎಂಬ ಸರಳ ರಗಳೆಯ ಕವಿತೆಯ ಮೂಲಕ. ಮುಂದೆಯೂ ರವೀಂದ್ರರು ತೀರಿಕೊಂಡ ಸಂದರ್ಭದಲ್ಲಿ, ಗಾಂಧಿ ಹತ್ಯೆಯಾದ ಸಂದರ್ಭದಲ್ಲಿ ಕೋಚೆ ತಮ್ಮ ಹೃದಯದ ಭಾವಗಳಿಗೆ ಎಡೆಗೊಟ್ಟಿರುವುದು ಕವಿತೆಯ ಮೂಲಕವೇ.

ಬೇಂದ್ರೆಯವರ 'ಮೇಘದೂತ'ದ ಛಂದಸ್ಸಿನ ಲಕ್ಷಣ ತಿಳಿದಿಲ್ಲದೆ ಇದ್ದಾಗ್ಯೂ ಅದೇ ಧಾಟಿಯಲ್ಲಿ "ಗೀತಾಂಜಲಿ"ಯ ಕೆಲವು ಪದ್ಯಗಳನ್ನು ಅನುವಾದಿಸಿದ್ದಾಗಿ, ರಾಜರತ್ನಂ ಕವಿತೆಗಳ ದಾಟಿಯಲ್ಲಿ ಕೆಲವು, ತೀನಂಶ್ರೀ ಕವಿತೆಗಳ ಧಾಟಿಯಲ್ಲಿ ಇನ್ನು ಕೆಲವು ಕವಿತೆ ರಚಿಸಿದ್ದಾಗಿ ಸಂಕೋಚದಿಂದ ಹೇಳಿಕೊಂಡಿದ್ದಾರೆ. ಕೋಚೆ ಸಂಕೋಚ ಪಡಬೇಕಾದ್ದೇನೂ ಇಲ್ಲ. ನಮ್ಮ ಇಬ್ಬರು ಮಹಾಕವಿಗಳಾದ ಕುವೆಂಪು ಮತ್ತು ಬೇಂದ್ರೆಯವರ ಈ ಮಾತುಗಳನ್ನು ಕೇಳಿದ ಮೇಲೆ, ಛಂದಸ್ಸು ವ್ಯಾಕರಣ ತಿಳಿಯದೆಯೂ ಕಾವ್ಯ ರಚನೆ ಸಾಧ್ಯ ಎಂಬುದು ತಿಳಿಯುತ್ತದೆ. "ಕವಿಗೆ ಕರ್ಣಂ ಪ್ರಮಾಣಂ, ವ್ಯಾಕರಣ ಮಲ್ತು ವ್ಯಾಕರಣಮೇಕೆಂಬೆಯೇಂ ಮರೆವುದಕ್ಕೆ ಕಲ್ತು (ಕುವೆಂಪು) ಹಾಗೂ "ಪಾದ ಪದ್ಧತಿಯಲ್ಲಿ ಪದ ಕೂಡಿ ಬರುವಾಗ ಯಾರಾರು ಗುರುಲಘು ಎಣಿಸುವರೇ?" (ಬೇಂದ್ರೆ), ತನ್ನ ಕಣ್ಣು, ಕಿವಿ, ಹೃದಯಗಳನ್ನು ತೆರೆದುಕೊಂಡು ಕುಳಿತ ಕವಿಯ ಅಂತರಂಗದ ಆಳದಿಂದ ಕವಿತೆ ಮೂಡಿ ಬಂದಾಗ ಅದು ಛಂದೋಬದ್ಧವಾಗಿಯೇ, ಲಕ್ಷಣ ಸಮನ್ವಿತವಾಗಿಯೇ ಮೂಡಿ ಬರುತ್ತದೆ ಎಂಬುದಕ್ಕೆ ಕೋಚೆ ಹೆಸರಿಸಿರುವ ಅವರ ಕವಿತೆಗಳೇ ಸಾಕ್ಷಿ. ಆದಿಕವಿ ವಾಲ್ಮೀಕಿಯ ಅಂತರಂಗದಿಂದ ಅನುಷ್ಟುಪ್ ಛಂದಸ್ಸಿನ ಆಶ್ಲೋಕ ("ಮಾನಿಷಾದ....) ಹುಟ್ಟಿದ್ದು ಶೋಕದ ಭಾವೋದ್ವೇಗದಲ್ಲೇ. (ಶೋಕಃ ಶ್ಲೋಕತ್ವಮಾಗತ ಅಲ್ಲವೇ?)

ಇಲ್ಲಿಯ ಕವಿತೆಗಳು ಖಂಡಿತವಾಗಿಯೂ ಕೋಚೆಯವರು ಸಂಕೋಚಪಟ್ಟುಕೊಳ್ಳುವ ಹಾಗೇನಿಲ್ಲ ಎಂದು ಧಾರಾಳವಾಗಿ ಹೇಳಬಹುದು. ವಯೋಧರ್ಮಕ್ಕೆ ಸಹಜವಾಗಿ ಕೋಚೆಯವರ ಹೃದಯ, ಮನಸ್ಸುಗಳು ದೇವರು, ಧರ್ಮ, ಆಧ್ಯಾತ್ಮ, ಅನುಭಾವಗಳ ಕಡೆಗೆ ಹೊರಳಿದೆ. ಇಡೀ ಕವನ ಸಂಕಲನದ ಬಹುಪಾಲು ಕವಿತೆಗಳ ದನಿ ಆಧ್ಯಾತ್ಮವೇ ಆಗಿದೆ. ಆದರೆ ಅದು ಬರಿಯ ಶಾಬ್ದಿಕ ಆಧ್ಯಾತ್ಮ ಅಥವಾ ಅನುಭಾವವಾಗದೆ, ಪಕ್ವಚೇತನದ ಅಂತರ್ವಾಣಿಯಾಗಿದೆ ಎಂಬುದು ಹಲವಾರು ಕವನಗಳಲ್ಲಿ ಸಹೃದಯರ ಅನುಭವಕ್ಕೆ ಬರುತ್ತದೆ.

ಉದಾಹರಣೆಗೆ 'ಪವಾಡ ಬೇಕೆ?' ಮತ್ತು 'ಇಲ್ಲಿದೆ ಪವಾಡ' ಎರಡೂ ಕವಿತೆಗಳಲ್ಲಿ ನಮ್ಮ ಸುತ್ತಣ ನಿಸರ್ಗ ವ್ಯಾಪಾರಗಳಲ್ಲಿ ಕಂಡು ಬರುವ ಆಗಸದಲ್ಲಿ ಮೂಡುವ ಸಪ್ತವರ್ಣದ ಕಾಮನಬಿಲ್ಲಿನ ಅದ್ಭುತ ಸೌಂದರ್ಯ. ಮನೆಯಂಗಳದ ವಿವಿಧ ಬಣ್ಣದ ಹೂವುಗಳು, ಜಡಬೀಜವಾಗಿದ್ದದ್ದು ಹೂವಾಗಿ ಚಿಮ್ಮುವುದು, ಹಚ್ಚ ಹಸಿರಾಗಿದ್ದ ಎಲೆಗಳು ರಕ್ತ ವರ್ಣಕ್ಕೆ ತಿರುಗಿ ಹೂವಾಗಿ ಕಾಣುವುದು, ಬೆಳಿಗ್ಗೆ ಎದ್ದ ಕೂಡಲೇ ಕೇಳಿ ಬರುವ ಹಕ್ಕಿ ಪಕ್ಷಿಗಳ ಸುಮಧುರ ನಿಸ್ವನ ಒಂದೇ ನೆಲದಲ್ಲಿ ವಿಭಿನ್ನ ರುಚಿಯ ಸಸ್ಯ, ತರಕಾರಿ, ಫಲಗಳು ಬೆಳೆದು ನಿಲ್ಲುವುದೇ ಮೊದಲಾದ ಸಂಗತಿಗಳೇ ಪವಾಡ ಎಂಬ ಚಿಂತನೆ ಕಂಡು ಬರುತ್ತದೆ. ಇದು ನಮ್ಮ ಪರಂಪರೆಯಲ್ಲಿ ಈಗಾಗಲೇ ಚಿರಪರಿಚಿತವಾದದ್ದೇ ಆದರೂ (ಅಕ್ಕನ ವಚನ–ಈಳೆನಿಂಬೆ ಮಾವು ಮಾದಳಕ್ಕೆ ಹುಳಿನೀರನೆರೆದವರಾರಯ್ಯ ಕಬ್ಬು ಬಾಳೆ ನಾರಿವಾಳಕ್ಕೆ ಸಿಹಿ ನೀರಿನುದಕವ ನೆರೆದವರಾರಯ್ಯ)ಅದನ್ನು ಸರಳ ಮಾತಿನಲ್ಲಿ ಹೇಳಿದ್ದು ಸೊಗಸಾಗಿದೆ. 'ದೇವರನು ಕಾಣದವರಾರು' ಎಂಬ ಕವನ ಕೂಡ ದಿನ ನಿತ್ಯ ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ನಿಸರ್ಗ ವ್ಯಾಪಾರದಲ್ಲೇ ದೇವರು ಕಾಣಬೇಕು ಎಂಬುದನ್ನೇ ಹೇಳುತ್ತದೆ.

'ದೇವರು' ಎನ್ನುವುದು ನಂಬಿಕೆಯ ವಿಷಯ. ಕೆಲವರಿಗೆ ಸಾಕಾರದಲ್ಲಿ ನಂಬಿಕೆಯಿದ್ದರೆ, ಇನ್ನು ಕೆಲವರಿಗೆ ನಿರಾಕಾರದಲ್ಲಿ, ಸಾಂಪ್ರದಾಯಿಕ ಪುರಾಣ ಕಟ್ಟಿಕೊಟ್ಟ "ಶಂಖಚಕ್ರಗದಾಧಾರಿ".... ಇತ್ಯಾದಿ ದೇವರಲ್ಲ ಎಂದು ಖಚಿತವಾಗಿ ಸಾರಿದ ಕವಿ (ಅಂಥ ದೇವರಿಲ್ಲ) "ಅದ್ವೈತ, ನಿಗುಣ, ನಿರ್ವಿಶೇಷ... ಇತ್ಯಾದಿಯೇ ದೇವರು ಎಂದು ಸಾರುವುದು ಸಮಂಜಸವೇ. ಆದರೆ, ಅರವಿಂದರ, ಮಾತೆಯ ಸಮಾಧಿಯ ಹತ್ತಿರ ನಿಂತು– "ನೀನು ನೋಡುತಿಹ ಈ ಸಮಾಧಿ/ಮೃತ ಅಮೃತ ಶಿಲೆ ಮಾತ್ರವಲ್ಲ.... ಮೃತ ಅಮೃತಗಳನ್ನೊಳಗೊಂಡ/ಅವೆರಡರಾಚೆಗಿರುವಂಥ ವಿಶ್ವ ಬ್ರಹ್ಮಾಂಡವನೆ ತಬ್ಬಿರುವ

ವಿಶ್ವಾತ್ಮ/ವಿಶ್ವಾತೀತ ಚಿಚ್ಛಕ್ತಿ/ಪವಡಿಸಿದೆ. ಇಲ್ಲಿ" ಎಂದು ಘೋಷಿಸುವುದು ಎಂತು ಸರಿ? (ಶ್ರೀಮಾತಾರವಿಂದ ಸಮಾಧಿ).

ಕಲ್ಲಿನ ಮೂರ್ತಿಯಲ್ಲಿ ಮಾರುತಿಯನ್ನು ಕಾಣುವ, ಅದಕ್ಕೆ ತನ್ನ ಭಕ್ತಿ ನಿವೇದನೆ ಮಾಡುವ ಭಕ್ತರನ್ನು "ಮುಖ್ಯ ಪ್ರಾಣ ಎನಿಸಿದ ನಿನ್ನ /ಪ್ರಾಣವಿಲ್ಲದ ಜಡಶಿಲೆಯಾಗಿ ಮಾಡಿದರಲ್ಲ" ಎಂದು ಗೇಲಿ ಮಾಡುವುದು ನಿಜಕ್ಕೂ ಸೋಜಿಗವೇ–ಕಾರಣ ತನ್ನ ನಂಬಿಕೆ ಮಾತ್ರ ಸರಿ ಉಳಿದವರದೆಲ್ಲ ಮೌಢ್ಯ ಎಂದು ಹೇಳಿದರೆ ಅದನ್ನು ಏನೆಂದು ವಿವರಿಸುವುದು? ('ಮಾರುತಿಗಾದಗತಿ) ಇಂಥ ಕೆಲವು ವೈರುಧ್ಯಗಳಿದ್ದರೂ ವೈಚಾರಿಕ'ವಾದ್ದು ಬೇಕಾದಷ್ಟಿದೆ ('ಭಕ್ತನಿಗೆ ಜಾತಿಯಿಲ್ಲ,' 'ಭಕ್ತಿನಿಗೆ ಭಯವುಂಟೆ?' 'ಜಾತಿದೊಂಬರ ಬಸವಜಯಂತಿ,' 'ಅರಸೊತ್ತಿಗೆಯ ಸುಟ್ಟು ಬಿಡಿ' ಇತ್ಯಾದಿ ಕವನಗಳು.

ಬೇಂದ್ರೆಯವರ ಮೇಘದೂತದ ಛಂದಸ್ಸಿನಲ್ಲಿ ಮೂಡಿರುವ ರವೀಂದ್ರರ 'ಗೀತಾಂಜಲಿ'ಯ ಕೆಲವು ಕವನಗಳ ಅನುವಾದ ಲಯಬದ್ಧವಾಗಿ ತುಂಬ ಸೊಗಸಾಗಿದೆ. ಕೋಚೆಯವರು ತಮ್ಮ ಕಾವ್ಯ ಅಷ್ಟೇನೂ ಉನ್ನತಮಟ್ಟದಲ್ಲವೇನೋ ಎಂದು ಸಂಕೋಚದಿಂದಲೇ ಪ್ರಕಟಿಸಿರುವ ಈ ಕವನ ಸಂಕಲನದ ಆಧ್ಯಾತ್ಮಿಕ ಕವಿತೆಗಳು ಸರಳತೆಯಲ್ಲಿ ಅರಳಿ ನಿಂತ ಕಾರಣದಿಂದಲೇ ಸಹೃದಯರಿಗೆ ಸೊಗಸುತ್ತವೆ ಎನ್ನಬಹುದು.

❖

೩೦

ವರ್ತಮಾನಕ್ಕೂ ಪ್ರಸ್ತುತವಾದ ಪೌರಾಣಿಕ ನಾಟಕ

ಹಿಂದಿ ಸಾಹಿತ್ಯದಲ್ಲಿ ಶಿಖರ ಸಾಹಿತಿಯೆನಿಸಿದ ಜಯಶಂಕರ ಪ್ರಸಾದರು(1889–1937) ಕಾವ್ಯ, ನಾಟಕ, ಸಣ್ಣ ಕಥೆ, ಕಾದಂಬರಿ ಹೀಗೆ ಸಾಹಿತ್ಯದ ಎಲ್ಲ ಪ್ರಮುಖ ಪ್ರಕಾರಗಳಲ್ಲಿ ಶ್ರೇಷ್ಠ ಕೃತಿಗಳನ್ನು ರಚಿಸಿ ಅಮರರಾದವರು. 'ಕಾಮಾಯನಿ' ಮಹಾಕಾವ್ಯ ಹಿಂದಿ ಸಾಹಿತ್ಯದಲ್ಲಿ ಅವರಿಗೆ ಶಾಶ್ವತವಾದ ಸ್ಥಾನ ತಂದುಕೊಟ್ಟ ಕೃತಿ. ಐತಿಹಾಸಿಕ ನಾಟಕಗಳ ರಚನೆಯಲ್ಲಿ ಸಿದ್ಧ ಹಸ್ತರಾದ ಅವರು ಮಗಧದ ಮಹಾಸಾಮ್ರಾಜ್ಯವನ್ನು ಕಟ್ಟಿ ಆಳಿದ ಭಾರತದ ಖ್ಯಾತಿವಂತ ಸಾಮ್ರಾಟನಾದ ಚಂದ್ರಗುಪ್ತನನ್ನು ಕುರಿತ 'ಚಂದ್ರಗುಪ್ತ', ಅಂತೆಯೇ 'ಸ್ಕಂದಗುಪ್ತ,' 'ಅಜಾತಶತ್ರು', 'ಧೃವಸ್ವಾಮಿನಿ' ಮೊದಲಾದ ನಾಟಕಗಳು ಅವರಿಗೆ ಅಪಾರವಾದ ಕೀರ್ತಿ ಮತ್ತು ಯಶಸ್ಸುಗಳನ್ನು ತಂದುಕೊಟ್ಟಿವೆ. ಛಾಯಾವಾದೀ ಕಾವ್ಯ ಅರ್ಥಾತ್ ಹಿಂದಿ

ಮೂಲ : ಜನಮೇಜಯನ ನಾಗಯಜ್ಞ – ಜಯಶಂಕರ ಪ್ರಸಾದ್
ಅನುವಾದ: ಡಾ. ವಿಜಯಾ ಸುಬ್ಬರಾಜ್
ಪುಟ: 120 ಬೆಲೆ: 80/– ರೂ.
ಸಮೃದ್ಧ ಸಾಹಿತ್ಯ, ನಂ.121, 1ನೇ ಮಹಡಿ, 2ನೇ ಮುಖ್ಯ ರಸ್ತೆ, 11ನೇ ಬಿ ಅಡ್ಡರಸ್ತೆ, ವಿಠಲನಗರ, ಬೆಂಗಳೂರು–560026

ನವೋದಯ ಕಾವ್ಯದ ನಾಲ್ವರು ಅಧ್ವರ್ಯುಗಳಲ್ಲಿ ಅವರದು ಮೊದಲ ಹೆಸರು (ಉಳಿದ ಮೂವರು: ಸುಮಿತ್ರಾನಂದನ್ ಪಂತ್, ಸೂರ್ಯಕಾಂತ ತ್ರಿಪಾಠಿ 'ನಿರಾಲ' ಮತ್ತು ಮಹಾದೇ ವರ್ಮಾ). ಭಾರತೀಯ ಧರ್ಮ, ಸಂಸ್ಕೃತಿ ಸಾಹಿತ್ಯಗಳ, ಮುಖ್ಯವಾಗಿ ಆರ್ಷೇಯ ಪರಂಪರೆಯ ಮಹಾ ಆರಾಧಕರಾದ ಪ್ರಸಾದರು, ಭಾರತದ ಗತ ಸಾಂಸ್ಕೃತಿಕ ವೈಭವವನ್ನು, ಎತ್ತಿ ಹಿಡಿಯುವುದು, ಸನಾತನ ಮೌಲ್ಯಗಳ ಹಿರಿಮೆ-ಗರಿಮೆಗಳನ್ನು ವರ್ತಮಾನದ ಯುವಜನತೆಗೆ ಮನದಟ್ಟು ಮಾಡಿಕೊಡುವುದು ಇವುಗಳನ್ನು ಒಂದು ವ್ರತವೆಂಬಂತೆ ನಡೆಸಿದವರು.

ಪ್ರಸ್ತುತ 'ಜನಮೇಜಯನ ನಾಗಯಜ್ಞ' ಪ್ರಸಾದರ ಪೌರಾಣಿಕ ನಾಟಕ. ಇದರ ವಸ್ತು ಮಹಾಭಾರತ ಕಾಲಘಟ್ಟದ್ದು. ಆದರೆ ಪ್ರಸಾದರ ವೈಶಿಷ್ಟ್ಯವಿರುವುದು ಪುರಾಣದ ಈ ವಸ್ತುವನ್ನು ವರ್ತಮಾನಕ್ಕೂ ಪ್ರಸ್ತುತವೆನ್ನುವಂತೆ ರಚಿಸಿರುವುದರಲ್ಲಿ. ಜಾತಿ ಜನಾಂಗಗಳ ನಡುವಿನ ಸಂಘರ್ಷವನ್ನು ವಸ್ತುವಾಗುಳ್ಳ ಈ ನಾಟಕದ ಉದ್ದೇಶ ಜನಾಂಗೀಯ ವೈರತ್ವವನ್ನು ಕೊನೆಗಾಣಿಸಿ ಸಾಮರಸ್ಯದಲ್ಲಿ ಬದುಕುವುದೇ ಮನುಕುಲದ ಆದರ್ಶವಾಗಬೇಕು ಎಂದು ಸಾರುವುದು. ಯುದ್ಧ ವಿರೋಧಿ ನಿಲುವು ನಾಟಕದ ಉದ್ದಕ್ಕೂ ಮಂದ್ರ ಶ್ರುತಿಯ ಹಾಗೆ ನಿರಂತರವಾಗಿ ಕೇಳಿಸುತ್ತ ಹೋಗುತ್ತದೆ. ದೇಶ ದೇಶಗಳ ನಡುವೆ, ಜಾತಿ ಜನಾಂಗಗಳ ನಡುವೆ ಯುದ್ಧ, ರಕ್ತಪಾತ, ಉಗ್ರರ ಕಾರ್ಯಾಚರಣೆಗಳು ಪ್ರಕರ್ಷಕ್ಕೇರಿರುವಂತೆ ಕಾಣುತ್ತಿರುವ ಈ ದಿನಗಳಲ್ಲಿ ಶಾಂತಿ ಸಹಬಾಳ್ವೆ, ಸಾಮರಸ್ಯ ಸಾರುವ ಇಂಥ ನಾಟಕ ತನ್ನ ಪ್ರಸ್ತುತತೆ ಕಳೆದುಕೊಳ್ಳುವುದಿಲ್ಲ.

ಭಾರತ ಯುದ್ಧದ ನಂತರದಲ್ಲಿ ತನ್ನ ತಂದೆಯಾದ ಪರೀಕ್ಷಿತನ ಸಾವಿಗೆ ಕಾರಣರಾದ ನಾಗರನ್ನು ನಾಶ ಮಾಡಲು ಜನಮೇಜಯನು ಸರ್ಪಯಾಗವನ್ನು ಮಾಡಿದನೆಂಬುದು ಪುರಾಣದ ಕಥೆ. ಆದರೆ ಅದು ನಾವು ಭಾವಿಸಿದಂತೆ ಸರೀಸೃಪಗಳಾದ ಸರ್ಪಗಳನ್ನು ಯಜ್ಞಕುಂಡಕ್ಕೆ ಅರ್ಪಿಸುವುದಲ್ಲ. ಆರ್ಯಕ್ಷತ್ರಿಯರು ತಮ್ಮ ಶ್ರೇಷ್ಠತೆ ಮತ್ತು ಆಧಿಪತ್ಯ ಸ್ಥಾಪಿಸಲು ತಾವು ದಸ್ಯುಗಳೆಂದು ಕಡೆಗಣಿಸಿ ನೋಡುತ್ತಿದ್ದ ನಾಗರೆಂಬ ಜನವರ್ಗವನ್ನು ಹಿಡಿತಂದು ಯಜ್ಞಕುಂಡಕ್ಕೆ ದೂಡುವುದು. ವಾಸ್ತವವಾಗಿ ಆರ್ಯರು ಈ ದೇಶದಲ್ಲಿ ಸಾಮ್ರಾಜ್ಯ ವಿಸ್ತರಣೆಯಲ್ಲಿ ತೊಡಗಿಕೊಂಡಾಗ ಸರಸ್ವತಿ ನದಿ ತೀರದಲ್ಲಿ ತಮ್ಮ ಸಾಮ್ರಾಜ್ಯ ಕಟ್ಟಿಕೊಂಡು ಬದುಕುತ್ತಿದ್ದ ಈ ನಾಗರನ್ನು ಖಾಂಡವದ ಕಡೆಗೆ ದೂಡುತ್ತಿದ್ದರು. ಅರ್ಜುನ ಹೊಸದಾಗಿ ಇಂದ್ರಪ್ರಸ್ಥ ನಿರ್ಮಾಣ ಮಾಡಹೊರಟಾಗ ಅವರನ್ನು ಅಲ್ಲಿಂದಲೂ ಓಡಿಸಲಾಯಿತು. ಅಲ್ಲಿಯೂ ನಾಗರು ನೆಲೆ ಕಳೆದುಕೊಂಡರೂ ಅವರ

ನಾಯಕನಾದ ತಕ್ಷಕನು ಅಲ್ಲಿಂದ ತಪ್ಪಿಸಿಕೊಂಡು ಪಾರಾದನು. ಭಾರತ ಯುದ್ಧಾನಂತರದಲ್ಲಿ ಪರೀಕ್ಷಿತನು ಶೃಂಗಿ-ಋು ಯೆಂಬ ಬ್ರಾಹ್ಮಣನನ್ನು ಅವಮಾನಿಸಿ ಸಾಯಿಸಿದನು. ಅದನ್ನು ನೆಪ ಮಾಡಿಕೊಂಡು ತಕ್ಷಕನು, ಕಾಶ್ಯಪನೆಂಬ ಆಸೆಬುರುಕನೂ ಅಹಂಕಾರಿಯೂ ಆದ ಬ್ರಾಹ್ಮಣನ ಜೊತೆ ಸೇರಿ ಪರೀಕ್ಷಿತನನ್ನು ಕೊಂದನು. ಅದು ಅಷ್ಟಕ್ಕೇ ನಿಲ್ಲದೆ ಕಾಶ್ಯಪನ ಪ್ರಚೋದನೆಗೆ ಒಳಗಾದ ಅರಣ್ಯಕ ನಾಗರು ತಕ್ಷಕನ ಮುಂದಾಳತ್ವದಲ್ಲಿ ಜನಮೇಜಯನ ವಿರುದ್ದ ಬಂಡೇಳುವ ಹುನ್ನಾರ ಹೂಡುತ್ತಾರೆ. ಇತ್ತ ಆರ್ಯಜಾತಿಗಳ ಅಭಿಮಾನಿಯಾದ ಬ್ರಾಹ್ಮಣ ಉತ್ತಂಕನು ಜನಮೇಜಯನನ್ನು ತಂದೆಯ ಹತ್ಯೆಗೆ ನಾಗರ ವಿರುದ್ಧ ಸೇಡು ತೀರಿಸಿಕೊಳ್ಳಲು ಉತ್ತೇಜಿಸುತ್ತಾನೆ. ಆದರೆ ಸರಿಯಾದ ಸಮಯದಲ್ಲಿ ನಾಗ ಜಾತಿಯ ಮಾನಸಾ ಮತ್ತು ಜರತ್ಕಾರು ದಂಪತಿಗಳ ಮಗ ಆಸ್ತಿಕ ಹಾಗೂ ವ್ಯಾಸರು ಮಧ್ಯಪ್ರವೇಶಿಸಿ ಆಗಲಿದ್ದ ಘೋರವನ್ನು ತಪ್ಪಿಸಿ ಆರ್ಯರು ಮತ್ತು ನಾಗರಲ್ಲಿ ಸಾಮರಸ್ಯವೇರ್ಪಡಿಸುತ್ತಾರೆ.

ಪ್ರಸಾದರು ಆರ್ಯಕ್ಷತ್ರಿಯರ ಅಹಂಕಾರ ಹುಸಿಪ್ರತಿಷ್ಠೆಗಳನ್ನು ಬಯಲು ಮಾಡುತ್ತಲೇ ನಾಗರ ಸ್ವಾಭಿಮಾನ ಆತ್ಮಗೌರವಗಳನ್ನು ಎತ್ತಿ ಹಿಡಿಯುತ್ತಾರೆ. ಹಾಗೆಯೇ ದುರಾಸೆಯ ಭೂತದ ಬೆನ್ನು ಹತ್ತಿದ ಕಾಶ್ಯಪನಂಥ ನೀಚ ಬ್ರಾಹ್ಮಣನ ಉಪದ್ವ್ಯಾಪಗಳ ಖಂಡನೆ ಇದೆಯಾದರೂ ಬ್ರಾಹ್ಮಣರ ನಿಜವಾದ ಆದರ್ಶ ತ್ಯಾಗವೆಂದು ಹೇಳುತ್ತ ಎಂದಿನಂತೆ ಪ್ರಸಾದರು ಬ್ರಾಹ್ಮಣ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ.

ಪ್ರಾರಂಭದಲ್ಲೇ ಬರುವ- ಜಗತ್ತು ತಾರತಮ್ಯ, ದ್ವಂದ್ವಗಳಿಂದ ತುಂಬಿದಂತೆ ಕಾಣುವುದು ಹೊರತೋರಿಕೆಗಷ್ಟೇ. ಅದು ಕೇವಲ ಕಲ್ಪನೆ; ಭ್ರಮೆ. ಜಡವೆನ್ನುವುದು ಕೂಡ ಕಲ್ಪನೆಯೇ. ಎಲ್ಲವೂ ಚೈತನ್ಯ ಸ್ವರೂಪವೇ. ಅಖಂಡ ವಿಶ್ವವು ಪೂರ್ಣ ಸತ್ಯ. ಅಸತ್ಯ ಅಥವಾ ಕಲ್ಪನೆಯ ಭ್ರಮೆಯನ್ನು ದೂರಮಾಡಿ ಎಲ್ಲರನ್ನೂ ಸಮತಾಸೂತ್ರದಲ್ಲಿ ಬೆಸೆಯಬೇಕು- ಎಂಬ ಕೃಷ್ಣನ ಮಾತುಗಳ ಮೂಲಕ ಪ್ರಸಾದರು ತಮ್ಮ ತಾತ್ವಿಕತೆಯನ್ನು ಪ್ರಕಟಿಸಿದ್ದಾರೆ. ನಾಗ ಜಾತಿಗಳನ್ನು ಪ್ರಜೆಗಳಾಗಿ ಪರಿವರ್ತಿಸುವುದು ಹೇಗೆ ಎಂಬ ಅರ್ಜುನನ ಪ್ರಶ್ನೆಗೆ ಈ ವನಪ್ರಾಂತದಲ್ಲಿ ಮಾನವತೆಯ ಬೀಜವನ್ನು ಬಿತ್ತು ಎಂಬುದೇ ಕೃಷ್ಣನ ಉತ್ತರ.

ತುರ್ ಕಾವಷೇಯ ಜನಮೇಜಯನಿಗೆ ಬೋಧಿಸುವುದು: ಯುದ್ಧ ಮಾಡುವುದನ್ನೇ ವೃತ್ತಿಯಾಗಿ ಅಭ್ಯಾಸ ಮಾಡಿಕೊಳ್ಳಬಾರದು..... ಅಹಂಕಾರವನ್ನು ದರ್ಪವನ್ನು ಮೆರೆಸಲು ಇದರ ದುರ್ಬಳಕೆಯಾಗಬಾರದು. ಎಂದು. ಇಂಥ ಸಾರ್ವಕಾಲಿಕ ಮೌಲ್ಯಗಳನ್ನು ನಾಟಕ ಪ್ರಸ್ತುತಪಡಿಸುತ್ತದೆ.

ಪ್ರಸಾದರ ನಾಟಕಗಳು ಸಾಮಾನ್ಯವಾಗಿ ಸಂಸ್ಕೃತ ಭೂಯಿಷ್ಠ ಭಾಷೆಯಿಂದ ಕೂಡಿದ್ದು ನಾಟಕಕ್ಕೆ ಅಷ್ಟು ಹೊಂದದ ಉದ್ದುದ್ದವಾದ ಸಂಭಾಷಣೆಗಳಿಂದ ಕೂಡಿರುತ್ತವೆ. ಇಂಥ ನಾಟಕವನ್ನು ಡಾ. ವಿಜಯಾ ಸುಬ್ಬರಾಜ್ ಅವರು ಕನ್ನಡದ ಜಾಯಮಾನಕ್ಕೆ ಹೊಂದುವಂಥ ತಿಳಿಯಾದ ಕನ್ನಡದಲ್ಲಿ ಅತ್ಯಂತ ಸೊಗಸಾಗಿ ಮೂಲ ನಾಟಕಕಾರರು ಕನ್ನಡದಲ್ಲೇ ರಚಿಸಿದ್ದರೆ ಹೇಗಿರಬಹುದಿತ್ತೋ ಆ ರೀತಿಯಲ್ಲಿ ಕನ್ನಡಿಸಿದ್ದಾರೆ, ಜೊತೆಗೆ ನಾಟಕದ ಗ್ರಹಿಕೆಗೆ ಅಗತ್ಯವಾದ ಹಿನ್ನೆಲೆಯನ್ನು ತಮ್ಮ ಮಾತಿನಲ್ಲಿ ನೀಡಿರುವುದು ಅತ್ಯಂತ ಉಚಿತವಾಗಿದೆ.

❖

31

*ದಲಿತ ಸಾಹಿತಿ ದ್ವಯರ ಜೀವನ-ಸಾಧನೆ

ದೇವನೂರು ಮಹಾದೇವ ಮತ್ತು ಡಾ. ಸಿದ್ಧಲಿಂಗಯ್ಯ ಇಬ್ಬರೂ ನಮ್ಮ ಸಾಹಿತ್ಯಲೋಕದ ಅಪೂರ್ವ ಸಾಧಕರಲ್ಲಿ ವಿಶಿಷ್ಟರು. ಕಥೆ ಮತ್ತು ಕಾದಂಬರಿ ಕ್ಷೇತ್ರದಲ್ಲಿ ಅತಿಶ್ರೇಷ್ಠ ಸಾಧಕರಾಗಿರುವುದರ ಜೊತೆಗೆ ಇಡೀ ಕನ್ನಡ ಪ್ರಜ್ಞೆ ಮತ್ತು ವೈಚಾರಿಕತೆಯ ಪ್ರತೀಕದಂತಿರುವ ದೇವನೂರು ಮಹಾದೇವ ಮತ್ತು ಕನ್ನಡ ಕಾವ್ಯಕ್ಷೇತ್ರದಲ್ಲಿ ಹೊಸನೆಲೆಯೊಂದನ್ನು ಕಂಡುಕೊಳ್ಳುವ ಮೂಲಕ ತಮ್ಮದೇ ಅದ ಛಾಪನ್ನು ಮೂಡಿಸಿರುವ ಡಾ.ಸಿದ್ದಲಿಂಗಯ್ಯ ಇಬ್ಬರೂ 'ದಲಿತ' ಎಂಬ ಅಷ್ಟೇನೂ ಆಪ್ಯಾಯಮಾನವಲ್ಲದ ಅಥವಾ ರಿಯಾಯಿತಿಯ ವಿಶೇಷಣದ ಮೂಲಕ ಗುರುತಿಸಲ್ಪಡಬೇಕಾದ ಅಗತ್ಯವನ್ನು ಎಂದೋ ದಾಟಿದವರು. ಯಾವುದೇ ದಲಿತೇತರ ಸಾಹಿತಿ ಮತ್ತು ಚಿಂತಕಶ್ರೇಷ್ಠರ ಸಾಧನೆಗೆ ಸರಿಮಿಗಿಲಾದ ಸಾಧನೆಯನ್ನು

---

* ಸಮಾಜಮುಖಿ ಸಿದ್ಧಲಿಂಗಯ್ಯ,
* ಸಂತೆಯೊಳಗಣ ಸಂತ -ದೇವನೂರು ಮಹದೇವ ಎರಡೂ ಕೃತಿಗಳ ಲೇಖಕರು ಮಾನಸ ಪ್ರಥಮ ಮುದ್ರಣ: 2015 ಪುಟ: 136

ಮಾಡಿದ ಈ ಇಬ್ಬರೂ ಸಾಹಿತಿಗಳ ಬದುಕು ಮತ್ತು ಬರಹ ಕುರಿತಾದ ಪರಿಚಯವನ್ನು ಚಿಕ್ಕ ಮತ್ತು ಚೊಕ್ಕದಾದ ರೀತಿಯಲ್ಲಿ ಮಾನಸ ಅವರು ಈ ಕಿರುಹೊತ್ತಿಗೆಗಳಲ್ಲಿ ಮಾಡಿಕೊಟ್ಟಿದ್ದಾರೆ.

ಒಬ್ಬ ವ್ಯಕ್ತಿಯ ವ್ಯಕ್ತಿತ್ವದ ವಿಶಿಷ್ಟತೆ ಏನೆಂಬುದನ್ನು ಥಟ್ಟನೆ ಗುರುತಿಸುವ ಮತ್ತು ಅದನ್ನು ಅತ್ಯಂತ ಪರಿಣಾಮಕಾರಿಯಾಗಿ ಓದುಗರ ಹೃದಯಕ್ಕೆ ನಾಟಿಸುವಂತೆ ಹೇಳುವ ಕಲೆಗಾರಿಕೆ ಮಾನಸ ಅವರಿಗೆ ಚೆನ್ನಾಗಿ ಕರಗತವಾಗಿದೆ. ದೇವನೂರರನ್ನು ಕುರಿತ ಪುಸ್ತಕಕ್ಕೆ ಅವರು ಕೊಟ್ಟಿರುವ 'ಸಂತೆಯೊಳಗಣ ಸಂತ' ಎಂಬ ಅತ್ಯಂತ ಧ್ವನಿಪೂರ್ಣವಾದ ಶೀರ್ಷಿಕೆಯೇ ಇದಕ್ಕೆ ಅತ್ಯುತ್ತಮ ಉದಾಹರಣೆ. ಹೇಗಾದರೂ ಸರಿ, ಪ್ರಸಿದ್ಧಿ, ಪ್ರಶಸ್ತಿ ಮತ್ತು ಹಣ ಸಂಪಾದಿಸಬೇಕೆಂಬ ಹಪಹಪಿಗೆ ಬಿದ್ದಿರುವ ನಮ್ಮ ಸಾಹಿತ್ಯ ಮತ್ತು ಸಾರ್ವಜನಿಕ ಕ್ಷೇತ್ರದ ಮಂದಿಯ ನಡುವೆ ಮಂದರ ಪರ್ವತದಂತೆ ಅಚಲವಾಗಿ ನಿಂತು ತಾನಾಗಿಯೇ ಹುಡುಕಿಕೊಂಡು ಬಂದ ಪ್ರಶಸ್ತಿಗಳನ್ನೂ ದೂರತಳ್ಳುವ ಮನೋಭಾವದ ಇವರನ್ನು ಇದಕ್ಕಿಂತ ಧ್ವನಿಪೂರ್ಣವಾದ ಪದಪುಂಜಗಳಿಂದ ಬಣ್ಣಿಸಲು ಸಾಧ್ಯವೆ? ಹಿಂದೊಮ್ಮೆ ಡಾ. ಜಿ.ಎಸ್.ಎಸ್. ಅವರು ಮಹಾದೇವ ಅವರನ್ನು ತುಂಬಿದ ಸಭೆಯಲ್ಲಿ 'ಶಬ್ದದೊಳಗಣ ನಿಶ್ಶಬ್ದ' ಎಂದು ಬಣ್ಣಿಸಿದ್ದರು. ಈ ಮಾತು ಕೂಡ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯ ಎರಡನ್ನೂ ಒಟ್ಟಿಗೇ ಧ್ವನಿಸುವಂಥದು. ಇದರಲ್ಲಿ ಪುಟ ತೆರೆಯುತ್ತಿದ್ದಂತೆ ಕಾಣ ಬರುವ "ಭಾವಣಿಯಿಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ಅದೇ ನನ್ನ ದೇವರಾಗುತ್ತದೆ" ಎಂಬ ಮಹಾದೇವರ ಮಾತು, ಅವರನ್ನು ಕುರಿತ 'ಸಂತೆಯೊಳಗಣ ಸಂತ' ಎಂಬ ಪದ್ಯ, ಅವರ 'ಒಡಲಾಳ' ಮತ್ತು 'ಎದೆಗೆಬಿದ್ದ ಅಕ್ಷರ' ಪುಸ್ತಕಗಳನ್ನು ಓದಿ ಪ್ರಭಾವಿತರಾಗಿ ಹೃದಯ ಪರಿವರ್ತನೆ ಹೊಂದಿದವರ ಮಾತುಗಳು ಈ ಕೃತಿಗೆ ಉತ್ತಮ ಪ್ರವೇಶವನ್ನು ಒದಗಿಸಿಕೊಟ್ಟಿವೆ.

ಸಾಹಿತ್ಯದ ನಿಜವಾದ ಸಾರ್ಥಕತೆಯ ಒರೆಗಲ್ಲಿನ ಮೇಲೆ ದೇವನೂರರ ಬರಹ ಅತ್ಯಂತ ಯಶಸ್ವಿಯಾಗಿದೆ ಎನ್ನುವುದಕ್ಕಿಂತಲೂ ಲೇಖಕನಾದವನಿಗೆ ಬೇರಿನ್ನೇನು ಬೇಕು? 'ಸಂತನ ಚಿಂತನೆಗಳು' ಶೀರ್ಷಿಕೆಯ ಅಡಿಯಲ್ಲಿ ಆಯ್ಕೆ ಮಾಡಿಕೊಟ್ಟಿರುವ ಐವತ್ತು ಚಿಂತನೆಗಳು ಒಂದೊಂದೂ ಕ್ರಿಯಾಶೀಲವೂ, ಸೃಜನಶೀಲವೂ ಆದ ಆರೋಗ್ಯ ಪೂರ್ಣಮನಸ್ಸಿನ ಆಣಿಮುತ್ತುಗಳು ಮತ್ತು ಅವು ನೇರವಾಗಿ ಓದುಗರ ಎದೆಗೆ ಹೊಗುವಂಥವು. ಪುಸ್ತಕದ ಕೊನೆಯಲ್ಲೂ ಅವರ ಕೃತಿಗಳಿಂದ ಕೆಲವು ಸಾಲುಗಳನ್ನು ಉಲ್ಲೇಖಿಸಿದ್ದಾರೆ. ಮುಂದಿನ 16 ಪುಟಗಳಲ್ಲಿ ದೇವನೂರರ ಬದುಕನ್ನು ರೇಖಿಸುವ ಲೇಖಕರ ಬರಹ ತೀರಾ ಸಂಕ್ಷಿಪ್ತಗೊಂಡು ವರದಿಯ ಸ್ವರೂಪವನ್ನು ತಾಳಿದೆ. ಆದರೂ,

ಆಟೆನ್ ಬರೋ ಅವರ ಗಾಂಧೀ ಚಿತ್ರದ ಬಗೆಗಿನ ದೇವನೂರರ ನಿಲುವು ಹಾಗೂ 'ರಾಜ್ಯ ಸರ್ಕಾರ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಜಾರಿಗೆ ತರುವವರೆಗೂ ಸಾಹಿತ್ಯ ಸಮ್ಮೇಳನ ನಡೆಸದೆ ಕನ್ನಡ ಶಿಕ್ಷಣ ಮಾಧ್ಯಮಕ್ಕಾಗಿ ಹೋರಾಡುತ್ತದೆ ಎಂದು ಸಾಹಿತ್ಯ ಪರಿಷತ್ತು ಘೋಷಿಸಿದ ನಾಳೆಗೇ ನೃಪತುಂಗ ಪ್ರಶಸ್ತಿ ಸ್ವೀಕರಿಸುತ್ತೇನೆ' ಎಂಬ ಅವರ ಬಹುಮುಖ್ಯ ನಿಲುವುಗಳನ್ನು ದಾಖಲಿಸಿದ್ದಾರೆ.

ದೇವನೂರರು ಬರೆದಿರುವುದು ಗಾತ್ರದ ದೃಷ್ಟಿಯಿಂದ ಹೆಚ್ಚಲ್ಲವಾದರೂ ಸತ್ವದ ದೃಷ್ಟಿಯಿಂದ ಅತ್ಯಂತ ಮಹತ್ವದ ಬರಹ ಎಂಬುದು ಕನ್ನಡ ಸಾಹಿತ್ಯದ ಪ್ರಬುದ್ಧ ಓದುಗರಿಗೆ ಈಗಾಗಲೇ ತಿಳಿದಿರುವ ಸಂಗತಿ. 'ದ್ಯಾವನೂರು' ಕಥಾಸಂಗ್ರಹದ ಏಳು ಕಥೆಗಳು, 'ಒಡಲಾಳ'ವೆಂಬ ನೀಳ್ಗತೆ ಅಥವಾ ಕಿರುಕಾದಂಬರಿ ಹಾಗೂ 'ಕುಸುಮಬಾಲೆ' ಎಂಬ ಇನ್ನೊಂದು ಕಾದಂಬರಿ ಮತ್ತು ಈಚೆಗೆ ಬಂದ 'ಎದೆಗೆ ಬಿದ್ದ ಅಕ್ಷರ' ಎಂಬ ಚಿಂತನ ಬರಹಗಳು ಇಷ್ಟೇ ದೇವನೂರರ ಬರಹಗಳು. ಆದರೆ ಅತ್ಯಂತ ಗಾಢವಾದ ದಲಿತ ಲೋಕದ ಅನುಭವ ಹಾಗೂ ಪ್ರಖರವಾದ ದಲಿತ ಸಂವೇದನೆಗಳಿಂದ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ತಲ್ಲಣವನ್ನು ಉಂಟುಮಾಡಿದ ಈ ಗಟ್ಟಿ ಬರಹಗಳ ಅಂತರಂಗಕ್ಕೆ ಸೀಳುನೋಟ ಹಾಯಿಸುವ ಮೂಲಕ ಇವುಗಳ ಸಕ್ಯದ್ದರ್ಶನ ಮಾಡಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆಂದೇ ಹೇಳಬಹುದು. ಒಬ್ಬ ಸಂವೇದನಾಶೀಲನಾದ ಬರಹಗಾರ ಹಲವು ಪುಟಗಳಲ್ಲಿ ಹೇಳಬಹುದಾದ್ದನ್ನು ಒಂದು ಶಬ್ದ ಇಲ್ಲವೆ ವಾಕ್ಯದ ಮೂಲಕ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿಬಿಡುವ ಸೂಚೀಯಾನ ಕಲೆ ಕರಗತನಾದವನಾಗಿರುತ್ತಾನೆ ಎಂಬುದಕ್ಕೆ ದೇವನೂರರ ಅಮಾಸ ಕಥೆ, ಒಡಲಾಳ ಮತ್ತು ಕುಸುಮಬಾಲೆ ಕೃತಿಗಳು ಸಾಕ್ಷ್ಯ ಒದಗಿಸುತ್ತವೆ. ಇವುಗಳ ಹಾಳತವಾದ ವಿಮರ್ಶೆಯನ್ನು ಮಾನಸ ಮಾಡಿದ್ದಾರೆ.

ಖ್ಯಾತ ಸಾಹಿತಿಗಳಾದ ಯಶವಂತ ಚಿತ್ತಾಲ, ಅನಂತಮೂರ್ತಿ, ಲಂಕೇಶ್, ಶಂಕರಮೊಕಾಶಿ ಪುಣೇಕರ್, ಟಿ.ಪಿ. ಅಶೋಕ ಮುಂತಾದವರ ಒಳನೋಟಗಳಿಂದ ಕೂಡಿದ ವಿಮರ್ಶೆಯ ಮಾತುಗಳನ್ನು ಉಲ್ಲೇಖಿಸುವ ಮೂಲಕ ದೇವನೂರರು ಏರಿರುವ ಎತ್ತರವನ್ನು ಮನಗಾಣಿಸಿಕೊಡುತ್ತಾರೆ. ಇನ್ನು ಅವರ 'ಎದೆಗೆ ಬಿದ್ದ ಅಕ್ಷರ'ದ ಬರಹಗಳು ಅವರಲ್ಲಿನ ಹೋರಾಟಗಾರನಿಗೆ ಮತ್ತು ಪ್ರಖರ ಚಿಂತಕನಿಗೆ ಹಿಡಿದ ಕನ್ನಡಿಗಳಾಗಿರುವುದನ್ನು ಹಾಗೂ ದಲಿತ ಸಂಘಟನೆ ಮತ್ತು ಹೋರಾಟಗಳಲ್ಲಿ ಅವರು ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡಿದ್ದನ್ನು ಸಮರ್ಥವಾಗಿ ಪರಿಚಯಿಸಿಕೊಟ್ಟಿದ್ದಾರೆ. ಅವರ ಸಂದರ್ಶನ, ಅನುಭವದ ಮಾತುಗಳು, ಬೇರೆ ಲೇಖಕರ ಅಭಿಪ್ರಾಯ, ಒಟ್ಟಾರೆ

32 ಕಿರು ಶೀರ್ಷಿಕೆಗಳಲ್ಲಿ ದೇವನೂರರ ಸಮಗ್ರ ಪರಿಚಯವನ್ನು ಈ ಕೃತಿ ಸಮರ್ಥವಾಗಿ ಮಾಡಿಕೊಡುತ್ತದೆ ಎಂದು ಧಾರಾಳವಾಗಿ ಹೇಳಬಹುದು.

ಇದೇ ಮಾದರಿಯಲ್ಲಿ ಖ್ಯಾತ ಕವಿ ಸಿದ್ದಲಿಂಗಯ್ಯನವರ ಬದುಕು ಬರಹಗಳನ್ನು 28 ವಿವಿಧ ಬಗೆಯ ಶೀರ್ಷಿಕೆಗಳಲ್ಲಿ ಮಾಡಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ.

ದೇವನೂರರಂತೆಯೇ ಸಿದ್ದಲಿಂಗಯ್ಯನವರು ಕೂಡ ದಲಿತಲೋಕದಿಂದ ಬಂದವರಾದರೂ ಅವರಿಗಿಂತ ಹೆಚ್ಚು ಸಂಕಷ್ಟಗಳಿಂದ ಕೂಡಿದ ಬಡತನದ ಅಗ್ನಿಕುಂಡದ ಮೂಲಕ ಹಾಯ್ದು ಬಂದವರು. ಇವರ ತಂದೆ ಅಯ್ನೋರ ಹೊಲದಲ್ಲಿ ನೊಗಕ್ಕೆ ಕೊರಳು ಮತ್ತು ಹೆಗಲು ಕೊಟ್ಟು ಮೂಗೆತ್ತಿನ ಹಾಗೆ ದುಡಿಯಬೇಕಾಗಿ ಬಂದ ದಾರುಣ ಬಡತನದ ಚಿತ್ರ ನೀಡಿರುವುದು ಎಂಥವರನ್ನೂ ಕರಗಿಸುತ್ತದೆ. ಇನ್ನು ಹೊಟ್ಟೆಪಾಡಿಗಾಗಿ ಬೆಂಗಳೂರಿಗೆ ಬಂದು ವಾಸವಿದ್ದ ಶ್ರೀರಾಮಪುರದ ಕೊಳೆಗೇರಿಯ ಮನೆಯಾದರೋ ತೀರಾ ಇಕ್ಕಟ್ಟಾಗಿದ್ದರಿಂದ ಹತ್ತಿರದ ಸ್ಮಶಾನದಲ್ಲಿ ಓದುವುದು ಬರೆಯುವುದು ಮಾಡಬೇಕಾಗುತ್ತಿತ್ತು. ಆದರೆ, ಇಂಥ ತೀವ್ರವಾದ ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ಸಂಕಲ್ಪ ಮತ್ತು ಸಾಧನೆಯ ಬಲದಿಂದ ವಿದ್ಯಾಭ್ಯಾಸ ಮುಂದುವರೆಸಿ ಪ್ರತಿಭಾವಂತ ವಿದ್ಯಾರ್ಥಿಯಾಗಿ ಹೊರಹೊಮ್ಮಿದ ಬಗೆಯನ್ನು ಲೇಖಕರು ಮನವರಿಕೆ ಮಾಡಿಕೊಟ್ಟಿದ್ದಾರೆ. ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಶಾಸನ ಸಭೆಯ ಸದಸ್ಯರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಅವರು ಸಾಗಿಬಂದ ವೃತ್ತಿ ಜೀವನದ ನೆಲೆಗಳನ್ನು ದಾಖಲಿಸಿಕೊಟ್ಟಿದ್ದಾರೆ.

ದೇವನೂರರು ತಮ್ಮ ಬಳಿಗೆ ಬಂದ ಎಲ್ಲ ಅವಕಾಶಗಳನ್ನು ದೂರೀಕರಿಸುತ್ತ ಹೋದವರಾದರೆ ಸಿದ್ಧಲಿಂಗಯ್ಯ ಬಗೆಬಗೆಯ ಅವಕಾಶಗಳನ್ನು ಅರಸುತ್ತ ಅಪ್ಪಿಕೊಳ್ಳುತ್ತ ಹೋದವರು. 'ದಲಿತರ ಆಧಿಕ' ಎಂಬ ಸಿದ್ಧಲಿಂಗಯ್ಯನವರನ್ನು ಕುರಿತ ಡಿ.ಆರ್. ಅವರ ಮಾತು ಪ್ರಶಂಸಾತ್ಮಕವೋ, ಚರ್ಚಾಸ್ಪದವೋ ಹೇಗೋ ತಿಳಿಯದು. ಆದರೆ, ಅವರ 'ಹೊಲೆಮಾದಿಗರ ಹಾಡು' ಕನ್ನಡ ಸಾಹಿತ್ಯದಲ್ಲಿ ಮೂಡಿಸಿದ ಸಂಚಲನ ಮಾತ್ರ ಒಂದು ಸಾರ್ವಕಾಲಿಕ ದಾಖಲೆ. ಸಿದ್ಧಲಿಂಗಯ್ಯನವರು 'ಇಕ್ರಲಾ, ವದೀರ್ಲಾ, ಈ ನನ್ನ ಮಕ್ಕಳ ಚರ್ಮ ಎಬ್ರಲಾ' ಎಂಬ ಸಿಡಿಲಿನಂಥ ಮಾತುಗಳಿಂದ ತಮ್ಮ ಹೋರಾಟವನ್ನೇನೋ ಪ್ರಾರಂಭಿಸಿದರು... ಆದರೆ ಎಲ್ಲೋ ಒಂದುಕಡೆ ಸಿದ್ದಲಿಂಗಯ್ಯನವರು ಎಲ್ಲ ಕಡೆಯೂ ರಾಜಿಯಾಗುತ್ತ ಹೋದರೇನೋ ಎಂಬಂಥ

ಅನುಮಾನಗಳು ಕಾಡುತ್ತವೆ. ಆದರೆ ಅದೇ ಮಹಾದೇವರ ಮಾತುಗಳು ಎಲ್ಲಿಯೂ ತುಟಿಮೀರದೆ ತಣ್ಣಗೇ ಇದ್ದರೂ ಅವರು ತಮ್ಮ ವ್ಯಕ್ತಿತ್ವ ಮತ್ತು ಪ್ರಾಮಾಣಿಕವಾದ ನಿಲುವುಗಳಿಂದ ಬೀರಿದ ಪ್ರಭಾವ ಸಿಡಿಲಿಗಿಂತಲೂ ಮಿಗಿಲಾದ್ದು. ಏಕೋ ಏನೋ ಈ ಕೃತಿಯ ಲೇಖಕರು ಈ ಕಡೆಗೆ ಗಮನ ಹರಿಸಿದಂತೆ ಕಾಣುವುದಿಲ್ಲ.

ಇನ್ನುಳಿದಂತೆ ಸಿದ್ಧಲಿಂಗಯ್ಯನವರ ಕಾವ್ಯ ಪ್ರತಿಭೆಯನ್ನು ಅವರ ಕಾವ್ಯದಲ್ಲಿ ನಿಹಿತವಾಗಿರುವ ಲಯಗಾರಿಕೆಯನ್ನು, ಸತ್ವವನ್ನು , ಹೋರಾಟದ ಮನೋಧರ್ಮವನ್ನು, ಸಾಹಿತ್ಯಕ ಮೌಲ್ಯವನ್ನು ಮನಗಾಣಿಸಿಕೊಡುವಲ್ಲಿ ಲೇಖಕರು ಯಾವ ಕೃಪಣತೆಯನ್ನೂ ತೋರಿಲ್ಲ. ದಲಿತರ ಸ್ಥಿತಿ, ನೋವು, ಅಪಮಾನ ಮತ್ತು ಜಾಗೃತಿಗಳನ್ನು ಕೇಂದ್ರವಾಗಿಟ್ಟುಕೊಂಡು ಬರೆದ 'ನೆಲಸಮ', 'ಪಂಚಮ' ಮತ್ತು 'ಏಕಲವ್ಯ' ನಾಟಕಗಳ ಸಂಕ್ಷಿಪ್ತ ಪರಿಚಯ ಮತ್ತು ವಿಮರ್ಶೆ ಮಾಡಿಕೊಡಲಾಗಿದೆ. ಅವರ 'ಊರುಕೇರಿ' ಎಂಬ ಸ್ವಾರಸ್ಯಕರವಾದ ಆತ್ಮಕಥನದ ಹಾಗೂ ಅವರ ಇನ್ನಿತರೆ ಗದ್ಯಕೃತಿಗಳಾದ 'ಅವತಾರಗಳು'. 'ಹಕ್ಕಿಗಳು' ಮತ್ತು 'ಗ್ರಾಮದೇವತೆಗಳು' (ಪಿಎಚ್.ಡಿ. ಪ್ರಬಂಧ) ಈ ಕೃತಿಗಳ ಪರಿಚಯ ಏಕೋ ತೀರಾ ಪೇಲವವಾಗಿದೆ. 'ಊರುಕೇರಿ' ಕುರಿತಂತೆ ಡಿ.ಆರ್. ನಾಗರಾಜರ 'ದಲಿತನ ಸಿಟ್ಟಿನಿಂದ ಲೋಕ ಒಡೆದುಹೋಗುವುದು ಅನುಮಾನದ ಸಂಗತಿ. ಆದರೆ ಇಲ್ಲಿ ಆತ 'ಗೊಳ್' ಎಂದು ನಗುವ ರೀತಿಗೆ ಬೆಚ್ಚಿಬೀಳುವುದು ಖಾತ್ರಿ' ಎಂಬ ಅತ್ಯಂತ ಮಾರ್ಮಿಕವೂ, ಯಥಾರ್ಥವೂ ಆದ ಮಾತನ್ನು ಪುಸ್ತಕದ ಮೊದಲ ಪುಟದಲ್ಲೇ ಉಲ್ಲೇಖಿಸಿರುವುದು ಅರ್ಥವತ್ತಾಗಿದೆ. ಇನ್ನುಳಿದಂತೆ ಸಿದ್ಧಲಿಂಗಯ್ಯನವರ ಬದುಕಿನ ಸ್ವಾರಸ್ಯಕರವಾದ ಕೆಲವು ಪ್ರಸಂಗಗಳನ್ನು ನಿರೂಪಿಸುವ ಮೂಲಕ ಸಿದ್ಧಲಿಂಗಯ್ಯನವರ ವ್ಯಕ್ತಿತ್ವದ ಅವಿಭಾಜ್ಯ ಅಂಗವಾದ ಹಾಸ್ಯಪ್ರವೃತ್ತಿ ಪ್ರಸ್ಫುಟಿತಗೊಂಡಿರುವ ಬಗೆಯನ್ನು ವಿಶದವಾಗಿ ನಿರೂಪಿಸಿದ್ದಾರೆ. ಎರಡೂ ಕೃತಿಗಳ ಅನುಬಂಧಗಳಲ್ಲಿ ವ್ಯಕ್ತಿಗತ ವಿವರಗಳು, ಕೃತಿಗಳ ಪಟ್ಟಿಗಳು, ಮತ್ತು ಕೆಲವು ಭಾವಚಿತ್ರಗಳನ್ನು ಒದಗಿಸಿದ್ದಾರೆ.

ಒಟ್ಟಾರೆ ಈ ಇಬ್ಬರು ಲೇಖಕರ ಬದುಕು ಮತ್ತು ಬರಹಗಳಿಗೆ ಸಂಬಂಧಿಸಿದ ವಿವರ ಮತ್ತು ವಿಮರ್ಶೆಗಳನ್ನು ಸಮಗ್ರವಾಗಿ ಅಲ್ಲದಿದ್ದರೂ ಸಮರ್ಪಕವಾಗಿ ಈ ಪುಟ್ಟ ಪುಸ್ತಕಗಳಲ್ಲಿ ಮಾಡಿಕೊಟ್ಟಿರುವ ಲೇಖಕರ ಪ್ರಯತ್ನ ಅಭಿನಂದನಾರ್ಹವಾದ್ದು.

❖

32

ಅಚ್ಚುಕಟ್ಟಾದ ಸಂಪಾದನೆ

ಪಂಜೆಯವರು ಕನ್ನಡದ ಮುಂಬೆಳಗಿನ ದಿನಗಳಲ್ಲಿ ಕನ್ನಡವನ್ನು ಕಟ್ಟುವ ಮೂಲಕ ಆಧುನಿಕ ಕನ್ನಡದ ದೀಪಹೊತ್ತಿಸಿದ ಆದ್ಯರಲ್ಲಿ ಅತ್ಯಂತ ಪ್ರಮುಖರೆನಿಸಿದವರು. ಪಂಜೆಯವರು ಎಂದಕೂಡಲೆ ನಮ್ಮ ಮನಸ್ಸಿನಲ್ಲಿ ಸುಳಿಯುವ ಚಿತ್ರ 'ಮೂಡುವನು ರವಿ ಮೂಡುವನು ಕತ್ತಲೊಡನೆ ಜಗಳಾಡುವನು' (ಉದಯರಾಗ),' ಬರಲಿದೆ ಅಹಹಾ! ದೂರದಿ ಬರಲಿದೆ/ ಬುಸುಗುಟ್ಟುವ ಪಾತಾಳದ ಹಾವೊ/ ಹಸಿವಿನ ಭೂತವು ಕೂಯುವ ಕೂವೊ?' (ತೆಂಕಣಗಾಳಿಯಾಟ), 'ನಾಗರಹಾವೆ ಹಾವೊಳು ಹೂವೆ ಬಾಗಿಲ ಬಿಲದೊಳು ನಿನ್ನಯ ಠಾವೇ (ನಾಗರಹಾವು),' 'ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿಬಿಮ್ಮನೆ ಬಂದಳೊ' (ಹುತ್ತರಿ

ಪಂಜೆ ಮಂಗೇಶರಾಯರ ಅಪ್ರಕಟಿತ ಬರಹಗಳು
ಡಾ. ವರದಾ ಶ್ರೀನಿವಾಸ
ಪ್ರಥಮ ಮುದ್ರಣ: 2015 ಪುಟ: 304
ಅಂಕಿತ ಪುಸ್ತಕ, 53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು

ಹಾಡು), 'ಮಿನುಗೆಲೆ ಮಿನುಗೆಲೆ ನಕ್ಷತ್ರ ನನಗಿದು ಚೋದ್ಯವು ಬಲುಚಿತ್ರ' (`Twinkle twinkle little star'ದ ಅನುವಾದ) ಎಂಬ ಕನ್ನಡಿಗರ ನೆನಪಿನಲ್ಲಿ ಚಿರಸ್ಥಾಯಿಯಾಗಿ ಉಳಿದಿರುವ ಸಾಲುಗಳ ಕವಿತೆಗಳನ್ನು ರಚಿಸಿದ ಕವಿಯ ಚಿತ್ರ. 'ಕಶಿಷ್ಯ' ಎಂಬ ಕಾವ್ಯನಾಮದಿಂದ ಅತ್ಯಂತ ಸುರಮ್ಯವಾದ ಗೀತೆಗಳನ್ನು, ಮಕ್ಕಳ ಕುತೂಹಲ ಮತ್ತು ಕಲ್ಪನೆಗಳನ್ನು ಅರಳಿಸುವಂಥ ಕಥೆ, ಕವನಗಳನ್ನು ಕೊಟ್ಟ ಪ್ರತಿಭಾವಂತ, ಸೃಜನಶೀಲ ಸಾಹಿತಿ ಅಷ್ಟೇ ಅಲ್ಲ, ಸಣ್ಣಕಥೆ, ಕಾದಂಬರಿ, ನೀಳ್ಗತೆ, ಕಥನಕವನಗಳು, ಶೋಕಗೀತೆ, ಸಂಶೋಧನೆ, ಲಲಿತಪ್ರಬಂಧ, ಭಾಷಾಂತರ, ರೂಪಾಂತರ, ಹಾಸ್ಯ, ಹರಟೆ, ವಿಡಂಬನೆ, ಗ್ರಂಥ ಸಂಪಾದನೆ, ಪತ್ತೇದಾರಿ ಕಾದಂಬರಿ, ಹೀಗೆ ಹಲವು ಹತ್ತು ಪ್ರಕಾರಗಳಲ್ಲಿ ಕೃಷಿ ಮಾಡಿದ ಧೀಮಂತ. ಹೊಸಗನ್ನಡದಲ್ಲಿ ಸಣ್ಣಕಥೆ, ಶೋಕಗೀತೆ, ಕ್ರಾಂತಿಗೀತೆಗಳಿಗೆ ಅವರೇ ಮೊದಲಿಗರು. ಶಾಲಾ ಇನ್‌ಸ್ಪೆಕ್ಟರ್ ಆಗಿದ್ದುಕೊಂಡು ಮಕ್ಕಳ ಮನವನ್ನು ಅರಳಿಸುವಂಥ ಪಠ್ಯಪುಸ್ತಕಗಳನ್ನು ರಚಿಸಿದ ಶ್ರೇಯಸ್ಸೂ ಅವರದೇ. ಅವರ 'ಕಮಲಾಪುರದ ಹೋಟ್ಲು' ಕನ್ನಡದ ಮೊದಲ ಕಥೆ ಎಂದು ಹೆಸರಾಗಿದೆ. ಕನ್ನಡ ನವೋದಯದ ಕಾರಣಪುರುಷರೆಂದು ಖ್ಯಾತರಾದ ಆಚಾರ್ಯ ಬಿ.ಎಂ.ಶ್ರೀಯವರಿಗಿಂತಲೂ ಮುಂಚೆಯೇ ನವೋದಯ ಕಾವ್ಯಪ್ರಕಾರದ ಛಂದಸ್ಸು ಮತ್ತು ವಿಷಯದ ನಾವೀನ್ಯತೆಗಳ ಸುಳುಹು ಮೊದಲು ಕಾಣಿಸಿಕೊಂಡದ್ದು ಪಂಜೆಯವರ ರಚನೆಗಳಲ್ಲಿ ಎಂಬುದು ನಿಜವಾದರೂ, ಅದು ಒಂದು ಚಳುವಳಿಯನ್ನು ಹುಟ್ಟುಹಾಕುವಷ್ಟು ಪ್ರಖರವಾಗಿ ಮತ್ತು ವಿಪುಲ ಪ್ರಮಾಣದಲ್ಲಿ ಇರಲಿಲ್ಲವಾಗಿ, ಪಂಜೆಯವರು ನವೋದಯದ ಪ್ರವರ್ತಕರೆಂಬ ಶ್ರೇಯಸ್ಸಿಗೆ ಭಾಜನರಾಗಲಿಲ್ಲ. ಆದರೆ ಕನ್ನಡ ಸಾಹಿತ್ಯ ಒಂದು ಹೊಸ ತಿರುವನ್ನು ಪಡೆದುಕೊಳ್ಳುತ್ತಿದ್ದ ಸಂಧಿಕಾಲದಲ್ಲಿ ಸಿದ್ಧರೂಪವಿಲ್ಲದಿದ್ದ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ತಮ್ಮ ಪ್ರಯೋಗಶೀಲ ಬುದ್ಧಿಯಿಂದ ಸತ್ವಯುತವಾದ ಕೃತಿಗಳನ್ನು ನೀಡಿದ ಹಿರಿಯರಾಗಿ ಕನ್ನಡ ಎಂದೆಂದೂ ಮರೆಯಬಾರದ ಮಹಾವ್ಯಕ್ತಿಯಾಗಿದ್ದಾರೆ.

ಇಂಥ ಪ್ರಾತಃಸ್ಮರಣೀಯರಾದ ಮಹಾಸಾಹಿತಿ ಪಂಜೆಯವರ ಕೃತಿಗಳು ಹಿಂದೆಯೂ ಓರಿಯಂಟ್ ಲಾಂಗ್ ಮನ್ಸ್ ಅವರಿಂದ ಬೇರೆ ಬೇರೆ ಪ್ರಕಾರಗಳಿಗನುಸಾರವಾಗಿ ಪ್ರಕಟವಾಗಿದ್ದವು. ಆದರೆ ಸಮಗ್ರವಾಗಿ ಆಗಿರಲಿಲ್ಲ. 2015ರಲ್ಲಿ ಅಂಕಿತ ಪ್ರಕಾಶನದ ವತಿಯಿಂದ ಪಂಜೆಯವರ ರಚನೆಗಳೆಲ್ಲವೂ ನಾಲ್ಕು ಸಂಪುಟಗಳಲ್ಲಿ 'ಪಂಜೆಯವರ ಸಮಗ್ರ ಸಾಹಿತ್ಯ' ಎಂಬ ಹೆಸರಿನಲ್ಲಿ ಪ್ರಕಟವಾದವು. ಆದರೆ ಇವುಗಳಲ್ಲೂ ಸೇರದ ಪಂಜೆಯವರ ಅಪ್ರಕಟಿತ ಬರಹಗಳನ್ನೆಲ್ಲಾ ಒಟ್ಟುಗೂಡಿಸಿ ಇದೀಗ ಡಾ. ವರದಾ

ಶ್ರೀನಿವಾಸ್ ಅವರು 'ಪಂಜೆಮಂಗೇಶರಾಯರ ಅಪ್ರಕಟಿತ ಬರಹಗಳು' ಎಂಬ ಹೆಸರಿನಲ್ಲಿ ಸೊಗಸಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. ಡಾ. ವರದಾ ಶ್ರೀನಿವಾಸ್ ಅವರು ಪಂಜೆಯರ ಸಮಗ್ರ ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿ ಬಹಳ ಹಿಂದೆಯೇ ಡಾಕ್ಟರೇಟ್ ಪದವಿ ಪಡೆದವರು. ಪಂಜೆಯವರ ಕೃತಿಗಳನ್ನು ಸಂಪಾದಿಸಲು ಅವರಿಗಿಂತ ಹೆಚ್ಚು ಅಧಿಕಾರ ಹೊಂದಿದ ಸಮರ್ಥರು ಪ್ರಸ್ತುತ ಸಂದರ್ಭದಲ್ಲಂತೂ ವಿರಳವೇ. ಇದರಲ್ಲಿ ಏಳು ಭಾಗಗಳಿವೆ. 1) ಶಿಶು ಸಾಹಿತ್ಯ- ಕಥೆಗಳು, 2) ಪದ್ಯಗಳು (ಕಥನ ಕವನ), 3) ಗದ್ಯ ಬರಹಗಳು, 4) ಲಲಿತ ಪ್ರಬಂಧ, 5) ಐತಿಹಾಸಿಕ ಕಥೆ, 6) ಪತ್ತೇದಾರಿ ಕಾದಂಬರಿ ಎಂಬ ಆರು ಭಾಗಗಳಲ್ಲಿ ಇವು ಸಂಕಲಿತವಾಗಿವೆ. ಏಳನೆಯ ಭಾಗದ ಅನುಬಂಧ-1ರಲ್ಲಿ ಕೆಲವು ಲೇಖನಗಳು ಮತ್ತು ಕಥೆಗಳು ಪ್ರಕಟವಾದ ಸಂದರ್ಭ, ಹಿನ್ನೆಲೆ ಮತ್ತು ಕೆಲವು ರಚನೆಗಳ ಸಂಕ್ಷಿಪ್ತ ವಿಶ್ಲೇಷಣೆಗಳನ್ನು ಅಳವಡಿಸಿದ್ದಾರೆ. ಅನುಬಂಧ 2ರಲ್ಲಿ ಮೊದಲ ಮುದ್ರಣಕ್ಕೆ ಖ್ಯಾತ ಕವಿ ವಿ.ಸೀ.ಯವರು ಬರೆದಿದ್ದ ಪಂಜೆಯವರ ಬಗೆಗಿನ ತಮ್ಮ ಪರಿಚಯ, ಒಡನಾಟಗಳನ್ನು ತಿಳಿಸಿರುವ ಬರಹವಿದೆ.

ಪದ್ಯವಿರಲಿ, ಗದ್ಯವಿರಲಿ, ಸಂಶೋಧನೆಯಿರಲಿ ಪಂಜೆಯವರ ಕನ್ನಡ ಅತ್ಯಂತ ಸುಲಲಿತವಾದ, ತಿಳಿಯಾದ ಕನ್ನಡ. ಓದುವವರಿಗೆ ಯಾವುದೇ ಶ್ರಮವಾಗದೆ ನೇರವಾಗಿ ಅವರ ಹೃದಯದಲ್ಲಿ ಹೋಗಬೇಕೆಂಬ ಉದ್ದೇಶದಿಂದ ಬರೆದವು. ಅವರ ಪದ್ಯದ ರೀತಿಗೆ

ಸೋಮಾರಿ ಮಲ್ಲಾ!
ಕೆಲಸಕ್ಕೆ ಸಲ್ಲಾ!
ಹೊಟ್ಟೆಗೆ ಇಲ್ಲಾ!
ಕಥೆಕೇಳಿ ಎಲ್ಲ!

ಗೋವಿನ ಕಥೆಯ ಮಟ್ಟಿನಲ್ಲಿ ಇರುವ 'ರಂಗಸೆಟ್ಟಿ' ಜಾನ್ ಗಿಲ್ಪಿನ್ ಕವಿಯ ಕತೆಯ ರೂಪಾಂತರಿತ ಕವನ.

ಸಂಪಾದನೆಯ ಶಿಸ್ತಿಗೆ ಮತ್ತು ಅಚ್ಚುಕಟ್ಟುತನಕ್ಕೆ ಒಂದು ನಿದರ್ಶನವೆಂಬಂತೆ ಕನ್ನಡದ ಈ ಹಿರಿಯರ ಬರಹಗಳನ್ನು ಅತ್ಯಂತ ವಿಚಕ್ಷಣತೆಯಿಂದ ಸಂಪಾದಿಸಿಕೊಟ್ಟಿರುವ ಡಾ. ವರದಾ ಶ್ರೀನಿವಾಸ್ ಮತ್ತು ತುಂಬ ಸುಂದರವಾಗಿ ಪ್ರಕಟಿಸಿರುವ ಅಂಕಿತ ಪ್ರಕಾಶನದವರು ಅಭಿನಂದನಾರ್ಹರು.

❖

೩೩

ದಲಿತರ ನೆಲದ ಹೋರಾಟದ ಸಂಕಥನ

ದಲಿತರ ನೆಲದ ಹಕ್ಕಿನ ಹೋರಾಟವನ್ನು ಕೇಂದ್ರವಸ್ತುವಾಗುಳ್ಳ ಈ ಸುದೀರ್ಘ ಕಾದಂಬರಿ ದಲಿತರ ಬದುಕನ್ನು ಅದರ ಎಲ್ಲ ವಿವರಗಳಲ್ಲಿ ಅನಾವರಣಗೊಳಿಸುವ ಮಹತ್ವಾಕಾಂಕ್ಷೆ ಹೊಂದಿದೆ.

ಸ್ವಾತಂತ್ರ್ಯಪೂರ್ವದ ಕಾಲಘಟ್ಟದಿಂದ ಹಿಡಿದು ಸ್ವಾತಂತ್ರ್ಯೋತ್ತರದ ಈಚಿನ ಹಂತವಾದ ಜಾಗತೀಕರಣದವರೆಗೂ ಇದರ ಚಾಚು ಇದೆ. ಶಿವಮೊಗ್ಗ ಜಿಲ್ಲೆಯ ಮಲೆನಾಡಸೆರಗಿನ, ಹೆಚ್ಚುಕಡಿಮೆ ಬಯಲು ಸೀಮೆ ಎಂದೇ ಹೇಳಬಹುದಾದ ಭೌಗೋಳಿಕ ಪರಿಸರದ ಹಳ್ಳಿಗಳ ಗ್ರಾಮೀಣ ಬದುಕು ಇದರಲ್ಲಿ ಚಿತ್ರಿತವಾಗಿರುವುದು. ಉಡಳ್ಳಿಯ ಹಟ್ಟಿ ಮತ್ತು ಕೇರಿಗಳ ನಡುವಿನ ಸಂಘರ್ಷ ಮತ್ತು ಒಡನಾಟಗಳ ಮುಖೇನ ಇದು

ಗಿಡ್ಡಜ್ಜಿಯ ಬಯಲು– ಡಿ.ಬಿ. ಶಂಕರಪ್ಪ
ಪುಟಗಳು: 446 ಬೆಲೆ: 300
ಮಾಯಮ್ಮ ಪ್ರಕಾಶನ
ಮನೆ ನಂ.68, 'ಹುತ್ತೇಶ ಕೃಪ', ಲಾಲಬಹದ್ದೂರ ಶಾಸ್ತ್ರಿನಗರ, ಸವಲಂಗ ರಸ್ತೆ, ಶಿವಮೊಗ್ಗ

ಸುರುಳಿಬಿಚ್ಚಿಕೊಳ್ಳುತ್ತ ಸಾಗುತ್ತದೆ. ಭೂಮಿಯ ಹಿಡುವಳಿಯನ್ನು ಲಾಗಾಯ್ತಿನಿಂದಲೂ ತಮ್ಮದಾಗಿಸಿಕೊಂಡಿರುವ ಮೇಲ್ವರ್ಗದವರ ಭೂದಾಹದ ಮೇಲಾಟದಲ್ಲಿ ಈ ನೆಲದ ಮಕ್ಕಳಾದ ದಲಿತರು ಸದಾ ಭೂಮಿಯ ಹಕ್ಕಿಗೆ ಎರವಾಗಿರುವುದೇ ಈ ದೇಶದ ದಲಿತರ ದಾರುಣ ಇತಿಹಾಸ. ಕಾರಂತರ ಚೋಮನದುಡಿ ಬಹಳ ಹಿಂದೆಯೇ ಅದನ್ನು ಅನನ್ಯವಾದ ರೀತಿಯಲ್ಲಿ ತೋರಿಸಿಕೊಟ್ಟಿದೆ. ತಮ್ಮದೇ ಆದ ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳುವುದರಿಂದ ವಂಚಿತರಾಗಿ ಭೂಹಿಡುವಳಿ ಹೊಂದಿದವರ ಹೊಲಗದ್ದೆಗಳಲ್ಲಿ ಜೀತದಾಳುಗಳಂತೆ ಮೂಗುರ್ಚಿಗಳಾಗಿ ದುಡಿಯುವುದೇ ಅವರ ಬದುಕಾಗಿದೆ. ಅವರು ಇಟ್ಟದ್ದನ್ನು ಪ್ರಸಾದವೆಂಬಂತೆ ಸ್ವೀಕರಿಸುವುದರಲ್ಲೇ ಧನ್ಯತೆಯನ್ನು ಕಂಡುಕೊಳ್ಳಬೇಕಾಗಿರುವ, ವಿದ್ಯೆ, ಸಾಮಾಜಿಕ ಬದುಕು (ಕುಡಿಯುವ ನೀರಿಗೂ ಅವರ ಮರ್ಜಿ ಕಾಯಬೇಕಾದ ಸ್ಥಿತಿ) ಇವುಗಳಿಂದ ವಂಚಿತವಾಗಿರುವುದು, ತಮ್ಮ ಹಟ್ಟಿಯ ಹರಯದ ಹೆಣ್ಣುಗಳು ಕೇರಿಯ ಗೌಡರ ದೇಹದ ದಾಹ ತೀರಿಸಲು ಬಳಕೆಯಾಗುವುದನ್ನು ನೋಡಿಯೂ ಸೊಲ್ಲೆತ್ತದಂತಿರಬೇಕಾಗಿರುವ ಅಸಹಾಯಕತೆ, ಇನ್ನು ಅವರವರಲ್ಲೇ ಇರುವ ಹಾದರದ ಸಂಬಂಧಗಳು ಇವನ್ನೆಲ್ಲ ಕಾದಂಬರಿ ಚಿತ್ರಿಸುತ್ತದಾದರೂ ತಮ್ಮ ಅನುಭವ ಸಮಸ್ತವನ್ನೂ ಇದರಲ್ಲಿ ತುಂಬಿಬಿಡಬೇಕೆಂಬ ಕಾದಂಬರಿಕಾರ ಉಮೇದಿನಿಂದಾಗಿ ಕಾದಂಬರಿಯ ಮೂಲ ಉದ್ದೇಶವಾದ ದಲಿತರ ನೆಲದ ಹಕ್ಕಿನ ಹೋರಾಟಕ್ಕೆ ಸರಿಯಾದ ಫೋಕಸ್ ಸಿಕ್ಕಿಲ್ಲವೆನಿಸುತ್ತದೆ. ಗೋಮಾಳದ ಭೂಮಿಯನ್ನು ತಮ್ಮದಾಗಿ ಮಾಡಿಕೊಳ್ಳಬೇಕೆಂಬ ಹಟ್ಟಿಯವರ ಉದ್ದೇಶವನ್ನು ಹಾಳುಗೆಡಹಲು ಎಲ್ಲ ಬಗೆಯ ಹುನ್ನಾರುಗಳನ್ನು ಮಾಡುವ ಕೇರಿಯ ಭೂ ಒಡೆಯರ ಉದ್ದೇಶ ಈಡೇರದಂತೆ ಕೇರಿಯ ಬಸವಲಿಂಗಪ್ಪ ಗೌಡನೇ ಹಟ್ಟಿಯವರಿಗೆ ಎಲ್ಲ ಬಗೆಯ ಕುಮ್ಮಕ್ಕು, ನೈತಿಕ ಬೆಂಬಲ ಮಾತ್ರವಲ್ಲದೆ ಅವರಿಗೆ ಅಗತ್ಯವಾದ ಆಹಾರ ಪಾನೀಯಗಳನ್ನು ಒದಗಿಸುತ್ತಾನೆ. ಇನ್ನು ಅವನ ಹೆಂಡತಿ ದೇವೀರಿಯಂತೂ ದಲಿತರ ಪಾಲಿನ ರಕ್ಷಕ ದೇವತೆಯಂತೆ ಮೊದಲಿನಿಂದ ಕೊನೆಯವರೆಗೂ ಅವರೆಲ್ಲರ ಕಷ್ಟಕ್ಕೆ ಬೆನ್ನೆಲುಬಿನಂತೆ ನಿಲ್ಲುತ್ತಾಳೆ. ತನ್ನ ಗಂಡನ ಸಂಬಂಧದಿಂದ ದಲಿತರ ಹೆಣ್ಣು ಮಂಜಿಯ ಹೊಟ್ಟೆಯಲ್ಲಿ ಹುಟ್ಟಿದವನೆಂಬ ಕಾರಣಕ್ಕೆ ಚಂದ್ರಬಿಂಬನಿಗೆ ಗಂಡ ತೋರದಿರುವ ಅಕ್ಕರೆ, ವಾತ್ಸಲ್ಯ ತೋರಿ ನೆರವಾಗುತ್ತಾಳೆ. ಮುಂದೆ ದಲಿತರು ಬೆಳೆ ತೆಗೆದಿದ್ದ ಗಿಡ್ಡಜ್ಜಿಯ ಬಯಲಿನ ಹೊಲಗಳಿಗೆ ಊರ ಗೌಡರು ದನಕರುಗಳನ್ನು ಬಿಟ್ಟು ಮೇಯಿಸಿದ ಸಂದರ್ಭದಲ್ಲಿ ಅವರ ಪರವಾಗಿ ನ್ಯಾಯ ಕೊಡಿಸಲು ಮತ್ತು ಆ ವರ್ಷ ಅವರ

ಜೀವನ ಸಲೀಸಾಗಿ ಸಾಗಲು ದವಸ ಧಾನ್ಯಗಳ ನೆರವೀಯುತ್ತಾಳೆ. ಮುಂದೆ ಅವನ ಮಗ ಬಸವರಾಜಪ್ಪನೂ ಇದೇ ಬಗೆಯ ನೆರವು ಮತ್ತು ಸಹಾನುಭೂತಿ ತೋರುತ್ತಾನೆ. ಸ್ವಾತಂತ್ರ್ಯ ಹೋರಾಟಗಾರ ಸಂಗಣ್ಣನಂತೂ ದಲಿತರಿಗೆ ಎಲ್ಲ ರೀತಿಯ ನೆರವಿನ ಹಸ್ತ ಚಾಚುತಾನೆ. ಹೀಗಾಗಿ ಇದು ಸವರ್ಣೀಯ ಭೂ ಒಡೆಯರ ಮತ್ತು ದಲಿತರ ನಡುವಿನ ಹೋರಾಟ ಎಂದು ಸರಳೀಕರಿಸಿ ಹೇಳಿಬಿಡುವಂತೆಯೂ ಇಲ್ಲ. ದಲಿತರ ಮತ್ತು ಭೂಒಡೆಯರ ಸಂಘರ್ಷವೆಂದು ಬಿಂಬಿತವಾಗಬೇಕಾಗಿದ್ದದ್ದು ಕೇರಿಯ ಅಕ್ರಮ (ಕೊತ್ವ-ನಾಗಿ) ಸಂತಾನವೇ ಆದ ಮಹಾರುದ್ರ ಮತ್ತು ಊರ ದೊಡ್ಡಮನೆಯವರೆಂದು ಹೆಸರಾದ ಬಸವಲಿಂಗಪ್ಪಗೌಡನ ಕುಟುಂಬದ ನಡುವಿನ ವೈಯಕ್ತಿಕ ಪ್ರತಿಷ್ಠೆಗಳ ಮೇಲಾಟವೆಂಬಂತೆ ಬಿಂಬಿತವಾಗಿರುವುದು ಹಾಗೂ ಈ ಮಹಾರುದ್ರನೇ ಹಲವರನ್ನು ಕೊಂದು ಹಟ್ಟಿಯನ್ನು ಹಾಳುಮಾಡಿದವನೆಂದು ಚಿತ್ರಿತವಾಗಿರುವುದು ಮುಖ್ಯ ಹೋರಾಟವನ್ನು ದುರ್ಬಲಗೊಳಿಸಿದಂತಾಗಿದೆ. ಅದು ಹಿನ್ನೆಲೆಗೆ ಸರಿದು ಮಹಾರಾಜರು ದಲಿತರಿಗೆ ಜಮೀನು ಮಂಜೂರಾತಿ ನೀಡಬೇಕೆಂದು ಹೇಳಿದ್ದರೂ ಮಾನವೀಯತೆಯೇ ಮೂರ್ತಿವೆತ್ತಂಥ ತಹಶೀಲ್ದಾರ್ ಶ್ರೀನಿವಾಸ ಅಯ್ಯಂಗಾರ್ ಹಟ್ಟಿಯವರಿಗೆ ಜಮೀನು ಮಂಜೂರು ಮಾಡಿದ್ದರೂ ಆಮೇಲೆ ಬಂದ ಅಧಿಕಾರಿಯ ಹಿಕ್ಮತ್ತಿನಿಂದಾಗಿ ಸರ್ಕಾರೀ ಕಡತಗಳಲ್ಲಿ ಅವರಂತೆ ಆಗಿಯೇ ಇರಲಿಲ್ಲವಾದ ಕಾರಣ ಸರ್ಕಾರವೇ ಈಗ ಖಾಸಗಿ ಕಂಪನಿಗೆ ಕೊಟ್ಟಿದೆ. ಹೀಗಾಗಿ ಕಾದಂಬರಿಯ ಕೊನೆಯ ಭಾಗ ಪಡೆದುಕೊಳ್ಳುವ ಅನಿರೀಕ್ಷಿತ ತಿರುವುಗಳು ಕಾದಂಬರಿಯ ಮೂಲ ಕಥೆಯೊಂದಿಗೆ ಹೊಂದಿಕೊಳ್ಳದೆ ಬಲವಂತವಾಗಿ ತಂದು ಸೇರಿಸಿದಂತಿವೆ. ಆ ಕಾರಣಕ್ಕೆ ಅಸಹಜವೂ ಆಗಿವೆ.

ದಲಿತರಿಗೆ ದನಿಬಂದು ಭೂಮಿಯ ಮೇಲಿನ ತಮ್ಮ ಹಕ್ಕನ್ನು ಧೈರ್ಯವಾಗಿ ಸ್ಥಾಪಿಸುತ್ತಾರೆಂಬುದು– "ಯಾರಪ್ಪಂದು ಅಂತಹೋಗಿ ಹೊಡೆದು ಬಂದ್ರು ಕ್ಯಾಂಪು ಜಾಗ ! ನಾವು ನಾವು ಊರೋರೆ. ನಮ್ಮ ಅಪ್ಪಾರು ಇದೇ ಊರೋರು...... ಹಾಗೂ ಕ್ಯಾಂಪು ಜಾಗ ಊರೊಟ್ಟಿನ ಜಾಗ. ಊರೆಲ್ಲರ ಪಾಲು ಅದರಾಗೈತಿ ಅಂತ ತಿಳಿದಿದ್ದೀವಿ. ನಾವು ಊರಮಕ್ಕಳು" ಎಂಬ ದುರ್ಗನ ಆವೇಶದ ಮತ್ತು ರೋಷದ ಮಾತುಗಳಲ್ಲಿ ನಿಚ್ಚಳವಾಗಿ ವ್ಯಕ್ತವಾಗುತ್ತದಾದರೂ ಮಾರಿ ಹಬ್ಬದ ಜಾತ್ರೆಯ ಸಲುವಾಗಿ ಅಥವಾ ಮತ್ತೊಂದರ ಸಲುವಾಗಿ ಅದನ್ನು ಕೇರಿಯವರಿಗೆ ಈಡುಮಾಡುತ್ತಾರೆಂಬುದರಿಂದ ಹಾಗೂ ಅವರಿಗೇ ಸಾಗುವಳಿ ಮಾಡಲು ಗುತ್ತಿಗೆ ನೀಡುತ್ತಾರೆಂಬುದರಿಂದ ಭೂಮಿಯ

ಮೇಲಿನ ಹಕ್ಕು ಸಾಧಿಸುವ ತಮ್ಮ ಧ್ಯೇಯಸಾಧನೆಯಲ್ಲಿ ಅವರಿಗೆ ದೃಢತೆ ಇಲ್ಲವೆಂದು ಸೂಚಿತವಾಗುತ್ತದೆ.

ಕಾದಂಬರಿಯಲ್ಲಿ ಕೆಲವು ಧನಾತ್ಮಕ ಅಂಶಗಳಿವೆ. ಅವು ಸಾವಿರಾರು ವರ್ಷಗಳ ಜಾತಿಕಲಹ ಮತ್ತು ವರ್ಣೀಯ ಅಸಮಾನತೆಗಳಿಂದ ಜಡ್ಡುಗಟ್ಟಿದ ಸಮಾಜದಲ್ಲಿ ಕಾಣಿಸಿಕೊಂಡ ಬೆಳಕಿನ ಕಿರಣಗಳಾಗಿವೆ. ಅವುಗಳೆಂದರೆ ಊರ ಬೊಮ್ಮನಗೌಡನು ದಲಿತರ ಬೈರಿಯ ಮನೆಯಲ್ಲಿ ಮಲಗೆದ್ದು ಹೋಗುವುದನ್ನು ಪ್ರತಿಭಟಿಸುವ ಕ್ರಮವಾಗಿ ದುರ್ಗನ ನೇತೃತ್ವದಲ್ಲಿ ಇಡೀ ಹಟ್ಟಿಯೇ ಬಸವಲಿಂಗಪ್ಪಗೌಡನ ಬಳಿಗೆ ದೂರು ಕೊಂಡೊಯ್ಯುವುದು ಮತ್ತು ಆ ಸಂದರ್ಭದಲ್ಲಿ ದುರ್ಗ "ನೋಡ್ರಿ ಗೌಡ್ರಾ........ ನಾವು ಸಣ್ಣೋರಿರಬೊದು . ನಮಗೂ ಶೀಲಸೂಕ್ಷ್ಮ ಅನ್ನೋದನ್ನು ನಮ್ಮ ಹಿರೇರು ನಡೆಸ್ಕೋತ ಬಂದಾರ..." ಎಂಬಂಥ ಸ್ವಾಭಿಮಾನದ ಮಾತುಗಳನ್ನು ದಿಟ್ಟವಾಗಿ ಹೇಳುವುದು ಅಂಥದೊಂದು ಅಂಶ.

ಹಟ್ಟಿ ಮತ್ತು ವಕ್ಕಲರೆಲ್ಲ ಗೌರವಾದರ ಪ್ರೀತಿ ಗಳಿಸಿದ್ದ ದಲಿತರ ಗಿಡ್ಡಜ್ಜಿಯ ಸಮಾಧಿಯನ್ನು ಊರಮುಖಂಡರೇ ಮುಂದೆನಿಂತು ಖರ್ಚುಹಾಕಿಕೊಂಡು ಮಾಡಿದ್ದು ಇವೆಲ್ಲ ಜಾತೀಯ ಸಾಮರಸ್ಯ ಸಾಧಿಸುವ ನಿಟ್ಟಿನಲ್ಲಿ ಧನಾತ್ಮಕ ಚಲನೆ ದಾಖಲಿಸಿವೆ. ಹಾಗೆಯೇ ಹಿಂದೆಯೇ ಸೂಚಿಸಿದಂತೆ ದಲಿತರ ಗೋಮಾಳದ ಜಮೀನು ಪಡೆದುಕೊಳ್ಳುವ ವಿಷಯಕ್ಕೆ ಮತ್ತು ಅನಂತರದಲ್ಲಿ ಅವರಿಗೆ ಸಾಗುವಳಿ ಮಾಡಲು ಅನುಕೂಲ ಕಲ್ಪಿಸುವಲ್ಲಿ, ಆನಂತರದಲ್ಲಿ ಕೇರಿಯವರು, ದಲಿತರು ಸಾಗುವಳಿ ಮಾಡಿದ ಜಮೀನಿಗೆ ದನಕರುಬಿಟ್ಟು ಬೆಳೆ ಮೇಯಿಸಿದ ಸಂದರ್ಭದಲ್ಲಿ ಕೇರಿಯ ಗೌಡ ಬಸವಲಿಂಗಪ್ಪ ಮತ್ತು ಅವನ ಹೆಂಡತಿ ಎಲ್ಲ ರೀತಿಯ ಬೆಂಬಲ ನೀಡುವುದು, ದುಂಡಿ ಎತ್ತುವ ಸ್ಪರ್ಧೆ ಕೇರಿಯ ಹುಡುಗರಿಗೆ ಮಾತ್ರ ಸೀಮಿತ ಎಂದು ಸ್ವಾಮಿಗಳು ಸಾರಿದಾಗ ಅದನ್ನು ವಿರೋಧಿಸಿದ ಗಿರಿಧರನಿಗೆ ಕೇರಿಯ ಬಸವರಾಜ ಬೆಂಬಲವಾಗಿ ನಿಂತದ್ದು. ಸಿಡಿಯೇರುವುದೇನಿದ್ದರೂ ದಲಿತ ಹೆಣ್ಣುಗಳಿಗೆ ಎಂದಿದ್ದನ್ನು ಮುರಿದು ತನ್ನ ಹೆಂಡತಿ ಈರಮ್ಮನನ್ನೇ ಸಿಡಿ ಏರಿಸಲು ಹಚ್ಚುವ ಮೂಲಕ ಅದು ಅನಿಷ್ಟ ಪದ್ಧತಿ ಎಂಬುದು ತೊಲಗಿ ಎಲ್ಲ ಜನರ ಸಾಂಸ್ಕೃತಿಕ ಹಬ್ಬವಾಗಿ ಮಾರ್ಪಡಲು ಕಾರಣನಾಗುತ್ತಾನೆ. ಹುಚ್ಚಪ್ಪ ಮಾಸ್ತರ್ ದಲಿತ ಮಂಜಿಗೆ ನಾಟಿವೈದ್ಯ ಕಲಿಸಿದ್ದು ಅದರ ಬಲದಿಂದ ಮಂಜಿ ಕಾಲರಾ ಬೇನೆಯಿಂದ ಊರಿಗೆ ಊರೇ ನರಳುತ್ತಿದ್ದಾಗ ಕೇರಿಯ ಪ್ರತಿ ಮನೆಯನ್ನೂ ಹೊಕ್ಕು ಉಪಚರಿಸಿದ್ದು,

ಮಾರಿ ಹಬ್ಬದಲ್ಲಿ ಕೈಕಾಲು ಮುರಿದುಕೊಂಡವರಿಗೆ ಆರೈಕೆ ಮಾಡಿದ್ದು, ಹಸಿವೆ ತಾಳದೆ ಔಡಲ ಹರಳು ತಿಂದು ಸಾವಿನ ಬಾಗಿಲಲ್ಲಿ ನಿಂತಿದ್ದ ಮಕ್ಕಳಿಗೆ ಔಷಧೋಪಚಾರ ಮಾಡಿದ್ದು, ಕಾಯಿಲೆಹತ್ತಿ ನೆಲ ಹಿಡಿದಿದ್ದ ಬಸವಲಿಂಗಪ್ಪಗೌಡನಿಗೆ ಆಸರೆಯಾದ್ದು, ಗೌಡರ ದೊಡ್ಡಪ್ಪಗಳಾದ ಕೆಂಚಜ್ಜ, ದೇವಜ್ಜರಿಗೆ ಮುಪ್ಪಿನಲ್ಲಿ ಆರೈಕೆ ಮಾಡಿ ಅವರ ಪ್ರೀತಿ, ವಿಶ್ವಾಸ ಗಳಿಸಿದ್ದು ಎಲ್ಲವೂ ದಲಿತರ ಮಂಜಿಯೇ ಎಂಬ ಹಾಗೂ ಅವಳಿಗೆ ಊರಲ್ಲಿ ಯಾರ ವಿರೋಧವೂ ಇರಲಿಲ್ಲ ಎಂಬ ಸಂಗತಿಗಳು ಈ ಕಾದಂಬರಿಯ ಪ್ರಖರ ಧನಾತ್ಮಕ ಅಂಶಗಳು. ಮುತ್ತಿನಂಥ ಚೆಲುವೆ ಮಂಜಿ ಯೌವನದ ಕಾವಿನಲ್ಲಿ ಬಸವಲಿಂಗಪ್ಪನ ಕಾಮಕ್ಕೆ ಪಕ್ಕಾದರೂ ಮುಂದೆ ಅವನ ಕ್ಷುದ್ರತೆ ಅರಿವಾದಾಗ ವಿರೋಧಿಸುವುದು, ಮುಂದೆ ಅವರ ಮನೆಯವರೆಲ್ಲರ ಪ್ರೀತಿಗೆ ಪಾತ್ರಳಾಗುವುದು, ಊರೆಲ್ಲ ಕಾಲರಾ ವ್ಯಾಧಿಯಿಂದ ನರಳುತ್ತಿದ್ದ ಸಂದರ್ಭದಲ್ಲಿ ಜಾತಿಯ ಕಟ್ಟುಪಾಡು ಮೀರಿ ಕೇರಿಯವರೆಲ್ಲ ಕದ್ದು ಕದ್ದು ದಲಿತರ ಬಾವಿಯಿಂದ ನೀರು ತರುವುದು, ಮೃತ್ಯುಮುಖಿಳಾಗಿದ್ದ ದಲಿತರ ಬೈರಿಯನ್ನು ಜಾತಿಯ ಲಕ್ಷ್ಮಣರೇಖೆ ದಾಟಿ ಬೊಮ್ಮನಗೌಡರ ಸೊಸೆಯರೆಲ್ಲ ಕೂಡಿಕೊಂಡು ಆರೈಕೆ ಮಾಡುವುದು ಇವೆಲ್ಲ ಕಾದಂಬರಿಯ ಧನಾತ್ಮಕ ಅಂಶಗಳಾದರೂ ಅದನ್ನು ದುರ್ಬಲಗೊಳಿಸುವಂತೆ ಮಂಜಿಯ ಮಗ ಚಂದ್ರಬಿಂಬ ಲಿಂಗಾಯಿತರ ಹುಡುಗಿಯನ್ನು ಮದುವೆಯಾದಾಗ ಆ ತಾಯಿಯಾದರೂ ಒಳಗಾಕಿಕೊಂಡಳಲ್ಲ ಎಂದು ತಮ್ಮ ಜಾತಿಯ ತೆಕ್ಕೆಗೆ ಬಂದುದಕ್ಕೆ ದೇವೀರಮ್ಮ ಸಂಭ್ರಮಿಸುತ್ತಾಳೆ. ಇನ್ನುಳಿದಂತೆ ವೈದ್ಯ ಕಲಿಯಲು ಬಳಿ ಬಂದ ಮಂಜಿಯಂಥ ಅಪ್ರತಿಮಸುಂದರಿಯನ್ನು ಕಂಡು ಮುದುಕನಾದ ಹುಚ್ಚಪ್ಪ ಮಾಸ್ತರಿಗೆ ಒಂದು ಹಂತದಲ್ಲಿ ಮೋಹ ಆವರಿಸಿದರೂ ಅವಳ 'ಅಪ್ಪಾರೇ' ಎಂಬ ಮಾತಿನಿಂದ ತನ್ನನ್ನು ತಾನೇ ಅಂತರ್ನಿರೀಕ್ಷಣೆ ಮಾಡಿಕೊಂಡು ಅದರ ಮೇಲೆ ಗೆಲುವು ಸಾಧಿಸುವುದು ಕಾದಂಬರಿಯ ನೈತಿಕ ವಿಜಯವೆಂದೇ ಹೇಳಬೇಕು. ದಲಿತರ ಸಂತಾನವೇ ಆದರೂ ಐ.ಎ.ಎಸ್. ಅಧಿಕಾರಿಯಾದ ಚಂದ್ರಬಿಂಬ ಮತ್ತು ಲಾಯರ್ ಗಿರಿಧರ ಇವರುಗಳಿಗೆ ಸೊಲ್ಲೇ ಇಲ್ಲದಂತೆ ಮಾಡುವ ಮೂಲಕ ದಲಿತರ ಹೋರಾಟವನ್ನು ಅತ್ಯಂತ ದುರ್ಬಲಗೊಳಿಸಿರುವುದರ ಮರ್ಮವೇನೆಂಬುದೇ ತಿಳಿಯದಂತಾಗಿದೆ.

ಅನೇಕ ಘಟನೆಗಳು ಮತ್ತು ಸಂದರ್ಭಗಳಿಂದ ಇಡಿಕಿರಿದಿರುವ ಈ ಕಾದಂಬರಿಯಲ್ಲಿ ಅದರ ಮೂಲ ಉದ್ದೇಶದ ಕಥೆಗೆ ಒಂದು ಅನುಸ್ಯೂತತೆ ಮತ್ತು ಫೋಕಸ್ ದೊರಕಿಲ್ಲ.

ಅಲ್ಲದೆ ಹಲವು ಆದರ್ಶ ಮತ್ತು ಸಿದ್ಧಾಂತಗಳನ್ನು ಒಂದು ಹದದಲ್ಲಿ ಎರಕಹೊಯ್ಯುವಲ್ಲಿ ಕಾದಂಬರಿಕಾರರು ಪೂರ್ತಿ ಯಶಸ್ಸು ಸಾಧಿಸಿಲ್ಲ. ಆದರೆ ಗ್ರಾಮೀಣ ಪರಿಸರದ ಅನುಭವಗಳ ಅಭಿವ್ಯಕ್ತಿಗೆ ತಕ್ಕ ಭಾಷೆ ಬಳಸುವಲ್ಲಿ ಲೇಖಕರು ಸಾಧಿಸಿರುವ ಯಶಸ್ಸು ಅಪೂರ್ವವೆಂದೇ ಹೇಳಬೇಕು. ಒಟ್ಟಾರೆಯಾಗಿ ಇದೊಂದು ಸೋಲು, ಗೆಲುವುಗಳ ಸಮ್ಮಿಶ್ರಣದ ಸಂಕಥನವೆನ್ನಬಹುದು.

❖

34

ರಂಗಭೂಮಿಯ ವಿವರಪೂರ್ಣ ಕಥನ

'ರಂಗದ ಒಳ-ಹೊರಗೆ'. ಕೆಲವು ತಿಂಗಳುಗಳ ಹಿಂದೆ ಇದ್ದಕ್ಕಿದ್ದಂತೆಯೇ ತೀರಿಹೋದ(ಸಾವೆಂದರೆ ಹಾಗೇ ಅಲ್ಲವೆ?) ಅನನ್ಯ ಕ್ರಿಯಾಶೀಲ ವ್ಯಕ್ತಿ ಗೋಪಾಲ ವಾಜಪೇಯಿ ಅವರ ಅಂಕಣ ಬರಹಗಳ ಸಂಗ್ರಹ . ಅವರ ಹಲವು ದಶಕಗಳ ರಂಗಾನುಭವವನ್ನು ಸ್ವಾರಸ್ಯಪೂರ್ಣವಾಗಿ ಕಟ್ಟಿಕೊಡುವ ಈ ಅಂಕಣ ಬರಹಗಳು ಒಂದಲ್ಲ ಒಂದು ರೀತಿಯಲ್ಲಿ ರಂಗ ದೊಂದಿಗೆ ಸಂಬಂಧ ಇಟ್ಟುಕೊಂಡವೇ ಆಗಿದ್ದರೂ ಅವಷ್ಟೇ ಆಗಿರದೆ ಏಕಕಾಲಕ್ಕೆ ಹವ್ಯಾಸಿ ರಂಗಭೂಮಿಯ ಒಳಹೊರಗಿನ ಚಿತ್ರಣ, ರಂಗಭೂಮಿ, ಸಿನಿಮಾ ಮತ್ತು ಪತ್ರಿಕಾ ಕ್ಷೇತ್ರಕ್ಕೆ ಸಂಬಂಧಿಸಿದ ಸಿದ್ಧಪ್ರಸಿದ್ಧರ ಮಾತ್ರವಲ್ಲದೆ ಅಷ್ಟೇನೂ ಪ್ರಸಿದ್ಧರಲ್ಲದವರ ವ್ಯಕ್ತಿ ವೈಚಿತ್ರ್ಯಗಳು, ಮತ್ತು ವ್ಯಕ್ತಿ ವೈಶಿಷ್ಟ್ಯಗಳು, ಅವರ ಸಿದ್ಧಿ ಸಾಧನೆಗಳು, ಕೆಲವು ನಾಟಕಗಳ ಅಡಕವಾದ ವಿಮರ್ಶೆ, ಮತ್ತು ಪರೋಕ್ಷವಾಗಿ ತಮ್ಮ ಬದುಕಿಗೆ ಸಂಬಂಧಿಸಿದ ವಿವರಗಳು ಈ ಎಲ್ಲವೂ

ರಂಗದ ಒಳ-ಹೊರಗೆ : ಗೋಪಾಲ ವಾಜಪೇಯಿ
ಪುಟಗಳು: , ಬೆಲೆ:: 200/-
ಅಂಬಾ ಪ್ರಕಾಶನ, ಎಲ್ಐಜಿಎ-127, ನಂ. 42, ಕೆಂಗೇರಿ ಉಪನಗರ, ಬೆಂಗಳೂರು-560060

ಆಗಿರುವುದೇ ಇದರ ವೈಶಿಷ್ಟ್ಯ. ಇದೊಂದು ರೀತಿಯಲ್ಲಿ ಅಡಕೆ ಫಸಲು ಕೊಯ್ಯುವವರ ರೀತಿ. ಅವರು ಒಂದು ಮರದಿಂದ ಅದರ ಹತ್ತಿರದ ಮರಕ್ಕೆ ಅಲ್ಲಿಂದ ಇನ್ನೊಂದು ಮರಕ್ಕೆ ಹಾರುತ್ತ ಅಡಕೆ ಗೊನೆಗಳನ್ನು ಕೊಯ್ಯುವಂತೆ ಒಂದು ವಿಷಯವನ್ನು ನೆವಮಾಡಿಕೊಂಡು ಅದಕ್ಕೆ ಸಂಬಂಧಿಸಿದ, ಕೆಲವೊಮ್ಮೆ ನೇರವಾಗಿ ಸಂಬಂಧ ಪಡದಿದ್ದರೂ ಹೇಗೋ ಸಂಬಂಧ ಸ್ಥಾಪಿಸಿಕೊಂಡು ಅನೇಕ ವಿಷಯ, ಸಂಗತಿಗಳನ್ನು ಸ್ವಾರಸ್ಯಕರವಾದ ರೀತಿಯಲ್ಲಿ ಪ್ರಸ್ತುತ ಪಡಿಸುತ್ತ ಹೋಗುತ್ತಾರೆ. ಇದೊಂದು ರಂಗ ಸಂಕಥನ. ಇದರಲ್ಲಿ ಮುಖ್ಯವಾಗಿ ಹರಟೆಯ ಧಾಟಿ ಅಳವಟ್ಟಿದೆ. ಇನ್ನೂ ಸರಿಯಾಗಿ ಹೇಳಬೇಕೆಂದರೆ ಪರಿಚಿತ ಗೆಳೆಯನ ಜೊತೆ ಮಾತಿಗೆ ಕೂತರೆ ಅವನು ಯಾವುದೋ ವಿಷಯ ಹೇಳಲು ತೊಡಗಿ ಬೇಕಾದ್ದು ಬೇಡವಾದ್ದು ಏನೆಲ್ಲವನ್ನೂ ಹೇಳುವ ಹಾಗೆ. ಅಂಕಣ ಬರಹಗಳಲ್ಲಿ ಸಾಮಾನ್ಯವಾಗಿ ಇರುವ ಹಾಗೆ ಇಲ್ಲಿಯ ಬರಹಗಳಲ್ಲಿ ಒಂದು ಫೋಕಸ್ ಇಲ್ಲ. ವಾಜಪೇಯಿ ಅವರು ವೃತ್ತಿಯಿಂದ ಮುಖ್ಯವಾಗಿ ಪತ್ರಕರ್ತರಾದರೂ ಪ್ರವೃತ್ತಿಯಿಂದ ವೃತ್ತಿಯನ್ನೂ ಮೀರಿಸುವಂತೆ ರಂಗಭೂಮಿ ಮತ್ತು ಸಾಹಿತ್ಯದ ವ್ಯಕ್ತಿ. ಹಾಗಾಗಿ ಇಲ್ಲಿಯ ಬರಹಗಳು ಪತ್ರಕರ್ತನ ಬರಹದಂತೆ ಸಲೀಸಾದರೂ ಸಾಹಿತ್ಯದ ಸ್ವಾರಸ್ಯವನ್ನು ಉಳಿಸಿಕೊಂಡಿರುವ ಕಾರಣ ಇವುಗಳ ಓದು ನಮ್ಮ ಅರಿವನ್ನು ಹಿಗ್ಗಿಸುತ್ತಲೇ ಮನಸ್ಸಿಗೆ ಮುದಕೊಡುವಂಥದಾಗಿದೆ.

ಇಡೀ ಪುಸ್ತಕ ರಂಗಭೂಮಿಯ ವಿಷಯಕ್ಕೆ ಸಂಬಂಧಿಸಿದ್ದೆಂದರೂ 'ಜಡಭರತ' ಕಾವ್ಯ ನಾಮದ ಪ್ರಖ್ಯಾತ ನಾಟಕಕಾರ ಜಿ. ಬಿ. ಜೋಷಿ, ರಂಗಜಂಗಮ ಎಂದೇ ಖ್ಯಾತರಾದ ಬಿ. ವಿ ಕಾರಂತ ಮತ್ತು ಮೇಕಪ್ ಕಲಾವಿದ ಗಜಾನನ ಮಹಾಲೆಯವರನ್ನು ಕುರಿತ ಬರಹಗಳು ಸುಮಾರು ಅರ್ಧದಷ್ಟು ಪುಸ್ತಕವನ್ನು ತುಂಬಿವೆ. ಅವುಗಳ ಹೊರತಾಗಿ ಮುಖ್ಯವಾಗಿ ಪ್ರಸ್ತಾಪಿತವಾಗುವ ವಿಚಾರಗಳು ವಾಜಪೇಯಿಯವರು ಸ್ವತಃ ಬರೆದ, ರೂಪಾಂತರಿಸಿದ, ಪ್ರಯೋಗಕ್ಕಳವಡಿಸಿದ ನಾಟಕಗಳ ಸಂಗತಿ, ತಾವು ನಾಟಕ ಅಕಾಡೆಮಿ ಸದಸ್ಯರಾಗಿದ್ದಾಗ ನಡೆಸಿದ "ನೇಪಥ್ಯ ಶಿಲ್ಪಿಗಳ" ತಯಾರಿ ಕುರಿತ ಕಮ್ಮಟ ನಡೆಸಿದ್ದು, ತಮ್ಮ ಪ್ರಮುಖ ಕರ್ಮಭೂಮಿಯಾದ ಪತ್ರಿಕಾ ಕಛೇರಿಯ ವಿಷಯ, ಅಲ್ಲಿಯ ನೌಕರರನ್ನು ತಮ್ಮ ಕಿರುಬೆರಳಲ್ಲಿ ಕುಣಿಸುತ್ತಿದ್ದ, ಸದಾ ಅವರನ್ನು ಹೇಗೆ ಹಣಿಯ ಬೇಕೆಂಬ ಬಗ್ಗೆ ಚಿಂತಿಸುತ್ತಿದ್ದ, ಸಾಹಿತ್ಯ, ನಾಟಕ ಸಿನಿಮಾಗಳ ವಿರೋಧಿ, ಸಂಯುಕ್ತ ಕರ್ನಾಟಕದ ಭೀಷ್ಮ ಕೆ. ಶಾಮರಾಯರ ಮತ್ತು ಅಡಿಗೆಗೆ ಒಗ್ಗರಣೆ ಇರದಿದ್ದರೆ ಹೇಗೆ ಪ್ರಶಸ್ತವಲ್ಲವೋ ಹಾಗೆ ಎಂಬಂತೆ ಹೆಚ್ಚು ಕಡಿಮೆ ಪುಸ್ತಕದುದ್ದಕ್ಕೂ ಮಂದ ಶ್ರುತಿಯ ಹಾಗೆ ಬರುವ

ನಾಟಕ ನಿರ್ದೇಶಕ ಜಯತೀರ್ಥ ಜೋಷಿ ಇವರುಗಳ ಪ್ರಸ್ತಾಪ-ಇದು ಒಟ್ಟಾರೆ ಪುಸ್ತಕದ ಹೂರಣ.

ಪ್ರಾರಂಭದ ಮೂರು ಬರಹಗಳು ಹಾಗೂ ಕೊನೆಯಲ್ಲೊಂದು ಬರಹ ನಾಟಕಕಾರ, ನಟ, ಪ್ರಸಿದ್ಧ ಮನೋಹರ ಗ್ರಂಥಮಾಲೆಯ ಪ್ರಕಾಶಕ ಎಲ್ಲವೂ ಆಗಿದ್ದ ಜಿ. ಬಿ. ಜೋಷಿಯವರನ್ನು ಕುರಿತವೇ ಅಗಿವೆ. ಇವಲ್ಲದೆ ಬೇರೆ ಕಡೆ ಕೂಡ ಅವರ ಪ್ರಸ್ತಾಪ ಬರುವುದುಂಟು. ಚಿಕ್ಕಂದಿನಲ್ಲಿ ಅವರನ್ನು ಕಂಡಾಗಿನಿಂದ ತೊಡಗಿ, ಇವರ ಪಾತ್ರವನ್ನು ಅವರು ಮೆಚ್ಚಿದ್ದು (ಕ್ರಾಂತಿಕಾರಿ ಯುವಕನ ಪಾತ್ರ), ಗೆಳೆಯರ ಗುಂಪಿನ ಸಂಗತಿ, ಜೋಷಿಯವರ ದಿರಿಸು, 'ನಾಟಕಾನ ಟಿಕಿಟ್ ತೊಗೊಂಡಾ ನೋಡಬೇಕು' ಅನ್ನುವ ತತ್ವ, ಮನೋಹರ ಗ್ರಂಥಮಾಲೆಯ ಬಳಗದ ಲೇಖಕರು , ಆಮೇಲೆ ಅವರ ಕ್ರಮಬದ್ಧ ಪರಿಚಯ. 'ಒಂದಾನೊಂದು ಕಾಲದಲ್ಲಿ' ಚಲನ ಚಿತ್ರದ ಸಂಭಾಷಣೆ ಜೋಷಿಯವರದು ಎನ್ನುವ ವಿಚಾರ. ಊಟದಂಥಾ ದೃಶ್ಯ ರಂಗದ ಮೇಲೆ ತೋರಿಸ ಬಾರದು- ಅದು ಜನರನ್ನು ಹಿಡಿದಿಟ್ಟುಕೊಳ್ಳಲ್ಲ ಎನ್ನುವ ಬುದ್ಧಿ ಮಾತು. ಇವರದೇ ನಾಟಕ 'ದೊಡ್ಡಪ್ಪ'ದ ರಚನೆ ಮತ್ತು ಪ್ರಯೋಗದ ಸಂಗತಿ. ಅದನ್ನು ಮೆಚ್ಚಿಯೂ ತಂಡದ ಜೊತೆಗೆ ಗುರುತಿಸಿಕೊಳ್ಳಬೇಡವೆಂಬ . ಸ್ವಂತ ನಾಟಕದಲ್ಲಿ ಯಾವತ್ತೂ ಪಾರ್ಟ್ ಮಾಡಬೇಡವೆಂಬ ' ದೂರದಲ್ಲಿ' ನಿಂತು ನೋಡಬೇಕೆಂಬ, ತಂಡದ ಹೆಸರಿನಲ್ಲಿ ಬ್ಯಾಂಕ್ ಬ್ಯಾಲೆನ್ಸ್ ಇರಬಾರದೆಂಬ ಸಲಹೆ ನೀಡಿದವರೂ ಜೋಷಿಯೇ. ಕೊನೆಯ ಲೇಖನ ಮಾತ್ರ ಜಿ.ಬಿ ಅವರ ನಾಟಕೋತ್ಸವ ನಡೆಸಿದ ಸಂಗತಿ, ಅವರ ನಾಟಕಗಳ ವಸ್ತು ವಿಷಯ ಹೇಳುತ್ತಲೇ ಅವರು ನಿಧನಹೊಂದಿದ ಸಂದರ್ಭ ಹೇಳಿ ಅವರನ್ನು ಕುರಿತಂತೆ ಪತ್ರಿಕೆಗೆ ಮಾಹಿತಿ ಸಂಗ್ರಹಿಸಿಕೊಟ್ಟದ್ದನ್ನೂ ಹೇಳುತ್ತಾರೆ.

ರಂಗ ಜಂಗಮ ಬಿ.ವಿ ಕಾರಂತರ ಕುರಿತು ಅವರು ಬಳಸಿರುವ 'ಮಾಯಕಾರ' ಎಂಬ ವಿಶೇಷಣ ಅತ್ಯಂತ ಉಚಿತವೂ ಅರ್ಥಪೂರ್ಣವೂ ಆದದ್ದು. ಕರ್ನಾಟಕದ ರಂಗಭೂಮಿ ಮತ್ತು ರಂಗಾಸಕ್ತರ ಮೇಲೆ ಅವರು ಮಾಡಿದ ಮೋಡಿಯನ್ನು ಆ ಶಬ್ದ ಸಮರ್ಪಕವಾಗಿ ಹಿಡಿದಿಡುತ್ತದೆ 'ಸ್ವರ್ಗಕ್ಕೆ ಮೂರೇ ಬಾಗಿಲು' ಮೂಲಕ ಎಪಿಕ್ ಥಿಯೇಟರ್ ಅನ್ನು ಕನ್ನಡಕ್ಕೆ ಅವರು ಪರಿಚಯಿಸಿದ ಸಂಗತಿ, ಅವರ ಜನ್ಮಜಾತ ರಂಗ ಪ್ರತಿಭೆಯ ಸಾಕಲ್ಯ ಪರಿಚಯ: 'ಜೋಕುಮಾರ ಸ್ವಾಮಿ' 'ಸತ್ತವರ ನೆರಳು', 'ಹಯವದನ' 'ಮುಂದೇನ ಸಖಿ ಮುಂದೇನ' ಮುಂತಾದ ತಮ್ಮ ನಿರ್ದೇಶನದ ನಾಟಕಗಳನ್ನು ಹುಬ್ಬಳ್ಳಿಯಲ್ಲಿ ನಡೆಸಿಕೊಟ್ಟ ಸಂಗತಿ, ಅಲ್ಲಿಯ ಶಿಬಿರಾರ್ಥಿಗಳಿಗೆ ರಂಗಭೂಮಿ ಮತ್ತು ಪ್ರಯೋಗ ಕುರಿತ ನೀಡಿದ ಉಪನ್ಯಾಸ, ಗಂಗೂಬಾಯಿ ಹಾನಗಲ್ ಅವರೊಂದಿಗೆ

ಕಾರಂತರ ಮಾತುಕತೆ, ಬೆಳಗಾವಿಗೆ ಕಾರು ಬೇಡವೆಂದು ಬಸ್ಸಿನಲ್ಲಿಯೇ ಪಯಣಿಸಿದ, ನಿಮ್ಮ ಫೀ ಎಷ್ಟೆಂದರೆ 'ಏನೂ ಬೇಡ ಅದನ್ನೆಲ್ಲ ಸರ್ಕಾರ ನೋಡಿಕೊಳ್ಳುತ್ತದೆ ಎಂದ ಕಾರಂತರ ಸರಳತೆ, ಕಸ್ತೂರಿ ಮಾಸ ಪತ್ರಿಕೆಗೆ ಅಶೋಕ ಅವರು ಕಾರಂತರ ಸಂದರ್ಶನ ನಡೆಸಿದ್ದು, ವಾಜಪೇಯಿಯವರ ನಂದಭೂಪತಿ ನಾಟಕದ ದೇಸಿತನ ಮೆಚ್ಚಿ ತಾವೇ ಕೆಲವು ಹಾಡುಗಳಿಗೆ ಟ್ಯೂನ್ ಮಾಡಿದ್ದು, ಇಂಥ ವ್ಯಕ್ತಿ ಕೂಡ ತಾವು ಮಾಡದ ತಪ್ಪಿಗೆ ಜೈಲಿಗೆ ಹೋಗಬೇಕಾಗಿ ಬಂದ 'ಕಾರಂತ–ವಿಭಾ ಮಿಶ್ರ ' ಕಾಂಡದ ಪ್ರಸ್ತಾಪ ಈ ಹತ್ತು ಹಲವು ಸಂಗತಿಗಳನ್ನು ಕಾರಂತರನ್ನು ಕುರಿತ ಬರಹಗಳಲ್ಲಿ ಮಂಡಿಸುತ್ತ ಹೋಗುತ್ತಾರೆ.

ಶ್ರೀರಂಗರಿಗೆ ಥೇಟ್ ಬೇಂದ್ರೆಯೇ ಎನ್ನುವ ಹಾಗೆ ಮಾಡಿದ ಮೇಕಪ್ ನೋಡಿ ಸ್ವತಃ ಬೇಂದ್ರೆಯೇ ದಂಗಾಗಿ– "ಅರೆ!...ನನ್ನ ಮಾರೀ ಕಿತ್ತು ಶ್ರೀರಂಗಗ ಹಚ್ಚಿದಾಂವಾ ಯಾರಪ್ಪಾ ಅಂವಾ" ಎಂದು ಉದ್ಗರಿಸುವ ಮಟ್ಟಿಗೆ ನೋಡಿದವರು ಬೆರಗಾಗುವಂತೆ ಬಣ್ಣ ಹಚ್ಚಿ ಅದ್ಭುತವಾಗಿ ಮೇಕಪ್ ಮಾಡುವ ಮೇಕಪ್ ಕಲಾವಿದ, ಹಾರ್ಮೋನಿಯಂ ನುಡಿಸುವ, ಅಷ್ಟೇ ಅಲ್ಲ, ಮಣ್ಣಿನಿಂದ ಮೂರ್ತಿಗಳನ್ನು ಮಾಡುವ, ಚಿತ್ರಕಲಾವಿದನೂ ಆದ, ಸಂದರ್ಭ ಬಂದರೆ ನಾಟಕದಲ್ಲಿ ಪಾತ್ರವನ್ನೂ ವಹಿಸುವ, ಸಕಲ ಕಲಾ ವಲ್ಲಭ, ಬಡತನವನ್ನೇ ಹಾಸಿಹೊದ್ದ ಆದರೆ ಅತ್ಯಂತ ಶ್ರೀಮಂತ ಮತ್ತು ಸುಸಂಸ್ಕೃತ ಮನಸ್ಸಿನ ಗಜಾನನ ಮಹಾಲೆಯವರ ಆತ್ಮೀಯ ಪರಿಚಯ ಈ ಪುಸ್ತಕದ ಮತ್ತೊಂದು ವಿಶೇಷ.

ಬಹಳ ಮುಖ್ಯವಾಗಿ ಈ ಪುಸ್ತಕದ ಉದ್ದಕ್ಕೂ ಭಿತ್ತಿಯ ಹಾಗೆ ಇರುವುದು 'ದೊಡ್ಡಪ್ಪ', 'ತಾಮ್ರಪತ್ರ,' 'ಮೃತ್ಯುದಾನ', 'ಶ್ವೇತ ವೃತ್ತ,' 'ನಂದ ಭೂಪತಿ', ಮುಂತಾದ ಹಲವಾರು ನಾಟಕಗಳ ಹಾಡು ಸಂಭಾಷಣೆಗಳನ್ನು ರಚಿಸಿದ, ಕೆಲವಕ್ಕೆ ಧಾರವಾಡದ ದೇಸಿ ಕನ್ನಡವನ್ನು ಕಸಿಮಾಡಿದ, ಹೆಚ್ಚಾಗಿ ನೇಪಥ್ಯದಲ್ಲೇ ಇದ್ದರೂ ರಂಗಭೂಮಿಯನ್ನೇ ಉಸಿರಾಡುತ್ತಿದ್ದ ಅಭಿಜಾತ ರಂಗಪ್ರತಿಭೆ ಗೋಪಾಲ ವಾಜಪೇಯಿಯವರ ವ್ಯಕ್ತಿತ್ವ, ಅಭದ್ರತೆಗೆ ಇನ್ನೊಂದು ಹೆಸರೆಂಬಂಥ ಪತ್ರಿಕಾ ಕಛೇರಿಯಲ್ಲಿದ್ದುಕೊಂಡು ಅದನ್ನೂ ಸಮರ್ಪಕವಾಗಿ ನಿಭಾಯಿಸುತ್ತ ಕೊನೆಗೆ ಫುಟ್ ಬಾಲ್ ಚೆಂಡಿನಂತೆ ಹುಬ್ಬಳ್ಳಿ, ಬೆಂಗಳೂರು ಹೀಗೆಲ್ಲಾ ಹುಚ್ಚಾಪಟ್ಟೆ ಎತ್ತಂಗಡಿಗಳಾದಾಗ ರಾಜೀನಾಮೆ ಕೊಟ್ಟು ಇನ್ನೊಂದು ಕ್ಷೇತ್ರವಾದ ' ಇ' ಟಿವಿ ಕೆಲಸಕ್ಕೆ ಹೋಗುವವರೆಗೆ ಇಲ್ಲಿಯ ಕಥನಗಳಿವೆ.

❖

35

ವಚನಗಾಯನ ಪರಂಪರೆಯ ಅಧ್ಯಯನ

ಡಾ. ಜಯದೇವಿ ಜಂಗಮಶೆಟ್ಟಿಯವರ ಪ್ರಸ್ತುತ 'ಕೇಡಿಲ್ಲವಾಗಿ ಹಾಡುವೆ' ಓದಿದಾಗ ಅನಿಸುವುದೆಂದರೆ ವಚನ ಸಾಹಿತ್ಯವನ್ನು ಅದೆಷ್ಟು ನಿಟ್ಟಿನಿಂದ ಅಭ್ಯಾಸ ಮಾಡಿದರೂ ಇನ್ನೂ ಹಲವು ನಿಟ್ಟಿನಿಂದ ಅಭ್ಯಾಸ ಮಾಡುವುದು ಉಳಿದೇ ಇರುತ್ತದೆ ಎಂದು. ಸಾಹಿತ್ಯಕ್ಕೆ ಸಂಗೀತದ ಸಾಹಚರ್ಯ ತೀರ ಸಹಜವಾದ್ದು. ಲಯದ ಹಾದಿಯನ್ನು ಹಿಡಿದು ಛಂದೋಬದ್ಧವಾಗಿ ಕವಿಯಿಂದ ಕಾವ್ಯ ಹೊರಹೊಮ್ಮುವಾಗ ತನ್ನ ಹುಟ್ಟಿನ ಮೂಲದಲ್ಲೇ ಸಂಗೀತಕ್ಕೆ ಅಳವಡುವ ಗುಣವನ್ನು ಯಥೇಚ್ಛವಾಗಿ ಪಡೆದುಕೊಂಡೇ ಇರುತ್ತದೆ. ಇದಕ್ಕೆ ಯಾವ ಭಾಷೆಯ ಸಾಹಿತ್ಯವೂ ಹೊರತಲ್ಲ. ಯಾವ ಭಾಷೆಯಲ್ಲಾದರೂ ಮೊದಲು ಹುಟ್ಟುವುದೇ ಜನಪದ ಸಾಹಿತ್ಯ. ಕನ್ನಡದ ಜಾನಪದ ಹಾಡುಗಳು ಜನರ ಬಾಯಿಂದ ಹೊರಹೊಮ್ಮುವಾಗಲೇ ಕನ್ನಡ ವೃತ್ತಗಳ ಗಾಯತ್ರಿ

'ಕೇಡಿಲ್ಲವಾಗಿ ಹಾಡುವೆ' : ಡಾ. ಜಯದೇವಿ ಜಂಗಮಶೆಟ್ಟಿ

ಎನಿಸಿದ ತ್ರಿಪದಿಯಲ್ಲಿ ಮೂಡಿ, ಸಂಗೀತ ಅಥವಾ ಗಾಯನ ಕಾವ್ಯದ ಅವಿಭಾಜ್ಯ ಅಂಗವೆಂಬುದಕ್ಕೆ ಸಾಕ್ಷಿಯಾಗಿವೆ. ಈಗಂತೂ ಒಳ್ಳೆಯ ಕಂಠವಿದ್ದವರು ಎಂಥ ಛಂದೋ ರಹಿತ ಅಥವಾ ಗದ್ಯಾತ್ಮಕ ಬರವಣಿಗೆಯನ್ನಾದರೂ ಸುಶ್ರಾವ್ಯವಾಗಿ ಹಾಡಿ ಒಳ್ಳೆಯ ಕಾವ್ಯವೆಂಬ ಭ್ರಮೆ ಹುಟ್ಟಿಸುವುದೂ ನಡೆದಿದೆ. ಅಂಥದ್ದರಲ್ಲಿ ಕನ್ನಡದ ತವನಿಧಿಯೆನಿಸಿದ ವಚನಗಳು ನಿಯತ ಲಯದ, ಛಂದೋಬದ್ಧವಾದ ಪದ್ಯಗಳಲ್ಲದಿದ್ದರೂ ಬಹುಮಟ್ಟಿಗೆ ಛಂದೋಗಂಧಿಯಾದ, ಬಹು ವೇಳೆ ಅನುಪ್ರಾಸ ಅಂತ್ಯಪ್ರಾಸಗಳಿಂದ ಕೂಡಿದ ಗದ್ಯದಲ್ಲಿ ರಚಿತವಾಗಿರುವ ಕಾರಣ ಸಂಗೀತಕ್ಕೆ ಅಳವಡುವ ಗುಣವನ್ನು ಹೊಂದಿರದೆ ಇರಲು ಸಾಧ್ಯವೇ ಇಲ್ಲ. "ಕೂಡಲ ಸಂಗಮದೇವಾ ಆನು ಒಲಿದಂತೆ ಹಾಡುವೆ, ನಿನಗೆ ಕೇಡಿಲ್ಲವಾಗಿ"- ಎಂಬುದು ಬರಹಗಾರನ ಸಾತಂತ್ರ್ಯ ಮತ್ತು ಹೊಣೆಗಾರಿಕೆಗಳನ್ನು ಏಕ ಕಾಲದಲ್ಲಿ ಒಟ್ಟಿಗೇ ಧ್ವನಿಸಲು ಬಂದಿರುವ ಮಾತೇ ಹೊರತು, ಹಾಡುವುದಕ್ಕೆ ನಿಯಮವಿರಲಿಲ್ಲವೆಂದು ಭಾವಿಸುವುದು ಸರಿಯಲ್ಲ. ಅವುಗಳ ಈ ಗುಣವೇ ಅವುಗಳನ್ನು ಹಾಡುವುದಕ್ಕೆ ಎಂಥವರಿಗಾದರೂ ಪ್ರೇರಣೆಯಾಗಿರಲಿಕ್ಕೆ ಸಾಕು. ಅಂತೆಯೇ ವಚನಗಳನ್ನು ಅವು ರಚಿತವಾದ ಕಾಲದಿಂದಲೂ ಹಾಡಿಕೊಂಡು ಬಂದಿರಲೇ ಬೇಕು. ಆದರೆ ಮಧ್ಯೆ ಕೆಲವು ಕಾಲ ವಚನಗಳನ್ನು ಹಾಡುವುದು ತಪ್ಪಿಹೋಗಿದ್ದಿರಬೇಕು. ಹಾಗಾಗಿ ಓದುವುದಕ್ಕೆ ಇರುವ ಈ ವಚನಗಳನ್ನು ಹಾಡಲು ಸಾಧ್ಯವೆ ಎಂದು ಪ್ರಸಿದ್ಧ ಸಂಗೀತಗಾರರಾದ ಮಲ್ಲಿಕಾರ್ಜುನ ಮನ್ಸೂರರಂಥವರಿಗೂ ಸಂದೇಹ ಮೂಡಿದಂಥ ಕಾಲವಿತ್ತು. ಆದರೆ ಅದು ಕೇವಲ ತಾತ್ಕಲಿಕ ಅಷ್ಟೆ. ಶಾಸ್ತ್ರೀಯ ಸಂಗೀತದ ಧಾಟಿಯಲ್ಲಿ ರಾಗ, ತಾಳ ಲಯಬದ್ಧವಾಗಿ ವಚನಗಳನ್ನು ಹಿಂದೂಸ್ತಾನಿ ಮತ್ತು ಕರ್ನಾಟಕ ಎರಡೂ ಪದ್ಧತಿಯಲ್ಲಿ ಹಾಡುವುದು ರೂಢಿಗೆ ಬಂದು ಸರಿಸುಮಾರು ನೂರು ವರ್ಷಗಳೇ ಸಂದಿವೆ.

ವಚನಗಳನ್ನು ಹಾಡುವ ರೂಢಿ ಅದರ ಹುಟ್ಟಿನೊಂದಿಗೇ ಬೆಳೆದು ಬಂದಿರುವಂಥದು ಎಂಬುದನ್ನು ಆಧಾರಪೂರ್ವಕವಾಗಿ ಸ್ಥಾಪಿಸಲು ಸ್ವತಃ ಸಂಗೀತ ವಿಶಾರದರಾದ ಡಾ. ಜಯದೇವಿ ಜಂಗಮ ಶೆಟ್ಟಿಯವರು ನಡೆಸಿದ ವ್ಯಾಪಕ ಅಧ್ಯಯನದ ಫಲಸ್ವರೂಪವೇ ಪ್ರಸ್ತುತ ನಮ್ಮೆದುರಿನ ಈ ಕೃತಿ "ಕೇಡಿಲ್ಲವಾಗಿ ಹಾಡುವೆ".

ಇದೊಂದು ಪಿಎಚ್. ಡಿ. ನಿಬಂಧವಾದ್ದರಿಂದ ಸಹಜವಾಗಿಯೇ ಸಂಶೋಧನಾ ವಿಧಾನದ ಅಧ್ಯಯನಕ್ಕನುಸಾರವಾಗಿ ಈ ವಿಷಯದ ಮೂಲಚೂಲಗಳನ್ನೆಲ್ಲ ಹುಡುಕಿ ನೋಡುವ, ಚರ್ಚಿಸುವ ಪ್ರಾಮಾಣಿಕ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಿದ್ದಾರೆ.

ಎಂಟು ಅಧ್ಯಾಯಗಳಲ್ಲಿ ಹರಡಿಕೊಂಡಿರುವ ಈ ಅಧ್ಯಯನದಲ್ಲಿ ಮೊದಲ ನಾಲ್ಕು

ಘಟ್ಟಗಳಲ್ಲಿ ಸಂಗೀತ ಹಾಗೂ ವಚನ ಸಾಹಿತ್ಯದ ಆರಂಭ, ಬೆಳವಣಿಗೆ, ಸಂಗೀತ ಮತ್ತು ವಚನಸಾಹಿತ್ಯಗಳ ನಡುವಿನ ಸಂಬಂಧದ ಸ್ವರೂಪಗಳನ್ನು ಚರ್ಚಿಸಿ ಮುಂದಿನ ನಾಲ್ಕು ಘಟ್ಟಗಳಲ್ಲಿ ವಚನಗಳನ್ನು ಹಾಡುವ ಪರಂಪರೆ ಅದರ ಆರಂಭ ಕಾಲದಿಂದಲೂ ಹೇಗೆ ಸಾಗುತ್ತ ಬಂದಿದೆಯೆಂಬುದನ್ನು ಗುರುತಿಸುತ್ತ ನಮ್ಮ ಕಾಲದಲ್ಲಿ ಅದು ಪ್ರಾರಂಭವಾದ ಬಗೆ, ಅದಕ್ಕೆ ಯಾರೆಲ್ಲ ವ್ಯಕ್ತಿಗಳು ನೀರೆರೆದು ಪೋಷಿಸಿದರು ಎಂಬೆಲ್ಲ ವಿವರಗಳನ್ನು ದಾಖಲೆಸಮೇತವಾಗಿ ಮುಂದಿಡುತ್ತ ಹೋಗುತ್ತಾರೆ.

ಸಂಗೀತದ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತ ಅಧ್ಯಾಯದಲ್ಲಿ ವೇದಪೂರ್ವಕಾಲದಲ್ಲೇ ಸಂಗೀತದ ಆರಂಭವಾಯಿತು ಎಂಬ ನಿರ್ಣಯಕ್ಕೆ ಬಿ. ಡಿ. ಪಾಠಕ್ ಅವರು ಹೇಗೆ ಬಂದರು ಎಂಬುದರ ವಿವರಗಳೇನೂ ಇಲ್ಲದಿರುವುದರಿಂದ ಅದು ಕೇವಲ ಅಭಿಪ್ರಾಯದ ಉಲ್ಲೇಖವಾಗುಳಿಯುತ್ತದೆ.

ವೇದಗಳ ಕಾಲದಲ್ಲಿ ಬಳಕೆಯಲ್ಲಿದ್ದ ಸಂಗೀತದ ಎರಡು ಪದ್ಧತಿಗಳಾದ ವೈದಿಕ ಮತ್ತು ಲೌಕಿಕ ಸಂಗೀತಗಳ ವಿಚಾರ, ಸಂಗೀತ ಪದ್ಧತಿಯ ಆದ್ಯ ಪ್ರವರ್ತಕನಾದ ನಾಟ್ಯಶಾಸ್ತ್ರಕಾರ ಭರತಮುನಿಯ ನಾಟ್ಯಶಾಸ್ತ್ರದಲ್ಲಿ ಉಲ್ಲೇಖಗೊಂಡಿರುವ ಮೂಲಸಿದ್ಧಾಂತಗಳ ವಿಚಾರ ಇವನ್ನೆಲ್ಲ ಹೇಳಿ, ಸಂಗೀತ ಮತ್ತು ಸಾಹಿತ್ಯಗಳು ಪರಸ್ಪರ ಪೂರ್ವಕವಾಗಿ ಬೆಳೆದು ಬಂದ ಕಲೆಗಳಾಗಿರುವ ಬಗ್ಗೆ ತಿಳಿಸಿದ್ದಾರೆ. ಕನ್ನಡದಲ್ಲಿ ಶರಣ ಪೂರ್ವ ಕಾಲದಲ್ಲಿ ಇದ್ದಿರಬಹುದಾದ ಸಂಗೀತ ಸಂಬಂಧಿ ಉಲ್ಲೇಖಗಳ ಬಗ್ಗೆ ಹೇಳುವಾಗ ಬಾದಾಮಿ ಶಾಸನದ ತ್ರಿಪದಿಗಳು, ಕವಿರಾಜಮಾರ್ಗ. ನೇಮಿಚಂದ್ರ, ರನ್ನ ಮುಂತದವರ ಕಾವ್ಯಗಳಲ್ಲಿ ಪ್ರಸ್ತಾಪವಾಗಿರುವ ಬೆದಂಡೆ, ಚತ್ತಾಣ, ಒನಕೆವಾಡು, ಧವಳದ ಹಾಡು ಇತ್ಯಾದಿಗಳ ಉಲ್ಲೇಖದ ಜೊತೆಗೆ ಆದಿಕವಿ ಪಂಪನ ಕಾವ್ಯದ ಪ್ರಸ್ತಾಪವನ್ನು ಬಿಟ್ಟಿರುವುದು ಸರಿಯಲ್ಲ. ಅವನ ಆದಿಪುರಾಣದಲ್ಲಿ ನೀಲಾಂಜನೆಯ ನೃತ್ಯದ ಸಂದರ್ಭದಲ್ಲಿ ಸಂಗೀತ ಸಂಬಂಧಿಯಾದ ಅನೇಕ ಪಾರಿಭಾಷಿಕಗಳನ್ನು ಉಲ್ಲೇಖಿಸಿದ್ದಾನೆ. ಅಷ್ಟು ಮಾತ್ರವಲ್ಲದೆ ಹೆಸರಾಂತ 'ಹಿಂದೋಳ' ರಾಗದ ಪ್ರಸ್ತಾಪವನ್ನೂ ಮಾಡಿರುವುದನ್ನು ಹೇಳಬೇಕಾಗಿತ್ತು. ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ಪದ್ಧತಿಗಳ ಮಧ್ಯೆ ಇರುವ ಪ್ರಸಿದ್ಧವಾದ ಭೇದವನ್ನು ಪ್ರಸ್ತಾಪಿಸಿದ್ದಾರೆ. ಅದೆಂದರೆ ಕರ್ನಾಟಕ ಸಂಗೀತ ಲಯಕ್ಕೆ ಪ್ರಾಶಸ್ತ್ಯವಿರುವ, ಮೇಳರಾಗ ಪ್ರಧಾನವಾದುದಾದರೆ, ಹಿಂದೂಸ್ತಾನಿ ಸಂಗೀತ ನಾದ ಪ್ರಧಾನವಾಗಿದ್ದು ರಾಗವಿನ್ಯಾಸದಲ್ಲಿ ಹೆಚ್ಚಿನ ಸ್ವಾತಂತ್ರ್ಯಕ್ಕೆ ಅವಕಾಶವಿರುವಂಥದು ಎಂಬುದು.

ವಚನ ಸಾಹಿತ್ಯದ ಹುಟ್ಟು ಬೆಳವಣಿಗೆಗಳನ್ನು ಕುರಿತ ಅಧ್ಯಾಯದಲ್ಲಿ ಕನ್ನಡದಲ್ಲಿ ಆ ಕುರಿತು ನಡೆದಿರುವ ಮುಖ್ಯ ಚರ್ಚೆಗಳನ್ನು ಉಲ್ಲೇಖಿಸಿ ಅದು ಕನ್ನಡದಲ್ಲಿ ಸ್ವತಂತ್ರವಾಗಿ ಹೊಮ್ಮಿದ ಅಭಿವ್ಯಕ್ತಿ ರೂಪ ಎಂಬ ಬಹುಜನ ಕನ್ನಡ ವಿದ್ವಾಂಸರು ತಲುಪಿರುವ ತೀರ್ಮಾನವನ್ನು ದಾಖಲಿಸಿದ್ದಾರೆ. ಆದರೆ ವಚನಕಾರರು ರೂಢಿಗೆ ತಂದ ರಚನೆಗಳು ಚಂಪೂ ಗದ್ಯವಾದ 'ವಚನ'ಕ್ಕಿಂತ ಭಿನ್ನವಾದರೂ ವಚನ ಎಂಬ ಶಬ್ದವನ್ನು ಮಾತ್ರ ಅವರು ಅಲ್ಲಿಂದಲೇ ಪಡೆದಿರಬೇಕೆನಿಸುತ್ತದೆ. ವಚನಗಳ ಸ್ವರೂಪ ಕುರಿತಂತೆ ಹಾಗೂ ಅವುಗಳು ಒಳಗೊಳ್ಳುವ ವಸ್ತು ವಿಷಯಗಳನ್ನು ಕುರಿತಂತೆ ಇನ್ನಷ್ಟು ಮಾತುಗಳು ಖಂಡಿತವಾಗಿಯೂ ಇಲ್ಲಿ ಇರಬೇಕಿತ್ತು. ಬಸವಣ್ಣನವರ ಅಷ್ಟೇ ಏಕೆ ಬಸವ ಪೂರ್ವಕಾಲದಿಂದಲೂ ವಚನಗಳನ್ನು ಹಾಡುವ ಕ್ರಮ ರೂಡಿಯಲ್ಲಿದ್ದಿತು ಎಂಬುದಕ್ಕೆ ಡಾ. ಎಲ್ ಬಸವರಾಜು ಅವರು ಸಂಪಾದಿಸಿರುವ 'ಶಿವದಾಸ ಗೀತಾಂಜಲಿ'ಯನ್ನು ಉಲ್ಲೇಖಿಸಿರುವುದರ ಜೊತೆಗೆ ವಚನ ಸಾಹಿತ್ಯದ ಕಾಲದಲ್ಲಿ ಕಂಡು ಬರುವ, ಬಹುರೂಪಿ ಚೌಡಯ್ಯ, ಗಜೇಶ ಮಸಣಯ್ಯ, ಕಿನ್ನರಿ ಬೊಮ್ಮಯ್ಯ, ಢಕ್ಕೆಯ ಬೊಮ್ಮಣ್ಣ, ನಿಜಲಿಂಗ ಚಿಕ್ಕಯ್ಯ, ಸಕಲೇಶ ಮಾದರಸ ಮುಂತಾದ ಅನೇಕ ಶರಣರು ಮತ್ತು ವಚನಕಾರರು ಬೇರೆಬೇರೆ ಸಂಗೀತ ವಾದ್ಯಗಳಲ್ಲಿ ನಿಪುಣರಾಗಿದ್ದು ವಾದ್ಯಗಳನ್ನು ಬಾರಿಸುತ್ತ ವಚನಗಳನ್ನು ಹಾಡುತ್ತಿದ್ದುದರ ಬಗ್ಗೆ ಪ್ರಖರವಾಗಿ ಬೆಳಕು ಚೆಲ್ಲಿರುವುದೇ ಅಲ್ಲದೆ ಸ್ವರ ವಚನಗಳ ರಚನೆ, ವಚನಗಳಲ್ಲಿ ಸಂಗೀತ ಕುರಿತಂತೆ, ಹಾಡುವುದರ ಬಗೆಗೆ ಹೇರಳವಾಗಿ ಉಲ್ಲೇಖಿತವಾಗಿರುವುದನ್ನು ದಾಖಲಿಸಿ ವಚನಗಳನ್ನು ಹಾಡುವ ಪರಂಪರೆ ವಚನದ ಹುಟ್ಟಿನೊಂದಿಗೇ ಪ್ರಾರಂಭವಾಗಿತ್ತೆಂದು ಮನದಟ್ಟು ಮಾಡಿಕೊಟ್ಟಿದ್ದಾರೆ. ಸ್ವರವಚನಗಳಲ್ಲಿ ರಾಗ, ತಾಳಗಳ ನಿರ್ದೇಶನವಿರುವುದರಿಂದ ಅನೇಕ ಶರಣರಿಗೆ ಸಂಗೀತದ ಬಗ್ಗೆ ಖಚಿತವಾದ ಜ್ಞಾನವಿತ್ತು. ಹಾಡುವುದಕ್ಕಾಗಿಯೇ ಇವುಗಳ ರಚನೆ ಆಗಿರದೆ, ಅದು ಗೌಣವಾಗಿ ತಾವು ಹೇಳಬೇಕೆಂದಿದ್ದ ವಿಷಯ ಮುಖ್ಯವಾಗಿದ್ದ ಕಾರಣಕ್ಕೆ ಅವುಗಳಲ್ಲಿ ಗೇಯ ರಚನೆಗಳಿಗೆ ಇರುವಂತೆ ಪಲ್ಲವಿ ಅನುಪಲ್ಲವಿಗಳು ಇರದಿದ್ದರೂ ಕರ್ಣಾನಂದಕರವಾಗಿ ಹಾಡಲಂತೂ ಸಾಧ್ಯ. ಹಾಗೆಯೇ ವಚನಗಳನ್ನು ಅವು ಹುಟ್ಟಿದಂದಿನಿಂದ ಹಾಡಿಕೊಂಡು ಬರಲಾಗಿದೆ ಎಂಬುದಕ್ಕೆ ಮೇಲೆ ತಿಳಿಸಿದಂತೆ ವಚನಗಳಲ್ಲೇ ಹೇರಳವಾಗಿ ಸಾಕ್ಷ್ಯಗಳು ಇರುವುದನ್ನು ತೋರಿಸಲಾಗಿದೆ.

ಈ ಗ್ರಂಥದ ಬಹಳ ಮುಖ್ಯವಾದ ಭಾಗವೆಂದರೆ ಆಧುನಿಕ ಕಾಲದಲ್ಲಿ ಇತರೆ ಸಂಗೀತ ಕೃತಿಗಳನ್ನು ಹಾಡುವಂತೆ ವಚನಗಳನ್ನು ವಚನಗಳನ್ನು ಹಾಡುವ ಪರಂಪರೆ ಪ್ರಾರಂಭವಾಗಿ ಬೆಳೆದುಬಂದಿರುವ ಬಗೆಯನ್ನು, ಅದರ ಹೆಜ್ಜೆಗುರುತುಗಳನ್ನು ದಾಖಲಿಸುತ್ತ

ಅದರಲ್ಲಿ ಕೃಷಿ ಮಾಡಿರುವ, ಮಾಡುತ್ತಿರುವ ಸಂಗೀತಗಾರರನ್ನು ಅವರ ಸಾಧನೆಗಳ ವಿವರಗಳೊಂದಿಗೆ ವಿಸ್ತಾರವಾಗಿ ನಿರೂಪಿಸಿರುವುದು. ಈ ದಿಕ್ಕಿನಲ್ಲಿ ಹಾನಗಲ್ಲಿನ ಕುಮಾರ ಸ್ವಾಮಿಗಳಿಂದ ಪ್ರೇರಣೆ ಪಡೆದು ಹಾಡಲು ಪ್ರಾರಂಭಿಸಿದವರು ಗಾನಯೋಗಿ ಶ್ರೀ ಪಂಚಾಕ್ಷರಿ ಗವಾಯಿಗಳು. ಹಾಗೆಯೇ ವಚನಗಳನ್ನು ಶೋಧಿಸಿ ವಚನ ಸಾಹಿತ್ಯ ಸಂಪತ್ತನ್ನು ಪ್ರಕಟಣೆಗೆ ಅಣಿಗೊಳಿಸಿದ ವಚನಶಾಸ್ತ್ರ ಪಿತಾಮಹ ಫ.ಗು. ಹಳಕಟ್ಟಿಯವರು ಸಂಗೀತಕ್ಕೆ ಅಳವಡಿಸಿ ಹಾಡಿಸಲೂ ಪಟ್ಟ ಪ್ರಯತ್ನ, ಎಲ್ಲಕ್ಕಿಂತ ಮುಖ್ಯವಾಗಿ ದಾಸರ ಕೀರ್ತನೆಗಳ ಹಾಗೆಯೇ ಶರಣರ ವಚನಗಳೂ ಸಂಗೀತಗಾರರ ಗಾಯನ ಪದ್ಧತಿಗೆ ಇಳಿದು ಬರಬೇಕೆಂಬ ಮಹದಾಶೆಯಿಂದ ಪ್ರಸಿದ್ಧ ಸಾಹಿತಿ ದಿ. ಅನಕೃ ಮತ್ತು ಮುರುಘಾ ಮಠದ ಶ್ರೀ ಮೃತ್ಯುಂಜಯ ಅಪ್ಪಗಳು ಖ್ಯಾತ ಹಿಂದೂಸ್ತಾನಿ ಗಾಯಕ ಮಲ್ಲಿಕಾರ್ಜುನ ಮನ್ಸೂರರಿಗೆ ಮತ್ತೆ ಮತ್ತೆ ಒತ್ತಾಯಿಸಿ ಹಾಡಲು ಪ್ರೇರೇಪಿಸಿದ್ದು ಈ ಕಾಲದಲ್ಲಿ ವಚನಗಾಯನ ಪರಂಪರೆ ಪುನರುಜ್ಜೀವಿತಗೊಳ್ಳಲು ಪುಟಗೊಟ್ಟ ಅಂಶಗಳು. ಮಲ್ಲಿಕಾರ್ಜುನ ಮನ್ಸೂರರು, ಸಿದ್ಧರಾಮ ಜಂಬಲದಿನ್ನಿಯವರು, ಬಸವರಾಜ ರಾಜಗುರು ಮುಂತಾದ ಸಂಗೀತ ಕ್ಷೇತ್ರದ ಘಟಾನುಘಟಿಗಳು ಈ ಗಾಯನ ಪರಂಪರೆಯನ್ನು ಆಧುನಿಕ ಕಾಲದಲ್ಲಿ ಪ್ರಾರಂಭಿಸಿ ಅದಕ್ಕೆ ಇನ್ನಿಲ್ಲದ ಜನಪ್ರಿಯತೆ ಮತ್ತು ಪ್ರಸಿದ್ಧಿಯನ್ನು ತಂದುಕೊಟ್ಟರು. ಮುಂದೆ ಕರ್ನಾಟಕ ಸಂಗೀತ ಪದ್ಧತಿಯಲ್ಲೂ ವಚನಗಳನ್ನು ಹಾಡುವ ರೂಢಿ ಬಂದು ಈಗ ಅದೂ ತುಂಬ ಜನಪ್ರಿಯವಾಗಿದೆ. ಕೊನೆಯ ಎರಡು ಅಧ್ಯಾಯಗಳು ಇದರ ಸಾದ್ಯಂತ ಚರಿತ್ರೆ, ಕೆಲವು ವಚನಗಳ ಸ್ವರಪ್ರಸ್ತಾರ ಈ ಎಲ್ಲ ವಿವರಗಳಿಂದಲೇ ತುಂಬಿವೆ.

ಒಟ್ಟಾರೆ ಹೇಳಬೇಕೆಂದರೆ ಪ್ರಖರ ಸಮಾಜ ಸುಧಾರಣೆಯ ಚಿಂತನೆಗಳನ್ನು ಗರ್ಭೀಕರಿಸಿಕೊಂಡಿದ್ದು ಒಂದು ವಿನೂತನ ಸಮಾಜೋಧಾರ್ಮಿಕ ಆಂದೋಲನವನ್ನೇ ಹುಟ್ಟುಹಾಕಿದ ಕನ್ನಡ ಸಾಹಿತ್ಯದ ಅಕ್ಷಯ ಭಂಡಾರವೆನಿಸಿದ ವಚನಗಳನ್ನು ಹಾಡುವ ಪರಂಪರೆ ಅವುಗಳ ಹುಟ್ಟಿನೊಂದಿಗೇ ಪ್ರಾರಂಭವಾಗಿದ್ದಿತಾದರೂ ಮಧ್ಯೆ ಸ್ವಲ್ಪ ಕಾಲ ಹಿನ್ನೆಲೆಗೆ ಸರಿದಿದ್ದರೂ ಕಡಿದು ಹೋಗದೆ ಅವ್ಯಾಹತವಾಗಿ ಸಾಗಿಬಂದು ನಮ್ಮ ಕಾಲದಲ್ಲಿ ಮತ್ತೆ ವಚನಗಳ ಶಾಸ್ತ್ರೀಯ ಗಾಯನ ಪರಂಪರೆ ಮುಂದುವರೆದು ಉಕ್ಕಂದವಾಗಿ ಹರಿಯುತ್ತಿರುವುದರ ಸಾದ್ಯಂತ ಚರಿತ್ರೆಯನ್ನು ಶ್ರಮವಹಿಸಿ ಡಾ. ಜಯದೇವಿ ಜಂಗಮಶೆಟ್ಟಿಯವರು ಈ ಗ್ರಂಥದಲ್ಲಿ ಸಾರ್ಥಕವಾಗಿ ಕಟ್ಟಿಕೊಟ್ಟಿದ್ದಾರೆ. ಇಂಥ ಸಂಶೋಧನ ಬರಹಗಳಲ್ಲಿ ಅಡಿಟಪ್ಪಣಿಗಳಿಗೆ ಆಧಾರವಾಗಿ ನೀಡುವ ಆಕರಗಳು ಸಾಧ್ಯವಾದಷ್ಟೂ

ಪ್ರಾಥಮಿಕ/ಮೂಲ ಆಕರಗಳಾಗಿರ (primary sources) ಬೇಕೆಂಬುದು ಸಾಮಾನ್ಯ ನಿರೀಕ್ಷೆ. ಅದು ಇಲ್ಲಿನ ಮೊದಮೊದಲ ಅಧ್ಯಾಯಗಳಲ್ಲಿ ಹಿಂದಾಗಿ ದ್ವಿತೀಯ ಆಕರಗಳಿಗೇ ಹೆಚ್ಚಾಗಿ (secondary sources) ಮೊರೆಹೋಗಿರುವುದು ಅಷ್ಟೇನೂ ಶ್ಲಾಘನೀಯ ವಲ್ಲವಾದರೂ. ಭಾರತೀಯ ಸಂಗೀತದ ಹಿನ್ನೆಲೆಯಲ್ಲಿ ನಡೆಸಿರುವ ವಚನ ಗಾಯನ ಪರಂಪರೆಯ ಈ ಅಧ್ಯಯನ ಅನೇಕ ಹೊಸ ಅಂಶಗಳನ್ನು ಬೆಳಕಿಗೆ ತರುವಲ್ಲಿ ಯಶಸ್ವಿಯಾಗಿದೆ. ಭಾಷೆ ಸರಳವಾಗಿ ಅಕ್ಲಿಷ್ಟ ಮನೋಹರವಾಗಿದೆ.

❖

36

ಹಾಡಾಗಿ ಹರಿದ ದಲಿತ ಚಿಂತನ

1989ರಲ್ಲಿ ಪ್ರಕಟವಾದ 333 ತ್ರಿಪದಿಗಳ ಈ ಪುಸ್ತಕದ್ದು ಪ್ರಸ್ತುತ ಮೂರನೇ ಮುದ್ರಣ. ವಚನಗಳೆಂದೇ ಖ್ಯಾತವಾದ ಸರ್ವಜ್ಞನ ತ್ರಿಪದಿಗಳ ಮೇಲ್ಪಂಕ್ತಿಯನ್ನನುಸರಿಸಿ, ಪ್ರೊ.ಟಿ. ಯಲ್ಲಪ್ಪ ಬೂತಯ್ಯನವರು ತಮ್ಮ ವಿಚಾರಗಳು, ಚಿಂತನೆಗಳನ್ನು 'ಮಾತಂಗ ವಚನಗಳು' ಎಂಬ ಶೀರ್ಷಿಕೆಯಲ್ಲಿ ತ್ರಿಪದಿಗಳ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಕನ್ನಡ ವೃತ್ತಗಳ ಗಾಯತ್ರಿಯೆಂದೇ ಖ್ಯಾತವಾದ ತ್ರಿಪದಿ ಅತ್ಯಂತ ಜನಪ್ರಿಯವಾದ ಛಂದಸ್ಸು. ತ್ರಿಪದಿಗಳನ್ನು ಕಟ್ಟುವುದು ಸುಲಭ. ಅದಕ್ಕಿಂತ ಹೆಚ್ಚಾಗಿ ನೆನಪಿನಲ್ಲಿಟ್ಟುಕೊಳ್ಳುವುದು ಇನ್ನೂ ಸುಲಭ. ಆ ಕಾರಣದಿಂದ ಕ್ರಿ.ಶ. 7ನೇ ಶತಮಾನದ ಬಾದಾಮಿ ಶಾಸನದ ಕಾಲದಿಂದ ಹಿಡಿದು ಇಂದಿನ

ಮಾತಂಗ ವಚನಗಳು : ಪ್ರೊ. ಟಿ. ಯಲ್ಲಪ್ಪ ಬೂತಯ್ಯ
ಪು.120, ಮೊ.ಮು. 1989, ಬೆಲೆ ರೂ. 60/-
ಆದಿ ಭಾರತ ಸಾಹಿತ್ಯ ಪ್ರಕಾಶನ, 196, 14ನೇ ಕ್ರಾಸ್, ಜಯನಗರ, ಮೈಸೂರು - 570014

ವರೆಗೂ ತ್ರಿಪದಿ ಅತ್ಯಂತ ಜನಪ್ರಿಯ ಛಂದಸ್ಸಾಗಿ ಉಳಿದುಬಂದಿದೆ. ತ್ರಿಪದಿಯ ಸಾರ್ವಭೌಮನಾದ ಸರ್ವಜ್ಞನಿಂದಾಗಿ ತ್ರಿಪದಿಗೆ ಸರ್ವಮಾನ್ಯತೆ ಲಭಿಸಿತು. ನೋಡುವುದಕ್ಕೆ ವಾಮನನ ಹೆಜ್ಜೆಗಳ ಹಾಗೆ ಮೂರು ಸಾಲಿನ ಪದ್ಯವಾದರೂ, ತ್ರಿವಿಕ್ರಮನಷ್ಟು ಅರ್ಥ ವಿಸ್ತಾರವನ್ನು ಪಡೆದುಕೊಳ್ಳಲು ಸಾಧ್ಯವೆಂಬುದಕ್ಕೆ ಸರ್ವಜ್ಞನೇ ದೊಡ್ಡ ಉದಾಹರಣೆ. ಮೊದಲಿಗೆ ಅಂಶಗಣಾನಿತವಾಗಿದ್ದ ತ್ರಿಪದಿ ಅನಂತರ ಮಾತ್ರಾ ಗಣಕ್ಕೆ ತಿರುಗಿತು. ಆದರೂ ಆರು ಮತ್ತು ಹತ್ತನೇ ಸ್ಥಾನಗಳಲ್ಲಿ ಬ್ರಹ್ಮ ಗಣವನ್ನು ನಿಯತವಾಗಿ ಉಳಿಸಿಕೊಂಡದ್ದು ತ್ರಿಪದಿಯ ವಿಶಿಷ್ಟತೆ.

ಯಲ್ಲಪ್ಪ ಬೂತಯ್ಯನವರೇನೋ ತ್ರಿಪದಿಯ ಲಕ್ಷಣವನ್ನು ಅಂಶ ಗಣಾತ್ಮಕವಾಗಿ ಹೇಳಿದ್ದರೂ ಇವು ಅಂಶಗಣ ಘಟಿತ ತ್ರಿಪದಿಗಳಲ್ಲ, ಮಾತ್ರಾ ತ್ರಿಪದಿಗಳು. ಎಲ್ಲೋ ಕೆಲವೊಂದು ಕಡೆ ನಡೆ ತಪ್ಪಿದ್ದರೂ ಒಟ್ಟಾರೆ ಇವು ಐದು ಮಾತ್ರೆಗಳ ಗಣದ ತ್ರಿಪದಿಗಳು. 6 ಮತ್ತು 10ನೇ ಸ್ಥಾನಗಳಲ್ಲಿ ಬ್ರಹ್ಮಗಣವನ್ನು ಕಾಯ್ದುಕೊಳ್ಳಲು ಯತ್ನಿಸಿದೆಯಾದರೂ ಕೆಲವೆಡೆ ಸಾಧಿತವಾಗಿಲ್ಲ. ಆದರೆ ಎಲ್ಲ ತ್ರಿಪದಿಗಳೂ ದ್ವಿತೀಯಾಕ್ಷರ ಪ್ರಾಸ, ಮಧ್ಯಯತಿ ಮತ್ತು ಒಳಪ್ರಾಸವನ್ನು ನಿಯತವಾಗಿ ಉಳಿಸಿಕೊಂಡು ಹೃದ್ಯವಾಗಿದೆ. ಒಟ್ಟಾರೆ ಸೊಗಸಾದ ತ್ರಿಪದಿಯನಡೆ ಎನ್ನಬಹುದು. ಆದರೆ ಈ ಹೊರಗಣ ವಿನ್ಯಾಸಕ್ಕಿಂತ ಹೆಚ್ಚಾಗಿ ಒಳಗಿನ ಹೂರಣದಿಂದಾಗಿ ಅವು ತುಂಬ ಯಶಸ್ವಿಯಾಗಿವೆ.

ಅತ್ಯಂತ ಕ್ರೂರವೂ ಬರ್ಬರವೂ ಆದ ಭಾರತದ ಜಾತಿ ವ್ಯವಸ್ಥೆಗೆ ಅಂಟಿದ ದೊಡ್ಡ ಕಳಂಕ ಅಸ್ಪೃಶ್ಯತೆ. ಸಮಾಜದ ಇತರೆ ಜನ ವರ್ಗದೊಂದಿಗೆ ಮುಕ್ತವಾಗಿ ಬೆರೆಯಲವಕಾಶ ಕೊಡದೆ ವಿದ್ಯೆಯ ಹಕ್ಕು, ಆಸ್ತಿಯ ಹಕ್ಕು ಇತ್ಯಾದಿ ಎಲ್ಲ ವಿಧವಾದ ಮಾನವ ಹಕ್ಕುಗಳಿಂದ ದಲಿತರನ್ನು ವಂಚಿತರನ್ನಾಗಿಸಿರುವುದಂತೂ ಅತ್ಯಂತ ಅಮಾನವೀಯ ವಾದ್ದು. ಮಾನವ ಚರಿತ್ರೆಯಲ್ಲಿ ಇದಕ್ಕೆ ಸದೃಶವಾದ ಘೋರ ಅನ್ಯಾಯ ಬೇರೊಂದು ಇರಲಾರದು. ಇದನ್ನು ತೊಡೆದು ಹಾಕಿ ಇವರ ವಿಷಯಕ್ಕೆ ಸಮಾಜದ ಕಣ್ಣು ತೆರೆಸುವ ಪ್ರಯತ್ನಗಳು ಬಸವ, ರಾಮಾನುಜ, ಕಬೀರ್ ಮೊದಲಾದ ಸಮಾಜ ಸುಧಾರಕರು ಹಾಗೂ ವಿಚಾರವಂತರಿಂದ ಕಾಲದಿಂದ ಕಾಲಕ್ಕೆ ನಡೆದಿವೆ. ನಮ್ಮ ಕಾಲದಲ್ಲಿ ಮಹಾತ್ಮಾಗಾಂಧಿ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ನಿಶ್ಚಿತ ಹೋರಾಟ ಗಳಿಂದಾಗಿ ಅವರಿಗೆ ಸಂವಿಧಾನ ಬದ್ಧವಾದ ಹಕ್ಕುಗಳು ಮತ್ತು ಮೀಸಲಾತಿ ದೊರೆತದ್ದರಿಂದಾಗಿ ಅವರು ಇಂದು ಸ್ವಲ್ಪಮಟ್ಟಿಗೆ ಬೆಳಕು ಕಾಣಲು ಸಾಧ್ಯವಾಗಿದೆ. ವಿದ್ಯೆಯೊಂದೇ ತಮ್ಮನ್ನು ಮೇಲೆತ್ತಬಲ್ಲುದೆಂಬುದನ್ನು ಕಂಡುಕೊಂಡು, ವಿದ್ಯಾವಂತರಾಗಿ, ಸ್ವಾಭಿಮಾನಿಗಳಾಗಿ ಸರೀಕರೊಂದಿಗೆ ತಲೆಯೆತ್ತಿ ನಿಲ್ಲುವ ಶಕ್ತಿಯನ್ನು, ಸಾಮರ್ಥ್ಯವನ್ನು

ಗಳಿಸಿಕೊಳ್ಳುವ ಪ್ರಯತ್ನವನ್ನು ನಿಧಾನವಾಗಿಯಾದರೂ ಮಾಡುತ್ತಿರುವುದು ಧನಾತ್ಮಕ ಬೆಳವಣಿಗೆಯಾಗಿದೆ. ಆದರೂ ಅವರು ಸಾಗಬೇಕಾಗಿರುವ ಹಾದಿ ಇನ್ನೂ ಉದ್ದವಾಗಿದೆ.

ಪ್ರಸ್ತುತ 'ಮಾತಂಗ ವಚನಗಳ' ಕರ್ತೃ ಪ್ರೊ. ಟಿ. ಯಲ್ಲಪ್ಪ ಬೂತಯ್ಯನವರು ಉನ್ನತ ವಿದ್ಯಾಭ್ಯಾಸ ಮಾಡಿದ ಸುಸಂಸ್ಕೃತ ವಿಚಾರವಂತ; ಅಷ್ಟೇ ಅಲ್ಲ ಕವಿ ಹೃದಯದ ಧೀಮಂತ ಚೇತನ. ಸಮಾಜದ ಅವಗಣನೆಗೆ ಗುರಿಯಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದಿರುವ ತಮ್ಮ ಜನಾಂಗ ಉಳಿದ ಜನವರ್ಗದೊಂದಿಗೆ "ನಾವು ಸಮ ನಿಮಗೆಂದು" ಹೆಜ್ಜೆ ಹಾಕಿ ನಡೆಯುವಂತಾಗಬೇಕೆಂಬ ಹೇರಾಸೆ ಹೊಂದಿದವರು. ಅನೇಕ ಮೌಢ್ಯಗಳು, ದುರಭ್ಯಾಸಗಳು, ಮನೆ ಮಾಡಿರುವ ಅನೇಕ ದಲಿತ ಯುವಕರು ಸರ್ವಾಂಗೀಣ ಅಭಿವೃದ್ಧಿ ಸಾಧಿಸಲು, ತಮಗೆ ಸಲ್ಲಬೇಕಾದ ಹಕ್ಕುಗಳು,ಅವಕಾಶಗಳನ್ನು ಪಡೆದುಕೊಳ್ಳಲು, ಮಾರ್ಗದರ್ಶನ, ಚಿಂತನೆ, ಹಿತನುಡಿಗಳು ಅವರಿಗೆ ಅಗತ್ಯವೆಂದು ಮನಗಂಡವರು. ಅವನ್ನೆಲ್ಲಾ ಹಾಗೆ ಹಾಗೆಯೇ ಗದ್ಯದಲ್ಲಿ ಹೇಳುವುದಕ್ಕಿಂತ ನೆನಪಿನಲ್ಲಿಟ್ಟುಕೊಳ್ಳಲನುವಾಗುವಂತೆ, ಪದ್ಯ ರೂಪದಲ್ಲಿ ಹರಳುಗಟ್ಟಿಸಿ ಹೇಳುವುದು ಒಳ್ಳೆಯದೆಂದು ತಿಳಿದು ಈ ತ್ರಿಪದಿಗಳನ್ನು ರಚಿಸಿದ್ದಾರೆ. ಇದರಲ್ಲಿ ತಮ್ಮ ಜನಾಂಗದ ಚರಿತ್ರೆ ಇದೆ. ಅದಕ್ಕಿಂತ ಹೆಚ್ಚಾಗಿ ವರ್ತಮಾನದಲ್ಲಿ ತಮ್ಮ ಭವಿತವ್ಯವನ್ನು ರೂಪಿಸಿಕೊಳ್ಳಲು ಅಗತ್ಯವಾದ ಚಿಂತನ ಮಾಲೆಯೊಂದನ್ನು ಕಟ್ಟಿಕೊಟ್ಟಿದ್ದಾರೆ. 'ವಿದ್ಯೆ', 'ನೀತಿಮಾರ್ಗ', 'ಸಾಮಾಜಿಕ ಪದ್ಧತಿ', 'ಮದ್ಯಪಾನ', 'ಆರ್ಥಿಕ ವ್ಯವಸ್ಥೆ', 'ಲಂಚ ಪ್ರಪಂಚ', 'ಜಾತಿ ಪದ್ಧತಿ', 'ಧರ್ಮ', 'ಸಂಘ', 'ನಾಡು – ನುಡಿ', 'ತತ್ವಜ್ಞಾನಿ'ಗಳೆಂಬ ಈ ಗ್ರಂಥದೊಳಗಿನ ಶೀರ್ಷಿಕೆಗಳೇ ಈ ಚಿಂತನೆಗಳ ಸ್ವರೂಪವನ್ನು ಸ್ಥೂಲವಾಗಿ ಸೂಚಿಸುತ್ತವೆ.

ಇಲ್ಲಿ ಚಿಂತನೆಗಳು ತ್ರಿಪದಿಗಳ ರೂಪದಲ್ಲಿ ಹರಳು ಗಟ್ಟಿರುವುದನ್ನು ಸ್ಥೂಲವಾಗಿ ನೋಡಬಹುದು. 'ಸಾಮಾಜಿಕ ಪದ್ಧತಿ' ಭಾಗದಲ್ಲಿ ದಲಿತರು ಬದುಕುತ್ತಿರುವ ಪರಿಸರದ, ಅವರ ಕಷ್ಟಕರ ಬಾಳುವೆಯ, ಅವರನ್ನು ಇಂಥ ಹೀನ ದೀನ ಸ್ಥಿತಿಗೆ ದೂಡಿರುವ ಸಮಾಜದ ಕ್ರೌರ್ಯವನ್ನು ಹೀಗೆ ಬಿಚ್ಚಿಟ್ಟಿದ್ದಾರೆ.

ಹಸಿದೊಟ್ಟೆಯ ಮಕ್ಕಳು
ಕಸಕಡ್ಡಿ ಮನೆ ತುಂಬ
ಬಿಸಿಲ ಪೀತಾಂಬರ ಉಟ್ಟ ನೀ – ಬದುಕು
ಹಸನಪ್ಪುದೆಂದು ಮಾತಂಗ.
ಬೀದಿ ತಿರುಗತಲಿವೆ ಓದು ಕಲಿವ ಮಕ್ಕಳು
ಕಾದು ಕುಳಿತವರೆ ಕೆಲಸಕ್ಕೆ ಯುವಜನರು
ಬಾಧೆ ತೊಲಗಿಹುದೆ ಮಾತಂಗ.

'ಮದ್ಯಪಾನ' ವಿಭಾಗದಲ್ಲಿ ಬಡತನ, ಕಷ್ಟದ ಬಾಳುವೆಯ ಜೊತೆಯಲ್ಲೇ, ದೇಹಶ್ರಮ ಮರೆಯಲೆಂಬ ನೆಪದಲ್ಲಿ ದಲಿತರು ರೂಢಿಸಿಕೊಂಡು ಬಂದಿರುವ ಮದ್ಯಪಾನದ ದುಶ್ಚಟ ಹೇಗೆ ಅವರನ್ನು ವಿನಾಶದತ್ತ ದೂಡುತ್ತದೆಂದು ಪರಿಣಾಮಕಾರಿಯಾಗಿ ಮನಗಾಣಿಸಿದ್ದಾರೆ.

ಮದ್ಯವನು ಕುಡಿದವರು ಗದ್ದಲವ ಸೃಷ್ಟಿಪರು
ವಿದ್ಯೆಯನು ತೊರೆದು ಮೆರೆವವರು – ಸಮಾಜದಿ
ಕ್ಷುದ್ರ ಜೀವಿಗಳು ಮಾತಂಗ.
ಮದ್ಯವವನು ಕುಡಿಯುವ ಗದ್ದೆ ಹೊಲ ಮಾರುವವ
ಹದ್ದು ಮೀರಿ ಹಣವ ಕಳೆಯುವವ ಜೀವನದಿ
ಉದ್ಧಾರ ಕಾಣನು ಮಾತಂಗ.

ರಾಜಕೀಯ ವಿಭಾಗದಲ್ಲಿ ಅತ್ಯಂತ ಅಧೋಗತಿಗಿಳಿದಿರುವ ನಮ್ಮ ದೇಶದ ಓಟಿನ ರಾಜಕೀಯವನ್ನು ವರ್ಣಿಸಿ,

ಭೋಜನಕ್ಕಿರದಿರೆ ರಾಜಕೀಯಕ್ಕಿಳಿವ
ಗೋಜೇಕೆ ಬಡವ ನಿನ್ನನದು – ಗಾಣಕ್ಕೆ
ಬೀಜವ ಮಾಡುವುದು – ಮಾತಂಗ
ಎಂದು ಎಚ್ಚರಿಸುತ್ತಾರೆ.
ಅವರ್ಣೀಯರ ಮೀಸಲು ಅವರ್ಣೀರಿಗಲ್ಲದೆ
ಸವರ್ಣೀಯರ ಸೇರಿಸಿ ಹಂಚಲು ದಲಿತರಿಗೆ

ಸವಲತ್ತು ವಂಚಿತ ಮಾತಂಗ.– ಎಂದೂ ದಲಿತರಿಗೆ ಅರಿವುಂಟು ಮಾಡುತ್ತಾರೆ.

ಜಾತಿ ವ್ಯವಸ್ಥೆಯ ಅನರ್ಥ ತಿಳಿದೂ ಮತ್ತೆ ಜಾತಿಗೇ ಜೋತು ಬೀಳುವ, ಅದರ ಬಗ್ಗೆ ಹೆಮ್ಮೆ ತಾಳಬೇಕೆಂದು ಸೂಚಿಸುವ

ಮಾತಂಗ ಮಹಾಮುನೀ ಖ್ಯಾತನು ಪುರಾಣದಿ
ಆತನದೆ ಗೋತ್ರ ನಿಮದಾಗಿ – ಉತ್ತಮರು
ಜಾತಿಯಲಿ ನೀವು – ಮಾತಂಗ
ಇದೇ ದನಿಯಲ್ಲೇ
ಕೀಳು ಮೇಲೆನ್ನುವುದು ಕಾಳಗಕೆ ಕಾರಣವು
ಕೇಳದಿರು ಜಾತಿಯ ಅದು ಹಿಂದೆ ದೇಶವನು
ಹಾಳು ಮಾಡಿತು ಮಾತಂಗ.

ಎಂದು ಹೇಳಿದರೆ ಹೇಗೆ ಹೊಂದಿಕೆಯಾಗುತ್ತದೆ..? ಅದೂ ಅಲ್ಲದೆ, ಮಾತಂಗ' ಜಾತಿಗೆ ಆದಿಪುರುಷನೆನ್ನಬಹುದಾದ ಮಾತಂಗ ಋಷಿಯ ಹಾಗೂ ಮಾತಂಗಿಯ ಉಲ್ಲೇಖ ಶಿಷ್ಟ ಸಾಹಿತ್ಯದಲ್ಲಿ ರಾಮಾಯಣ, ಭಾರತಗಳಲ್ಲಿ, ಬೌದ್ಧ ಸಾಹಿತ್ಯ, ಜೈನ

ಸಾಹಿತ್ಯಗಳಲ್ಲಿ, ಸಂಸ್ಕೃತ ಕವಿಗಳ ಶ್ಲೋಕಗಳಲ್ಲಿ, ಸ್ತುತಿಗಳಲ್ಲಿ ಎಲ್ಲೆಲ್ಲಿ ಕಂಡು ಬರುತ್ತದೆ ಎಂದು ಅತ್ಯಂತ ವಿಸ್ತಾರವಾದ, ಪಾಂಡಿತ್ಯ ಪೂರ್ಣವಾದ ಪ್ರಸ್ತಾವನೆಯಲ್ಲಿ ಕಟ್ಟಿ ಕೊಡಲು ಯತ್ನಿಸಿರುವುದನ್ನು ನೋಡಿದಾಗ, ಇದು ಅಗತ್ಯವಿತ್ತೆ ಎನಿಸುತ್ತದೆ ಬಹುಶಃ ಒಂದು ಅಸ್ತಿತ್ವದ, ಐಡೆಂಟಿಟಿಯ ಪ್ರಶ್ನೆಯಾಗಿ ಇದು ಅವರನ್ನು ಕಾಡಿದೆ ಎನಿಸುತ್ತದೆ. ಈ ಪುರಾಣದ ಭೂತದ ಹೊರತಾಗಿಯೂ ದಲಿತರಿಗೆ ಅವರದೇ ಆದ ವಿಶಿಷ್ಟ ವ್ಯಕ್ತಿತ್ವವಿದೆ, ಬದುಕಿದೆ.

ಇಷ್ಟೆಲ್ಲಾ ವೈಚಾರಿಕ ಜಿಜ್ಞಾಸೆಯನ್ನೊಳಗೊಂಡ ಈ ಕೃತಿಯಲ್ಲಿ ಮುನ್ನುಡಿಕಾರರ ಆಶಯಕ್ಕೆ ವಿರುದ್ಧವಾಗಿ

ವಿಧಿ ಬರಹವಿದ್ದಂತೆ ಬದುಕು ನಡೆದುದಲ್ಲದೆ
ಬದಲಿಸಲು ಬರದು ಸುಖ ದುಃಖ ಸಮನಾಗಿ

ಎದುರಿಸು ಮುದದಿಂದ ಮಾತಂಗ – ಎಂದು ಹೇಳಿ ಮತ್ತೆ ಅಪ್ಪ ಹಾಕಿದ ಆಲದ ಮರಕ್ಕೆ ಜೋತು ಬಿದ್ದಿರುವುದೇ ಒಂದು ಚೋದ್ಯ.

❖

37

ವಿಚಾರದ ಹಾದಿಗೆ ಹಚ್ಚುವ ಸಾರ್ಥಕ ಕೃತಿ

ಗೋಪುರ ರೀತಿಯ ಶ್ರೇಣೀಕೃತ ಜಾತಿ ವ್ಯವಸ್ಥೆ ಭಾರತೀಯ ಸಮಾಜವನ್ನು ಸಾವಿರಾರು ವರ್ಷಗಳಿಂದ ಸಾವಿರಾರು ಗುಂಪುಗಳಾಗಿ ಛಿದ್ರೀಕರಿಸಿ ಒಂದು ಭಯಂಕರ ಸಾಮಾಜಿಕ ಪಿಡುಗು ಎನಿಸಿದ್ದರೆ, ಅಸ್ಪೃಶ್ಯತೆಯಂತೂ ಭಾರತವನ್ನು ನಾಗರಿಕ ಜಗತ್ತಿನೆದುರು ನಾಚಿಕೆಯಿಂದ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿರುವ ಸಾಮಾಜಿಕ ಕ್ರೌರ್ಯವಾಗಿದೆ. ನಮ್ಮಂತೆಯೇ ಇರುವ ಮನುಷ್ಯರನ್ನು ಪ್ರಾಣಿಗಳಿಗಿಂತ ಕಡೆಯಾಗಿ ಕ್ರೂರವಾಗಿ ನಡೆಸಿಕೊಂಡು, ಅವರು ಎಂದೆಂದೂ ಮೇಲೇಳದಂತೆ ತುಳಿದಿಟ್ಟಿರುವುದು ಮಾನವ ಚರಿತ್ರೆಯಲ್ಲೇ ಅತ್ಯಂತ ಅಮಾನವೀಯ ಅಧ್ಯಾಯವೆನಿಸಿದೆ. ತಮಗೂ ಒಂದು ಬದುಕಿದೆ ಎಂಬುದನ್ನೇ ಮರೆತು, ಭವಿಷ್ಯವೇ ಇಲ್ಲದೆ ದಲಿತರು ಕಂಗಾಲಾಗಿದ್ದ ಕಾಲಘಟ್ಟದಲ್ಲಿ ಗಾಂಧೀಜಿ

ದಲಿತ ಚಿಂತನ : ಡಿ.ಎಸ್. ವೀರಯ್ಯ
ಪುಟ: 216, ಬೆಲೆ: 150 ರೂ.
ಪಿತಾಮಹ ಪ್ರಕಾಶನ, ನಂ.73, ಬನಶಂಕರಿ 3ನೇ ಹಂತ, ಬಿಡಿಎ ಲೇಔಟ್, 8ನೇ ಮುಖ್ಯರಸ್ತೆ, ಗಿರಿನಗರ, ಬೆಂಗಳೂರು – 85

ಯವರು ಪ್ರಾರಂಭಿಸಿದ ಅಸ್ಪೃಶ್ಯತೆಯ ವಿರುದ್ಧದ ಆಂದೋಲನ ಸವರ್ಣೀಯರ ಕಣ್ಣನ್ನು ಸ್ವಲ್ಪಮಟ್ಟಿಗಾದರೂ ತೆರೆಸುವ ಮಟ್ಟಿಗೆ, ಆತ್ಮಾವಲೋಕನದ ಕಿಡಿ ಹೊತ್ತಿಸುವ ಮಟ್ಟಿಗೆ ಯಶಸ್ವಿಯಾಯಿತು.

ಆದರೆ ದಲಿತರು; ತಮ್ಮ ಹೀನದೀನ ಪರಿಸ್ಥಿತಿಯ ವಿರುದ್ಧ ಜಾಗೃತರಾಗಿ ಸಿಡಿದೇಳುವಂತೆ ಮಾಡಿದ್ದೇ ಅಲ್ಲದೆ, ದಲಿತರಿಗೆ ಮೀಸಲಾತಿ ಎಂಬುದು ಯಾರ ದಯಾ ಭಿಕ್ಷೆಯೂ ಅಲ್ಲ, ಅದು ಅವರ ಹಕ್ಕು ಎಂದು ಪ್ರತಿಪಾದಿಸಿ, ಸಂವಿಧಾನದಲ್ಲೇ ಮೀಸಲಾತಿಯನ್ನು ಅಳವಡಿಸಿ ದಲಿತರು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಕಾರಣರಾದವರು ಡಾ.ಅಂಬೇಡ್ಕರ್ ಅವರು. 'ಶಿಕ್ಷಣ' 'ಸಂಘಟನೆ' ಮತ್ತು 'ಹೋರಾಟ'ಗಳ ಮಂತ್ರ ದೀಕ್ಷೆಯನ್ನು ನೀಡಿ 'ಜೊತೆಯವರ ಕೂಟದಲಿ ನಾವು ಸಮ ನಿಮಗೆಂದು' ಎದೆಸೆಟೆಸಿ ನಿಲ್ಲುವ ಆತ್ಮಾಭಿಮಾನ ಬೇರೂರಲು ಕಾರಣರಾದರು.

ಇಷ್ಟಾದರೂ ದಲಿತರು ಇನ್ನೂ ಸ್ವಾಭಿಮಾನದ, ನೆಮ್ಮದಿಯ ಬದುಕನ್ನು ಬದುಕಲು ಸಾಧ್ಯವಾಗಿಲ್ಲ. ಈ ಕ್ಷಣದಲ್ಲೂ ದಲಿತರ ಮೇಲಿನ ದೌರ್ಜನ್ಯ, ಅತ್ಯಾಚಾರಗಳು ನಿಂತಿಲ್ಲ. ದಲಿತರ ಪ್ರಗತಿ ಆಗದಿರಲು ಏನು ಕಾರಣ, ಅವರು ಕ್ರಮಿಸಬೇಕಾದ ದಾರಿ ಯಾವುದು, ಅವರ ನ್ಯಾಯಬದ್ಧವಾದ ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ಹಕ್ಕುಗಳನ್ನು ಪಡೆದುಕೊಳ್ಳುವುದು ಹೇಗೆ, ಅಡಚಣೆಗಳೇನು ಎಂಬುದರ ಬಗ್ಗೆ ಅನೇಕ ದಲಿತ ಲೇಖಕರು, ರಾಜಕೀಯ ಮುಂದಾಳುಗಳು, ಚಿಂತಿಸುತ್ತಲೇ ಇದ್ದಾರೆ. ದಲಿತ ಸಂಘರ್ಷ ಸಮಿತಿಯಂಥ ಬಲಿಷ್ಠ ಸಂಘಟನೆ ಏರ್ಪಟ್ಟು ದಲಿತರ ಹೋರಾಟಕ್ಕೆ ಬಲವನ್ನು ತಂದು ಕೊಟ್ಟಿತು. ದಲಿತರ ಬಗ್ಗೆ ನಿಜವಾದ ಕಾಳಜಿ ಉಳ್ಳ ದಲಿತೇತರ ವಿಚಾರವಾದಿಗಳೂ ಬೆಂಬಲಿಸಿದ ಸಂದರ್ಭಗಳಿವೆ.

ಮಾನ್ಯ ಡಿ.ಎಸ್. ವೀರಯ್ಯನವರು ಒಬ್ಬ ಎಚ್ಚತ್ತ ದಲಿತ ಬುದ್ಧಿ ಜೀವಿಯಾಗಿ, ರಾಜಕೀಯ ಮುಖಂಡರಾಗಿ, ಕಾನೂನು ಪಂಡಿತರಾಗಿ, ದಲಿತರ ಪ್ರಗತಿ ಕುರಿತಂತೆ, ಅವರ ಹಕ್ಕುಗಳ ಬಗ್ಗೆ, ಅವರ ಮೇಲಿನ ಶೋಷಣೆಯನ್ನು ಹತ್ತಿಕ್ಕುವ ಬಗ್ಗೆ ತಮ್ಮ ಸೋದರ ಬಂಧುಗಳಿಗೆ ಮಾರ್ಗದರ್ಶನ ಮಾಡುವುದು ತಮ್ಮ ಸಾಮಾಜಿಕ ಜವಾಬ್ದಾರಿ ಅಷ್ಟೇ ಅಲ್ಲ, ಅದೊಂದು ಸಾಮಾಜಿಕ ಋಣ ಎಂದು ತಿಳಿದು ಈ ಬಗ್ಗೆ ಬೇರೆ ಬೇರೆ ಪತ್ರಿಕೆಗಳಲ್ಲಿ, ತಮ್ಮದೇ ಪತ್ರಿಕೆಯಲ್ಲಿ ನಿರಂತರವಾಗಿ ಬರೆಯುತ್ತ ಬಂದವರು. ಪ್ರಸ್ತುತ 'ದಲಿತ ಚಿಂತನ' ಅಂಥ ಲೇಖನಗಳನ್ನು ಕ್ರೋಢೀಕರಿಸಿದ ಪುಸ್ತಕ.

'ದಲಿತ ಚಿಂತನ'ದ 35 ವೈಚಾರಿಕ ಲೇಖನಗಳಲ್ಲಿ, ದಲಿತರನ್ನು ಬಾಧಿಸುತ್ತಿರುವ

ಎಲ್ಲ ರೀತಿಯ ಸಮಸ್ಯೆಗಳ ಬಗ್ಗೆ, ತಮ್ಮ ನ್ಯಾಯಬದ್ಧವಾದ ಹಕ್ಕುಗಳನ್ನು ಪಡೆದುಕೊಳ್ಳುವ ಬಗ್ಗೆ, ತಮಗೆ ಸವರ್ಣೀಯರಿಂದ ಸರ್ಕಾರದಿಂದ ಆಗುತ್ತಿರುವ ಅನ್ಯಾಯಗಳ ಬಗ್ಗೆ ಮತ್ತು ಅವುಗಳ ನಿವಾರಣೆಗೆ ಅವರು ಅನುಸರಿಸಬೇಕಾದ ಮಾರ್ಗಗಳ ಬಗ್ಗೆ ದಲಿತರಲ್ಲಿ ಅರಿವಿನ ಸ್ಫೋಟವನ್ನುಂಟು ಮಾಡುವ ಬರಹಗಳ ಜೊತೆಗೆ ಡಾ॥ಅಂಬೇಡ್ಕರರ ಚಿಂತನೆಗಳನ್ನು ಕುರಿತಂತೆ, ದಲಿತರು ಶಿಕ್ಷಿತರಾಗುವ ಬಗ್ಗೆ ದಲಿತರಲ್ಲಿನ, ದಲಿತ ಸಂಘಟನೆಗಳಲ್ಲಿನ ಒಡಕುಗಳ ಬಗ್ಗೆ, ಸವರ್ಣೀಯರ ಅಮಾನವೀಯತೆಯ ಬಗ್ಗೆ, ದಲಿತರ ಬಗ್ಗೆ ಅವರು ತಾಳಬೇಕಾದ ದೃಷ್ಟಿಯ ಬಗ್ಗೆ, ಅವರ ಸಾಮಾಜಿಕ ಜವಾಬ್ದಾರಿಯ ಬಗ್ಗೆ, ದಲಿತರು ಮತ್ತು ಚುನಾವಣೆಯ ಬಗ್ಗೆ –ಹೀಗೆ ಹತ್ತು ಹಲವು ವಿಷಯಗಳನ್ನು ಕುರಿತಂತೆ ಸತ್ವ ಪೂರ್ಣ ಬರಹಗಳಿವೆ. ಇವು ಖಂಡಿತವಾಗಿಯೂ ದಲಿತರಿಗೆ ಅಗತ್ಯ ಮಾರ್ಗದರ್ಶನ ಮಾಡುವಲ್ಲಿ ಯಶಸ್ವೀ ಬರಹಗಳು.

ಅವರ ಕೆಲವು ಚಿಂತನೆಗಳು ಹೀಗಿವೆ:"ಸಾಮಾಜಿಕ ಪ್ರಜ್ಞೆ ಇಲ್ಲದಿರುವುದರಿಂದಲೇ ಸವರ್ಣೀಯರಿಗೆ ಅಸ್ಪೃಶ್ಯರ ಕಷ್ಟಕ್ಕೆ ಕಾರಣವಾದ ಅಸಮಾನತೆ, ಅನ್ಯಾಯಗಳ ವಿರುದ್ಧ ಸಕಾರಣವಾದ ಸಿಟ್ಟು ಹುಟ್ಟುವುದೇ ಇಲ್ಲ. ದಲಿತರಿಗಾಗಿರುವ ಅನ್ಯಾಯ ಅಸಮಾನತೆಗಳಲ್ಲಿ ಯಾವ ತಪ್ಪನ್ನೂ ಕಾಣುವುದಿಲ್ಲವಾದ್ದರಿಂದ ಆತ ಅದಕ್ಕೆ ಸ್ಪಂದಿಸಲು ನಿರಾಕರಿಸುತ್ತಾನೆ" ಈ ಮಾತಿನಲ್ಲಿ ಬಹಳಷ್ಟು ಸತ್ಯವಿದೆ. ಆದರೆ ಪೂರ್ತಿ ಸತ್ಯವಿಲ್ಲ. ಕಾರಣ ಸಮಾಜ, ಅದು ಸವರ್ಣೀಯವೇ ಇರಲಿ, ದಲಿತವೇ ಇರಲಿ–ಅದೊಂದು ಅಮೂರ್ತ amoorphas ಸವರ್ಣೀಯರನ್ನೆಲ್ಲಾ ಸಾರಾಸಗಟಾಗಿ ಹಾಗೆ ಸಾಮಾಜಿಕ ಪ್ರಜ್ಞೆ ಇಲ್ಲದವರೆಂದು ಹೇಳಲು ಬರುತ್ತದೆಯೆ? ಅಥವಾ ದಲಿತರೆಲ್ಲಾ ಸಾಮಾಜಿಕ ಪ್ರಜ್ಞೆ ಉಳ್ಳವರೆಂದು ಹೇಳಲು ಸಾಧ್ಯವೆ?

ಈ ಪುಸ್ತಕದ ಪುಟ 40ರಲ್ಲಿ (ಸವರ್ಣೀಯರು ಮತ್ತವರ ಸಾಮಾಜಿಕ ಧೋರಣೆ) "ಅಸ್ಪೃಶ್ಯರ ದುಃಸ್ಥಿತಿಯನ್ನು ಕಂಡು ವಿಚಲಿತರಾಗಿದ್ದೇವೆಂದು ಭಾವಿಸುವ ಪ್ರತಿಯೊಬ್ಬ ಸವರ್ಣೀಯನೂ ಅಸ್ಪೃಶ್ಯರಿಗಾಗಿ ನಾವೇನಾದರೂ ಮಾಡಲೇಬೇಕು ಎಂಬ ಮಾತಿನಿಂದ ಪ್ರಾರಂಭಿಸುತ್ತಾರೆ" ಎಂದು ಹೇಳುತ್ತ ಹೀಗೆ ಹೇಳುವವರ ಮನಃಸ್ಥಿತಿ ಕುರಿತು ವೀರಯ್ಯನವರು ವ್ಯಾಖ್ಯಾನಿಸುವುದು ಹೀಗೆ: "ಸವರ್ಣೀಯರ ಬಗ್ಗೆ ಯಾವುದೇ ಉದ್ಧಾರ ಕಾರ್ಯ ನಡೆಯಬೇಕಿಲ್ಲ, ಅವರ ಮನಸ್ಸು ಆರೋಗ್ಯವಾಗಿದೆ. ನೀತಿ ನಡವಳಿಕೆಗಳು ಯೋಗ್ಯವಾಗಿವೆ. ಅವರು ಪರಿಪೂರ್ಣ ಮನುಷ್ಯರು. ಅವರಲ್ಲೇನೂ ತಪ್ಪಿಲ್ಲ. ಅವರು ಪಾಪಿಗಳಲ್ಲ ಎಂಬ ಭಾವನೆಗಳಿವೆ". ದಲಿತರು ಅವರ ಮೇಲಾಗಿರುವ ದೌರ್ಜನ್ಯಗಳಿಂದ ನೊಂದಿದ್ದಾರೆಂಬುದರಲ್ಲಿ ಎರಡು ಮಾತಿಲ್ಲ. ಆದರೂ

ವೀರಯ್ಯನವರದು ಸ್ವಸ್ಥ ಮನಸ್ಸಿನಿಂದ ಬಂದ ಆಲೋಚನೆ ಎನ್ನಲು ಸಾಧ್ಯವೇ? ಕೇವಲ ವ್ಯಂಗ್ಯ. ಟೀಕೆಗಳಿಂದ ಏನೂ ಸಾಧಿತವಾಗುವುದಿಲ್ಲ. ಸಾವಿರಾರು ವರ್ಷಗಳಿಂದ ರೂಢಿಸಿಕೊಂಡ ಪ್ರವೃತ್ತಿಗಳು ಮಂತ್ರದಂಡ ಬೀಸಿದರೆ ಮಾಯವಾಗುವಂತೆ ಮಾಯವಾಗಲಾರವು. ಇದಕ್ಕೆ ಬೇಕಾದ್ದು ತಾಳ್ಮೆ. ಸವರ್ಣೀಯರಾಗಲಿ, ದಲಿತರಾಗಲಿ, ಇದೇ ದೇಶದಲ್ಲಿ, ಒಟ್ಟಾಗಿಯೇ ಜೊತೆ ಜೊತೆಯಲ್ಲೇ ಬಾಳಿಬದುಕಬೇಕಾಗಿದೆ. ಅಂಥ ಸಂದರ್ಭದಲ್ಲಿ ಪರಸ್ಪರ ಟೀಕೆ, ವ್ಯಂಗ್ಯ, ಕುಚೋದ್ಯ, ತಿರಸ್ಕಾರಗಳನ್ನು ಎಲ್ಲರೂ ತ್ಯಜಿಸಬೇಕು. ಪರಸ್ಪರ ಪ್ರೀತಿ, ಸಹನೆ ಬೆಳೆಸುವತ್ತ ಪ್ರಯತ್ನಶೀಲರಾಗಬೇಕು. ಯಾರೂ ಒಂದು ದ್ವೀಪವಾಗಿ ಬದುಕಲಾಗುವುದಿಲ್ಲ ಎಂಬ ನಿಚ್ಚಳ ಸತ್ಯವನ್ನು ಮನಗಾಣಬೇಕು.

ಹಾಗೆಯೇ 'ದಲಿತ ಸಂಘಟನೆಗಳ ಸ್ವರೂಪ' ಎಂಬ ಲೇಖನದಲ್ಲಿನ "ಒಬ್ಬ ದಲಿತ ಮತ್ತೊಬ್ಬ ದಲಿತನನ್ನು ಎಷ್ಟೇ ದೊಡ್ಡವನಾಗಿದ್ದರೂ ಎಷ್ಟೇ ಬುದ್ಧಿವಂತನಾಗಿದ್ದರೂ ಎಷ್ಟೇ ಪ್ರಾಮಾಣಿಕನಾಗಿದ್ದರೂ ನಂಬುವುದಿಲ್ಲ. ತನ್ನ ಎಲ್ಲಾ ನಿರ್ಧಾರಗಳಲ್ಲೂ ತನಗಿಂತ ಉತ್ತಮವಾದ ಜಾತಿಯ ಒಬ್ಬನ ಸಲಹೆ ಸಹಕಾರ ಪಡೆಯುವುದು ಹಿಂದಿನಿಂದ ಅಂಟಿಕೊಂಡು ಬಂದಿರುವ ಮಾನಸಿಕ ದುಃಸ್ಥಿತಿ. ತನ್ನವರ ಸಲಹೆಗಿಂತ, ಮೇಲುವರ್ಗದ ಆಳುವ ಜನರ ಸಲಹೆಯೇ ಹಿತವಾಗಿರುತ್ತದೆ. ಅಂತಹವರ ಸಲಹೆ ದುರುದ್ದೇಶವುಳ್ಳದ್ದಾಗಿದ್ದರೂ ತಾನು ಅಂತಹ ಸಲಹೆಗಳಿಗೆ ಗುಲಾಮನಾಗುತ್ತಾನೆ" ಎಂಬ ಮಾತುಗಳು ಮಾನವ ಮನೋಭಾವಕ್ಕೇ Human psychology ವಿರುದ್ಧವಾದದ್ದು. ನಮ್ಮ ಜಾತಿಯವನು, ಇಲ್ಲ ಮೇಲು ಜಾತಿಯವನು ಎನ್ನುವ ಕಾರಣಕ್ಕೆ ಯಾರೂ ತಮ್ಮ ಬದುಕಿಗೆ ಸಂಬಂಧಿಸಿದ ಗುರುತರ ಸಮಸ್ಯೆಗಳ ಬಗ್ಗೆ ಸಲಹೆ ಕೇಳುವುದಾಗಲಿ, ಕೇಳದೆ ಇರುವುದಾಗಲಿ ಮಾಡುವುದಿಲ್ಲ. ಅವನು ತಮ್ಮ ಸ್ನೇಹಿತ, ತಮ್ಮ ಹಿತ ಬಯಸುವವನು, ಅಥವಾ ಅಲ್ಲ ಎನ್ನುವುದು ಮುಖ್ಯವಾಗುತ್ತದೆಯೇ ಹೊರತು ಜಾತಿ ಅಲ್ಲವೇ ಅಲ್ಲ, ಇದು ಎಲ್ಲರ ಅನುಭವದ ಮಾತು. ಮೇಲುವರ್ಗದವನಾದಷ್ಟಕ್ಕೇ ಅವನು ದುರುದ್ದೇಶವುಳ್ಳವನೆಂದು ಯಾವ ದಲಿತನೂ ಭಾವಿಸುವುದಿಲ್ಲ.

ಮಹಿಳಾ ಮೀಸಲಾತಿ ಕುರಿತ ಲೇಖನದಲ್ಲಿ ಮಹಿಳೆಯರಿಗೆ ಶೇಕಡಾ 33ರ ಮೀಸಲಾತಿ ವಿರೋಧಿಸುತ್ತ "ಶೇಕಡಾ 33ರಷ್ಟು ಮಹಿಳೆಯರು ಸಂಸತ್ತನ್ನು ಆಕ್ರಮಿಸಿದರೆ ಸಂಸತ್ತಿನ ಗತಿ ಏನಾದೀತು" ಎಂಬುದು ನಿಜಕ್ಕೂ ಪ್ರತಿಗಾಮಿ ಧೋರಣೆಯೆನ್ನಬೇಕು.

"ಸರ್ಕಾರಿ ಕಛೇರಿಗಳಲ್ಲಿ ಜಾತೀಯ ಸಂಘಟನೆ ಬೆಳೆಯುತ್ತಿದೆ. ತಮ್ಮ ಜಾತಿಯ ಪ್ರಾಬಲ್ಯ ವೃದ್ಧಿಸುವ, ಗುರುತಿಸುವ, ಇತರೇ ಜಾತಿಗಳನ್ನು ಸದೆ ಬಡಿಯುವ ಕೆಲಸ ನಿರಂತರವಾಗಿ ನಡೆಯುತ್ತಿದೆ" ಎಂದು ಕೊರಗುವ ವೀರಯ್ಯನವರಿಗೆ ಇಂಥ ಸಂಘಗಳ ಸ್ಥಾಪನೆಗೆ ದಲಿತ ನೌಕರರ ಸಂಘಗಳೇ ಪ್ರೇರಕವಾಗಿರಬಹುದು ಎಂಬ ಕಿಂಚಿತ್

ಅನುಮಾನವು–ಆ ಸಂಘಗಳು, ಸಂಘಟನೆಗಳು ಅನಿವಾರ್ಯವಾಗಿರಬಹುದಾದರೂ–ಬರದಿರುವುದು ಚೋದ್ಯವೇ ಸರಿ.

ಮಹಾನ್ ಸಮಾಜ ವಿಜ್ಞಾನಿಯಾದ ಡಾ॥ ಅಂಬೇಡ್ಕರರ ಜ್ಞಾನದಾಹ, ಪುಸ್ತಕಪ್ರೀತಿ, ಭಾರತದ ನೆಲದಲ್ಲಿ ಹುಟ್ಟಿದ ಬೌದ್ಧ ಧರ್ಮ ಸ್ವೀಕರಿಸುವಲ್ಲಿ ಅವರು ತೋರಿದ ರಾಷ್ಟ್ರ ಪ್ರೇಮ, ಖಾಸಗಿ ಉದ್ಯಮಗಳಲ್ಲಿ ದಲಿತರಿಗೆ ಮೀಸಲಾತಿ ವಿಚಾರ, ರಾಜಕೀಯವಾಗಿ ದಲಿತರ ಶೋಷಣೆ, ಸರ್ಕಾರದ ಹಣ, ಯೋಜನೆಗಳು ದಲಿತರನ್ನು ಸರಿಯಾಗಿ ತಲುಪದಿರುವ ಬಗ್ಗೆ–ಹೀಗೆ ಅತ್ಯಂತ ಮೌಲಿಕವಾದ ಚಿಂತನೆಗಳನ್ನು ಈ ಕೃತಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ಇವುಗಳ ಜೊತೆಗೆ, ದಲಿತರ ರಕ್ಷಣೆಗಾಗಿ ಇರುವ ಅಸ್ಪೃಶ್ಯತಾ ಕಾಯಿದೆ ಕೆಲವೊಮ್ಮೆ ಮೇಲ್ಜಾತಿಗಳವರನ್ನು ಬ್ಲಾಕ್‌ಮೇಲ್ ಮಾಡಲು ಬಳಕೆಯಾಗುತ್ತಿದೆ ಎಂಬ ದೂರು ವಿರಳವಾಗಿಯಾದರೂ ಕೇಳಿ ಬರುತ್ತಿರುವ ಬಗ್ಗೆ, ದಲಿತನೊಬ್ಬ ನಿಜವಾಗಿಯೂ ತಪ್ಪುಮಾಡಿದಾಗ, ಸಮಾಜದ ಇತರೆಯವರ ವಿಷಯದಲ್ಲಿ ಆಗುವಂತೆ, ಕಾನೂನು ತನ್ನ ಕ್ರಮತೆಗೆದುಕೊಳ್ಳಲವಕಾಶ ಕೊಡದೆ ಜಾತಿಯ ಪ್ರಭಾವ ಬಳಕೆ Human psychology ಮಾಡಿಕೊಳ್ಳುವ ಬಗ್ಗೆಯೂ ಹೇಳಿ, ಅಂಥವಕ್ಕೆ ದಲಿತರು ಯಾವತ್ತೂ ಅವಕಾಶ ಮಾಡಿಕೊಡಬಾರದೆಂಬ ರೀತಿಯ ಬರಹವೂ ಇದ್ದಿದ್ದರೆ ವೀರಯ್ಯನವರ ದಲಿತ ಚಿಂತನೆಗೆ ಇನ್ನೂ ಹೆಚ್ಚಿನ ಸಮಗ್ರತೆ, ವ್ಯಾಪಕತೆ ಬರುತ್ತಿತ್ತು. ಈಗಿರುವಂತೆ ಅದಕ್ಕೆ ಅಷ್ಟರಮಟ್ಟಿನ ಮಿತಿ ಇದೆ.

ದಲಿತರ ಬಗ್ಗೆ ದಲಿತೇತರರಿಗೆ ಇರುವುದು ದ್ವೇಷವಲ್ಲ. ಅಸ್ಪೃಶ್ಯತೆಯ ಬಗ್ಗೆಯಾದರೂ ಅಷ್ಟೆ. ಮೌಢ್ಯವಿದೆ. ಸಾವಿರಾರು ವರ್ಷಗಳ ಯಾಂತ್ರಿಕ ಆಚರಣೆಯ ಯಾಂತ್ರಿಕ ಮುಂದುವರಿಕೆ. ಆದರೆ ಇದರಿಂದ ನಿಜಕ್ಕೂ ಸಂಕಷ್ಟಕ್ಕೆ ಈಡಾಗಿರುವ ದಲಿತರಿಗೆ ಸವರ್ಣೀಯರನ್ನು ದ್ವೇಷಿಸದೆ ಇರಲು ಕಾರಣಗಳೇ ಇಲ್ಲ. ಆದರೆ ಹಾಗೆಂದು ದ್ವೇಷಿಸುತ್ತ ಹೋದರೆ ಸಮಾಜದ ಸ್ವಾಸ್ಥ್ಯ ಕೆಡುತ್ತದೆ. ದಲಿತರ ಅಪಾರ ಸಹನೆಯನ್ನು ಮತ್ತೆ ಪರೀಕ್ಷೆಗೆ ಒಡ್ಡದಂತೆ ಸವರ್ಣೀಯರು ಅದರಲ್ಲೂ ಮೇಲ್ವರ್ಗದವರು ತಮ್ಮ ಮೌಢ್ಯ ತೊರೆದು, ತಮ್ಮ ದೃಷ್ಟಿಯನ್ನು ಸರಿಪಡಿಸಿಕೊಂಡರೆ ಮಾತ್ರ ಈ ದೇಶ ನೆಮ್ಮದಿಯಿಂದಿರಲು ಸಾಧ್ಯ. ದಲಿತರು ಮತ್ತು ಸವರ್ಣೀಯರಿಬ್ಬರನ್ನೂ ಸಮಾನವಾಗಿ ವಿಚಾರದ ಹಾದಿಗೆ ಹಚ್ಚುವಲ್ಲಿ ವೀರಯ್ಯನವರ 'ದಲಿತ ಚಿಂತನ' ಅತ್ಯಂತ ಸಾರ್ಥಕವಾಗಿದೆ.

❖

೩೮

ಅನುವಾದಗಳ ಸಮರ್ಥ ಅನಾಟಮಿ

ಸಾಹಿತ್ಯ ಸಂಸ್ಕೃತಿ, ವಿಜ್ಞಾನ , ವಾಣಿಜ್ಯ, ಕಲೆ, ನಾಗರಿಕತೆ ಹೀಗೆ ಯಾವುದೇ ಕ್ಷೇತ್ರವನ್ನು ತೆಗೆದುಕೊಂಡರೂ Nothing moves without translation ಎನ್ನುವುದು ಕೇವಲ ಒಂದು ಪ್ರಸಿದ್ಧ ಹೇಳಿಕೆ ಅಷ್ಟೇ ಆಗಿರದೆ ಇಂದು ನಮ್ಮ ಅನುಭವಕ್ಕೆ ಬಂದಿರುವ ಮಾತಾಗಿದೆ. ವಿಭಿನ್ನ ದೇಶಗಳ ಸಾಹಿತ್ಯ, ಸಂಸ್ಕೃತಿ, ಕಲೆ, ನಾಗರಿಕತೆಗಳು ಅನುವಾದದಿಂದಾಗಿ ಇಂದು ಸಮೀಪಕ್ಕೆ ಬಂದಿವೆ. ಅದರ ಪರಿಣಾಮ ಜಗತ್ತು ಇಂದು ಕಿರಿದಾಗಿದೆ. ನಮ್ಮ ನಿಜವಾದ ಎತ್ತರ ಏನೆಂಬುದು ನಮಗೆ ತಿಳಿಯಬೇಕಾದರೂ ಇನ್ನೊಂದು ದೇಶ, ಭಾಷೆಗಳಲ್ಲಿನ ವಿವಿಧ ಪ್ರಕಾರಗಳ ಉತ್ಕೃಷ್ಟ ಗ್ರಂಥಗಳು ನಮ್ಮ ಭಾಷೆಗೆ ಬರಬೇಕು. ಇಲ್ಲದಿದ್ದರೆ ನಮ್ಮ ಸಾಹಿತ್ಯವೇ ಶ್ರೇಷ್ಠ, ನಮ್ಮ ನಾಗರಿಕತೆ, ಕಲೆ ಸಂಸ್ಕೃತಿಗಳೇ ಶ್ರೇಷ್ಠ ಎಂದು ಕೂಪ ಮಂಡೂಕಗಳಾಗಿ ಇದ್ದುಬಿಡುವ ಇಲ್ಲವೆ ಕೀಳರಿಮೆಯ ಕೂಪದಲ್ಲಿ ಸಿಕ್ಕಿಕೊಂಡು ಸೊರಗುವ

ಹಿಂದೀ-ಕನ್ನಡ, ಕನ್ನಡ-ಹಿಂದೀ ಅನುವಾದಗಳು: ಒಂದು ನೋಟ, ಡಾ. ತಿಪ್ಪೇಸ್ವಾಮಿ
ಪುಟಗಳು: 160 ಬೆಲೆ: 130/-
ಮಹಿಮಾ ಪ್ರಕಾಶನ, ನಂ.1393/3, ಸಿ.ಎಚ್.-31, 6ನೇ ಅಡ್ಡರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು.

ಸಾಧ್ಯತೆಯೇ ಹೆಚ್ಚು. ರೋಮನ್ನರು ವಿದೇಶಗಳ ಸಾಹಿತ್ಯ ಸಂಸ್ಕೃತಿಯನ್ನು, ಅರಬ್ಬರು ಭಾರತದ ಚರಕಸಂಹಿತೆ, ಶುಶ್ರುತ ಸಂಹಿತೆ, ಆರ್ಯಭಟ, ವರಾಹಮಿಹಿರಾದಿಗಳ ಖಗೋಳವಿಜ್ಞಾನ ಸಂಬಂಧಿ ಸಾಹಿತ್ಯವನ್ನು ಅನುವಾದಗಳ ಮೂಲಕವೇ ಅರಿತುಕೊಂಡರು. ನಮ್ಮ ರಾಮಾಯಣ, ಮಹಾಭಾರತ, ಪಂಚತಂತ್ರ, ಅಶ್ವಘೋಷನ ಬುದ್ಧಚರಿತೆ, ಸೌಂದರನಂದವೇ ಮುಂತಾದ ಕಾವ್ಯಗಳು ಭಗವದ್ಗೀತೆ, ಬೌದ್ಧ ಧಾರ್ಮಿಕ ಕೃತಿಗಳು ಚೀನಾ ಇಂಡೋನೇಷ್ಯಾ ಮುಂತಾದ ದೇಶಗಳಿಗೆ ಪಯಣ ಬೆಳೆಸಿದ್ದು ಅನುವಾದಗಳ ಮೂಲಕವೇ. ನಮ್ಮ ದೇಶಭಾಷೆಗಳಲ್ಲಿ ನವೋದಯ ಕಾಣಿಸಿಕೊಂಡದ್ದೇ ಇಂಗ್ಲಿಷ್ ಸಾಹಿತ್ಯದ ವಿವಿಧ ಸಾಹಿತ್ಯಪ್ರಕಾರಗಳ ಪರಿಚಯ ನಮ್ಮ ಲೇಖಕರು ಸಾಹಿತ್ಯಗಳಿಗೆ ಆದದ್ದರಿಂದ ಹಾಗೂ ಶ್ರೀಯವರು ಮತ್ತಿತರಿಂದಾದ ಕಾವ್ಯಾನುವಾದಗಳಿಂದ ಎಂಬುದು ಈಗ ಇತಿಹಾಸ. ಅನ್ಯ ಭಾಷೆಗಳನ್ನೂ ಕಲಿಯುವುದರಲ್ಲಿ ಯಾರಿಗೇ ಎಷ್ಟೇ ನೈಪುಣ್ಯವಿದ್ದರೂ ಎಲ್ಲ ಭಾಷೆಗಳನ್ನೂ ಕಲಿಯುವುದು ಯಾರಿಗೂ ಸಾಧ್ಯವೇ ಇಲ್ಲದ ಮಾತು. ಅನುವಾದಗಳಿಲ್ಲದೆ ಹೋಗಿದ್ದರೆ ರಷ್ಯಾದ ಟಾಲ್ ಸ್ಟಾಯ್, ಗೋರ್ಕಿ, ಡಾಸ್ಟೋವೆಸ್ಕಿಯವರ ಕಥೆ ಕಾದಂಬರಿಗಳು, ಗ್ರೀಕಿನ ಸೋಫೋಕ್ಲೀಸ್, ಯೂರಿಪಿಡಿಸ್ ನಾಟಕಗಳು, ಹೋಮರನ ಕಾವ್ಯಗಳು, ಬ್ರೆಕ್ಟ್ ನಾಟಕಗಳು, ಗೈಟೆಯ ಕಾವ್ಯ ನಾಟಕಗಳು ಇತ್ಯಾದಿಗಳನ್ನು ನಾವು ಓದಿ ಸವಿಯುವುದು ಸಾಧ್ಯವಾಗುತ್ತಲೇ ಇರಲಿಲ್ಲ.

ನಿರೀಕ್ಷಿತ ಮಟ್ಟದಲ್ಲಿಲ್ಲ

ಬಹುಭಾಷೆ ಸಾಹಿತ್ಯಗಳಿಂದ ಇಡಿಕಿರಿದಿರುವ ನಮ್ಮ ದೇಶದಲ್ಲಂತೂ ವಿಚಿತ್ರ ಪರಿಸ್ಥಿತಿ ಇದೆ. ಇಂಗ್ಲಿಷ್‌ರ ಆಡಳಿತದಿಂದಾಗಿ ನಮಗೆ ಇಂಗ್ಲಿಷಿನ ಹಾಗೂ ಇತರ ದೇಶಗಳ ಸಾಹಿತ್ಯ ಹಾಗೂ ಸಾಹಿತ್ಯೇತರ ಗ್ರಂಥಗಳು ತೀರ ಪರಿಚಿತವೆನಿಸಿ ನಮ್ಮದೇ ನೆರೆಯ ತಮಿಳಿನ. ತೆಲುಗಿನ, ಮರಾಠಿಯ, ಮಲೆಯಾಳಿಯ ಇಲ್ಲವೆ ಹಿಂದಿಯ ಸಾಹಿತ್ಯ ಕೃತಿಗಳು ಅಪರಿಚಿತವಾಗಿ ಉಳಿದಿದ್ದ ಪರಿಸ್ಥಿತಿ ಬಹಳ ವರ್ಷ ಇತ್ತು. ಪುಣ್ಯಕ್ಕೆ ಈಚಿನ ದಿನಗಳಲ್ಲಿ ಹಾಗಾಗದೆ ಇಂಗ್ಲಿಷಿನ ಮುಖಾಂತರ ಇಲ್ಲವೆ ಹಿಂದಿಯ ಮುಖಾಂತರ ನಮ್ಮ ದೇಶದ ಇತರ ಭಾಷೆಗಳ ಹೆಸರಾಂತ ಕೃತಿಗಳು ನಮಗೆ ಲಭ್ಯವಾಗುತ್ತಿವೆ. ಆದರ್ಶ ಅನುವಾದವೆಂದರೆ ಆಯಾ ಭಾಷೆಗಳಿಂದ ನೇರವಾಗಿ ಅನುವಾದಮಾಡುವುದು. ಆದರೆ ಬೇರೆ ಬೇರೆ ಕಾರಣಗಳಿಂದಾಗಿ ಇದು ನಿರೀಕ್ಷಿತ ಮಟ್ಟದಲ್ಲಿ ಸಾಧ್ಯವಾಗುತ್ತಿಲ್ಲ.

ಮರಾಠಿ, ತಮಿಳು, ತೆಲುಗು ಮಲೆಯಾಳ, ಹಿಂದೀ ಭಾಷೆಗಳ ಕೃತಿಗಳ ನೇರ ಅನುವಾದಗಳು ನಮಗೆ ಈಗ ಬಹುಮಟ್ಟಿಗೆ ಲಭ್ಯವಾಗುತ್ತಿವೆಯಾದರೂ ಇತರೆಯವಕ್ಕೆ ಇಂಗ್ಲಿಷ್ ಇಲ್ಲವೆ ಹಿಂದಿಗೇ ಮೊರೆಹೋಗಬೇಕಾಗಿದೆ. ಉತ್ತರಭಾರತದ ಬಹುತೇಕ

ಜನರಿಗೆಲ್ಲ ಹಿಂದಿ ಅರ್ಥವಾಗುವ ಕಾರಣದಿಂದಾಗಿ ಹಿಂದಿಯನ್ನು ಒಂದು ಸಂಪರ್ಕ ಭಾಷೆಯಾಗಿ ಅಭಿವೃದ್ಧಿಪಡಿಸಬೇಕಾದ ಅಗತ್ಯವನ್ನು ಮನಗಂಡ ಗಾಂಧೀಜಿಯವರು ಹಿಂದಿಯ ಪ್ರಚಾರಕ್ಕೆ ಹೆಚ್ಚು ಒತ್ತುಕೊಟ್ಟು ಹೇಳಿದ್ದರಿಂದ ಕರ್ನಾಟಕದಲ್ಲಿ ಹಿಂದಿಯ ಕಲಿಕೆ ಸ್ವಾತಂತ್ರ್ಯಪೂರ್ವದಿಂದಲೂ ಭರಾಟೆಯಿಂದ ನಡೆದು ಇಂದು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸುವವರ ಸಂಖ್ಯೆ ಅತಿ ಹೆಚ್ಚಿನ ಪ್ರಮಾಣದಲ್ಲಿದೆ. ಹಾಗೆಯೇ ಕನ್ನಡದಿಂದ ಬೇರೆ ಭಾರತೀಯ ಭಾಷೆಗಳಿಗೆ ಅನುವಾದವಾಗಿರುವುದಕ್ಕಿಂತ ಹಿಂದಿಗೆ ಅನುವಾದಿತವಾಗಿರುವ ಕೃತಿಗಳ ಸಂಖ್ಯೆ ಹೆಚ್ಚು. ಹತ್ತಿರ ಹತ್ತಿರ ಮುಕ್ಕಾಲು ಶತಮಾನದಿಂದ ಈ ಕೊಡು–ಕೊಳ್ಳುವಿಕೆ ನಡೆಯುತ್ತಿದೆ. ಆದರೆ ಈ ಅನುವಾದಗಳ ಗುಣಮೌಲ್ಯದ ಕುರಿತಾದ ವಿಶ್ಲೇಷಣೆ, ಮೌಲ್ಯಮಾಪನಗಳು ಅತ್ಯಂತ ಅನಿವಾರ್ಯವೇ ಆಗಿದ್ದರೂ ಇದುವರೆಗೆ ನಡೆದಿರುವುದೆಲ್ಲಾ ಭಾಗಶಃ ಮಾತ್ರ ; ವಿಸ್ತೃತ ಪ್ರಮಾಣದಲ್ಲಿ ನಡೆದೇ ಇಲ್ಲ. ಇದೀಗ ಹಿಂದಿ ಕನ್ನಡ ಭಾಷೆಗಳ ನುರಿತ ವಿದ್ವಾಂಸರೂ, ಸ್ವತಃ ಖ್ಯಾತ ಅನುವಾದಕರೂ ಆದ ಡಾ. ತಿಪ್ಪೇಸ್ವಾಮಿಯವರು ತಡವಾಗಿಯಾದರೂ ಪ್ರಸ್ತುತ ಪುಸ್ತಕದಲ್ಲಿ ಈ ಕೆಲಸಕ್ಕೆ ಮುಂದಾಗಿದ್ದಾರೆ.

ಈ ಪುಸ್ತಕದಲ್ಲಿ ಮುನ್ನುಡಿ ಹಿನ್ನುಡಿ ಅನುಬಂಧಗಳ ಹೊರತಾಗಿ

1) ಹಿಂದಿಯಿಂದ ಕನ್ನಡಕ್ಕೆ ಅನುವಾದವಾಗಿರುವ ಕೃತಿಗಳ ಮಾಹಿತಿ ಮತ್ತು ವಿಶ್ಲೇಷಣೆ ಹಾಗೂ

2) ಕನ್ನಡದಿಂದ ಹಿಂದಿಗೆ ಅನುವಾದವಾಗಿರುವ ಕೃತಿಗಳ ಮಾಹಿತಿ ಮತ್ತು ವಿಶ್ಲೇಷಣೆ ಇದೆ. ಇಂಥ ಯಾವುದೇ ಸಮೀಕ್ಷಾತ್ಮಕ ಕೃತಿಗಳಲ್ಲಿ ಪ್ರಸ್ತಾಪಿಸಲಾಗುವ ಎಲ್ಲ ಕೃತಿಗಳ ವಿಶ್ಲೇಷಣೆ ಸಾಧ್ಯವಾಗುವುದಿಲ್ಲ ಮತ್ತು ಅದರ ಅಗತ್ಯವೂ ಇರುವುದಿಲ್ಲ. ಹಾಗೂ ವಿಶ್ಲೇಷಣೆಗೆಂದು ಕೈಗೆತ್ತಿಕೊಂಡ ಕೃತಿಗಳನ್ನೂ ಸಮಗ್ರವಾಗಿ ವಿಶ್ಲೇಷಿಸಲು ಸಾಧ್ಯವಾಗುವುದಿಲ್ಲ ಹಾಗೂ ಅಂಥ ಅಗತ್ಯವೂ ಇರುವುದಿಲ್ಲ. ಇದನ್ನು ಗಮನದಲ್ಲಿ ಇಟ್ಟುಕೊಂಡು ಹೇಳಬೇಕೆಂದರೆ ಡಾ. ತಿಪ್ಪೇಸ್ವಾಮಿಯವರ ಈ ಕೃತಿ ತನ್ನೆಲ್ಲ ಮಿತಿಗಳ ಹೊರತಾಗಿಯೂ ಅನುವಾದಗಳ ಗುಣಮೌಲ್ಯದ ಕುರಿತು ಬೆಳಕು ಬೀರುವ ಒಂದು ಮಹತ್ವದ ಕೃತಿಯಾಗಿದೆ.

ಪ್ರಾಚೀನ ಮತ್ತು ಆಧುನಿಕ ಕಾವ್ಯಗಳ, ಕಾವ್ಯಭಾಗಗಳ ಅನುವಾದಿತ ಭಾಗಗಳನ್ನು ಉದ್ಧರಿಸಿಕೊಟ್ಟು ಅವು ಹೇಗೆ ಸಮರ್ಪಕವಾಗಿಲ್ಲ ಅಥವಾ ಆಗಿದೆ ಎಂಬುದನ್ನು – ಹಿಂದಿ, ಕನ್ನಡ ಎರಡೂ ಭಾಷೆಗಳಿಗೆ ಸಂಬಂಧಿಸಿದಂತೆ–ಹೇಳಿರುವ ರೀತಿ ತುಂಬ ಸಮರ್ಪಕವಾಗಿದೆ. ಆಯಾ ಭಾಷೆಗಳ ಜಾಯಮಾನ ತಿಳಿದಿರುವ ಯಾರಿಗೇ ಆದರೂ

ತಿಪ್ಪೇಸ್ವಾಮಿಯವರ ಮಾತುಗಳು ತೂಕತಪ್ಪಿವೆ ಎಂದು ಅನ್ನಿಸುವುದಿಲ್ಲ. ಅನುವಾದವೆಂದರೆ ಮೂಲದಲ್ಲಿರುವ ಒಂದು ಪದಕ್ಕೆ ಬೇರೊಂದು ಭಾಷೆಯ ಪದಗಳನ್ನಿಡುವುದಲ್ಲ. ಹಾಗೂ ಕಾವ್ಯದ ಅನುವಾದ ಸಾಧ್ಯವೇ ಇಲ್ಲ ಎನ್ನುವಷ್ಟು ಕಷ್ಟ, ಕಾರಣ ಪ್ರತಿಯೊಂದು ಭಾಷೆಗೂ ಇರುವ ಅದರದೇ ಆದ ಭಾಷಾ ಸೂಕ್ಷ್ಮಗಳು ಮತ್ತು ಅದರದೇ ಆದ ನಾದ, ಲಯಗಳು. ಇಷ್ಟೆಲ್ಲ ಹೇಳಿಯೂ ಯಾವುದೇ ಅನುವಾದ ಮೂಲದಿಂದ ತುಂಬ ದೂರ ಹೋಗಬಾರದು ಎಂಬ ಎಚ್ಚರ ಅನುವಾದಕನಿಗೆ ಇಲ್ಲದೆ ಹೋದಾಗ ಏನಾಗಬಹುದು ಎಂಬುದಕ್ಕೆ ಇಲ್ಲಿ ಉದಾಹರಿಸಿಕೊಟ್ಟಿರುವ ಭಾಗಗಳು ಸಮರ್ಥಸಾಕ್ಷಿಯಾಗಿವೆ. ಮುಖ್ಯವಾಗಿ ಹೇಳಬೇಕಾದ ಮಾತೆಂದರೆ ಹಿಂದಿಯಿಂದ ಕನ್ನಡಕ್ಕೆ ಅನುವಾದ ಮಾಡುವಾಗ ನಮ್ಮ ಲೇಖಕರು ಬಹುಮಟ್ಟಿಗೆ ತುಂಬ ಸಮರ್ಥವಾಗಿ ಮಾಡುತ್ತಾರೆ. ಕಾರಣ ಉದ್ದಿಷ್ಟ ಭಾಷೆ ಅವರ ಮಾತೃಭಾಷೆ ಇಲ್ಲವೆ ಮಾತೃಭಾಷೆಯಂತಿರುವ ಕನ್ನಡವಾಗಿರುವುದು. ಆದರೆ ಅದೇ ಹಿಂದಿ ಕಲಿತ ಭಾಷೆಯಾದ ಕಾರಣ ಅದರ ಸಹಜ ಭಾಷಾಪ್ರಯೋಗಗಳು, ಬಾಗುಬಳುಕುಗಳು, ಭಾಷಾ ಸೂಕ್ಷ್ಮಗಳು ಬಯಸಿದಾಗ ಬರುವಷ್ಟು ಕನ್ನಡಿಗರಿಗೆ ಅವಗತವಾಗಿರುವುದಿಲ್ಲ. ರಾಮಚರಿತ ಮಾನಸದ ಏಳೆಂಟು ಗದ್ಯಾನುವಾದಗಳೆಲ್ಲ ಸುಂದರವಾಗಿವೆ ಎಂದು ಅಭಿಪ್ರಾಯಿಸಿದ್ದಾರೆ. ಎಚ್. ವಿ. ರಾಮಚಂದ್ರರಾಯರ ರಾಮಚರಿತ ಮಾನಸದ ಗದ್ಯಾನುವಾದ ಹಾಗೂ ಕಬೀರ ಗ್ರಂಥಾವಳಿಯ ಅನುವಾದಗಳನ್ನು ಮುಕ್ತ ಕಂಠದಿಂದ ಮೆಚ್ಚಿದ್ದಾರೆ. ಹಾಗೆಯೇ ಎಂ.ಎಸ್ ಕೃಷ್ಣಮೂರ್ತಿಯವರ ಸೂರದಾಸರ ಪದಗಳ ಅನುವಾದವನ್ನು ಮೆಚ್ಚಿ ಬಿಹಾರೀ ಸಪ್ತಶತಿಯ ಅನುವಾದವನ್ನು ಮೆಚ್ಚಿಲ್ಲ. ಪ್ರಸಾದರ 'ಆಂಸೂ' ಕಾವ್ಯಾನುವಾದ ಮೂಲದಿಂದ ದೂರಸರಿದಿದೆ ಎನ್ನುತ್ತಾರೆ. ಶಶಿಕಲಾ ಸುಬ್ಬಣ್ಣನವರ ಯಶೋಧರಾ, ಭಟ್ನಾಗರ್ ಕವಿತೆಗಳು, ಬಚ್ಚನ್ ಕವಿತೆಗಳ ಅನುವಾದ ತುಂಬ ಸೊಗಸಾಗಿದೆ ಎನ್ನುತ್ತಾರೆ. ಪಟ್ಟಣಶೆಟ್ಟಿಯವರ ಧರ್ಮವೀರಭಾರತಿಯವರ ಕಾವ್ಯ 'ಕನುಪ್ರಿಯಾ'ದ ಅನುವಾದವನ್ನು ಕೊಂಡಾಡಿ ಕಾಮಾಯನಿಯ ಅನುವಾದ ಅಷ್ಟೊಂದು ಯಶಸ್ವಿಯಾಗಿಲ್ಲ ಎನ್ನುವಲ್ಲಿ ಅವರ ಸಮತೋಲನದೃಷ್ಟಿ ವ್ಯಕ್ತವಾಗುತ್ತದೆ. ನಿಡುಗುಂದಿಯವರ ದಾಸರ ಪದಗಳ, ಪಂಚವಟಿಯ, ಬಿ.ವೈ.ಲಲಿತಾಂಬಾ ಅವರ ವಚನೋದ್ಯಾನದ ಹಾಗೂ ಇನ್ನು ಕೆಲವು ಕಾವ್ಯಗಳ ಅನುವಾದವನ್ನು, ಪ್ರಭಾಶಂಕರ ಪ್ರೇಮಿಯವರ ಕಾವ್ಯಾನುವಾದಗಳನ್ನು ಮುಕ್ತಕಂಠದಿಂದ ಮೆಚ್ಚುತ್ತಾರೆ. ಕನ್ನಡಕ್ಕೆ ಅನುವಾದವಾಗಿರುವ ಹಿಂದಿಯ ವಿಪುಲವಾದ ಕಥೆ ಕಾದಂಬರಿಗಳನ್ನು ಕುರಿತ ಸಮೀಕ್ಷೆ ಮುಖ್ಯವಾಗಿ ಮಾಹಿತಿಪೂರ್ಣವಾಗಿದ್ದರೂ

ಲೋಪದೋಷಗಳಿರುವ ಕೊರತೆ ಬಗ್ಗೆ ಮುಕ್ತವಾಗಿ ಹೇಳಿದ್ದಾರೆ. ಸಾಮಾನ್ಯವಾಗಿ ಈ ಅನುವಾದಗಳು ಸಮರ್ಪಕವಾದರೂ ಪ್ರೇಮಚಂದರ ಸಮಗ್ರ ಕತೆಗಳ ಅನುವಾದದಲ್ಲಿ ಡಾ. ಜಾನಕಿಯವರು ಇನ್ನಷ್ಟು ಎಚ್ಚರವಹಿಸಬೇಕಾಗಿತ್ತೆಂದು ಹೇಳುವಲ್ಲಿ ಹಾಗೂ ಹಿಂದಿಯಿಂದ ಹುಲುಸಾಗಿ ಅನುವಾದಿಸುವ ಡಿ.ಎನ್. ಶ್ರೀನಾಥರ ಅನುವಾದಗಳಲ್ಲಿನ ಕೆಲವು ಕೊರತೆ ತೋರಿಸುವಲ್ಲಿ ಲೇಖಕರು ತಮ್ಮ ಕೆಲಸವನ್ನು ಸಮರ್ಪಕವಾಗಿಯೇ ಮಾಡಿದ್ದಾರೆ.

ಬಹುಸಂಖ್ಯೆಯ ನಾಟಕಗಳನ್ನು ಕನ್ನಡಕ್ಕೆ ತಂದಿರುವ ಪಟ್ಟಣಶೆಟ್ಟಿಯವರ ಮತ್ತು ತಿಪ್ಪೇಸ್ವಾಮಿಯವರ ನಾಟಕಗಳ ಬಗ್ಗೆ ತುಂಬ ವಿವರವಾಗಿಯೇ ಚರ್ಚಿಸಿದ್ದಾರೆ. ಕಥೆ, ಕಾದಂಬರಿಗಳಲ್ಲದೆ ವೈಚಾರಿಕ ಕೃತಿ, ಕಾವ್ಯಮೀಮಾಂಸೆ, ಲಲಿತ ಪ್ರಬಂಧ, ಮತ್ತು ವಿಮರ್ಶಾತ್ಮಕ ಪ್ರಬಂಧಗಳ ಅನುವಾದ ಕಡಿಮೆ ಇದ್ದರೂ ಅನುವಾದಗಳು ಸುಲಲಿತ ವಾಗಿರುವುದರ ಬಗ್ಗೆ ಹೇಳಿದ್ದಾರೆ. ಈ ಪುಸ್ತಕದ ನಿಜವಾದ ಯಶಸ್ಸು ಇರುವುದು

ಕನ್ನಡದಿಂದ ಹಿಂದಿಗೆ ಅನುವಾದಿತವಾಗಿರುವ ಕೃತಿಗಳ ಅನುವಾದವನ್ನು ವಿಶ್ಲೇಷಿಸುವಲ್ಲಿ. ಮುಖ್ಯವಾಗಿ ಬಹಳ ಹಿಂದೆಯೇ ಡಾ. ಸರೋಜಿನಿ ಮಹಿಷಿಯವರು ಮಾಡಿದ ಶ್ರೀರಾಮಾಯಣ ದರ್ಶನಂ ಮತ್ತು ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗದ ಅನುವಾದಗಳು ಎಷ್ಟು ಕಳಪೆಯಾಗಿವೆ ಹಾಗೂ ಅನರ್ಥಕಾರಿಯಾಗಿವೆ ಎಂದು ಎಳೆಎಳೆಯಾಗಿ ವಿಶ್ಲೇಷಿಸಿರುವುದು. ಅದೇ ರೀತಿ ಕನ್ನಡದಿಂದ ಹಿಂದಿಗೆ ಅನುವಾದಿತವಾಗಿರುವ ವಚನಗಳ ಅನುವಾದದ ವಿಶ್ಲೇಷಣೆಯೂ ಇದೆ. ಆರ್.ಸಿ. ಭೂಸನೂರ್ ಮಠ್ ಮತ್ತು ಶಕುಂತಲಾ ಭೂಸನೂರಮಠ್, ಭಗವಾನ್ದಾಸ್ ತಿವಾರಿಯವರ ವಚನಾನುವಾದಗಳು ಮೂಲದಿಂದ ಎಷ್ಟೊಂದು ದೂರ ಸರಿದಿವೆ ಎಂದು ಹೇಳುತ್ತಲೇ ಪ್ರಭಾಶಂಕರ ಪ್ರೇಮಿ, ಭಾಲಚಂದ್ರ ಜಯಶೆಟ್ಟಿ ಇತ್ಯಾದಿಯವರು ಮಾಡಿರುವ ಅನುವಾದ ಮೆಚ್ಚುತ್ತಾರೆ.

ಆಧುನಿಕ ಕವಿಗಳಾದ ಕುವೆಂಪು, ಬೇಂದ್ರೆ ಅಡಿಗ ಕೆ.ಎಸ್. ನ. ಮೊದಲಾದವರ ಕಾವ್ಯಾನುವಾದಗಳಲ್ಲಿ ಎಲ್ಲಿ ಯಶಸ್ಸು ಸಿಕ್ಕಿಲ್ಲ ಎಂದು ಹೇಳುವುದರ ಜೊತೆಗೆ ವಾಸು.ಬಿ.ಪುತ್ರನ್, ಧರಣೇಂದ್ರ ಕುರಕುರಿ, ಗಂಗಾಪ್ರಸಾದ್ ವಿಮಲ್ ಅವರ ಅನುವಾದಗಳು ಸಮರ್ಪಕವಾಗಿದೆ ಎಂದು ಮೆಚ್ಚಿದ್ದಾರೆ. ಕನ್ನಡದಿಂದ ಹಿಂದಿಗೆ ಅನುವಾದವಾಗಿರುವ ಕಾದಂಬರಿಗಳ ಒಂದು ದೊಡ್ಡ ಪಟ್ಟಿಯನ್ನೇ ಇದರಲ್ಲಿ ನೀಡಿರುವುದಲ್ಲದೆ ಶಾಂತಿನಾಥ ದೇಸಾಯಿಯವರ ಮುಕ್ತಿ, ಅಶ್ವತ್ಥರ ಹಂಬಲ, ಆಲನಹಳ್ಳಿಯವರ ಕಾಡು, ಎಸ್.ಎಲ್. ಭೈರಪ್ಪನವರ ನಾಯಿನೆರಳು, ಗೃಹಭಂಗ

ಕಾದಂಬರಿಗಳ ಅನುವಾದ ಮೂಲಕ್ಕೆ ಹತ್ತಿರವಾಗಿದೆ ಎಂದು ಹೇಳಿಯೂ ಎಲ್ಲೆಲ್ಲಿ ಮೂಲದಿಂದ ದೂರ ಹೋಗಿದೆ ಎಂದು ವಿವರವಾಗಿ ಉದ್ಧರಿಸಿಕೊಟ್ಟಿದ್ದಾರೆ. ಇದೆಲ್ಲ ದಿಕ್ಸೂಚಿಯಂತಿದೆ. ಆದರೆ ಅನುವಾದದಲ್ಲಿ ಸಿದ್ಧ ಹಸ್ತರೆಂದೇ ಹೆಸರಾದ ಪ್ರಧಾನಗುರುದತ್ತರ ಕುವೆಂಪು ಮತ್ತು ಮೊಯ್ಲಿಯವರ ಕಾವ್ಯಗಳ ಅನುವಾದದ ವಿವರವಾದ ಪ್ರತ್ಯೇಕ ವಿಶ್ಲೇಷಣೆ ಅಗತ್ಯವೆಂದು ಹೇಳುತ್ತಾರೆಯೇ ಹೊರತು ಸ್ಯಾಂಪಲ್‌ಗಾದರೂ ಕೆಲಭಾಗ ಉದಾಹರಿಸಿಲ್ಲದಿರುವುದು ಸೋಜಿಗ. ಹಾಗೆಯೇ ಅನುವಾದಿತ ನಾಟಕಗಳ ದೊಡ್ಡ ಪಟ್ಟಿಯಷ್ಟನ್ನೇ ನೀಡುತ್ತಾರೆ. ಹಾಗೆಯೇ ಅರವತ್ತೊಂದು ಕನ್ನಡ ಕೃತಿಗಳನ್ನು ಹಿಂದಿಗೆ ಅನುವಾದಿಸಿರುವ ಬಿ.ಆರ್. ನಾರಾಯಣರ ಬಗ್ಗೆ ಇನ್ನಷ್ಟು ಬರೆಯಬೇಕಿತ್ತು.

ಆದರೆ ಇದರಲ್ಲಿ ಚರ್ಚಿಸದೆ ಬಿಟ್ಟಿರುವ ಮತ್ತು ಚರ್ಚಿಸಲೇಬೇಕಾಗಿದ್ದ ಒಂದು ಅಂಶವೆಂದರೆ ಶ್ರೇಷ್ಠವೋ ಅಲ್ಲವೋ ಎಂಬ ವಿವೇಚನೆಯೇ ಇಲ್ಲದೆ ಅನ್ಯಭಾಷೆಯ ಕೃತಿಗಳನ್ನು ಕನ್ನಡಕ್ಕೆ ತರಬೇಕಾದ ಅಗತ್ಯವಿದೆಯೆ? ಎಂಬುದು. ಕಾರಣ ಕನ್ನಡ ಸಾಹಿತ್ಯ ಇಂದು ಇಡೀ ಭಾರತೀಯ ಸಾಹಿತ್ಯದಲ್ಲಿ ಮುಂಚೂಣಿಯಲ್ಲಿರುವ ಸಾಹಿತ್ಯ. ಅತ್ಯಧಿಕ ಸಂಖ್ಯೆಯ ಲೇಖಕರು, ಪ್ರಕಾರಗಳು ಮತ್ತು ಉತ್ಕೃಷ್ಟ ಕೃತಿಗಳು ಕನ್ನಡದಲ್ಲಿವೆ. ಆದ್ದರಿಂದ ಇಲ್ಲಿಗೆ ಅನ್ಯಭಾಷೆಯಿಂದ ಕೃತಿಗಳನ್ನು ಅನುವಾದಿಸುವಾಗ ಅಲ್ಲಿಯ ಉತ್ಕೃಷ್ಟ ಕೃತಿಗಳನ್ನಷ್ಟೇ ಹಾಗೂ ವಿರಳವಾದ ಕೃತಿಗಳನ್ನಷ್ಟೇ ತಂದರೆ ಸಾಕು. ಸುಮ್ಮನೆ ಕಳಪೆ ಕೃತಿಗಳನ್ನು ಕೇವಲ ಅನುವಾದಕ್ಕಾಗಿ ಅನುವಾದವೆಂಬಂತೆ ಮಾಡಿ ನಮ್ಮ ಕಸದ ರಾಶಿಯನ್ನು ಹೆಚ್ಚಿಸಿಕೊಳ್ಳುವ ಅಗತ್ಯ ಖಂಡಿತಾ ಇಲ್ಲ. ಒಟ್ಟಾರೆ ಈಗಾಗಲೇ ಹೇಳಿರುವಂತೆ ಅನುವಾದಗಳನ್ನು ಕುರಿತಂತೆ ಇದೊಂದು ಸಮರ್ಥ ದಿಕ್ಸೂಚಿ.

❖

39.

ಕಾವ್ಯದ ಕುಸುರಿಯಲ್ಲಿ ಅರಳಿದ ಬುದ್ಧ ಚರಿತೆ

ಹೃದಯ ಮತ್ತು ಬುದ್ಧಿಗಳ ಅಪೂರ್ವ ಬೆಸುಗೆಯೆನಿಸಿದ ಗೌತಮ ಬುದ್ಧನು ಏಷ್ಯಾದ ಜ್ಞಾನ ಜ್ಯೋತಿ ಅಷ್ಟೇ ಅಲ್ಲ , ಜಗತ್ತಿಗೇ ಜ್ಞಾನದ ಬೆಳಕನ್ನು ನೀಡಿದ ಮಹಾಮಾನವ. ದುಃಖವನ್ನು , ದುಃಖದ ಕಾರಣವನ್ನು ಮತ್ತು ದುಃಖದ ಉಪಶಮನವನ್ನು ಕುರಿತು ಚಿಂತಿಸಿದ ಮಹಾಮಹಿಮ ಬುದ್ಧಗುರು. ಜನನ, ರುಜೆ, ಜರಾ, ಮರಣ ಇವುಗಳಿಂದ ಜೀವನು ಬಿಡುಗಡೆ ಹೊಂದುವ ಅಷ್ಟಾಂಗ ಮಾರ್ಗವನ್ನು, ಶೀಲ ಸಂಹಿತೆಯನ್ನು ಬೋಧಿಸಿದ ಮಹಾಗುರು. ಬುದ್ಧನ ಬದುಕು ಸಾಗಿಬಂದ ಬಗೆಯೇ ಅತ್ಯಂತ ವಿಸ್ಮಯಕಾರಿ. ರಾಜಕುಮಾರನಾಗಿ ಹುಟ್ಟಿಯೂ, ರಾಜಭೋಗವ ನ್ನೊಲ್ಲದೆ, ಜೀವರ ಸಂಕಷ್ಟಗಳಿಗೆ ಮಿಡಿದ ಮಹಾ ಮನಸ್ಸು. ಒಂದಲ್ಲ ಒಂದು ಕೊರತೆಯಿಂದ ಪರಿಮಿತ

ಧಮ್ಮಪಥಂ,
ತೆಲುಗು ಮೂಲ : ಡಾ. ಜಿ.ಆರ್. ಕುರ್ಮೆ, ಕನ್ನಡ ರೂಪ : ಗುರುಮೂರ್ತಿ ಪೆಂಡಕೂರು
ಪುಟಗಳು : 22+58 = 80, ಬೆಲೆ : 75/–
ಅಮ್ಮ ಪ್ರಕಾಶನ, ರಾಮನಗರ, ಹಗರಿಬೊಮ್ಮನಹಳ್ಳಿ – 583212, ಬಳ್ಳಾರಿ ಜಿಲ್ಲೆ.

ವಾಗಿರುವ ಜಗತ್ತಿನ ಅನೇಕ ಧರ್ಮಗಳ ಮಧ್ಯೆ, ಬುದ್ಧ ತೋರಿದ ಧರ್ಮದ ಸ್ವಚ್ಛ ಬೆಳಕಿನ ಕಡೆಗೆ ಜಗತ್ತು ಇಂದಿಗೂ ಆಸೆಗಣ್ಣುಗಳಿಂದ ನೋಡುತ್ತಿದೆ. ಸತ್ತ ನಂತರ ಮನುಷ್ಯ ಏನಾಗುತ್ತಾನೆ ಎಂಬುದರ ಬಗ್ಗೆ ತಲೆ ಕೆಡಿಸಿಕೊಳ್ಳದೆ, ಕಣ್ಣೆದುರಿನ ಬದುಕಿನ ಬಗ್ಗೆ, ಇಲ್ಲಿ ಸಲ್ಲುವುದರ ಕುರಿತು, ತೀವ್ರವಾಗಿ ಚಿಂತಿಸಿದ ಇಂಥ ಮಹಾವಿಭೂತಿಯನ್ನು ಕುರಿತು ಮೊದಲಿಗೆ ಸಂಸ್ಕೃತದಲ್ಲಿ ಮಹಾಕಾವ್ಯವನ್ನು ರಚಿಸಿದವನು ಅಶ್ವಘೋಷ. ಅಲ್ಲಿಂದೀಚೆಗೆ ಭಾರತದ ದೇಶ ಭಾಷೆಗಳಲ್ಲಿ ಬುದ್ಧನ ಬದುಕನ್ನು ಕುರಿತ ಕಾವ್ಯ, ನಾಟಕ, ಕಥೆಗಳು ರಚಿತವಾಗುತ್ತಲೇ ಇವೆ. ಎಡ್ವಿನ್ ಆರ್ನಾಲ್ಡ್ "ಲೈಟ್ ಆಫ್ ಏಷಿಯಾ" ಎಂಬ ಮಹಾಕಾವ್ಯವನ್ನೇ ಬುದ್ಧನನ್ನು ಕುರಿತು ಬರೆದನು. ಕನ್ನಡದಲ್ಲಿ ಗೋವಿಂದ ಪೈಗಳು ಬುದ್ಧನ ಅಂತಿಮ ದಿನವನ್ನು ವಸ್ತು ಮಾಡಿಕೊಂಡು 'ವೈಶಾಖಿ' ಎಂಬ ಖಂಡ ಕಾವ್ಯವನ್ನು ಬಹಳ ಹಿಂದೆಯೇ ಬರೆದರು. ಅನಂತರದಲ್ಲಿ ಕುವೆಂಪುರವರ 'ಮಹಾರಾತ್ರಿ' ಕಾರಂತರ ಕಿಸಾಗೋತಮಿ (ಗೀತ ನಾಟಕ), ಪುಟ್ಟಸ್ವಾಮಯ್ಯನವರ 'ಗೌತಮ ಬುದ್ಧ' ನಾಟಕಗಳು ಮೂಡಿಬಂದವು. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆಯೇ ಪ್ರೊ. ಕಾಶಿ ವಿಶ್ವನಾಥ ಶೆಟ್ಟರು "ಬುದ್ಧಚರಿತ ಮಹಾಮಧು" ಎಂಬ ಮಹಾಕಾವ್ಯವನ್ನೇ ಬರೆದರು. ಅದೇ ರೀತಿ ಡಾ. ಲತಾ ರಾಜಶೇಖರ್ ಅವರು ಬುದ್ಧನನ್ನು ಕುರಿತು ಮಹಾಕಾವ್ಯವನ್ನು ರಚಿಸಿದ್ದಾರೆ. ಆದರೆ ಇದಕ್ಕೆ ಮುನ್ನುಡಿ ಬರೆದಿರುವ ಡಾ. ಮೃತ್ಯುಂಜಯ ರುಮಾಲೆ ಅವರು "ಕನ್ನಡ ಸಾಹಿತ್ಯಕ್ಕೆ ಬುದ್ಧ ಬಂದದ್ದು ಅನುವಾದದ ಮೂಲಕವೇ. ಕನ್ನಡ ಸಂಸ್ಕೃತಿಯಲ್ಲಿ ಬೌದ್ಧ ಧರ್ಮದ ನೆಲೆ ಪ್ರಭಾವಗಳನ್ನು ಗುರುತಿಸುವ ಪ್ರಯತ್ನ ಸಂಶೋಧನೆಯ ವಿಷಯವಾಗಿದ್ದರೂ, ಬುದ್ಧ ಮಾತ್ರ ನೇರವಾಗಿ ಅನ್ಯಭಾಷೀಯ ನೆಲೆಯಿಂದಲೇ ಕನ್ನಡಕ್ಕೆ ಪ್ರವೇಶ ಪಡೆದಿರುವುದು ಸ್ವಾಭಾವಿಕವಾಗಿದೆ. ಆದರೆ ಬುದ್ಧನ ವಿಷಯದಲ್ಲಿ ಕನ್ನಡಕ್ಕೆ ಸ್ವೋಪಜ್ಞತೆಯಿಲ್ಲದಿರುವುದರಿಂದ ಸೃಜನಶೀಲ ಪ್ರಯೋಗಗಳನ್ನು ಅನುವಾದಿಸುವುದರ ಮೂಲಕ ತಂದು ಅಂಥ ಬಿಡುವನ್ನು ಕಡಿಮೆ ಮಾಡಿದಂತಾಗಿದೆ" ಎಂದು ಹೇಳಿರುವ ಮಾತುಗಳು ಅತ್ಯಂತ ಸತ್ಯ ದೂರವಾದವು. ಬಹುಶಃ ಶ್ರೀರಂಗರ 'ಭಗವಾನ್ ಬುದ್ಧ' (ಡಿ.ಡಿ. ಕೊಸಾಂಬಿಯರ ಗದ್ಯ ಕೃತಿಯ ಅನುವಾದ, 1956) ಮತ್ತು ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರ ಕನ್ನಡ ಬುದ್ಧ ಚರಿತೆ (ಅಶ್ವಘೋಷನ ಕೃತಿಯ ಅನುವಾದ, 1974)ಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರು ಹಾಗೆ ಹೇಳಿರಬೇಕು.

'ಧಮ್ಮಪಥಂ' ಡಾ. ಜಿ.ಆರ್. ಕುರ್ಮೆಯವರು ತೆಲುಗಿನಲ್ಲಿ ರಚಿಸಿರುವ ಒಂದು ದೀರ್ಘ ಕಾವ್ಯ. ಆದರೆ ಪುಟ ತೆರೆಯುತ್ತಲೇ ಶೀರ್ಷಿಕೆಯ ಅಡಿಯಲ್ಲಿ ಕಾಣಿಸಿಕೊಳ್ಳುವ – 'ಬುದ್ಧನ ಜೀವನ ದರ್ಶನ ಮಹಾಕಾವ್ಯ' ಎಂಬ ಮಾತು ಉತ್ಪ್ರೇಕ್ಷೆಯಿಂದ ಕೂಡಿದ್ದು.

ಕಾರಣ ಇದು ಬುದ್ಧನ ಬದುಕು ಮತ್ತು ಜೀವನದರ್ಶನಗಳನ್ನೊಳಗೊಂಡ ಒಂದು ದೀರ್ಘ ಕಥನ ಕಾವ್ಯ ಅಷ್ಟೆ. ಮಹಾಕಾವ್ಯದ ಹಾಸು – ಬೀಸುಗಳು ಇದಕ್ಕಿಲ್ಲ. ಆದರೆ ಬುದ್ಧನ ಬದುಕಿನ ಪ್ರಮುಖ ಘಟ್ಟಗಳು ಮತ್ತು ತತ್ವ ದರ್ಶನಗಳನ್ನು ಒಳಗೊಂಡಿರುವ, ಅಪೂರ್ವ ಕಾವ್ಯ ಸತ್ವದಿಂದ ಕೂಡಿರುವ ಕೃತಿ. ಸುಮಾರು 41 ಸಂಚಿಕೆಗಳಲ್ಲಿ ಬುದ್ಧನ ಜೀವನ ಗಾಥೆ ಹರಡಿಕೊಂಡಿದೆ. ಕವಿಯ ದೃಷ್ಟಿ , ವಿಸ್ತಾರಕ್ಕಿಂತ ಸಂಗ್ರಹದ ಕಡೆಗೆ ನೆಟ್ಟಿದ್ದರಿಂದಾಗಿ, ಬುದ್ಧನ ಬದುಕು ಕ್ರಮಿಸಿದ ಹಾದಿಯನ್ನು ರೇಖಿಸುತ್ತ, ಅವನ ಸಾಧನೆಯನ್ನು , ಸಿದ್ಧಾಂತಗಳನ್ನು ನಿರೂಪಿಸುವುದರೊಂದಿಗೆ ಕಾವ್ಯ ಅಂತ್ಯಗೊಂಡಿದೆ. ಹಾಗಾಗಿ ಇಲ್ಲಿ ಅಂಗುಲಿಮಾಲ, ಆಮ್ರಪಾಲಿ, ಕಿಸಾಗೋತಮಿಯಂಥ ಸ್ವಾರಸ್ಯ ಕಥನಗಳಿಗೆ ಎಡೆ ದೊರೆತಿಲ್ಲ.

ರೂಪಕ ನಿರ್ಮಾಣದಲ್ಲಿ ಸಿದ್ಧ ಹಸ್ತನಾದ ಕವಿ ಸೊಗಸಾದ ರೂಪಕಗಳನ್ನು ನಿರಾಯಾಸವಾಗಿ ಕಟ್ಟಿಕೊಡುತ್ತಾನೆ. ಶುದ್ಧೋಧನನು ಪಟ್ಟಾಭಿಷಿಕ್ತನಾದ ಸಮಯದ ವರ್ಣನೆ ಮೂಡಿ ನಿಂತಿರುವುದು ಈ ಚಿತ್ರಗಳಲ್ಲಿ.

ನೀಲಗಗನದ ಕಿರಣಗಳಲ್ಲಿ
ನೆರಳ ಯವನಿಕೆಯು
ಕಣ್ಣ ಮುಚ್ಚಾಲೆಯಾಡುವ ಸಮಯ
....
ಹೂವಿನ ದಳಗಳ ಕದವು ಸೊಂಕಿದ
ತುಂಬಿಯು
ನವ ಮಧುವನೀಂಟುವ ಸಮಯ
....
ರಾತ್ರಿ ಕಂಬಳಿಯ ಮುಸುಕನು
ತೆಗೆದ ಕಪಿಲವಸ್ತು
ಬೆಳಗಿನ ಕನ್ನಡಿಯಲ್ಲಿ ಸಿಂಗಾರಗೊಂಡಿತ್ತು.

ಶುದ್ಧೋದನನು ಮಹಾಮಾಯೆಯನ್ನು ವರಿಸಿದ ಅಮೃತ ಕ್ಷಣಗಳು ಹೀಗೆಯೇ ಅತ್ಯಂತ ಕಾವ್ಯಾತ್ಮಕವಾಗಿ ಒಡಮೂಡಿವೆ.

ಹೊಂಬಣ್ಣದ ಕೊಂಬೆರೆಂಬೆಗಳು
ಹೂರೆಂಬೆಗಳಾದ ದಿವಸ
ಗ್ರೀಷ್ಮವಸಂತವು
ಆಷಾಢದಲ್ಲಿ ಸಂಗಮಿಸಿದ ದಿವಸ
ವಸಂತ ಋತುವು
ವಾರಾಂತ್ಯದ ಹಬ್ಬವಾಗಿ

ಪಲುಕಿಸಿದ
ಆ ಶುಭರಾತ್ರಿಯಲಿ
ಮೊಗ್ಗಿನಂತಿದ್ದ ಮಹಾಮಾಯಿ
ಹೂವಾಗಿ ಅರಳಿದಳು

ಬೋಧಿಸತ್ವನಾದ ಸುಮೇಧನೇ ಮಹಾಮಾಯೆಯ ಒಡಲಿನಲ್ಲಿ ಸಿದ್ಧಾರ್ಥನಾಗಿ ರೂಪು ತಳೆದು ಭೂಮಿಗೆ ಅವತರಿಸಿದ ದಿವ್ಯ ಮುಹೂರ್ತವನ್ನು ಅತ್ಯಂತ ಲವಲವಿಕೆಯಿಂದ ಸುಂದರವಾದ ರೂಪಕಗಳಲ್ಲಿ ಮೂರ್ತಿಮತ್ತಾಗಿಸಿದ್ದಾರೆ. ಅನಂತ ಪ್ರಕೃತಿಯೇ ಸಿದ್ಧಪುರುಷನೊಬ್ಬನ ಬರವಿಗಾಗಿ ಉತ್ಸಾಹದಿಂದ ತುದಿಗಾಲ ಮೇಲೆ ನಿಂತಿರುವುದನ್ನು ಬಗೆ ಬಗೆಯಾಗಿ ಬಣ್ಣಿಸುವ ಸಾಲುಗಳಿವು!

ಕೊಂಬೆ ರೆಂಬೆಗಳು ಚಿಗುರಿ
ಕುಹೂ ಕುಹೂ ಎಂದು
ಅಲುಗಾಡುತಿವೆ
ಹೂಗಳು
ರಂಗು ರಂಗಿನ ಭಂಗಿಯಲಿ
ಝೇಗರಿಸುತಿವೆ

ಎಂಬ ಸಾಲುಗಳು ಬೇಂದ್ರೆಯವರ "ಗಿಡಗಂಟೇಯಾ ಕೊರಳೊಳಗಿಂದ ಹೊರಟಿತು ಹಕ್ಕಿಗಳ ಹಾಡು" ಎಂಬ ಅದ್ಭುತ ಸಾಲುಗಳನ್ನು ನೆನಪಿಸುತ್ತವೆ.

ಸಿದ್ಧಾರ್ಥನು ಲೋಕದಲ್ಲಿ ಅವತರಿಸಿದ್ದು
ವೈಶಾಖ ಚಂದ್ರಮನು
ಬೆಳದಿಂಗಳ ಕನ್ಯೆಯ ಸೆರಗಿನಲಿ
ವಯ್ಯಾರದಿಂದ ಕುಲುಕುತಿರುವಾಗ

ಅನ್ಯರನೋವು, ಅದು ಪ್ರಾಣಿ, ಪಕ್ಷಿ ಯಾವುದೇ ಆದರೂ ತನ್ನದೇ ನೋವು ಎಂಬಂಥ ಸಿದ್ಧಾರ್ಥನ ಸಂವೇದನಾ ಪೂರ್ಣ, ಸಾನುಕ್ರೋಶಪರ ವ್ಯಕ್ತಿತ್ವದ ಜೀವಕಾರುಣ್ಯ ಭಾವ ಮೂಡಿರುವುದು –

ಉಡಿಗೆ ಬಿದ್ದ ಗುಬ್ಬಿಯನು ಕಂಡು
ಸಿದ್ಧಾರ್ಥನ ಹೃದಯ ಗಾಯವಾಯಿತು
ಮನಸು ರಕ್ತಸಿಕ್ತವಾಯಿತು

ಎಂಬ ಮಾತುಗಳಲ್ಲಿ. ಸಿದ್ಧಾರ್ಥ ಮನೆಯನ್ನು ತೊರೆಯಲು ಕಾರಣವಾದ್ದು ಸಾಮಾನ್ಯವಾಗಿ ನಂಬಿರುವಂತೆ ರೋಗಿ, ಮುದುಕ, ಹೆಣವನ್ನು ಕಂಡು, ಜಗತ್ತಿನ ಜನರ ದುಃಖಕ್ಕೆ ಕಾರಣ ಕಂಡುಹಿಡಿಯಲು ಅಲ್ಲ – ನದಿ ನೀರಿಗಾಗಿ ಶಾಕ್ಯರು ಮತ್ತು

ಕೊಲಿಯರು ಪರಸ್ಪರ ವಿವಾದದಲ್ಲಿ ತೊಡಗಿದ್ದು. ಸಿದ್ಧಾರ್ಥನ ಅಗಲಿಕೆಯ ದುಃಖದಿಂದ ಪೀಡಿತಳಾದ ಯಶೋಧರೆಯ ದುಃಖ ಮಾತಿಗೆ ಮೀರಿದ್ದು!

ಹೃದಯವನು
ಕಿವಿಗೆ ತೂಗು ಹಾಕಿ ಧೇನಿಸಿದಳು
ಜೀವಸ್ವರದಿಂದ ತಡಬಡಿಸುವ
ಜೀವನಾಡಿಯ ಜಾಡೇ ಇಲ್ಲ
ಇನ್ನು ಗೌತಮಿಯ ಸ್ಥಿತಿಯಾದರೋ
ನೆರೆ ಬಂದ ತೊರೆಯಂತಾಗಿ
ಮನದ ಹೊಲದಲ್ಲೆಲ್ಲಾ
ನೀರು ತುಂಬಿಸಿದವು

ಇದಕ್ಕಿಂತ ಸಿದ್ಧಾರ್ಥ ತೊರೆದ ಕಪಿಲವಸ್ತುವಿನ ಸ್ಥಿತಿಯನ್ನು ವರ್ಣಿಸಿರುವ ಒಂದೊಂದು ಸಾಲೂ ಅದ್ಭುತವಾದ, ರಸಾತ್ಮಕವಾದ ವಾಕ್ಯಗಳೇ ಸರಿ.

ಕಪಿಲ ವಸ್ತು ನಗರ
ಸೂರ್ಯನುದಯಿಸದ
ಕಮಲ ಸರೋವರ
ಮರವು ಹೂ ತಳೆಯುವುದಿಲ್ಲ
ಕೋಗಿಲೆಯ ಇನಿದನಿಗೆ
ಪರಿಮಳವಿಲ್ಲ

ಯಾವ ಹಸುಗೂಸಿನ ಮುಖದಿಂದಲೂ
ಕಿರುನಗೆಯ ಕೇಕೆ
ಮಾರ್ದನಿಯಾಗುತ್ತಿಲ್ಲ
....
ಗಾಳಿಯಂತೆ ಪ್ರಸರಿಸುತ್ತಿದ್ದ ಬೀದಿ
ಹೆಣವಾಗಿ ಬಿದ್ದಿದೆ

ಸಿದ್ಧಾರ್ಥನ ವ್ಯಕ್ತಿತ್ವದ ವಿಕಾಸವನ್ನು ಇಷ್ಟೇ ಶಕ್ತಿಯುತವಾದ ಸಾಲುಗಳಲ್ಲಿ ಚಿತ್ರಿಸಲಾಗಿದೆ. ತನ್ನ ಅರ್ಧ ರಾಜ್ಯವನ್ನು ಸ್ವೀಕರಿಸು ಎಂದು ಪ್ರಾರ್ಥಿಸಿದ ಬಿಂಬಸಾರನಿಗೆ – ತಾನು ವಿಷದ ಹಲ್ಲುಗಳ ಕಿತ್ತು ಕಾಳಸರ್ಪಗಳನಾಡಿಸುವ ಧಗಧಗಿಸುವ ದಾವಾನಲಗಳನು ಬೊಗಸೆಯಲಿ ಹಿಡಿದು, ನಂಬಿಸುವವನು ಎಂದು ಹೇಳಿ, ಆಶಾ ಪಾಶದಲ್ಲಿ ಸಿಲುಕಿದ ಮನುಷ್ಯನ ಅಸಹಾಯಕ ಸ್ಥಿತಿಯನ್ನು ಪರಿಪರಿಯಾಗಿ ವರ್ಣಿಸಿ, ತಾನು ಅವೆಲ್ಲವನ್ನೂ ಮೀರಿದವನು ಎಂದು ಹೇಳುತ್ತಾನೆ.

ಕಾವ್ಯದಲ್ಲಿ ಗೌತಮನು ತನ್ನ ಕಾಲದ ವಿವಿಧ ಸಾಧಕರನ್ನು ಕಂಡು ಅವುಗಳು

ನಿರರ್ಥಕವೂ ಪರಿಮಿತವೂ ಆದವೆಂದು ತಿಳಿದು – ತನ್ನದೇ ದಾರಿಯಲಿ ಸಾಗಿ ಬೋಧಿಜ್ಞಾನ ಸಿದ್ಧಿಸಿಕೊಂಡ ಬಗೆಯನ್ನು ಮನೋಜ್ಞವಾಗಿ ಕಾವ್ಯದಲ್ಲಿ ಕಟ್ಟಿಕೊಟ್ಟಿದ್ದಾರೆ. ವರ್ಣ ವ್ಯವಸ್ಥೆಯನ್ನು, ವೈದಿಕ ಋಷಿಗಳ ಸಿದ್ಧಾಂತಗಳ ಅತಾರ್ಕಿಕತೆಯನ್ನು ಶಕ್ತಿಪೂರ್ಣ ಮಾತುಗಳಲ್ಲಿ ಲೇವಡಿ ಮಾಡಲಾಗಿದೆ.

ಬುದ್ಧನು ತನ್ನ ಧರ್ಮವನ್ನು ಬೋಧಿಸಿದ ಮೇಲೆ "ಹಳೆ ಜಗವು ಸತ್ತು" ಹೊಸ ಜಗ ಉದಯವಾಯಿತು. ಅವನ ಧರ್ಮದ ತೇಜಸ್ಸಿನ ಸೂರ್ಯನೆದುರು ಹಳೆಯ ಧರ್ಮಗಳೆಲ್ಲ ಹಗಲೊಗೆದ ಚಂದ್ರಕಳೆಯಂತೆ ಕಳಾಹೀನವಾದವು.

ಬುದ್ಧನ ಈ ಮಹಾಗಾಥೆಯನ್ನು ಎಲ್ಲ ಕಾವ್ಯಸೂಕ್ಷ್ಮಗಳೊಂದಿಗೆ ಡಾ. ಕುರ್ಮೆಯವರು ಹಿಡಿದುಕೊಟ್ಟಿದ್ದಾರೆ. ಈಗಾಗಲೇ ತೆಲುಗಿನಿಂದ ವಿಫುಲವಾಗಿ ಅನುವಾದಿಸಿ ಸಿದ್ಧ ಹಸ್ತರಾಗಿರುವ ಮಾನ್ಯ ಗುರುಮೂರ್ತಿ ಪೆಂಡಕೂರು ಅವರು ತುಂಬ ಸೊಗಸಾಗಿ ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಕಾವ್ಯದ ಅನುವಾದ ಕಷ್ಟ. ಮೂಲದ ಎಲ್ಲ ಭಾಷಾ ಸೂಕ್ಷ್ಮಗಳನ್ನು ಇನ್ನೊಂದು ಭಾಷೆಯಲ್ಲಿ ಹಿಡಿದಿರಿಸಿಕೊಡುವುದು ಅಸಾಧ್ಯವೆಂದೇ ಹೇಳಬೇಕು. ಅಂಥದ್ದನ್ನು ಸಾಧ್ಯ ಮಾಡಿರುವುದಕ್ಕಾಗಿ ಅವರನ್ನು ಹಾರ್ದಿಕವಾಗಿ ಅಭಿನಂದಿಸಲೇಬೇಕು. ಕಾವ್ಯದ ಭಾಷೆ ಅತ್ಯಂತ ಸುಲಲಿತವಾಗಿ ಸರಾಗವಾಗಿ ಸಾಗುತ್ತದೆ. ತಮ್ಮ ಅಧ್ಯಯನಪೂರ್ಣ ಮುನ್ನುಡಿಯ ಮೂಲಕ ಈ ಕಾವ್ಯದ ಅಧ್ಯಯನಕ್ಕೆ ಅಗತ್ಯವಾದ ಉತ್ತಮ ಪ್ರವೇಶವನ್ನೊದಗಿಸಿರುವ ಡಾ. ಮೃತ್ಯುಂಜಯ ರುಮಾಲೆಯವರೂ ಅಭಿನಂದನಾರ್ಹರು.

❖

40

ಸಾಮಾಜಿಕ ನ್ಯಾಯ – ಅರಸರ ಸ್ಮರಣೆ

“ರಾಜಾ ಕಾಲಸ್ಯ ಕಾರಣಂ” ಎಂಬುದು ಸಂಸ್ಕೃತದ ಒಂದು ಹಳೆಯ ಮಾತು. ಪ್ರಶ್ನಾತೀತವಾದ ರಾಜಪ್ರಭುತ್ವವೇ ದೇಶದ ಪ್ರಜೆಗಳ ಭವಿಷ್ಯವನ್ನು ನಿರ್ಧರಿಸುತ್ತಿದ್ದ, ರೂಪಿಸುತ್ತಿದ್ದ ಸಂದರ್ಭದ ಈ ಮಾತು ಇನ್ನೊಂದು ಅರ್ಥದಲ್ಲಿ ಪ್ರಜಾಪ್ರಭುತ್ವದ ಕಾಲಕ್ಕೂ ಅನ್ವಯವಾಗುತ್ತಿರುವುದು ಅಸಂಗತವೇನೂ ಅಲ್ಲ. ಚುನಾವಣೆಯಲ್ಲಿ ಜನರು ನೀಡುವ ಮತ ರಾಜ್ಯದ ಮುಖ್ಯಮಂತ್ರಿಯೊಬ್ಬನಿಗೆ ಮತ್ತು ದೇಶದ ಪ್ರಧಾನಿಗೆ ಅಪರಿಮಿತವಾದ ಅಧಿಕಾರಗಳನ್ನು ತಂದುಕೊಡುತ್ತದೆ. ವ್ಯತ್ಯಾಸವಿಷ್ಟೆ: ಆಗ ವಂಶಪಾರಂಪರ್ಯವಾದ ಆಳ್ವಿಕೆಯ ಭಾಗವಾಗಿ ಅರಸರು ಅಧಿಕಾರ ಸೂತ್ರಹಿಡಿದು ರಾಜ್ಯದ, ದೇಶದ, ಭವಿತವ್ಯದ ರೂವಾರಿಗಳಾಗುತ್ತಿದ್ದರೆ ಇಂದು ಜನರಿಂದ ಆಯ್ಕೆಯಾದ ರಾಜಕಾರಣಿಗಳ ಕೈಯಲ್ಲಿ ದೇಶದ, ರಾಜ್ಯದ ಭವಿತವ್ಯ ನಿಹಿತವಾಗಿದೆ. ಒಬ್ಬ

ಡಾ.ದೇವರಾಜ ಅರಸು ಅಭಿವೃದ್ಧಿ ನಾಯಕತ್ವ
ಸಂಪಾದಕರು ಒಡೆಯರ್ ಡಿ. ಹೆಗ್ಗಡೆ
ಪುಟಗಳು 216, ಬೆಲೆ : 250
ಚೇತನ್‌ಬುಕ್ ಹೌಸ್ : ಅಂಜನಾದ್ರಿ ಮೈಸೂರು–24

ಸಮರ್ಥನೂ ದೂರದೃಷ್ಟಿಯುಳ್ಳವನೂ ಆದ ರಾಜಕಾರಣಿ ಕೇವಲ ರಾಜಕಾರಣಿಯಾಗಿಯೇ ಉಳಿಯದೆ ಮುತ್ಸದ್ದಿಯೂ ಆಗಿದ್ದು ಪ್ರಾಮಾಣಿಕವಾದ ಜನಹಿತಾಕಾಂಕ್ಷೆಯುಳ್ಳವನಾಗಿದ್ದರೆ ಅವನು ತನಗಿರುವ ಅಧಿಕಾರ ಬಳಸಿ ನಿಜಕ್ಕೂ ಕಾಲದ ಕಾರಣನೆನಿಸಲು ಅರ್ಹನಾಗುತ್ತಾನೆ. ಕರ್ನಾಟಕ ಕಂಡ ರಾಜಕಾರಣಿಗಳಲ್ಲಿ ಅತ್ಯಂತ ವರ್ಣರಂಜಿತವಾದ ವ್ಯಕ್ತಿತ್ವವಿದ್ದ ದಿವಂಗತ ದೇವರಾಜ ಅರಸರು ಎಷ್ಟು ತೀವ್ರವಾದ ಟೀಕೆಗೆ ಒಳಗಾಗಿದ್ದರೋ ಅಷ್ಟೇ ಮಟ್ಟಿನ ಪ್ರಶಂಸೆಗೂ ಭಾಜನರಾಗಿದ್ದರೆಂಬುದೇ ಅವರ ವೈಶಿಷ್ಟ್ಯ. ಅರಸರು ಹುಟ್ಟಿ ನೂರು ವರ್ಷಗಳು ಸಂದಿರುವ ಈ ಸಂದರ್ಭದಲ್ಲಿ ಸಹಸ್ರಾರು ವರ್ಷಗಳಿಂದ ಶೋಷಣೆಗೊಳಗಾದ, ಸಾಮಾಜಿಕವಾಗಿ ರಾಜಕೀಯವಾಗಿ ಹಿಂದುಳಿದಿದ್ದ ಜನವರ್ಗದ ಬಗ್ಗೆ ನಿಜವಾದ ಕಳಕಳಿಯುಳ್ಳ ಜನನಾಯಕರೆನಿಸಿ ಸಾಮಾಜಿಕ ನ್ಯಾಯದ ಪರ್ವಕಾಲಕ್ಕೆ ಕಾರಣರಾದ ಅವರನ್ನು ಪ್ರೀತಿ ಗೌರವಗಳಿಂದ ಸ್ಮರಿಸಿಕೊಳ್ಳುವ ಉಪಕ್ರಮದ ಭಾಗವಾಗಿ 24 ಲೇಖನಗಳ ಪ್ರಸ್ತುತ ಪುಸ್ತಕ "ಡಿ. ದೇವರಾಜ ಅರಸು: ಅಭಿವೃದ್ಧಿ ನಾಯಕತ್ವ" ನಮ್ಮ ಕಣ್ಣ ಮುಂದಿದೆ.

ಇದರಲ್ಲಿ ನಮ್ಮ ನಾಡಿನ ವಿವಿಧ ಕ್ಷೇತ್ರಗಳ ಗಣ್ಯಮಾನ್ಯರು ಅರಸರನ್ನು, ಅವರ ಕಾರ್ಯಗಳನ್ನು ತಮ್ಮ ದೃಷ್ಟಿಕೋನದ ಪಟ್ಟಕದ ಮೂಲಕ ಹಾಯಿಸಿ ನೋಡಿದ್ದಾರೆ. ಅವರಲ್ಲಿ ಪ್ರಾಧ್ಯಾಪಕರು, ಸಾಹಿತಿಗಳು, ರಾಜಕಾರಣಿಗಳು, ಸಮಾಜಶಾಸ್ತ್ರಜ್ಞರು, ಪತ್ರಕರ್ತರು , ಅಧಿಕಾರಿಗಳು ಎಲ್ಲರೂ ಇರುವ ಕಾರಣ ಈ ಪುಸ್ತಕಕ್ಕೊಂದು ತನ್ನದೇ ಆದ ಆಯಾಮ , ವ್ಯಾಪಕತೆ ಮತ್ತು ವೈವಿಧ್ಯತೆ ಪ್ರಾಪ್ತವಾಗಿದೆ.

ಸುಮಾರು ಎಂಟು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಈ ರಾಜ್ಯದ ಚುಕ್ಕಾಣಿ ಹಿಡಿದಿದ್ದ ಅರಸರ ಸಾಧನೆಗಳು ಹಲವಾರು.

ಬಡವರ ಬಗ್ಗೆ ಹೃದಯವಂತಿಕೆಯಿದ್ದ ಅರಸರ ಮುಖ್ಯ ಸಾಧನೆಗಳಲ್ಲಿ ಭೂ ಸುಧಾರಣಾ ಕಾಯಿದೆಯನ್ನು ಕಾರ್ಯ ಸಾಧುವಾದ ರೀತಿಯಲ್ಲಿ ರೂಪಿಸಿ ಕಟ್ಟುನಿಟ್ಟಾಗಿ ಜಾರಿಗೆ ತಂದುದು, ಇದರಿಂದ ಸುಮಾರು 35 ಲಕ್ಷದಷ್ಟು ಭೂರಹಿತರು ಜಮೀನುಗಳ ಮಾಲೀಕರಾದರು ಎಂದು ಹೇಳಲಾಗುತ್ತದೆ. ಎಲ್. ಜಿ. ಹಾವನೂರರ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗ ರಚಿಸಿ ಬಡವರು, ಹಿಂದುಳಿದವರು, ಅಲ್ಪ ಸಂಖ್ಯಾತರು ಮತ್ತು ಮೇಲ್ ಜಾತಿಯ ಬಡವರಿಗೆ ಶಿಕ್ಷಣ ಮತ್ತು ಉದ್ಯೋಗದ ಮೀಸಲಾತಿಯನ್ನು ಜಾರಿಗೆ ತಂದದ್ದು,, ನಿರುದ್ಯೋಗಿ ಪದವೀಧರರಿಗೆ ಸ್ಟೈಪಂಡರಿ ಯೋಜನೆ ಜಾರಿಗೊಳಿಸಿದ್ದು, ಬಸವಲಿಂಗಪ್ಪನವರ ಮೂಲಕ ಮಲಹೊರುವ ಪದ್ಧತಿ ನಿರ್ಮೂಲನ

ಮಾಡಿಸಿದ್ದು, ಸಾಲ ಮನ್ನಾ ಯೋಜನೆ, ವೃದ್ಧಾಪ್ಯ ಮತ್ತು ವಿಧವಾ ಪಿಂಚಣಿ, ಜಾರಿಮಾಡಿದ್ದು ಜೀತ ಪದ್ಧತಿಯ ರದ್ದತಿ, ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ್ದು ಇವನ್ನು ಹೆಸರಿಸಬಹುದು. ಇವಲ್ಲದೆ ವಿದ್ಯಾರ್ಥಿನಿಲಯಗಳ ಸ್ಥಾಪನೆ, ನೀರಾವರಿ ಯೋಜನೆಗಳಿಗೆ ಹಣ ಒದಗಿಸಿದ್ದು ಇತ್ಯಾದಿಗಳೂ ಇವೆ. ಇದೆಲ್ಲಕ್ಕೂ ಮಿಗಿಲಾಗಿ ಪ್ರಪ್ರಥಮ ಬಾರಿಗೆ ಕಂಡು ಕೇಳರಿಯದ ಸಮಾಜದ ಅತ್ಯಂತ ಕೆಳವರ್ಗದವರಿಗೆ ರಾಜಕೀಯ ಅಧಿಕಾರದ ಪಾಲು ದೊರಕಿಸಿಕೊಡುವ ಮೂಲಕ ಈಗ ನಾವು ದಿನನಿತ್ಯ ಮಂತ್ರದಂತೆ ಪಠಿಸುತ್ತಿರುವ ಸಾಮಾಜಿಕ ನ್ಯಾಯದ ರೂವಾರಿಯಾಗಿ ಭಾರತದ ಬೇರಾವ ರಾಜ್ಯದಲ್ಲೂ ಆಗದಷ್ಟು ಪ್ರಗತಿಪರ ಮತ್ತು ಜನೋಪಯೋಗಿ ಕಾರ್ಯಕ್ರಮಗಳನ್ನು ಯೋಜಿಸಿ ಜಾರಿಗೆ ತಂದ ವ್ಯಕ್ತಿಯ ಗ್ರಾಮೀಣ ಮತ್ತು ಕೌಟುಂಬಿಕ ಹಿನ್ನೆಲೆ, ಅವರು ಬೆಳೆದು ಬಂದ ಬಗೆ, ವಿದ್ಯಾಭ್ಯಾಸ, ವ್ಯಕ್ತಿತ್ವ ರಾಜಕೀಯ, ಸಾಮಾಜಿಕ ದೃಷ್ಟಿಕೋನ, ಅಗಿನ ರಾಜಕೀಯ ಪರಿಸ್ಥಿತಿ ಇವೇ ಮೊದಲಾದ ವಿಷಯಗಳನ್ನು ಲೇಖಕರು ಇಲ್ಲಿಯ ಲೇಖನಗಳಲ್ಲಿ ಸಾಮಾನ್ಯವಾಗಿ ಪ್ರಸ್ತಾಪಿಸಿದ್ದಾರೆ. ಎಲ್ಲ ಲೇಖನಗಳಲ್ಲೂ ಅವರ ಸಾಧನೆಗಳ ಪ್ರಸ್ತಾಪವಿದ್ದೇ ಇದೆ. ಇಂಥ ಸಂದರ್ಭದಲ್ಲಿ ವಿಷಯಗಳು, ಸಂಗತಿಗಳು ಪುನರಾವೃತ್ತಿಯಗುವುದು ಸಹಜ. ಈ ಪುಸ್ತಕವೂ ಅದಕ್ಕೆ ಹೊರತಲ್ಲವಾದರೂ ಅದರ ಹೊರತಾಗಿಯೂ ಅರಸರನ್ನು ಆತ್ಮೀಯವಾದ ರೀತಿಯಲ್ಲಿ ಚಿತ್ರಿಸುತ್ತ ಅವರ ಸಾಧನೆಗಳ ಮೇಲೆ ಬೆಳಕು ಚೆಲ್ಲುವಲ್ಲಿ ಇಲ್ಲಿಯ ಬಹಳಷ್ಟು ಬರಹಗಳು ಯಶಸ್ವಿಯಾಗಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಕೆಲವು ಲೇಖನಗಳು ಅರಸರ ವ್ಯಕ್ತಿವಿಶಿಷ್ಟ ಗುಣಗಳನ್ನು ಈ ವ್ಯತಿಕರದಲ್ಲಿ ತೆರೆದು ತೋರುತ್ತವೆ. ಅರಸರಿಗೆ ವೈಯಕ್ತಿಕವಾಗಿಯೂ ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಯಲ್ಲಿ ನಂಬಿಕೆಯಿರಲಿಲ್ಲ ಎಂದು ಹೇಳುತ್ತ ಚೆಲುವಯ್ಯ ಎಂಬ ದಲಿತ ಆಳುಮಗನಿಗೆ ಆರು ಎಕರೆ ಜಮೀನನ್ನು ನಿಶ್ಚಿಂತೆಯಿಂದ ಕೊಟ್ಟುಬಿಡುವ ಅರಸರು ತಾವು ಹೇಳಿದ ಸಮಾಜವಾದಿ ಮತ್ತು ಜಾತ್ಯತೀತ ಮೌಲ್ಯಗಳನ್ನು' ವೈಯಕ್ತಿಕ ಜೀವನದಲ್ಲಿ ಪಾಲಿಸಿದವರು ಎಂಬ ಸಂಗತಿಗಳನ್ನು ತಿಳಿಸಿದ್ದಾರೆ (ಡಿ. ಒಡೆಯರ್ ಅವರ ಲೇಖನ). ಹೇಳಿಕೊಳ್ಳಲು ಅರಸು ಪರಿವಾರದವರಾದರೂ ವಿದ್ಯಾಭ್ಯಾಸದ ನಂತರ ಸ್ವಂತ ಊರಾದ ಕಲ್ಲಹಳ್ಳಿಗೆ ಹೋಗಿ ಕೃಷಿಯಲ್ಲಿ ತೊಡಗಿಸಿಕೊಂಡು, ಹಾಲು ಹೈನು ಉತ್ಪಾದಿಸಿ ಹುಣಸೂರಿನ ಹೋಟೆಲ್‌ಗೆ ತಾವೇ ಮುಟ್ಟಿಸುತ್ತಿದ್ದ, ನಿಕ್ಕರ್ ಧರಿಸಿ ಹೊಲದಲ್ಲಿ ದುಡಿಯುವ, ಸೈಕಲ್ ತುಳಿಯುವ ಅರಸು ಚಿತ್ರ(ಎನ್ ಸರಸ್ವತಿ), ಅರಸು ಅವರಲ್ಲಿ ಗ್ರಾಮೀಣ ಸರಳತೆ, ಬಾವುಣಿಕೆ, ಹೆಂಗರುಳುತನ, ಜಾತಿ ಕುಲಗಳನ್ನು ಮೀರಿದ ಔದಾರ್ಯ ಇವೆಲ್ಲ

ಇದ್ದುವೆಂಬುದಕ್ಕೆ ಕಾ. .ತ. ಚಿಕ್ಕಣ್ಣನವರ, ಲೇಖನ ಸಾಕ್ಷಿಯಾಗಿದೆ. ಕಾಡಿನಲ್ಲಿ ಸೌದೆ ಕಡಿದು ಮೈಸೂರಿಗೆ ತೆಗೆದುಕೊಂಡು ಹೋಗಿ ಮಾರಿಬರುತ್ತಿದ್ದುದು, ವ್ಯವಸಾಯದ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದುದು, ಹಸುಗಳನ್ನು ಬೇಟೆಯಾಡುತ್ತಿದ್ದ ಹುಲಿ ಕೊಂದ ಸಾಹಸ, ಮೂವರು ಆಳುಗಳು ಅಲುಗಾಡಿಸಲಾಗದ ಕಲ್ಲುಗುಂಡನ್ನು ಅರಸರೊಬ್ಬರೇ ಕಿತ್ತೆಸದದ್ದು . ಇಸ್ಪೀಟಿನ ಚಾಳಿ ಹತ್ತಿಸಿಕೊಂಡಿದ್ದ ಹಳ್ಳಿಯ ಹೈಕಳಿಗೆ ಕೊರಡೆಯ ಏಟು ಬಿಗಿದು ಮತ್ತೆಂದೂ ಇಸ್ಪೀಟಿನತ್ತ ಸುಳಿಯದಂತೆ ಮಾಡಿದ್ದು, ತನ್ನ ರಾಜಕೀಯ ವಿರೋಧದ ನಡುವೆಯೂ ತಾವಾಗಿಯೇ ಹುಚ್ಚೇಗೌಡರ ಮನೆಗೆ ಹೋಗಿ ಕೋಳಿ ಎಸರು ಮುದ್ದೆ ಮಾಡಿಸಿಕೊಂಡು ತಿನ್ನುವಂಥ ಆತ್ಮೀಯತೆ, ಇವೆಲ್ಲ ಯಾವುದೋ ಜನಪದ ಕತೆಯ ನಾಯಕನಂತೆ ಅರಸರನ್ನು ಚಿತ್ರಿಸುತ್ತವೆ.

ಎಂದೂ ಸ್ವಜನ ಪಕ್ಷಪಾತಿಯಲ್ಲದ ಅರಸರು ಅಳಿಯ ಎಂ. ಡಿ. ನಟರಾಜ್‌ಗೆ ಯಾವ ರಾಜಕೀಯ ಮಹತ್ವದ ಹುದ್ದೆಯನ್ನೂ ನೀಡಲಿಲ್ಲ . ಅವನ 'ಇಂದಿರಾ ಬ್ರಿಗೇಡ್' ಎಂಬ ಪುಂಡುಪಡೆ ಬೆಳೆಯಲು ಕುಮ್ಮಕ್ಕು ಕೊಡಲಿಲ್ಲ. ಚುನಾವಣೆಗೆ ಟಿಕೆಟ್ ಕೂಡ ಕೊಡಿಸಲಿಲ್ಲ. (ಡಿ.ಒಡೆಯರ್). ಇಂದಿನ ರಾಜಕಾರಣಿಗಳ ನಿರ್ಲಜ್ಜ ಸ್ವಜನ ಪಕ್ಷಪಾತ, ಮತ್ತು ಧೃತರಾಷ್ಟ್ರ ಪುತ್ರ ವ್ಯಾಮೋಹದ ಹಿನ್ನೆಲೆಯಲ್ಲಿ ಅರಸರ ಎತ್ತರ ನಿಚ್ಚಳವಾಗುತ್ತದೆ. ಅವರ ಓದುವ ಗುಣ ದಾಖಲಿಸಿರುವ ಜಿ. ಶ್ರೀನಿವಾಸನ್– "ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಹೋಗುವಾಗ ಪುಸ್ತಕವೇ ಅವರ ಸಂಗಾತಿ. ಮಾರ್ಕ್ಸ್, ಲೆನಿನ್,ಗಾಂಧಿ, ನಾರಾಯಣ ಗುರು ಓದಿಕೊಂಡವರು. ಮಂಕುತಿಮ್ಮನ ಕಗ್ಗ, ಜೈಮಿನಿ ಭಾರತ, ಕುಮಾರವ್ಯಾಸ ಭಾರತ ಇಷ್ಟಪಡುತ್ತಿದ್ದ ಸಂಗತಿ ತಿಳಿಸಿದ್ದಾರೆ. ಇಲ್ಲೇ ಪ್ರೊ. ಬರಗೂರರು ದಾಖಲು ಮಾಡಿರುವ ಒಂದು ಅಪರೂಪದ ಸಂದರ್ಭ ಕೂಡ ಉಲ್ಲೇಖನೀಯ. ತಮಗೆ ಆಹ್ವಾನವಿಲ್ಲದಿದ್ದರೂ ಪೇಪರ್ ನೋಡಿಯೇ ಅಂತಾರಾಷ್ಟ್ರೀಯ ಖ್ಯಾತಿಯ ಕಮ್ಯುನಿಸ್ಟ್ ನಾಯಕ ನಂಬೂದಿರಿಪಾಡರ ಭಾಷಣ ಕೇಳಲು ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ಗೆ ಹೋಗಿ ವೇದಿಕೆಗೆ ಬರಬೇಕೆಂದು ಕೋರಿದರೂ ಹೋಗದೆ ಶ್ರೋತೃಗಳ ಮಧ್ಯೆ ಕುಳಿತು ಭಾಷಣ ಕೇಳಿದ ಮುಖ್ಯಮಂತ್ರಿಯ ಅನನ್ಯ ನಡೆ ಅವರ ತಿಳಿವಿನ ಹಸಿವಿನ ಹಾಗೂ ತಮ್ಮ ಸ್ಥಾನಮಾನದ ಔಪಚಾರಿಕತೆ! ಶಿಷ್ಟಾಚಾರ ಮೀರಿದ ಸರಳತೆಯ ದ್ಯೋತಕ.

"ಪ್ರಬಲ ಜಾತಿಗಳನ್ನು ಮೆಟ್ಟಿನಿಂತು ಹಿಂದುಳಿದ ವರ್ಗಗಳಿಗೆ ಜೀವಚೈತನ್ಯ ಕೊಟ್ಟ" , ಇಂದಿರಾಗಾಂಧಿಯವರ 20 ಅಂಶಗಳ ಕಾರ್ಯಕ್ರಮವನ್ನು ಚ, ಚು ತಪ್ಪದೆ ನಿಷ್ಠೆಯಿಂದ ಕಾರ್ಯಗತಗೊಳಿಸಿ ಸೋತು ಸುಣ್ಣವಾಗಿದ್ದ ಇಂದಿರಾರನ್ನೂ ಗೆಲ್ಲಿಸಿ

ರಾಜಕೀಯ ಪುನರ್ಜನ್ಮ ನೀಡಿದ , ತುರ್ತು ಪರಿಸ್ಥಿತಿಯಲ್ಲಿ ಯವುದೇ ಅತಿರೇಕಕ್ಕೆ ಎಡೆಕೊಡದ ರಾಜಕೀಯ ವಿವೇಕ, ಹೀಗೆ ಎಲ್ಲ ರಂಗಗಳಲ್ಲೂ ಒಂದು ಅಭಿವೃದ್ಧಿ ಪರ್ವವನ್ನೇ ಆರಂಭಿಸಿದ ಅರಸರ ಹಲವು ಹತ್ತು ಮುಖಗಳ ಅನಾವರಣ ಮಾಡಿರುವ ಬರಹಗಳು ಇರುವಂತೆಯೇ ಅವರ ಸೋಲು ದೌರ್ಬಲ್ಯಗಳ ಮುಖವನ್ನೂ ಬಟಾಬಯಲು ಮಾಡಿರುವ ಬರಹಗಳೂ ಇರುವುದೇ ಈ ಪುಸ್ತಕದ ವಿಶಿಷ್ಟತೆ. ಬರಗೂರರ ಲೇಖನ, ಪ್ರೊ. ಒಡೆಯರ್ ಅವರ ಲೇಖನ, ಚದುರಂಗರ ಮಾತುಗಳು ಅರಸರು ರಾಜಕೀಯ ಭ್ರಷ್ಟಾಚಾರವನ್ನು ವ್ಯವಸ್ಥಿತಗೊಳಿಸಿದ ಅಪಕೀರ್ತಿಗೆ ಭಾಜನರಾದರೆಂದು ಮುಲಾಜಿಲ್ಲದೆ ದಾಖಲಿಸಿವೆ. "ಭ್ರಷ್ಟಾಚಾರ ಕ್ರಮಬದ್ಧವಾಗಿ ವಿಸ್ತರಣೆಗೊಂಡದ್ದು, ಸಮಾಜಘಾತುಕ ಶಕ್ತಿಗಳು ವಿಜೃಂಭಿಸತೊಡಗಿದ್ದು ಯಾರೂ ಮೆಚ್ಚುವ ವಿಷಯಗಳಲ್ಲ. ಅಧಿಕಾರವಿದ್ದರೆ ಏನಾದರೂ ಮಾಡಬಹುದೆಂಬ, ಆ ಅಧಿಕಾರ ಉಳಿಸಿಕೊಳ್ಳಲು ಎಂಥ ಭ್ರಷ್ಟಾಚಾರಕ್ಕೂ ಹಿಂಜರಿಯದ ನಡೆ ಅವರಿಗೆ ಶಾಶ್ವತ ಕಳಂಕ ತಂದಿತು"(ಬರಗೂರು). ಅರಸರ ಅಭಿವೃದ್ಧಿ ನಾಯಕತ್ವದ ಬಗ್ಗೆ ವಿಸ್ತಾರವಾದ ಅಧ್ಯಯನಪೂರ್ಣ ಲೇಖನ ಬರೆದಿರುವ ಪ್ರೊ .ಒಡೆಯರ್ ಒಂದು ಮಾರ್ಮಿಕ ಪ್ರಶ್ನೆ ಕೇಳುತ್ತಾರೆ. ಅದೆಂದರೆ ಹಿಂದುಳಿದ ವರ್ಗದವರ ಪರವಾಗಿ ರಾಜಕಾರಣ ಮಾಡಲು ತಾವು ಸಾಕಿಕೊಂಡಿದ್ದ ಶಾಸಕರ ಬೆಂಬಲದ ಬೆಂಗಾವಲು ಪಡೆಯ ಪ್ರತಿ ಶಾಸಕನಿಗೂ ಪ್ರತಿತಿಂಗಳೂ 5000/ ರೂಗಳ 'ಮಿಠಾಯಿ ಪ್ಯಾಕೆಟ್' ನೀಡುತಿದ್ದ ಅರಸರು ಹಾಗೂ ತಮ್ಮ ಕುಟುಂಬಗಳ ಮಕ್ಕಳು ಮರಿಗಳಿಗಾಗಿ ಆರ್ಥಿಕ ಸಾಮ್ರಾಜ್ಯವನ್ನು ವಿಸ್ತರಿಸುವ ಸಲುವಾಗಿ ಟಿಕೆಟ್ ಗಿಟ್ಟಿಸಲು ಪಕ್ಷದ ನಾಯಕ ಶಿಖಾಮಣಿಗಳಿಗೆ ಹಣ ಕೊಡುವಲ್ಲಿಂದ ಹಿಡಿದು ಎಲ್ಲ ಥರದ ಭ್ರಷ್ಟಾಚಾರದಲ್ಲಿ ಮುಳುಗಿರುವ ಇಂದಿನ ರಾಜಕಾರಣಿಗಳು ಇವರಿಬ್ಬರಲ್ಲಿ ಯಾರಿಗೆ ಜಾಸ್ತಿ ಶಿಕ್ಷೆ ಕೊಡಬೇಕು?-ಎಂದು. ಸಹಜವಾಗಿಯೇ ಜನತಾ ನ್ಯಾಯಲಯದಲ್ಲಿ ಅರಸು ಶಿಕ್ಷೆಯಿಲ್ಲದೆ ಎಚ್ಚರಿಕೆ ಮಾತ್ರ ಪಡೆದರೆ ಉಳಿದವರು ಜೀವಾವಧಿ ಜೈಲುಗಳಲ್ಲಿರಬೇಕೆಂಬ ಶಿಕ್ಷೆ ಪಡೆಯಬಹುದು ! ತಮ್ಮ ವೈಭವೋಪೇತ ಜೀವನಶೈಲಿಗೆ ವ್ಯವಸ್ಥೆ ಮಾಡುತ್ತಿದ್ದವರಿಗೆ ರಾಜಕೀಯ ಲಾಭ ಮಾಡಿಕೊಡುವ ಮತ್ತು ಶಾಸಕರಿಗೆ 5000 ರೂಗಳ 'ಮಿಠಾಯಿ ಪ್ಯಾಕೆಟ್' ವಿತರಿಸುವ ಮೂಲಕ ನಮ್ಮ ರಾಜಕೀಯ ಸಂಸ್ಕೃತಿ ಕಲುಷಿತವಾಗುವುದಕ್ಕೆ ಅರಸರ ಕೊಡುಗೆ ಸಾಕಷ್ಟಿದೆ(ಪ್ರೊ. ಒಡೆಯರ್).

ಅವರು ನಂಬಿದವರೇ ಅವರಿಗೆ ಕೈಕೊಟ್ಟು ಅಧಿಕಾರಚ್ಯುತರಾದದ್ದು ,ಪ್ರೀತಿಯ ಮಗಳು ಮತ್ತು ತಮ್ಮನ ಅಕಾಲಿಕ ಹಾಗೂ ಅನಿರೀಕ್ಷಿತ ಮರಣ, ಬೆನ್ನುಫಣಿ, ಹಾಗೂ

ಕೊನೆಯಲ್ಲಿ ನಂಬಲಾಗದ ರೀತಿಯಲ್ಲಿ ಮೃತ್ಯು ವಶರಾದದ್ದು ಈ ಎಲ್ಲ ದುರಂತಗಳನ್ನು ನೋಡಿದಾಗ ಅವರು ಆದಿಕವಿ ಪಂಪನ ದುರಂತ ಕರ್ಣನನ್ನು ನೆನಪಿಸುತ್ತಾರೆ. ದ್ರೌಪದಿಯ ವಸ್ತ್ರಾಪಹರಣದಲ್ಲಿ ಭಾಗಿಗಳಾಗಿದ್ದ"ದುಷ್ಟ ಚತುಷ್ಟಯದಲ್ಲಿ" ಅವನೂ ಒಬ್ಬನಾಗಿದ್ದನೆಂಬ ಕಳಂಕ 'ಶಾಶ್ವತವಾಗಿ ಅಂಟಿದ್ದರೂ ಅದನ್ನು ಮರೆಸುವ ಮಟ್ಟಿನ ಅವನ ಗುಣಗಳ ಕಾರಣಕ್ಕೆ "ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿ ನೆನೆವೊಡೆ ಕರ್ಣನಂ ನೆನೆಯ" ಎಂದು ಹೇಳಿ ಪಂಪ ಕೊಂಡಾಡುವಂತೆ ಭ್ರಷ್ಟಾಚಾರದ ಕಳಂಕ ಶಾಶ್ವತವಾಗಿ ಅರಸರಿಗೆ ಅಂಟಿಕೊಂಡು ಬಿಟ್ಟಿತ್ತಾದರೂ ಅದನ್ನೆಲ್ಲ ಮರೆಸುವ ರೀತಿಯಲ್ಲಿರುವ ಇರುವ ಅವರ ಸಾಧನೆ ಮತ್ತು ರಾಜಕೀಯದಲ್ಲಿ ಅವರ ಸ್ಥಾನವನ್ನು ಸರಿಯಾಗಿ ನಿರ್ದಿಷ್ಟ ಪಡಿಸುವ ಮೂಲಕ ಖ್ಯಾತ ಪತ್ರಕರ್ತ ಮಹದೇವ ಪ್ರಕಾಶ್ ಮಾಡಿರುವ ಈ ಮೌಲ್ಯಮಾಪನ(ಪು.35) ಅವರಿಗೆ ನಾವೆಲ್ಲರೂ ಅರ್ಪಿಸುವ ಅತ್ಯುಚಿತ ಶ್ರದ್ಧಾಂಜಲಿಯೂ ಆಗುತ್ತದೆ : "ಮಹಾರಾಷ್ಟ್ರದಲ್ಲಿ ಜ್ಯೋತಿಬಾ ಪುಲೆ, ತಮಿಳು ನಾಡಿನಲ್ಲಿ ಇ. ವಿ ರಾಮಸ್ವಾಮಿ ನಾಯ್ಕರ್, ಭಾರತದ ಮಟ್ಟದಲ್ಲಿ ಡಾ. ಅಂಬೇಡ್ಕರ್, ಅವರುಗಳಂತೆಯೇ ಕರ್ನಾಟಕಕ್ಕೆ ದೇವರಾಜ ಅರಸು. ನಿರಂಕುಶಮತಿಯಾಗಿದ್ದ ಯಜಮಾನಿಕೆ ರಾಜಕಾರಣದ ವಿರುದ್ಧ ಸಡ್ಡುಹೊಡೆದು ಕರ್ನಾಟಕದಲ್ಲಿ ಶೋಷಿತ ಸಮುದಾಯದ ಸಾಮಾಜಿಕ, ಶೈಕ್ಷಣಿಕ ಆರ್ಥಿಕ ಹಾಗೂ ರಾಜಕೀಯ ಅಭ್ಯುದಯಕ್ಕೆ ನಾಂದಿಹಾಡಿದ ಯುಗಪುರುಷ" "ಭ್ರಷ್ಟಾಚಾರದ ಕಳಂಕವಿಲ್ಲದಿದ್ದರೆ ದೇವರಾಜ ಅರಸು ದೇವರಿಗೆ ಅರ್ಪಿಸಬೇಕಾದ ಹಾರ" ಎಂಬ ಶ್ರೇಷ್ಠ ಸಾಹಿತಿ ಚದುರಂಗರ ಮಾತು ಮತ್ತು ಆಗಲೇ ಪ್ರಸ್ತಾಪಿಸಿರುವ ಪ್ರೊ. ಒಡೆಯರ್ ಹಾಗೂ ಬರಗೂರರ ಮಾತುಗಳು ಅತ್ಯುನ್ನತ ಹಿಮಗಿರಿಗೆ ಮಾತ್ರವೇ ಅತಿ ಆಳದ ಕಂದರವಿರುವುದೆಂಬ ಮಾತಿಗೆ ನಿದರ್ಶನವಾಗಬಲ್ಲವು.

❖

ಒಳ ತಿರುಳು



ತಮ್ಮ ಬಳಿಗೆ ಬಂದ ಹತ್ತಾರು ವಿಷಯ ವೈವಿಧ್ಯವಿರುವ ಕೃತಿಗಳನ್ನು ಕುರಿತು ಡಾ. ಆರ್. ಲಕ್ಷ್ಮೀನಾರಾಯಣ ಅವರು ಬರೆದಿರುವ ವಿಮರ್ಶಾತ್ಮಕವಾದ ಬಿಡಿ ಬರಹಗಳು ರತ್ನ ಪರೀಕ್ಷಕನೊಬ್ಬನ ಸೂಕ್ಷ್ಮ ದೃಷ್ಟಿಯನ್ನೂ ಸಹೃದಯ ಓದುಗನೊಬ್ಬನಲ್ಲಿರುವ ಬಹುಶ್ರುತತೆಯನ್ನೂ ಬೆಸೆದುಕೊಂಡು 'ಒಳತಿರುಳು' ಕೃತಿಯಲ್ಲಿ ಮೈದಾಳಿವೆ.

ಒಂದು ಸಾಹಿತ್ಯದ ಪಠ್ಯದೊಳಗೆ ಸಹಜ ಓದುಗನಾಗಿ ಆರ್. ಲಕ್ಷ್ಮೀನಾರಾಯಣ ಅವರು ನಮ್ರತೆಯಿಂದ ಪ್ರವೇಶಿಸುತ್ತಾರೆ. ಓದಿನಲ್ಲಿ ತಮ್ಮ ಅರಿವಿಗೆ ಬಂದ ಕೃತಿಯ ಗುಣಾವಗುಣಗಳನ್ನು ಓದುಗ ಸಮೂಹದೊಡನೆ ತೆರೆದ ಮನಸ್ಸಿನಿಂದ ಹಂಚಿಕೊಳ್ಳುತ್ತಾರೆ. ಹಾಗೆಯೇ ಕೃತಿಯಲ್ಲಿನ ತೊಡಕುಗಳನ್ನು, ದೋಷಗಳನ್ನು ಕುರಿತು ಲೇಖಕನಿಗೆ ಒರಟಾಗಿ ಹೇಳುವುದಿಲ್ಲ. ಬದಲಿಗೆ ಆತ್ಮೀಯರಂತೆ ಮೃದು ಮಾತುಗಳಿಂದ ಕೃತಿಯ ಮಿತಿಗಳನ್ನು ತೋರಿಸುತ್ತಾರೆ. ಇದು ಇವರ ಬರಹಗಳ ಗುಣ. ಅಂತಿಮವಾಗಿ ಎಲ್ಲಾ ಕೃತಿಗಳೂ ಸಂವೇದನಾಶೀಲ ಓದುಗನಿಂದ ಬಯಸುವುದು ಇದನ್ನೇ! ವಿಮರ್ಶೆಯೆಂದರೆ ಹರಿತವಾದ ಖಡ್ಗವಲ್ಲ! ಸಾಧ್ಯತೆಗಳ ಕಡೆಗೆ ತೋರುವ ಬೆಳಕಿನ ದಾರಿ. ಇದನ್ನು ಇಲ್ಲಿಯ ಬರಹಗಳು ಯಶಸ್ವಿಯಾಗಿ ಸಾಧಿಸಿವೆ. ಸ್ವತಃ ಲೇಖಕರಾಗಿರುವ ಆರ್. ಲಕ್ಷ್ಮೀನಾರಾಯಣ ಅವರು ಈ ಸೂಕ್ಷ್ಮಗಳನ್ನೆಲ್ಲಾ ಬಲ್ಲವರು.

ಇಂತಹ ಕಾರಣಗಳಿಂದಾಗಿ ಡಾ. ಆರ್. ಲಕ್ಷ್ಮೀನಾರಾಯಣ ಅವರ ನಿಸ್ಪೃಭಾವದ ಮನಸ್ಥಿತಿಯ ಓದಿನ ಬಗ್ಗೆ ಗೌರವ ಮೂಡುತ್ತದೆ. ಸರಳ ಮತ್ತು ಸಂಕ್ಷಿಪ್ತ ರೂಪದಲ್ಲಿರುವ ಇವರ ವಿಮರ್ಶಾ ಬರಹಗಳನ್ನು ಓದಿದರೆ ಆ ಕೃತಿಗಳೆಲ್ಲವನ್ನೂ ಓದಲೇಬೇಕೆಂಬ ತವಕ ನಮ್ಮೊಳಗೆ ಮೂಡುತ್ತದೆ. ಇದೇ ಇವರ ಬರಹಗಳ ವೈಶಿಷ್ಟ್ಯ.

- ಡಾ. ಜಿ. ವಿ. ಆನಂದಮೂರ್ತಿ

₹ 180/-

ಸಿಬಿಜಿ ಇಂಡಿಯಾ
ಕಸ್ತೂರಬಾ ಭವನ, ಗಾಂಧಿ ಭವನ ಆವರಣ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು – 01